ಕುಮಾರರಾಮ ಸಾಂಗತ್ಯ ಸಂಗ್ರಹ

ಸಂಪಾದಕರು

ಎನ್. ಅನಂತರಂಗಾಚಾರ್, ಎಂ.ಎ., ಬಿ.ಟಿ.

VEC, Library
005302

ಸ್ವಚ್ಛಂದಂ ಪ್ರಕಾಶನ
'ನೃಸಿಂಹ ಪ್ರಾಸಾದಂ'
ಸರಸ್ವತೀಪುರಂ, ಮೈಸೂರು-೯

ಸಂಪಾದಕರ ಇತರ ಕೃತಿಗಳು

ಕನ್ನಡ :—

ಅಶ್ವತ್ಥಾಮನ್

ಕನ್ನಡರತ್ನತ್ರಯ

ಕವಿರನ್ನ

ನೇಮಿಚಂದ್ರ

ಲಕ್ಷ್ಮೀಶ

ಪೊನ್ನ

ವೇದಾಂತ ದೇಶಿಕರು ಮತ್ತು ಅವರ ಗ್ರಂಥಗಳು

ಶ್ರೀಮನ್ನಿಗಮಾಂತ ಮಹಾದೇಶಿಕರು

ಕಲಾಸಾಹಿತ್ಯಗಳಿಗೆ ಮೈಸೂರರಸರ ಪ್ರೋತ್ಸಾಹ

ಕರ್ಣಾಟಕ ಶಾಸನಗಳು

ಕರ್ಣಾಟಕ ವಾಸ್ತುಶಿಲ್ಪ

ಜೈನಧರ್ಮಪರಿಭಾಷಾಸಂಗ್ರಹ

ರಾ। ನರಸಿಂಹಾಚಾರ್ಯರು–ಜೀವನ ಮತ್ತು ಕೃತಿಗಳು

ಸಾಹಿತ್ಯ ಭಾರತೀ—(ಭಾರತದ ಇಪ್ಪತ್ತು ಭಾಷಾಸಾಹಿತ್ಯಗಳ ಚರಿತ್ರೆ)

ಸಂಪಾದಿತ

ಕುಮಾರವ್ಯಾಸ ಭಾರತ—ಭೀಷ್ಮ, ದ್ರೋಣ, ಕರ್ಣ, ಶಲ್ಯ, ಗದಾಪರ್ವಗಳು.

ಸೂಕ್ತಿಸುಧಾರ್ಣವಂ–ಮಲ್ಲಿಕಾರ್ಜುನಕವಿ ಸಂಯೋಜಿತಂ,
(ಪ್ರಾಚ್ಯಸಂಶೋಧನಾಲಯ, ಮೈಸೂರು)

278

ಕುಮಾರರಾಮು ಸಾಂಗತ್ಯ ಸಂಗ್ರಹ

VECKAN 105.7

ಸಂಪಾದಕರು

ಎನ್. ಅನಂತರಂಗಾಚಾರ್, ಎಂ.ಎ., ಬಿ.ಟಿ.

VIJAYA EVENING COLLEGE,
LIBRARY
BANGALORE-4.
ACCN. NO. 5302
SECTION
COST Rs 5/-
Date 16/7/76 Librarian.

ಸ್ವಚ್ಛಂದಂ ಪ್ರಕಾಶನ
'...ಕ ಪ್ರಾಸಾದಂ'
...ರಂ, ಮೈಸೂರು-೯

ಬೆಂಗಳೂರು - 560053
24226

VEC, Library
005302

Kumararama Sangatya Sangraha — Edited by N. Anantharangachar, M.A., B.T.; published by Swachchandam Prakashana, Saraswathipuram, Mysore-9, Pages lxiv+156. Price Rs. 5-00

ಪ್ರಥಮ ಮುದ್ರಣ : ೧೯೬೦
ದ್ವಿತೀಯ ಮುದ್ರಣ : ೧೯೬೩

ಎಲ್ಲ ಹಕ್ಕುಗಳೂ ಸಂಪಾದಕರಿಗೆ ಸೇರಿವೆ

ಬೆಲೆ: ೫-೦೦

ಪ್ರತಿಗಳು ದೊರೆಯುವ ಸ್ಥಳ
ಶ್ರೀ ಆರ್. ಎನ್. ಹಬ್ಬು
ಉಷಾ ಪ್ರೆಸ್, ಚಂದ್ರಗುಪ್ತರಸ್ತೆ
ಮೈಸೂರು-೫೦೦೦೦೧

ಮುದ್ರಕರು
ಮಂಗಳೂರು ಪ್ರೆಸ್
ಶ್ರೀರಾಮಪೇಟೆ
ಮೈಸೂರು

ದ್ವಿತೀಯ ಮುದ್ರಣದ ಪ್ರಕಾಶಕರ ಅರಿಕೆ

ಮೈಸೂರು 'ಶಾರದಾಮಂದಿರ' ದಿಂದ ಪ್ರಕಾಶವಾಗಿದ್ದ ಈ ಗ್ರಂಥದ ಪ್ರತಿಗಳು ಪೂರ್ಣವಾಗಿ ಮುಗಿದುಹೋದುದರಿಂದಲೂ, ಬೆಂಗಳೂರು ವಿಶ್ವ ವಿದ್ಯಾನಿಲಯದ ಕನ್ನಡಪಠ್ಯಪುಸ್ತಕಸಮಿತಿಯವರು ಇದನ್ನು ಪಠ್ಯಪುಸ್ತಕ ವನ್ನಾಗಿ ಗೊತ್ತುಮಾಡಿರುವುದರಿಂದಲೂ, ಈ ದ್ವಿತೀಯ ಮುದ್ರಣವನ್ನು ಪ್ರಕಟಿಸಲಾಗಿದೆ. ಸಮಿತಿಯವರಿಗೆ ಸಂಪಾದಕರು ಕೃತಜ್ಞರಾಗಿದ್ದಾರೆ.

ಈ ಗ್ರಂಥವನ್ನು ಅತಿ ಶೀಘ್ರಕಾಲದಲ್ಲಿ ಮುದ್ರಿಸಿಕೊಟ್ಟ ಮೈಸೂರಿನ ಮಂಗಳೂರು ಪ್ರೆಸ್ಸಿನ ಮಾಲಿಕರಾದ ಶ್ರೀ ಶ್ರೀಪತಿರಾಯರು ವಂದನೀಯರು.

ಪ್ರಮಾದೀಚ ಆಷಾಢ ಬಹುಳ
ದಶಮೀ ಬುಧವಾರ
'ನೃಸಿಂಹ ಪ್ರಸಾದಂ'
ಸರಸ್ವತೀಪುರಂ, ಮೈಸೂರು-೪

ಎ. ಅನಂತರಂಗಾಚಾರ್

ಮೊದಲ ಮಾತು

ಕುಮಾರರಾಮಸಾಂಗತ್ಯವು ಕನ್ನಡ ಸಾಹಿತ್ಯರಾಶಿಯಲ್ಲಿ ಒಂದು ಅಪೂರ್ವವಾದ ಗ್ರಂಥ. ಶುದ್ಧ ಕಾವ್ಯದೃಷ್ಟಿಯಿಂದಲೂ ಐತಿಹಾಸಿಕ ದೃಷ್ಟಿಯಿಂದಲೂ ಅದಕ್ಕೆ ವಿಶೇಷ ಸ್ಥಾನವಿದೆ. ಸುಮಾರು ೨೦ ವರ್ಷಗಳ ಹಿಂದೆ ನಾನು ಮೈಸೂರು ಪ್ರಾಚ್ಯಕೋಶಾಗಾರದಲ್ಲಿ ಕೆಲಸ ಮಾಡುತ್ತಿದ್ದಾಗ ಅದರ ಕಾವ್ಯಗುಣಗಳಿಂದ ಆಕರ್ಷಿತನಾಗಿ ಅದನ್ನು ಸಂಪೂರ್ಣವಾಗಿ ಸಂಶೋಧಿಸಿ ಆ ಸಂಸ್ಥೆಯಿಂದಲೇ ಪ್ರಕಾಶಿಸಲು ಪ್ರಾರಂಭ ಮಾಡಿದೆ. ಸ್ವಲ್ಪಕಾಲದಲ್ಲಿಯೇ ಅಲ್ಲಿಂದ ನನಗೆ ವರ್ಗವಾಗಲು ಆ ಕಾರ್ಯವನ್ನು ಅಲ್ಲಿಗೇ ಬಿಡಬೇಕಾಯಿತು. ಆದರೂ ಅದರ ಪ್ರಕಾಶನ ಕಾರ್ಯದಲ್ಲಿದ್ದ ನನ್ನ ಆಸಕ್ತಿ ಕಡಿಮೆಯಾಗಿಲ್ಲ. ಸಂಗ್ರಹವನ್ನಾದರೂ ಕನ್ನಡಿಗರ ಮುಂದೆ ಇಡೋಣ ವೆಂದು ಸಂಕಲ್ಪಿಸಿ ಆ ಕಾರ್ಯವನ್ನು ೧೯೫೬ ನೆಯ ವರ್ಷದಲ್ಲಿ ಮುಗಿಸಿದೆ. ಅದಕ್ಕೆ ಸರಿಯಾಗಿ ಮಿತ್ರರಾದ ಶ್ರೀ. ಎಚ್. ಎಂ. ಶಂಕರನಾರಾಯಣ ರಾಯರು ಪ್ರಕಾಶನದ ಭಾರವನ್ನು ವಹಿಸಿಕೊಂಡು ಬಹು ಶೀಘ್ರವಾಗಿ ಮೂಲದ ಮುದ್ರಣದ ಕಾರ್ಯವನ್ನು ಮುಗಿಸಿದರು. ಕಾರಣಾಂತರಗಳಿಂದ ಮುನ್ನುಡಿ, ಅರ್ಥಕೋಶ ಮೊದಲಾದ ಉಪಕರಣಗಳಿಂದ ಕೂಡಿದ ಸಂಪೂರ್ಣ ಗ್ರಂಥವು ಹೊರಬೀಳಲು ಇಂದಿನವರೆಗೆ ತಡವಾಯಿತು. ಪ್ರಕಾಶನದ ಕಾರ್ಯದಲ್ಲಿ ನೆರವಿತ್ತ ಶ್ರೀ. ಶಂಕರನಾರಾಯಣರಾಯರಿಗೆ ಕೃತಜ್ಞನಾಗಿದ್ದೇನೆ.

ಸಂಗ್ರಹ ಕಾರ್ಯ ಪ್ರಾರಂಭದಿಂದ ಇಲ್ಲಿಯವರೆಗೆ ಅನೇಕ ರೀತಿಗಳಲ್ಲಿ ಸಹಾಯ ಮಾಡಿದ ನನ್ನ ಮಾನ್ಯ ಮಿತ್ರರೂ ಮಹಾರಾಜಾ ಕಾಲೇಜಿನ ಕನ್ನಡ ಪ್ರಾಧ್ಯಾಪಕರೂ ಆದ ಶ್ರೀಮಾನ್ ಡಿ. ಎಲ್. ನರಸಿಂಹಾಚಾರ್ಯರಿಗೆ ನನ್ನ ವಂದನೆಗಳು. ಅಂದವಾಗಿ ಮುದ್ರಣ ಮಾಡಿರುವ ಮೈಸೂರು ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಹೌಸಿನ ಮಾಲಿಕರಾದ ಶ್ರೀ. ಜಿ. ಎಚ್. ರಾಮರಾಯರಿಗೆ ನಾನು ಆಭಾರಿಯಾಗಿದ್ದೇನೆ.

'ನೃಸಿಂಹ ಪ್ರಸಾದಂ'
ಸರಸ್ವತೀ ಪುರಂ
ಮಾರ್ಗಶಿರ ಬ. ೧೪

ಎಸ್. ಅನಂತರಂಗಾಚಾರ್

ಮುನ್ನುಡಿ

ಕರ್ಣಾಟಕದಲ್ಲಿ ಸತ್ಯ ಪೌರುಷ ಶೌಚಗುಣಗಳಿಗೆ ಯಾವಾಗಲೂ ಅಗ್ರಸ್ಥಾನ. ಈ ಗುಣಗಳನ್ನುಳ್ಳ ವೀರಪುರುಷರು ಸರ್ವಕಾಲದಲ್ಲಿಯೂ ಆದರ್ಶ ವ್ಯಕ್ತಿಗಳು. ಅಂಥವರಲ್ಲಿ ಅಗ್ರೇಸರನಾದವನು ಕುಮಾರರಾಮ. 'ಈತನೇ ಕುಮಾರರಾಮಸಾಂಗತ್ಯ'ದ ಕಥಾನಾಯಕ. ಈತನು ಈಗ ಸುಮಾರು ಆರು ಶತಮಾನಗಳ ಹಿಂದೆ ಇದ್ದವನು. ಕುಮ್ಮಟದುರ್ಗ ಹೊಸಮಲೆದುರ್ಗಗಳನ್ನೊಳಗೊಂಡ ಕುಂತಳ ದೇಶದ ಒಡೆಯನಾಗಿದ್ದ ಕಂಪಿಲದೇವನು ಈತನ ತಂದೆ. ತಂದೆ ಮಕ್ಕಳಿಬ್ಬರೂ ಹಿಂದೂದೇಶದ ಚರಿತ್ರೆಯಲ್ಲಿ ಸಂಧಿಸಮಯವಾಗಿದ್ದ ಹದಿನಾಲ್ಕನೆಯ ಶತಮಾನದ ಆದಿ ಭಾಗದಲ್ಲಿ ದೊಡ್ಡ ಹಿಂದೂ ರಾಜ್ಯವೊಂದನ್ನು ಬಲಪಡಿಸಿ ಉತ್ತರದಿಂದ ಬರುತ್ತಿದ್ದ ಮಹಮ್ಮದೀಯರ ದಾಳಿಯನ್ನು ತಡಗಟ್ಟಿ ಅಡಗಿಸಿ ನಾಮಾವ ಶೇಷವಾಗುತ್ತಿದ್ದ ಹಿಂದೂಧರ್ಮವನ್ನು ಉದ್ಧಾರ ಮಾಡಿದ್ದಲ್ಲದೆ ಮುಂದಿನ ವಿಜಯನಗರ ಸಾಮ್ರಾಜ್ಯಕ್ಕೆ ಅಸ್ತಿಭಾರವನ್ನು ಹಾಕಿದರು. ಅದರಲ್ಲಿಯೂ ಕುಮಾರರಾಮನ ವ್ಯಕ್ತಿತ್ವವು ಬಹು ಉದಾತ್ತವಾಗಿ ಬೆಳೆದು ಅಖಂಡ ಕರ್ಣಾಟಕದ ಜನಗಳ ಮೇಲೆ ಅತ್ಯಂತ ಪ್ರಭಾವವನ್ನು ಬೀರಿದೆ. ಅವನ ಶೌಚಗುಣವಂತೂ ದೇಶಾದ್ಯಂತ ಪ್ರತಿದಿನದ ಮನೆಮಾತಾಗಿದೆ. ಅವನ ವ್ಯಕ್ತಿತ್ವಕ್ಕೆ ಮಾರುಹೋಗಿ ಅನೇಕರು ಅವನ ಆದರ್ಶ ಜೀವನವನ್ನು ಕುರಿತು ಹಲವು ಕನ್ನಡ ಕೃತಿಗಳನ್ನು ರಚಿಸಿದ್ದಾರೆ. ಇವುಗಳೆಲ್ಲ ಸಾಮಾನ್ಯ ವಾಗಿ ಸಾಂಗತ್ಯಗಳು. ಅವುಗಳಲ್ಲಿ ಪ್ರಸಕ್ತವಾದ ನಂಜುಂಡ ಕವಿಕೃತ 'ಕುಮಾರರಾಮ ಸಾಂಗತ್ಯ'ವೇ ಕಾಲದೃಷ್ಟಿಯಿಂದ ಪ್ರಾಚೀನವಾದುದು. ನಂಜುಂಡನಾದ ಮೇಲೆ ಇದೇ ವಿಷಯವನ್ನು ಕುರಿತು ಪಾಂಚಾಳಗಂಗನೆಂಬು ವನು 'ಕುಮಟಿರಾಮಸಾಂಗತ್ಯ' ವೆಂಬ ಗ್ರಂಥವನ್ನೂ ನಾಗಸಂಗಯ್ಯನು 'ಪರದಾರಸೋದರರಾಮನ ಸಾಂಗತ್ಯ' ವನ್ನೂ ಮಹಾಲಿಂಗಸ್ವಾಮಿಯು 'ಬಾಲಕುಮಾರರಾಮನ ಸಾಂಗತ್ಯ'ವನ್ನೂ ಕನ್ನಡ ಕವಿಜಾಣ ಗಂಗಯ್ಯ ನೆಂಬುವನು 'ಚೆನ್ನರಾಮನ ಸಾಂಗತ್ಯ'ವನ್ನೂ ಮತ್ತೊಬ್ಬ ಗಂಗನೆಂಬುವನು

'ಕುಮಾರರಾಮುಚರಿತ್ರೆ' ಯನ್ನೂ ರಚಿಸಿದ್ದಾರೆ. ಇವುಗಳಲ್ಲದೆ ಅಜ್ಞಾತ ಕವಿಕೃತ ಕುಮಾರರಾಮ ಸಾಂಗತ್ಯಗಳೂ ಯಕ್ಷಗಾನಗಳೂ ಹೇರಳವಾಗಿ ಅಲ್ಲಲ್ಲೆ ಪ್ರಚಾರದಲ್ಲಿವೆ. ಈಚಿಗೆ ಮದ್ರಾಸ್ ಪ್ರಾಚ್ಯ ಪುಸ್ತಕ ಭಂಡಾರದ ಗ್ರಂಥಾವಳಿಯ ತೆಲಗು ಶಾಖೆಯಲ್ಲಿ 'ಕುಮಾರರಾಮುನಿ ಕಥ' ಎಂಬ ಒಂದು ಗ್ರಂಥವು ಪ್ರಕಾಶವಾಗಿದೆ. ತಮಿಳು ಭಾಷೆಯಲ್ಲಿಯೂ ಈ ವಿಷಯಕ ವಾದ ಗ್ರಂಥವಿದೆಯೆಂದು ಪ್ರತೀತಿ. ಈ ತೆರನಾದ ಗ್ರಂಥವೈಪುಲ್ಯವು ಕುಮಾರರಾಮಕಥೆ ಎಷ್ಟು ಜನಪ್ರಿಯವಾಗಿದೆಯೆಂಬುದನ್ನು ಸ್ಪಷ್ಟೀಕರಿಸು ತ್ತದೆ.

ಪ್ರಸಕ್ತವಾದ ಕುಮಾರರಾಮ ಸಾಂಗತ್ಯವನ್ನು ರಚಿಸಿದ ನಂಜುಂಡನು ಕ್ಷತ್ರಿಯವಂಶೋತ್ಪನ್ನನು. 'ಚಂಗಳನಾಡ ನಾಲ್ವತ್ತು ನಾಯಕ ಗಜಸಿಂಗ ವೆನಿಪ ಯದುಕುಲಾಮಾತ್ಯರೆಂದೆಂಬ ಕುಲಾಗತವಿದಿತ ಬಿರುದನಾಂ ತೆಸೆವ ಚದುರ ಮಾಧವನ ಆತ್ಮಜ'. ಅಂಡಜದಲ್ಲಿಯಾನೆಯ ನಿಗಳಕೆ ಮಾರ್ಕೊಂಡು ಮಲೆವ ರಾವುತರ ಹಿಂಡಿನ ಗಂಡ' ನೆಂಬ ಬಿರುದನುಳ್ಳವನೂ ಯದುಕುಲಾಮಾತ್ಯವಂಶೋದ್ಭೂತನೂ ಆದ ಪ್ರಭುಕಲಾಗ್ರಗಣ್ಯ ವಿಜಯ ನೃಪಾಲ 'ಈತನ ಪಿತಾಮಹ. ಈತನ ಹಿರಿಯಯ್ಯನು ತುರಗ ದಂಡಕೆ ಬಲಘುಲ್ಲಿಯ ಕಟ್ಟಿದ ಬಿರುದುಳ್ಳ ರಾವುತ. ತನ್ನ ಪತಿ ನಂಜರಾಯನ ಮುಂದೆ ಕುದುರೆಯ ರಾಯರಾವುತರ ಮೇಲೇರಿ ತಿವಿದು ಸುರರಾಯನಗರಿ ಗೈದಿದ ವಿಜಯನು ಈತನ ಕಿರಿಯಯ್ಯ. ಕವಿಯು ತನ್ನನ್ನು ವಾಗ್ವೈಖರೀ ವಲ್ಲಭ ಕವಿತಾವನಿತಾವಶೀಕರಣ ವಶ್ಯಮಂತ್ರಸಿದ್ಧ ಪ್ರಭುಕುಲಾಗ್ರಗಣ್ಯ ವಿಜಯನೃಪಾಲ ಪುತ್ರ ಮಾಧವಾತ್ಮಜ ನಂಜುಂಡ' ಎಂದು ವಿಶೇಷಿಸಿ ಕೊಂಡಿದ್ದಾನೆ. 'ಜಯನೃಪ ಕಾವ್ಯ'ವೇ ಮೊದಲಾದ ಗ್ರಂಥಗಳನ್ನು ರಚಿಸಿ ರುವ ಮಂಗರಸನ ತಂದೆಯಾದ ವಿಜಯನೃಪಾಲನೂ ಇದೇ ವಿಶೇಷಣ ಗಳಿಂದ ಸಂಬೋಧಿತನಾಗಿರುವುದರಿಂದ ನಂಜುಂಡನು ಮಂಗರಸನ ಸಹೋ ದರನ ಮಗನಾಗಿರಬೇಕು. ಮಂಗರಸನು ತನ್ನ 'ಸಮ್ಯಕ್ತ್ವಕೌಮುದಿ' ಯನ್ನು ಶಾ. ಶ ೧೪೩೧ ನೆಯ (ಕ್ರಿ. ಶ. ೧೫೦೮) ವರ್ಷದಲ್ಲಿ ರಚಿಸಿರುವ ನೆಂದು ಸ್ಪಷ್ಟವಾಗಿ ಹೇಳಿರುವುದರಿಂದ ಅವನ ಅಣ್ಣನ ಮಗನಾದ ಈತನೂ ಅದೇ ಕಾಲದಲ್ಲಿಯೇ ಇದ್ದಿರಬೇಕೆಂದು ತಿಳಿಯಬಹುದು. ಸಂಸ್ಕೃತ ಕವಿ

ಗಳಲ್ಲಿ ಕಾಳಿದಾಸ ಬಾಣರನ್ನೂ ಕನ್ನಡಗರಲ್ಲಿ ಪಂಪ, ನೇಮಿಚಂದ್ರ ಜನ್ನ, ಗುಣನಂದಿ, ಗಜಗ, ಗುಣವರ್ಮ ಸುಜನೋತ್ತಂಸ, ನಾಗಚಂದ್ರ, ಅಸಗ, ರನ್ನ, ಶಾಂತಿವರ್ಮ, ಹಂಪೆಯ ಹರಿಹರ ಮೊದಲಾದವರನ್ನೂ ಸ್ತೋತ್ರ ಮಾಡಿದ್ದಾನೆ. ತನ್ನನ್ನು ಕೋವಿದರು 'ಪದವಾಕ್ಯಪ್ರಮಾಣಜ್ಞ' ನೆಂದು ಕೊಂಡಾಡಿ ಈ 'ಪದಕವಿತೆ'ಯ ಹೇಳೆನಲು ತಾನು ಹೇಳಿದನಂತೆ. ಕವಿಯು ತನ್ನಲ್ಲಿ ನೃಪಸಭೆ ತಲೆದೂಗುವ ಹಾಗೆ ಉಭಯವಸ್ತುಕ ಕವಿತೆ ಯನ್ನೊರೆವ ಶಕ್ತಿಯಿದೆಯೆಂದು ಹೇಳಿಕೊಂಡಿದ್ದಾನೆ. ಗ್ರಂಥಾಂತ್ಯದಲ್ಲಿ ಬರುವ 'ಇದು ಸಮಸ್ತ ಸುರಾಸುರಮೌಳಿಮಾಲಾಕೀಲಿತನೂತ್ನರತ್ನಪ್ರಭಾ ಪುಂಜರಂಜಿತ **ಚಂದ್ರಚೂಡಚರಣಾರವಿಂದಮಧೂಳೀಮಧುಕರಾಯ** ಮಾನಮಾಧವಸೂನು ಕವಿತಾವಿಶಾರದ ನಂಜುಂಡವಿರಚಿತಮಪ್ಪ' ಎನ್ನುವ ಭಾಗದಿಂದ ಈತ ಶೈವನಿರಬಹುದೆಂದು ಕಾಣುತ್ತದೆ. ತಂದೆಯ ಸಹೋದರ ನಾದ ಮಂಗರಸನು ಶುದ್ಧ ಜೈನನಾಗಿಯೂ ಈತ ಶೈವನಾಗಿಯೂ ಇರುವು ದಕ್ಕೆ ಕಾರಣ ತಿಳಿಯದು.

ಕುಮಾರರಾಮಸಾಂಗತ್ಯದಲ್ಲಿ ಸುಮಾರು ಆರು ಸಾವಿರ ಪದಗಳಿವೆ. ಹಿಂದೆಯೇ ತಿಳಿಸಿರುವಂತೆ ಕವಿ ಇದನ್ನು ಪದಕೃತಿ, ಪದಕವಿತೆ ಎಂದು ಕರೆದಿದ್ದಾನೆ. ಇದು ೧೨ ಆಶ್ವಾಸಗಳಾಗಿಯೂ ೪೮ ಸಂಧಿಗಳಾಗಿಯೂ ವಿಭಾಗವಾಗಿದೆ. ಗ್ರಂಥದ ಮೂಲವನ್ನು ಕವಿಯೇ ಮುಂದಿನ ಪದಗಳಲ್ಲಿ ಸಂಗ್ರಹವಾಗಿ ತಿಳಿಸಿದ್ದಾನೆ:—

ವರಶುಚಿ ವೀರ ರಾಮನಚರಿತವನಿದನೊರೆವೆನೊಲಿದು ಸತ್ಪುರುಷರು !
ಇರದಾಲಿಪುದು ಶುಚಿತೆ ಬಂದು ದೊರೆಕೊಂಬುದಂತರಂಗದಲಿ ॥

ಕಂದುಕ ಬೀಳಲರಮನೆಗದನಿರದೆತ್ತಿ ತಂದಪೆನೆಂದು ಕಂಪಿಲನ ।
ನಂದನನೆಯ್ದಲವನರೂಪಿಗೆ ಸೋಲ್ತು ಬಂದು ಪಿಡಿದಳು ರತ್ನಾಜಿ ॥

ಪಿಡಿಯೆ ಬಿಡಿಸಿಕೊಂಡು ಬರಲವನವಳಂದು ಕಡುನೊಂದು ಕಯ್ಯ ಬಳೆಗಳ ।
ಒಡೆದು ತೋಳ್ತೊಡೆಗಳೆಡೆಗಳ ಕೆಡಿಸಿಕೊಂಡು ಬಿಡದೆ ತೋಱಿದಳು
ಕಂಪಿಲಗೆ ॥

ನೆಲೆಯನರಿಯದವ ಕೊಲಿಸು ರಾಮನನೆಂದು ಬಲಿದು ಮಂತ್ರಿಗೆ ಪೇಳಲವನು।
ನೆಲೆಮಾಳಿಗೆಯೊಳಿಟ್ಟವನ ಕೊಲಿಸಿದೆನೆಂದು ನೆಲೆಮಾಡಲಾದ ಸುದ್ದಿಯನು ॥

ಕೇಳಿ ತುರುಕದಾಳಿ ಬರಲವನನು ಮಂತ್ರಿಲೀಲೆಯಿಂ ತಂದಾ ಬಲವ।
ಕೋಲಾಹಲವಮಾಡಿಸಿದನೆಂಬುದು ಕಥಾಮೂಲವಿದನು ನಾನೊಲಿದು ॥

ಕನಸಿನೊಳಗೆ ಪರವೆಣ್ಣ ಕಂಡರಿಯದ ಘನಶುಚಿರತ್ನ ರಾಮುಗನ ॥
ವಿನುತ ಚರಿತ್ರವನೊರೆವೆನು ಸುಜನರು ಮನವೊಲಿದಿದನಾಲಿಪುದು ॥

ಈ ಮೂಲರೇಖೆಯನ್ನನುಸರಿಸಿದ ಕಥಾಸಾರಾಂಶ ಮುಂದಿನ ರೀತಿಯಲ್ಲಿದೆ.

ಕಥಾಸಾರಾಂಶ

ಕುಂತಳ ದೇಶದಲ್ಲಿ ಪವಿತ್ರವಾದ ಪಂಪಾಕ್ಷೇತ್ರದ ದಕ್ಷಿಣಭಾಗದಲ್ಲಿ ಬಹು ಸಸ್ಯಸಮೃದ್ಧಿಯಿಂದ ಕೂಡಿದ ಹೊಸಮಲೆದುರ್ಗವೆಂಬ ಕೋಟೆಯಿದೆ. ತೋಳ್ಪೆತ್ತ ವಿಕ್ರಾಂತಿಯಂತೆಯೂ ಸೊಬಗನಾಂತ ಶೌಚಗುಣದಂತೆಯೂ ನಾಲಗೆಯನ್ನು ಪಡೆದ ಸುವಿದ್ಯೆಯಂತೆಯೂ ಜೀವಂಬೆತ್ತ ಜಪದಂತೆಯೂ ಪ್ರಸಿದ್ಧನಾದ ಕಂಪಿಲನೆಂಬುವನು ಅದರ ಒಡೆಯ. ರತಿಯ ಚೆಲ್ವಿಕೆಯಿಂದಲೂ ಭಾರತಿಯ ವಿವೇಕದಿಂದಲೂ ಪಾರ್ವತಿಯ ಬೆಡಗಿನಿಂದಲೂ ಇಂದಿರೆಯ ಭಾಗ್ಯದಿಂದಲೂ ಸೀತೆಯ ಪಾತಿವ್ರತ್ಯದಿಂದಲೂ ಮೆರೆಯುತ್ತಿದ್ದ ಹರಿಹರದೇವಿ ಆತನ ಪಟ್ಟದರಾಣಿ. ಸಪ್ತೋಪಾಯಸಮನ್ವಿತನೂ ಸಪ್ತಮಂತ್ರಾಲೋಚನನೂ ಆದ ಬೈಚಪ್ಪ ಆತನ ಮುಖ್ಯಮಂತ್ರಿ. ಅಣ್ಣ ಭೈರವದೇವನೆಂಬ ಕುಮಾರನು ಯುವರಾಜ. ಸಿಡಿಲ ಕಡುಪಿನಂತೆಯೂ ಸಿಂಗದೇಳಿಗೆಯಂತೆಯೂ ವಡಬಾಗ್ನಿಯ ಕೋಪದಂತೆಯೂ ಕಾಡಕಿಚ್ಚಿನಾರ್ಭಟದಂತೆಯೂ ಇರುವ ಅಸಂಖ್ಯಾತ ಆಳಿಯಂದಿರೂ ಸಿರಿಯಮನ್ನೆಯರೂ ಬಲ್ನಾಯಕರೂ ಆ ರಾಜನನ್ನು ಸರ್ವದಾ ಓಲೈಸುತ್ತಿರುವರು ಕಂಪಿಲನು ಬಲ್ಲಾಳನ ರಾಜ್ಯವನ್ನು ಹೊಕ್ಕಿರಿದು ಒರಗಲ್ಲಿನ ಪ್ರತಾಪರುದ್ರನನ್ನು ಒಕ್ಕಲಿಕ್ಕಿ ಡಿಲ್ಲಿಯ ಸುರತಾಳನ ರಾಜ್ಯವನ್ನು

ಸೂರೆಗೊಂಡು ಸುತ್ತಲಿನ ರಾಜವರ್ಗದಿಂದ ಕಪ್ಪಕಾಣಿಕೆಗಳನ್ನು ಪಡೆದು ಅನೇಕ ಯಾಚಕಗಣವನ್ನೂ ಕವಿಗೋಷ್ಠಿಗಳನ್ನೂ ಸಂಪೂರ್ಣ ತೃಪ್ತಿಗೊಳಿಸಿ ವಂಶಪಾರಂಪರ್ಯವಾದ ರಾಜ್ಯವನ್ನು ಪಾಲಿಸುತ್ತಿದ್ದನು.

ಹೀಗಿರಲು ಹರಿಹರದೇವಿಯು ಚತುರ್ಥಮಂಗಲಮಜ್ಜನವನ್ನು ಪಡೆದ ಒಂದು ದಿನ ರಾತ್ರಿ ಅರುಣೋದಯ ಸಮಯದಲ್ಲಿ ಭಾನುಬಿಂಬವನ್ನೂ ಇಂದು ಮಂಡಲವನ್ನೂ ಮದ್ದಾನೆಯನ್ನೂ ಸಿಂಹವನ್ನೂ ಕನಸಿನಲ್ಲಿ ಕಂಡು ಆ ವಿಷಯವನ್ನು ಪತಿದೇವನಿಗೆ ತಿಳಿಸಿದಳು. ಮಹೀಶನು ಇನನಿಂದ ವೀರಪರಾಕ್ರಮಿಯೂ ಸಿಂಹದಿಂದ ವಿನುತವಿಕ್ರಮನೂ ಇಂದುವಿನಿಂದ ಘನ ಕೀರ್ತಿಯುತನೂ ಮದ್ದಾನೆಯಿಂದ ದಾನಿಯೂ ಆದ ಮಗನೂ ಆಕೆಗೆ ಉದಯಿಸುವನೆಂದು ಸ್ವಪ್ನಫಲವನ್ನು ತಿಳಿಸಿ ಇಬ್ಬರೂ ಸಂತೋಷಭರಿತರಾದರು. ಕಾಲಕ್ರಮದಲ್ಲಿ ಹರಿಹರದೇವಿಗೆ ಗರ್ಭಚಿಹ್ನೆಗಳು ತೋರಲು ರಾಜನು ಪುಂಸವನಾದಿ ಕರ್ಮಗಳನ್ನು ಅತಿ ವೈಭವದಿಂದ ನಡೆಸಿದನು. ಹೀಗೆ ವಿನೋದದಿಂದ ದಿನ ಸಂತತಿಯು ಕಳೆಯಲು ಒಂದು ಅಪೂರ್ವ ಶುಭ ಲಗ್ನೋದಯದಲ್ಲಿ ಹರಿಹರದೇವಿಯು ಉರ್ವರೆಯು ರೋಹಣಾದ್ರಿಯನ್ನೂ ಶಾರ್ವರಿಯು ಇಂದುವನ್ನೂ ಪಡೆಯುವಂತೆ ಸರ್ವಲಕ್ಷಣಯುತನಾದ ಸುತನನ್ನು ಪಡೆದಳು. ಭೂಪತಿಯು ಅವರಿವರೆನ್ನದೆ ಆರೇನಬೇಡಿದರದನ ವರಿಗಿತ್ತು ಅತಿಸಂತೋಷದಿಂದ ತನುಜನ ವದನಾರವಿಂದವನ್ನು ಅವಲೋಕಿಸಿ ಶುಭಲಕ್ಷಣದಿಂದಭಿರಾಮನಾಗಿದ್ದ ಸುತನಿಗೆ ರಾಮನೆಂಬ ಅನ್ವರ್ಥನಾಮವನ್ನೇ ಇಟ್ಟನು. ಅರಳೆಲೆ, ಮಾಗಾಯಿ, ಪುಲಿಯುಗುರು, ಉಡೆನೂಲು, ಕಾಲಂದುಗೆ, ತಾತಿಗಂಟೆ, ಬೆರಳುಂಗುರ, ದಿಟ್ಟೆದಂಡೆ ಮೊದಲಾದುವುಗಳಿಂದಲಕೃತನಾಗಿ ಬಾಲಕನು ಬಾಲಲೀಲೆಗಳಿಂದ ವಿರಾಜಿಸಿದನು. ವೃದ್ಧಿಚಂದ್ರನಂತೆ ಅಭಿವೃದ್ಧಿಯಾಗುತ್ತಿದ್ದ ಸುಕುಮಾರನಿಗೆ ಪ್ರಾಪ್ತಕಾಲದಲ್ಲಿ ವಿವಿಧಕಲಾಚತುರನಾದ ಆಚಾರ್ಯನಿಂದ ವಿದ್ಯಾಭ್ಯಾಸಮಾಡಿಸಲು ಕುಮಾರನು ಸಕಲವಿದ್ಯಾಪಾರಂಗತನಾದನು. ಹಾಗೆಯೇ ಮೆಲ್ಲ ಮೆಲ್ಲನೆ ತರುಣನ ಅಂಗಗಳಲ್ಲಿ ಯವ್ವನವೂ ನೆಲಸಿತು. ನವಯೌವನಯುತನಾದ ಮಗನ ಮೊಗವನ್ನು ಕಂಪಿಲನು ನೋಡಿ 'ಕುಲವಿನ್ನು ಕೆಡದು, ಕುಜನರ ಕೂಗಾಟದ ಕಲಕಲವಿನ್ನು ನಡೆಯದು, ವೀರರುದ್ರನ ವಿಕ್ರಮವಿನ್ನು ಮೆರೆ

ಯದು, ಬಲ್ಲಾಳನೃಪನ ಧಾರುಣಿಯುಳಿಯಲಾರದು, ಸುರತಾಳನ ದಂಡು ಸುಳಿಯಲಮ್ಮದು ನಮ್ಮ ಧರಣಿಗೆ, ತೆಲಗು ಮನ್ನೆಯರ ಹರಿದಾಟ ಹವಣಿಗೆ ನಿಂತಿತಿನ್ನು' ಎಂದು ಆನಂದವಡೆದನು. ಅಲ್ಲದೆ ಹರೆಯ, ಸೊಬಗು, ರೂಪು, ರೇಖೆ, ಬೆಡಗು, ಬಿಂಕಗಳು ದೊರೆಕೊಂಡ ಕುವರನಿಗೆ ಪರಿಣಯವನ್ನು ಮಾಡಬೇಕೆಂದು ಯೋಚಿಸಿ ಮಂತ್ರಿಯ ಮೂಲಕ ವಿನುತ ಲಕ್ಷಣಯುತರಾದ ಐವರು ಮನುಜೇಶ್ವರನಂದನೆಯರನ್ನು ತರಿಸಿ ಮಂಗಳ ಗೀತ, ಮಹಾವಾದ್ಯರವ, ಪುಣ್ಯಾಂಗನಾಶಿರ್ವಾದಗಳು ಮೊಳಗುತ್ತಿರಲು ಅತಿವೈಭವದಿಂದ ಮದುವೆ ಮಾಡಿ ಯುವರಾಜ ಪದವಿಯನ್ನಿತ್ತು ಉದಧಿ ವೇಷ್ಟಿತ ಭೂತಳವೇ ಕಯ್ಗೆ ಬಂದಂತೆ ಮುದವನ್ನೈದಿದನು.

ಯುವರಾಜನಾದ ರಾಮನ ವಿತರಣಗುಣ, ವಿನಯ, ವಾಕ್ಚತುರತೆ, ಲೋಕಪ್ರಸಿದ್ಧವಾಯಿತು. ಅವನು ಪರವಸ್ತುಗಳಿಗಾಶಿಸುವುದಿಲ್ಲ; ಪರ ವೆಣ್ಣಿನಿರವ ನಿಟ್ಟಿಸಿ ನೋಡುವುದಿಲ್ಲ. ಕರೆದು ಎಲ್ಲರಿಗೂ ಉದಾರವಾಗಿ ದಾನ ಮಾಡುತ್ತಾನೆ. ವಿಶೇಷವಾಗಿ ಗೌರವಿಸುತ್ತಾನೆ. ಕಾಳೆಗದಲ್ಲಿ ಹಿಮ್ಮೆಟ್ಟುವುದಿಲ್ಲ ಎಂದು ನಾಡೊಳಗುಳ್ಳ ವೀರಭಟರೆಲ್ಲ ಬಂದು ಕಲಿರಾಮ ನನ್ನು ಸೇರಿದರು. ಅವನಲ್ಲಿ ಲಕ್ಷಣಯುತವಾದ ನೂರಿಪ್ಪತ್ತು ಕುದುರೆಗಳಿವೆ. ಅವುಗಳಲ್ಲಿ ಮೂನತ್ತು ರಾಮನಿಗೆ ಪ್ರಾಣಪ್ರಾಯ ವಾಗಿವೆ. ಅವುಗಳಲ್ಲಿಯೂ ಹವಳವರ್ಣದ ಜಾತ್ಯಶ್ವವೊಂದು ಅತ್ಯುತ್ತಮ ವಾದುದು. ಅದು ಅವನ ಕೈಸೇರಿದ ಬಗೆ ಹೀಗೆ: ಹಿಂದೆ ಒಂದು ಸಲ ಪಾರ್ವತಿಯ ಕೋಪದಿಂದ ಈಶ್ವರನು ಅರ್ಜುನನನ್ನು ಕುರಿತು, ಹಿಂದೆ ನಿನ್ನಿಂದ ಅಳಿದ ರಾಕ್ಷಸರೇ ಇಂದು ಭೂಲೋಕದಲ್ಲಿ ತುರುಕರಾಗಿ ಹುಟ್ಟಿದ್ದಾರೆ. ಅವರು ದೇವಾಲಯಗಳನ್ನೊಡೆದು ದೇವರುಗಳನ್ನು ಕೆಡಿಸಿ ಧರಣಿಯ ಸತ್ಕರ್ಮಗಳನ್ನು ಹಾಳುಮಾಡುತ್ತಿದ್ದಾರೆ. ಅವರನ್ನು ಸಂಹರಿಸಿ ದೇವಸ್ತ್ರೀಯೊಬ್ಬಳ ಗರ್ವವನ್ನು ಭಂಗಮಾಡಿ ಬಾ' ಎಂದು ತಿಳಿಸಿದನು. ಅದಕ್ಕೆ ಅರ್ಜುನನು 'ಅಂದಿನ ಬಿಲ್ಲಿಲ್ಲ, ಅಂದಿನ ರಥವಿಲ್ಲ, ಅಂದಿನ ಬಾಣ ವಿಲ್ಲ, ಕೊಂದಿಕ್ಕುವುದೆಂತು ಅವರನ್ನು?' ಎಂದು ಬಿನ್ನಹ ಮಾಡಲಾಗಿ, ಅಗಜಾರಮಣನು ನೀನು ಹೆದರಬೇಡ; ಸುರರಾಜನ ದಿವ್ಯವಾಜಿ ಭೂತಳಕವ ತರಿಸಿ ನಿನಗೆ ದಾನವರ ಧುರದಲ್ಲಿ ಸಹಾಯವಾಗುವುದು. ಅದು ಸೇರುವ

ಸಮಯದಲ್ಲಿಯೇ ನಿನಗೆ ವಿಷ್ಣುವಿನ ಶಾರ್ಙ್ಗವೂ ನಕುಳನ ಭಲ್ಲೆಯವೂ ಸಹದೇವನ ಖಡ್ಗವೂ ಕೈ ಸೇರುವುದು ಎಂದು ಸಮಾಧಾನಮಾಡಿ ಕಳುಹಿಸಿದನು. ಅದಕ್ಕನುಗುಣವಾಗಿಯೇ ಇಂದ್ರನ ಆಜ್ಞೆಯ ಪ್ರಕಾರ ಅವನ ಕುದುರೆಯು ಹೂವು ತಾನಿದ್ದೆಡೆಯಲ್ಲಿಯೇ ಇದ್ದು ತನ್ನ ಸೌರಭವನು ದಿಗ್ವಿಸರಕ್ಕೆಲ್ಲಾ ಕಳುಹಿಸುವಂತೆ ಸುರಲೋಕದಲ್ಲಿಯೇ ಇದ್ದು ತನ್ನಂಶವನ್ನು ಧರೆಗೆ ಕಳುಹಿಸಲು ಅದು ವನಾಯದೇಶದಲ್ಲಿ ಬಂದು ಜನಿಸಿತು. ಅದರ ಗತಿ ವಿಳಾಸಗಳು ಲೋಕವನ್ನೇ ಬೆರಗು ಮಾಡಿದವು. ಊಳಿಗದವರಲ್ಲದೆ ಹೊಸಬರ ಮೈಯ್ಯ ಗಾಳಿ ಸೋಂಕಿದರೆ ಖುರದಿಂದ ಹೋಳು ಮಾಡಿ ಕಾಲಿಂದ ಭೂಮಿಯನ್ನು ಆಕಾಶಕ್ಕೆ ಧಾಳಿಯಿಡಿಸುವುದು. ಭೂಮಿಯ ಅರಸರನೇಕರು ಬಂದು ಅದರಂದವನ್ನು ನೋಡಿ ಆಶ್ಚರ್ಯಪಟ್ಟು ಅದಕ್ಕೆ ನಮಸ್ಕರಿಸಿ ಅದು ಬೆನ್ನು ಕೊಡದಿರಲು ನೊಂದು ಹೋಗುವರು. ಬಿಸಿಲ ಕುದುರೆಯಂತೆಯೂ ಚಿತ್ರದ ತುರಗದಂತೆಯೂ ವಿಚಿತ್ರವಾಗಿ ಕಾಣುವುದು. ಹಸಿದ ಹುಲಿಯಂತೆಯೂ ಸಿಟ್ಟಿದ್ದ ಸಿಂಹದಂತೆಯೂ ಗರ್ಜಿಸುವುದು. ಇದರ ಹತ್ತಿರ ಬಂದು ಮೈಯ್ದಡವಿ ಹತ್ತಿ ಸವಾರಿಮಾಡುವವರಿಗೆ ಹತ್ತುಸಾವಿರ ವರಹಗಳನ್ನು ಬಹುಮಾನವಾಗಿ ಕೊಡುತ್ತೇವೆಂದು ಅದರ ನಾಯಕರು ಘೋಷಿಸಿದರು. ಈ ವಾರ್ತೆಯು ರಾಮನಾಥನ ಕಿವಿಯನ್ನೂ ಮುಟ್ಟಿತು. ತಕ್ಷಣವೇ ತಂದೆಯಲ್ಲಿಗೆ ಹೋಗಿ ತನಗೆ ಆ ತುರಗವು ಬೇಕೆಂದು ತಿಳಿಸಿದನು. ಅದನ್ನು ಕೇಳಿದ ತಂದೆಯು 'ತುಂಟು ಕುದುರೆಯದು, ನಿನ್ನ ಜೋಕೆಗದೆಂತು ಬಂದಪುದು ? ಲೋಕದ ನರನಾಥರೊಲ್ಲದ ಕುದುರೆಯವೇಕೆ ನಿನಗೆ ? ನೋಡುಗುದುರೆಯಲ್ಲವದು, ಸಂಗರಭೂಮಿಗೀಡಹ ಕುದುರೆಯಲ್ಲಗಡ ; ಕೇಡಹುದದರಿಂಗ ಗಡ, ಅದರ ಮಾತಾಡಲೆ ಬೇಡಲೆ ಕಂದ' ಎಂದು ಸಮಾಧಾನ ಮಾಡಿದನು. ರಾಮನು ಹೀಗೆಂದ ತಂದೆಯ ಕಿವಿಯೊತ್ತಿಗೆ ಬಂದು ಹಿಂದಿನ ರಾತ್ರಿ ಇಂದುಶೇಖರನು ಕನಸಿನೊಳೆಂದ ಪರಿಯನ್ನು ಇಂತೆಂದು ಬಿನ್ನವಿಸಿದನು. 'ಗೋವೆಯಲ್ಲಿ ಅಶ್ವವೊಂದು ಬಂದಿದೆ. ಅದರಿಂದ ನೀನು ಭೂಮಿರಾಯರ ಬಲವನ್ನು ಮುಂದುಗೆಡಿಸಿ ಸುರತಾಳ ಬಲವ ಹಿಂದುಮುಂದು ಮಾಡುವೆ ; ಭೂಮಿರಾಯರಿಗೆ ಬೆನ್ನು ಕೊಡದದು ; ನಿನ್ನ ನುಡಿಗೆಳದ ಮುನ್ನ ನಿನಗೆ ಅಡಿಯಾದವುದು. ತಡೆಯದೆ ನೀನಲ್ಲಿಗೆ

ನಿನ್ನವರ ಕಳುಹಿಸಿದರೆ ಅದರೊಡೆಯ ನಿನಗೆ ಆ ಕುದುರೆಯನ್ನೂ ಬಾಳೊಂದನ್ನೂ ಭಲ್ಲೆಯವನೊಂದನ್ನೂ ಶರಜಾಲಸಹಿತ ಶಾರ್ಙ್ಗವೊಂದನ್ನೂ ಲೀಲೆಯಿಂದ ಕೊಡುತ್ತಾನೆ.'

ಕನಸಿನ ವೃತ್ತಾಂತವನ್ನು ಕೇಳಿದ ಕಂಪಿಲನು ಕೂಡಲೆ ಉಡುಗೊರೆ ಸಹಿತ ಗೋವೆಯ ಪಟ್ಟಣಕ್ಕೆ ರಾಯಭಾರಿಗಳನ್ನು ಕಳುಹಿಸಿದನು. ಅವರು ಬಹು ಬೇಗ ಪ್ರಯಾಣ ಮಾಡಿ ಕುದುರೆಯೊಡೆಯನಿಗೆ ಬಂದ ಕಾರ್ಯ ವನ್ನು ತಿಳಿಸಲು ಅವನು ಬಹು ಸಂತೋಷದಿಂದ ಅವರಿಗೆ ಕುದುರೆಯನ್ನು ತೋರಿಸಿದನು. ಒಡನೆಯೆ ಅದರ ದುಷ್ಟತನ ಹಾರಿತು. ಹೇಷಾರವ ಮೀರಿತು. ಎಲ್ಲರೂ ಕುದುರೆಯೊಡನೆ ಹೊಸಮಲೆಗೆ ಬಂದು ನಂದನ ನೊಡನೆ ಆಸ್ಥಾನದಲ್ಲಿದ್ದ ಕಂಪಿಲನಿಗೆ ಕಾಣಿಕೆಯಾಗಿ ಅರ್ಪಿಸಿದರು. ಕುದುರೆಯು ರಾಮುನನ್ನು ಕಂಡೊಡನೆಯೇ ಗಾರುಡಿಗನನ್ನು ಕಂಡ ಘಟ ಸರ್ಪದಂತೆ ಕ್ರೂರತೆಯನ್ನು ಬಿಟ್ಟು ಹೇಷಾರವವನ್ನು ಮಾಡಿತು. ರಾಮನು ಅದರ ಕತ್ತನ್ನು ಚಪ್ಪರಿಸಿ ಮೊಗವನ್ನು ಬಿಗಿಯಪ್ಪಿ ಮುದ್ದಿಸಿ ಶಿರಕ್ಕೆ ಕರ್ಪೂರ ಗಂಧವನ್ನು ಕೊಟ್ಟು ಪಾದಕ್ಕೆ ಮಣಿದನು. ಕುದುರೆಯು ಪೂರ್ಣವಾಗಿ ಒಲಿದು ಅಧೀನವಾಯಿತು. ಅದರ ಬೆನ್ನೇರಿ ಏರಾಟವಾಡಿ ತಂದೆಯನ್ನು ಮೆಚ್ಚಿಸಿದನು. ಕುದುರೆಯು ಪರವನಿಗೆ ಅಮೋಘವಾದ ಬಹುಮಾನಗಳು ದೊರೆತವು. ಸುಪ್ರೀತನಾದ ವಣಿಗ್ವರನು ಏಕಾಂತದಲ್ಲಿ ಆ ಕುದುರೆಯ ಚರಿತವನ್ನವರಿಗೆ ತಿಳಿಸಿ, ಕೊಂಬುವಿಲ್ಲು, ಭಲ್ಲೆಯ ಖಡ್ಗ ಗಳನ್ನಿತ್ತು ಮುದದಿಂದ ಹಿಂತಿರುಗಿದನು.

ಹೀಗಿರಲು ಬಲ್ಲಾಳರಾಯನಿಗೆ ಸೇರಿದ ಹುಳಿಹೊರೆಯೆಂಬ ಪ್ರಸಿದ್ಧ ಅಗ್ರಹಾರದಲ್ಲಿ ಜಾತಿನಾಯಿಗಳ ತಂಡವಿದ್ದುದು ರಾಮನಾಥನಿಗೆ ತಿಳಿದು ಬಂತು. ಅದನ್ನು ತನಗೆ ಕಳುಹಿಸಿಕೊಡಬೇಕೆಂದು ಆ ಹಳ್ಳಿಯ ಗೌಡನಿಗೆ ಹೇಳಿ ಕಳುಹಿಸಿದನು. ಆತನು ಅತಿ ಗರ್ವದಿಂದ 'ಬಲ್ಲಾಳರಾಯನ ರಾಜ್ಯಕ್ಕೆ ತಾನೇನು ವಲ್ಲಭನೆ ? ಬೇಕಾದರೆ ಬಲ್ಲಾಳನಲ್ಲಿ ಹೋರಿ ಬಿಡಿಸಿ ಕೊಳ್ಳಲಿ' ಎಂದು ಬಾಳಿನಲ್ಲಿ ಮೂಗ ಕೊಯ್ದು ಕಳುಹಿಸಿದನು. ಇದನ್ನು ಕೇಳಿ ರಾಮನಾಥನಿಗೆ ಕೋಪ ಬಂದಿತು. ತಂದೆಯ ಆಜ್ಞೆಯನ್ನು ಪಡೆದು ಆ ಊರಿನ ಮೇಲೆ ಧಾಳಿ ಹೊರಟನು. ಈ ವಿಷಯ ಬಲ್ಲಾಳ

ನಿಗೂ ತಿಳಿದು ನಾರಸಿಂಗುವಿನ ನಾಯಕತ್ವದಲ್ಲಿ ದೊಡ್ಡ ಸೈನ್ಯವನ್ನು ಕಳುಹಿಸಿದನು. ಆ ಕಡೆ ನರಸಿಂಗು ಈ ಕಡೆ ಕಾಟಣ್ಣ ಇವರ ಮೇಲ್ವಿಚಾರಣೆಯಲ್ಲಿ ಘೋರ ಯುದ್ಧವಾಯಿತು. ರಾಮನಿಗೆ ಜಯವಾಯಿತು. ಕೆಡೆನುಡಿದಿದ್ದ ಪಲ್ಲಿಯ ಗೌಡನನ್ನು ಸೆರೆ ಹಿಡಿದುಕೊಂಡು ಹೋಗಿ ತಂದೆಗರ್ಪಿಸಿದನು. ಇದನ್ನು ಕೇಳಿ ಬಲ್ಲಾಳನು ರೋಷಭೀಷಣನಾದನು. ಕಂಪಿಲನನ್ನು ಸದೆಬಡಿಯಲು ದೊಡ್ಡ ಸೈನ್ಯದೊಡನೆ ಹೊರಟನು. ಕಾನನದಾನೆಯನ್ನು ಕಂಡು ಪಸಿದ ಪಂಚಾನನ ಪೊಗುವ ತೆರದಲ್ಲಿ ಆನಪೆ ಪೊಕ್ಕನು ಬಲ್ಲಾಳನ ಸೇನೆಯನ್ನು ರಾಮನಾಥ. ಪಡೆವೆರಸು ಬಂದಡ್ಡಲಾದನು ನರಸಿಂಗು. ಮೂಂವಳಸಾಗಿ ಮುತ್ತಿದ ರಿಪುಸೇನೆಯ ಮೊತ್ತವನ್ನು ಕಾಣುತ್ತ ಸಾವಿರ ಮುಖದೊಳಿದ್ದುದು ರಾಮನೇರಿದ ದೇವತುರಂಗ. ಕತ್ತಲೆಯ ಮೊತ್ತವನ್ನು ದಿನನಾಯಕನೊತ್ತರಿಸುವಂತೆ ಮುತ್ತಿದ ಮೋಹರವನ್ನು ರಾಮನಾಥನು ತೊತ್ತಳದುಳಿದನು. ರಾಮನಾಥನ ರಾವುತಿಕೆಯುದ್ದಂಡತನವನ್ನು ಕಂಡು ಬಲ್ಲಾಳನು ಚಿಂತಾಕ್ರಾಂತನಾದನು. ಬೈಚಪ್ಪ ಸೋಮದಂಡಾಧಿಪರು ಉಭಯಪಕ್ಷದವರಿಗೂ ಸಾಮಭೇದಾದಿಗಳಿಂದ ತಿಳಿಸಿ ಸಂಗ್ರಾಮವಾರ್ತೆಯನ್ನು ಬಿಡಿಸಿದರು. ಭೂಲಲನೇಶ್ವರಿರ್ವರೂ ತಂತಮ್ಮ ಪಟ್ಟಣವನ್ನು ಸೇರಿದರು.

ಇದರಿಂದ ವೀರರಾಮನ ಪ್ರಸಿದ್ಧಿ ಹೆಚ್ಚಿತು. ಲೋಕದ ಜನರೆಲ್ಲರೂ ರಾಮನನ್ನು ನಾನಾವಿಧವಾಗಿ ಕೊಂಡಾಡಿದರು. ತೆಲುಗರ ಗಂಡ, ಮೂರುರಾಯರ ಗಂಡ, ಚೆಲುವರ ಗಂಡ ಎಂಬ ಬಿರುದಿನೊಕ್ಕಣೆ ಅವನ ಆಸ್ಥಾನದಲ್ಲಿ ಬೊಬ್ಬಿರಿಯುತ್ತಿತ್ತು. ಇದನ್ನು ಕೇಳಿ ಸಹಿಸಲಾರದ ಓರಗಲ್ಲಿನ ಕಾಕತಿರುದ್ರನು ಎದೆಯಲ್ಲಿ ಕೋಪವನ್ನು ತಾಳಿ ರಾಮನನ್ನು ಸದೆಬಡಿಯಲು ಬಲು ದೊಡ್ಡ ಸೈನ್ಯದೊಂದಿಗೆ ಕರ್ಣಾಟಕರಾಜ್ಯವನ್ನು ಮುತ್ತಿದನು. ಈ ಸಮಾಚಾರವನ್ನು ಕೇಳಿದ ಕಂಪಿಲನು ದೊಡ್ಡ ಮೋಹರವೆರಸಿ ಮಗನೊಡನೆ ವೀರರುದ್ರನ ಒಡ್ಡಣವನ್ನು ಸಂಧಿಸಿದನು. ಸಂದಸೇನಾಶರಧಿಯನ್ನು ನೋಡಿ ಮನಕಂದಿತು ಕಂಪಿಲನಿಗೆ ; ಕಂಡನು ತಂದೆಯ ಕದಲನ್ನು ಕಲಿಕಾಲಗಾಂಡೀವಿ ಗಂಡುಗಲಿ ವೀರರಾಮ. ಕೈಮುಗಿದು ಬಿನ್ನವಿಸಿದನು ತಂದೆಗಿಂತು—'ದೇವ ಚಿತ್ತೈಸು. ರುದ್ರದೇವನ ಬಲವನೆಲ್ಲವನು

ಜಾವದೊಳು ಜನನಗರಿಗೆ ಕಳುಪುವೆನು. ಆವ ಗಹನವಿದೆನಗೆ ? ಅಡವಿಯೆನಿತು ! ಕಿಡಿಯೆನಿತು ! ಆನೆಯ ವಂಗಡವೆನಿತು ! ಆ ಸಿಂಗವೆನಿತು ! ಕಡಲೆನಿತು ! ಆ ವಡಬಾನಲವೆನಿತು ! ಹದ್ದು ಕಾಗೆಗಳಗೀ ಬಲವೆಲ್ಲವನು ಬಿರ್ದಿಕ್ಕುವೆನು' ಎನ್ನುತ್ತಾ ಬಲೆಯ ಹುಲಿಯಂತೆ ಪರಬಲವನ್ನು ಹೊಕ್ಕು ಮೈಯಿಕ್ಕಿ ತಿವಿದು ಒಕ್ಕಲಿಕ್ಕಿದನು. ಶತ್ರುಪಕ್ಷದ ಸಿಂಗಮನಾಯಕನು ಸೆರೆಸಿಕ್ಕಿದನು. ಎಲ್ಲಿ ನೋಡಿದರೆ ರಾಮನ ಬೊಬ್ಬೆಯುಬ್ಬರ ! ಎಲ್ಲಿ ನೋಡಿದರೆ ರಾಮುಗನ ಸೆಲ್ಲಹದ ಶಕ್ತಿ. ಇರಿಯುತ್ತ, ಕೊರೆಯುತ್ತ, ಜರಿಯುತ್ತ, ನೆರೆಗಲಿಗಳನ್ನು ಬೆಂಬತ್ತಿ ಸೆರೆ ಹಿಡಿದನು. ತೀರ ಮುರಿದುದು ರುದ್ರನ ಸೇನೆ. ಚರಣಕಮಲಗಳಿಗೆರಗಿದ ವರಸುತನನ್ನು ತೆಗೆದಪ್ಪಿ ಕಂಪಿಲನು ಸಂತೋಷ ಸಮುದ್ರದಲ್ಲಿ ತೇಂಕಾಡಿದನು.

ಬಿರುದಿನ ಜಗಳಕ್ಕೆ ಕಾಕತೀಶ್ವರನು ಕಂಪಧರಣಿಪತಿಯ ಮೇಲೆ ಪೋಗಿ ಮುರಿದು ಬಂದುದನ್ನು ಕರಿಪತಿ ಕಪಿಲೇಶ್ವರನು ಕೇಳಿ ಕೋಪಗೊಂಡು ರಾಮನುರುಬೆಯನ್ನು ಕುರಿತು ಗಜಪತಿ ವಿದ್ಯಾಧರಪಾತ್ರೆ, ಹರಿಶ್ಚಂದ್ರ ಪಾತ್ರೆ ಮೊದಲಾದ ತನ್ನ ಸಚಿವರೊಡನೆ ಆಲೋಚಿಸಿದನು. ಅವರು ಹಸಿಯಗೋಡೆಯನ್ನು ತರಿಯುವಂತೆ ರಾಮನ ಮೈಯ್ಯ ಕುಸುರಿದರಿಯುವೆವು ಎಂದು ಭರವಸೆಗೊಡಲು ಷೋಡಶಪಾತ್ರೆಗಳವೆರಸಿ ಎರಡು ಸಾವಿರ ಕುದುರೆ ಅಯ್ವತ್ತುಸಾವಿರ ಕಾಲಾಳು ಎಂಟುನೂರು ಆನೆಗಳೊಡನೆ ಕೃಷ್ಣವೇಣಿಯನ್ನೂ ದಾಟಿ ಬಂದು ಬೀಡುಬಿಟ್ಟನು. ಈ ಸುದ್ದಿಯನ್ನು ಚರರು ಕಂಪಿಲನಿಗೆ ಬಂದು ತಿಳಿಸಲು ಉಗ್ರಾಸಿಯನ್ನು ಪಿಡಿದು ತುರುಗವನ್ನೇರಿ ಮೆಯ್ಗಾವಲ ಪಡೆಯೊಡನೆ ನಲವಿಂದ ನಡೆದನು ರಾಮನಾಥ. ಸಂಗಮ ಕಾಟಣ್ಣರು ಪೌಜುಗಳಿಗಡ್ಡಲಾದರು. ಕಳಿದ ಹೂವಿನ ತೊಡಂಬೆಯನ್ನು ಬಿರುಗಾಳಿ ಸುಳಿದು ಕೆಡಪುವ ತೆರದಲ್ಲಿ ಕರಿಪತಿಯ ರಾವುತರನ್ನು ಕಲಕಿದನು ರಾಮನಾಥ. ಗಿರಿಗಳು ಬಂದು ಗೋತ್ರಾದ್ರಿಯ ಮುತ್ತುವಂತೆ ಗಜಪತಿಯ ಆನೆಗಳು ಕುಂತಳ ದೇಶದರಸನ ಕುಮಾರನನ್ನು ಮುತ್ತಿದವು. ಎಡಬಲದಲ್ಲಿ ಹಿಂದುಮುಂದೆ ಬಂದು ವಂಗಡಿಸಿದಾನೆಗಳ ಸೊಂಡಿಲನ್ನು ಕಡಿದು ಹರಹಿದನು ಕಲಹಾಂಗಣದಲ್ಲಿ ಕಡುಗಲಿ ಕಂಪಿಲಾತ್ಮಜನು ; ಕೆಡೆದಾನೆಗಳೆಸೆದವು ಕಡಿವಡೆದ ಕುಲಾದ್ರಿಗಳಂತೆ. ವಿದ್ಯಾಧರ

ಪಾತ್ರೆ ಹರಿಶ್ಚಂದ್ರ, ವಿಕ್ರಮಬಾಹು, ಶೃಂಗಾರಸಾವಂತ, ಪರಾಕ್ರಮ ಬಾಹುಪಾತ್ರಗಳು ಶಕ್ರನಂದನನ ಕೆಣಕಿ ಸುರಲೋಕವನ್ನಾಕ್ರಮಿಸಿದರು. ಕಪಿಲೇಶ್ವರನ ಬಲ ಬೆಂಗೊಟ್ಟೋಡಿ ಬಂದ ದಾರಿಯನ್ನು ಹಿಡಿಯಿತು. ಪರಮಹರುಷದಿಂದ ಪುರವನ್ನು ಹೊಕ್ಕನು ಪುತ್ರಸಹಿತ ಕಂಪಿಲೇಶ್ವರನು.

ಕಾಮನಿಂದ ಕಮಲಾಕಾಂತನೂ ಬುಧನಿಂದ ಸೋಮನೂ ಜಯಂತ ನಿಂದ ಇಂದ್ರನೂ ರಾಮನಿಂದ ದಶರಥನೂ ಪ್ರಕಾಶಿಸುವಂತೆ ರಾಮನಾಥ ನಿಂದ ಕಂಪಿಲನು ಎಸೆಯುತ್ತಿರಲು ಡೆಲ್ಲಿಯಲ್ಲಿ ಭಾನುಸನ್ನಿಭತೇಜನೂ ಇಂದ್ರನ ಸಮಾನ ವಿಭವವುಳ್ಳವನೂ ಭೂನುತವಿಕ್ರಮನೂ ಆದ ಅಲ್ಲಾ ವುದ್ದೀನನು ಚಕ್ರವರ್ತಿಯಾಗಿದ್ದನು. ಬಾನೊಳಗಣ ತಾರಾಗಣಗಳ ನ್ನಾದರೂ ಲೆಕ್ಕಿಸಬಹುದು. ಆ ನರಲೋಕಪಾಲಕನ ಖಾನವಜೀರ ಮಲ್ಲುಕರನ್ನು ಲೆಕ್ಕಿಸಲಾಗುವುದಿಲ್ಲ. ಆ ಸಾರ್ವಭೌಮನಿಗೆ ವಿಕ್ರಮ ಪಂಚಾನನನೆಂಬ ಬಿರುದುಳ್ಳ ನೇಮಿಯೆಂಬುವನು ಸೇನಾಪತಿ. ದೇವಗಿರಿಯ ರಾಮರಾಯನೆ ಮೊದಲಾದವರನ್ನು ಸೋಲಿಸಿ ರಾಮೇಶ್ವರದವರೆಗೂ ಧಾಳಿಮಾಡಿ ಮಧುರೆಯಲ್ಲಿ ಠಾಣೆಯನ್ನಿಟ್ಟ ಪರಾಕ್ರಮವಾತನದು. ಸುರತಾಳನಿಗೆ ಪರಮಲಾವಣ್ಯಯುತೆಯಾದ ಮಗಳಿದ್ದಳು, ಅವಳಿಗೆ ತಕ್ಕ ವರನನ್ನು ಹುಡುಕಿ ಕಾಣದೆ ಚಿಂತಿಸುತ್ತಿರಲು ಆಸ್ಥಾನದ ಭಟರು ರಾಮನಾಥನ ಕೀರ್ತಿಯನ್ನು ಕೇಳಿ ಅವನೋಲಗಕ್ಕೆ ಹೋಗಿ ಅವನ ಭಾವಚಿತ್ರವನ್ನು ಬರೆಸಿ ತಂದು ತೋರಿಸಲು ಭೂಲೋಕಮದನಾವತರ ನಾದ ಅವನ ಪಟವನ್ನು ಆ ಲೋಲಾಕ್ಷಿ ನೋಡಿ ಮೋಹಿತಳಾದಳು. ಮಗಳ ಇಷ್ಟಾರ್ಥವನ್ನು ಸಲ್ಲಿಸಲು ಸುಲ್ತಾನನು ಕಂಪಿಲನಿಗೆ ಒಂದು ಲೇಖನವನ್ನು ಬರೆಸಿ ಅದರಲ್ಲಿ ರಾಮನಾಥನನ್ನು ಕಳುಹಿಸಿಕೊಡಬೇಕೆಂದೂ ಅವನಿಗೆ ತನ್ನ ಕುವರಿಯನ್ನೂ ತನ್ನ ಎಲ್ಲ ಭಾಗ್ಯವನ್ನೂ ಕೊಟ್ಟು ನಡೆಯಿಸಿ ಕೊಳ್ಳುವನೆಂದೂ ಸೂಚಿಸಿ ಕಳುಹಿಸಿದನು. ಲೇಖನಾರ್ಥವನ್ನು ಓದಿಸಿ ತಿಳಿದುಕೊಂಡು ಕಂಪಿಲನು ಅದು ತಮ್ಮನ್ನು ಆಳಾಗಿಸಿಕೊಳ್ಳಲು ಸುಲ್ತಾ ನನು ಏರ್ಪಡಿಸಿರುವ ತಂತ್ರವೆಂದು ಮನವರಿತು ಬಂದ ರಾಯಭಾರಿಗಳಿಗೆ ಬಹು ಗೌರವಗಳಿಂದ ಉಡುಗೊರೆಗಳನ್ನಿತ್ತು ತರುಣನಾದ ರಾಮನಾಥನು ತಮ್ಮನ್ನಗಲಿರಲು ಸಾಧ್ಯವಿಲ್ಲವೆಂದು ಹೇಳಿ ಕಳುಹಿಸಿದನು. ಈ ಮಾತನ್ನು

ಕೇಳಿದ ಸುರತಾಳನು ಕೋಪಗೊಂಡು ಕಂಪಿಲನಿಗೆ ತಕ್ಕ ಶಾಸ್ತಿಯನ್ನು ಮಾಡುವೆನೆಂದು ಆರ್ಭಟಿಸಿ ಮಗಳಿಗೆ ಒಪ್ಪುವ ಪತಿಯನ್ನು ವರಿಸಲು ಸ್ವಯಂವರವನ್ನೇರ್ಪಡಿಸಿದನು. ಚೆಲುವಚೆನ್ನಿಗರಾಮನಲ್ಲಿ ನೆಟ್ಟಚಿತ್ತದ ಚೆಲುವೆ ಅನ್ಯರನ್ನೊಳಸದೆ ಚಿಂತಾಕ್ರಾಂತಳಾಗಿರಲು ಸುಲ್ತಾನನು ರಾಮನನ್ನೇ ತರಿಸಿ ಕೊಡುವುದಾಗಿ ಅವಳಿಗೆ ಹೇಳಿ ಸಮಾಧಾನಮಾಡಿ ಆ ಕೆಲಸಕ್ಕಾಗಿ ನೇಮಿಯನ್ನು ನೇಮಿಸಿದನು. ಅವನು ಬಹುಸೈನ್ಯದಿಂದ ಹೊರಟು ಮೊದಲು ಕಾಕತೀಯ ವೀರಭದ್ರನ ಮೇಲೆ ದಂಡೆತ್ತಿ ಹೋಗಿ ಅವನನ್ನು ಗೆದ್ದು ಬಂದು ಸುಲ್ತಾನನಿಗೆ ಕಾಣಿಕೆಯನ್ನಿತ್ತನು.

ಈ ಮಧ್ಯೆ ಮುಂಗುಲಿದೇಶದ ದೊರೆಯು ಸುಲ್ತಾನನಿಗೆ ಪಾವುಡ ಗಳನ್ನಟ್ಟುವ ಕಾಲ ಬಂದಿತು. ಆತನು ತನ್ನ ಸಚಿವರ ಬುದ್ಧಿವಾದದ ಪ್ರಕಾರ ಆನೆ ಕುದುರೆ ಪೆಣ್ಮಾಣಿಕ ಚೀನಾಂಬರ ಚಿತ್ರಾವಳಿಗಳ ಜೊತೆಯಲ್ಲಿ ಇಪ್ಪತ್ತುನಾಲ್ಕು ಟಾಕಿನ ಘನಮಾನ ಶಾರ್ಙ್ಗವನ್ನು ರಾಯಭಾರಿಗಳ ಮೂಲಕ ಕಳುಹಿಸಿಕೊಟ್ಟನು. ಅದರ ಅದ್ಭುತಾಕಾರವನ್ನು ನೋಡಿ ಸುರತಾಳನು 'ಈ ಧನುವನ್ನು ಗೊಲೆಗೊತ್ತಿ ಆರ್ಪಸೆವ ಘನಭುಜರುಂಟೆ ನಿಮ್ಮಲ್ಲಿ, ಎಂದು ಕೇಳಲು ಆ ರಾಯಭಾರಿಗಳು 'ಬಿಲ್ಲನಿದನು ತೆಗೆದು ಏಳು ಕೊಪ್ಪರಿಕೆಯನ್ನಿಲ್ಲದೆ ತಟ್ಟುಚರ್ಚುವ ಬಲ್ಲಿದರುಂಟು ಮುಂಗುಲಿದೇವ ನೊಳಗೆ' ಎಂದು ಉತ್ತರವಿತ್ತರು. ಅದನ್ನು ಕೇಳಿ ಆಗ್ರಹಗೊಂಡ ದಾನವ ಭೂಮಿಪನು ತಮ್ಮವರಲ್ಲಿ ಆ ಶಕ್ತಿಯುಳ್ಳವರುಂಟೆ ಎಂದು ಕಣ್ಣಿರಿದು ನೋಡಲು ಬಾದುರನೆಂಬುವನು ಬಂದು ಬಿಲುಗಾರರು ಬೆರಗಾಗುವ ರೀತಿ ಯಲ್ಲಿ ಇರದಾರ್ದೆಚ್ಚನು ಎಲ್ಲರೂ ತಲೆದೂಗುವಂತೆ. ಸುರತಾಳನು ಸಂತುಷ್ಟನಾಗಿ ಅವನಿಗೆ ಮಲ್ಲುಕಪಟ್ಟವನ್ನು ಕಟ್ಟಿ ಉಡುಗೊರೆಗಳನ್ನು ಕೊಟ್ಟು ಕಳುಹಿಸಿದನು. ಇದನ್ನು ಕಂಡೊಡನೆಯೇ ಆಸ್ಥಾನದ ಇತರ ಖಾನವಜೀರರಿಗೆ ಈತನ ಮೇಲೆ ಅಸೂಯೆಯುಂಟಾಗಿ ಇವನಿದ್ದರೆ ನಮಗೆ ಉಳಿಗಾಲವಿಲ್ಲವೆಂದೂ ಅವನನ್ನು ಕೊಂದುಹಾಕಬೇಕೆಂದೂ ಆಲೋಚಿಸಿ ಸುರತಾಳನು ಅವನ ಪ್ರಾಣವನ್ನಪಹರಿಸಲು ನಿಷ್ಕರಿಸಿದ್ದಾನೆಂದು ಸುಳ್ಳು ಬೊಬ್ಬೆಯನ್ನೆಬ್ಬಿಸಿದರು. ಅದನ್ನು ನಿಜವೆಂದು ನಂಬಿ ಬಾದರನು ಡೆಲ್ಲಿ ಯನ್ನು ಬಿಟ್ಟು ತೆಂಕಣದಿಕ್ಕಿಗೆ ಓಡಿದನು. ಈ ಸಮಾಚಾರ ಸುರತಾಳನ

ಕಿವಿಯನ್ನು ಮುಟ್ಟಿತು. ಆತನು ಕಡುಕೋಪಗೊಂಡು ಅವನನ್ನು ಹಿಂಬಾಲಿಸಿ ಹೋಗಿ ಹಿಡಿದು ತರಬೇಕೆಂದು ನೇಮಿಗೆ ಅಪ್ಪಣೆ ಮಾಡಿದನು. ಲಕ್ಷ ಕುದುರೆಯ ಧಾಳಿ ಹೊರಟಿತು. ದೂರದಲ್ಲಿ ಬಾದುರನನ್ನು ಕಂಡು ಮುತ್ತಿತು. ವೀರನಾದ ಬಾದುರನು ಅವರನ್ನೆಲ್ಲಾ ಮುರಿದಿಕ್ಕಿ ಕೃಷ್ಣಾನದಿಯನ್ನು ದಾಟಿ ಮುಂದುವರಿದು ಕಂಪಿಲರಾಯನಲ್ಲಿಗೆ ಬಂದು ಆಶ್ರಯವನ್ನು ಅಪೇಕ್ಷಿಸಿದನು. ಮಂತ್ರಿಯ ಸೂಚನೆಯ ಪ್ರಕಾರ ಕಂಪಿಲನು ಅವನಿಗೆ ಆಶ್ರಯವನ್ನು ಕೊಡಲು ಸಂದೇಹಪಡುತ್ತಿರಲು ಮಗನಾದ ಧೀರ ರಾಮನು 'ಮಱಗೆ ಬಂದವ ಮಡದಿಯರಂತಲ್ಲದೆ ಮಱಯೇನು ಬೇಱೂಂದಿಲ್ಲ. ಮಱವೊಕ್ಕವರ ಕಾವರೆಂದೆಂಬ ಬಿರುದಿನ ಹೊಱಗೆಯ್ದೀಗ ಕಾರಯಿಸು' ಎಂದು ಧೈರ್ಯವಿತ್ತು ಬಾದುರನನ್ನು ಬರಮಾಡಿ ಗೌರವಿಸಿದನು. ಈ ಸುದ್ದಿ ಸುರತಾಳನಿಗೆ ಮುಟ್ಟಲು ಅವನು ಕಂಪಿಲನ ಮೇಲೆಯೇ ದಂಡೆತ್ತಿ ಹೋಗುವಂತೆ ನೇಮಿಗೆ ನೇಮಿಸಿದನು. ಒಡನೆಯೇ ನೇಮಿಯು ದೊಡ್ಡ ಸೈನ್ಯದೊಡನೆ ಹೊರಟು ತೊರೆಗಲ್ಲು ಬಾದಾಮಿ ಮುದುಗಲ್ಲುಗಳನ್ನೂ ಹಾಳುಮಾಡಿ ಕುಮ್ಮಟವನ್ನು ಮುತ್ತಿದನು. ಇದನ್ನು ಕೇಳಿ ಕಂಪಿಲನು ಭೀತನಾಗಿ ತತ್ತರಿಸುತ್ತಿರಲು ರಾಮನು ತಂದೆಯನ್ನು ಉಚಿತ ವಚನಗಳಿಂದ ಸಮಾಧಾನಪಡಿಸಿ ನೇಮಿಯ ಅಪಾರ ಸೈನ್ಯವನ್ನು ಎದುರಿಸಿದನು. ಸುರತಾಳನ ಬಲಕ್ಕೆ ವಿಶೇಷವಾಗಿ ಸೋಲಾಯಿತು. ವರ್ಣಿಸಲಾರದಷ್ಟು ಕಷ್ಟನಷ್ಟಗಳನ್ನು ಅನುಭವಿಸಿ ಅದು ಡೆಲ್ಲಿಗೆ ಹಿಂತಿರುಗಿತು. ರಾಮನ ಪರಾಕ್ರಮವನ್ನು ನೋಡಿ ಬಾದುರನು ಆಶ್ಚರ್ಯಸಮುದ್ರದಲ್ಲಿ ಮುಳುಗಿದನು. ಕಂಪಿಲನು ರಾಮನೊಡನೆ ರಾಜಧಾನಿಯನ್ನು ಸೇರಿ ಇಂದ್ರೈಶ್ವರ್ಯದಲ್ಲಿ ಮೆರೆಯತೊಡಗಿದನು. ಸೋತ ನೇಮಿಯು ಸುಲ್ತಾನನನ್ನು ನೋಡಿ ರಾಮನ ಅನ್ಯಾದೃಶವಾದ ಶಕ್ತಿಯನ್ನು ವಿವರಿಸಿ ಅವನು ಅಜೇತನೆಂದು ಹೇಳಹೋಗಿ ಸುಲ್ತಾನನ ಕೋಪಕ್ಕೆ ಪಾತ್ರನಾದನು.

ಹಣೆಗಣ್ಣಿನಿಂದ ಈಶ್ವರನೂ ಕೌಸ್ತುಭದಿಂದ ಲಕ್ಷ್ಮೀಪತಿಯೂ ಮೆರೆಯುವಂತೆ ಕುಮಾರರಾಮನಿಂದ ಕಂಪಿಲನು ಯಶಸ್ವಿಯಾಗುತ್ತಿರಲು ಒಂದು ದಿನ ವಸಂತ ಕಾಲದಲ್ಲಿ ಶೂಲದ ಹಬ್ಬ ಪ್ರಾಪ್ತವಾಯಿತು. ಅದನ್ನು ಕಂಪಿಲ ನೃಪತಿಯು ಬಹು ವೈಭವದಿಂದ ನಡೆಸಲು ಏರ್ಪಡಿಸಿದನು.

ಅದಕ್ಕೆ ಅನೇಕ ರಾಜಕುಮಾರರು ದಿವ್ಯಾಲಂಕಾರಭೂಷಿತರಾಗಿ ಬಂದು ಸೇರಿದರು. ನಗರದ ನಿಡುಗೇರಿಗಳೆಲ್ಲಾ ನಡೆಮುಡಿ, ಆರತಿ, ಕರಬೋನ, ಕಳಶಕನ್ನಡಿ ದಿವ್ಯಧೂಪಗಳಿಂದ ಸಿಂಗರಿಸಲ್ಪಟ್ಟಿತ್ತು. ಈ ವಿಷಯವನ್ನು ದೂತಿಯೊಬ್ಬಳು ಕಂಪಿಲನ ಕಿರಿಯ ಹೆಂಡತಿಯಾದ ರತ್ನಾಜಿಗೆ ತಿಳಿಯ ಪಡಿಸಿದಳು. ಅವಳು ಅದನ್ನು ಕೇಳಿದೊಡನೆಯೇ ಬಹು ಉತ್ಸಾಹದಿಂದ ಅಂಗಜನ ಕಯ್ಯ ನನೆಗಣೆಯಂತೆ ಸಿಂಗರಿಸಿಕೊಂಡು 'ಅಂಬರಚರಿಯನನಿಯ ನೋಡಲೆಂದು ತನ್ನಂಬರಕೆಯ್ದುವಂದದೊಳು ಅಂಬುಜವದನೆಯೇಱಿದಳು ಕಾದಂಬಿನಿಚುಂಬಿತ ಸೌಧಾಗ್ರವನು'. ಅಲ್ಲಿ ನೆರೆದಿದ್ದ ಕಾಮುಕರೆಲ್ಲ ಆರಿವಳಿಂದ್ರನ ರಾಣಿಯೋ ರಂಭೆಯೋ ಮಾರನರಸಿಯೋ ಗಂಧರ್ವ ನಾರಿಯೋ ನಾಗಾಂಗನೆಯೋ ಎಂದು ಆಶ್ಚರ್ಯಗೊಂಡು ಶೂಲದ ಹಬ್ಬವನು ನೋಡದೆ ಅವಳನ್ನೇ ನೋಡತೊಡಗಿದರು. ಆಗ ಆ ಲಲನೆಯು ತನ್ನ ಸಂಗಾತಿಯಾದ ಸಂಗಿಯನ್ನು ಅಲ್ಲಿ ನೆರೆದಿರುವ ರಾಜಕುಮಾರರ ಪರಿಚಯ ವನ್ನು ಮಾಡಿಸಿಕೊಡುವಂತೆ ಕೇಳಿದಳು. ಸಂಗಿಯು ಸೋಯಿದೇವ, ಕೊಳ್ಳಿಯನಾಗ, ಹರಿಹರ ಬುಕ್ಕಣ್ಣ ಮೊದಲಾದವರನ್ನು ಮುಟ್ಟಿ ತೋರಿಸು ತ್ತಿರಲು ರತ್ನಾಜಿಯ ದೃಷ್ಟಿಯು ಅಲರ್ವಿಲ್ಲಿಲ್ಲದಂಗಜನಂತೆ, ಬಜ್ಜರದಲ ಗಿಲ್ಲಿದಮರೇಂದ್ರನಂತೆ, ಕಲೆಯಿಲ್ಲದಿಂದುವಿನಂತೆ ಮೆರೆಯುತ್ತಿರ್ದ ರಾಮನ ಮೇಲೆ ಹರಿಯಿತು. ಆ ಕುಸುಮಕೋದಂಡನ ಗಂಡಗಾಡಿಯನ್ನು ನೋಡಿದ ತಕ್ಷಣವೇ ರತ್ನಾಜಿಯು ಆರಿವನು ಇಂದ್ರನೋ ನಳನೋ ಜಯಂತನೋ ಮಾರನೋ ವಾರಿಜನಾಭನೊ ರವಿಯೋ ಎಂದು ಬೆರಗು ವಡೆದು ನೋಡಿ ಅವನ ಸೌಂದರ್ಯಕ್ಕೆ ಮಾರುಹೋದಳು. ಆಕೆಗೆ ನುಡಿಯಱಿತುದು, ನೋಟನಿಂದುದು, ಮೆಯ್ಯಾಟ ತಡೆದುದು, ಚೇತನ ವಿರದೆ ನೆತ್ತಿಗೆಯ್ದಿತು. ಈ ಸ್ಥಿತಿಯನ್ನು ಕಂಡು ಪಕ್ಕದಲ್ಲಿದ್ದ ಸಂಗಿಯು ಅವಳನ್ನು ಕುರಿತು 'ಏತಱಿಂದಾಯ್ತು ನೀನಗೀ ಮದನಾತಿರೇಕ ಮಾನಿನಿ? ನನ್ನೊಡನೆ ಏಕಾಂತದೊಳೊರೆ, ನಿನಗಾನಲ್ಲದೆ ಬೇಕಾದವರುಂಟೆ? ಹೊಸ ಹರೆಯದ ಹೊಂತಕಾರಿಯ ಕಂಡು ಮೋಹಿಸದ ಪೆಣ್ಣುಂಟೆ, ಹೇಳಲೇತಕೆ ಮಱಿ, ನಿನ್ನೆರ್ದೆಗೋಟೆಯ ಕೋಳುಗೊಂಡವನ ಲೀಲಾಮಾತ್ರದಿಂ ತಂದು ನಿನ್ನಡಿಗಳ ಮೇಲೆ ತಂದು ಕೆಡಹುವೆನು' ಎನಲು ರತ್ನಾಜಿಯು

'ರಾಮನಿರ್ದೆಡೆಗೆನ್ನ ನಡೆನಡೆಯೆಂದಿಂದ್ರಿಯಗಳು ಪಿಡಿಪೆಳೆಯುತಿವೆ; ಅವನ ತಂದಿತ್ತೆನಗಕ್ಕನಾದಪೆಯೋ ತರದೆ ಕೊಂಡೆನ್ನ ನಿನ್ನುದರದೊಳು ಬರಿಸಿ ಕೊಂಡು ಜನನಿಯಾದಪೆಯೋ' ಎಂದು ಅಂಗಲಾಚಿ ಬೇಡಿದಳು. ಸಂಗಿಯು 'ಒಲ್ಲದವರನೊಲಿಸುವೆನು; ಒಲಿದಿರ್ದವರ ನಿಲ್ಲದಗಲಿಸಿ ತೋಱು ವೆನು. ಕುಂಟಣಿತನಕಾನಲ್ಲದಿಲ್ಲ' ಎಂದು ತನ್ನ ಶಕ್ತಿ ಪ್ರತಾಪಗಳನ್ನು ಕೊಚ್ಚಿಕೊಂಡು ಕುಟಿಲದೇವತೆಯರ ನೆರವಿನಿಂದ ಅವಳ ಇಷ್ಟಾರ್ಥವನ್ನು ನೆರವೇರಿಸುವುದಾಗಿ ಸಮಾಧಾನ ಹೇಳಿ ಅರಮನೆಗೆ ಅವಳನ್ನು ಕರೆದೊಯ್ದಳು; ನೆರೆದ ರಾಜಕುಮಾರರೆಲ್ಲರೂ ಶೂಲದ ಹಬ್ಬವನ್ನು ಮುಗಿಸಿ ಕೊಂಡು ಸಂತೋಷದಿಂದ ತಮ್ಮ ತಮ್ಮ ಬೀಡಿಗೆ ಹಿಂತಿರುಗಿದರು.

ಮನೆಯನ್ನು ಸೇರಿದ ರತ್ನಾಜಿಯು ಚಿನ್ನದ ನೀರು ಪೋಱಗೆ ಪೋಱ ದಿರ್ದ ಕರ್ಬೊನ್ನ ಪುತ್ಥಳಿಯಂತೆಯೂ ವಾರಣ ನುಂಗಿದ ಬೇಲದ ಪಣ್ಣಿ ನಂತೆಯೂ ಕಾಮಾಗ್ನಿಯಿಂದ ಸಾರನಡಗಿ ಅಂತಶ್ಶೂನ್ಯಳಾಗುತ್ತಿರಲು ಕಂಪಿಲ ಭೂಮೀಶ್ವರನು ತನ್ನ ಮೋಹದ ಮಡದಿಯಲ್ಲಿಗೆ ಬಂದು ಹಗಲ ಚಂದ್ರಮನಂತೆ ಕಾಂತಿಹೀನವಾಗಿದ್ದ ಅವಳ ಮುದ್ದುಮೊಗವನ್ನು ಮುದ್ದಾಡಿ ಅವಳ ಚಿಂತೆಗೆ ಕಾರಣವೇನೆಂದು ಕೇಳಿದನು. ಮಾಯಾವಿಯಾದ ರತ್ನಾಜಿಯು ತನ್ನ ಮನದ ಚಿಂತೆಯನ್ನು ಹೊರಗೆಡಹಲಾರದೆ ತನಗೆ ಅಗ್ರ ಮಹಿಷಿ ಪದವಿಯಿಲ್ಲದುದರಿಂದ ಇತರ ಸುದತಿಯರ ಅಪಹಾಸ್ಯಕ್ಕೆ ಗುರಿ ಯಾಗುತ್ತಿದ್ದೇನೆಂದು ತಿಳಿಸಲು ತಕ್ಷಣ ವೃದ್ಧರಾಜನು ಅವಳ ಇಷ್ಟಾರ್ಥ ವನ್ನು ಸಲ್ಲಿಸಿ ಸುಖದಿಂದಿರುತ್ತಿದ್ದನು. ಈ ಮಧ್ಯೆ ಬೇಟೆಗಾರರ ತಂಡ ಬಂದು ರಾಜನನ್ನು ಬೇಟೆಗೆ ಪ್ರೋತ್ಸಾಹಿಸಲು ಕಂಪಿಲಧರಣೀಶ್ವರನು ಅವರೊಡನೆ ಸರ್ವಸನ್ನದ್ಧನಾಗಿ ಹೊರಟನು. ಆದರೆ ಕೂಟದ ಕುಟಿಲ ದೇವತೆಯರು ಮಾಡಿದ ಮಾಟದಿಂದ ಕುಮಾರರಾಮನಿಗೆ ಬೇಟೆಗೆ ಪೋಗುವ ಬುದ್ಧಿಯು ತೋರದೆ ನೀರಾಟಕ್ಕೆ ಮನವೆಳೆಸಿತ್ತು. ಅಂತೆಯೇ ಬಾಂದೊಱೆಯೊಳಗೈರಾವತಕಲಭವಾನಂದದಿಂ ನೀರಾಟವಾಡುವಂತೆ ಕಂಪಿಲನ ಕುಮಾರ ನೀರಾಟವಾಡಿ ಇಂಗಡಲಿಂದ ವೈಕುಂಠಕ್ಕೆ ಹರಿ ಪೋಪ ಭಂಗಿಯಿಂದ ತುಂಗಭದ್ರಾನದಿಯಿಂದ ನಗರಿಗೆ ಬೆಡಂಗಿನಿಂದೆಯ್ದುವನು.

ಮಾರನೆಯ ದಿನ ರಾಮನು ಪ್ರಾತಃಕಾಲ ನಿತ್ಯಕರ್ಮವನ್ನು

ಮುಗಿಸಿಕೊಂಡು ಭಕ್ತಿಯಿಂದ ಶಿವಾರ್ಚನೆಗೆಯ್ದು ಅತಿಸುಂದರವಾಗಿ ಅಲಂಕರಿಸಿಕೊಂಡು ಓಲಗಶಾಲೆಗೆ ಬಂದು ಕೆಳೆಯರೊಡನಿರುತ್ತಿರಲು ಸಂಗಿಗೆ ಕೊಟ್ಟ ವರವನ್ನು ನೆನೆದು ಕುಟಿಲ ದೇವತೆಗಳು ರಾಮನಿಗೆ ಚೆಂಡಾಟಕ್ಕೆ ಮನವೆಳಸುವಂತೆ ಪ್ರೇರೇಪಿಸಿದರು. ಕುಮಾರನು ತನ್ನ ಆಶಯವನ್ನು ಸ್ನೇಹಿತರಿಗೆ ತಿಳಿಸಲು ಅವರು ಅವನ ತಾಯಿಯ ಬಳಿ ಅವನ ಹೆತ್ತಯ್ಯ ಮುಮ್ಮಡಿ ಸಿಂಗ ಭೂಪಾಲನ ಮುತ್ತಿನ ಚೆಂಡಿರುವುದೆಂದೂ ಅದು ಆಡು ವುದಕ್ಕೆ ಯೋಗ್ಯವಾದುದೆಂದೂ ಸೂಚಿಸಿದರು. ರಾಮನು ಅದನ್ನು ತರುವು ದಾಗಿ ವಾಗ್ದಾನಮಾಡಿ ಅವರನ್ನು ಆಟದ ಕಳಕ್ಕೆ ನಡೆಯುವಂತೆ ಹೇಳಿ ತಾನು ತಾಯಿಯರಮನೆಯನ್ನು ಸೇರಿದನು. ಮುಗಿಲೊಡ್ಡಣವನ್ನು ಕಂಡ ನವಿಲಂತೆ ಹೆಚ್ಚಿದ ತಾಯಯು ಮಗನನ್ನು ಅಪ್ಪಿ ತೂಪಿರಿದು ಬಂದ ಕಾರ್ಯವನ್ನು ಕೇಳಿದಳು. 'ಹೊತ್ತು ಹೋಗದು, ಚೆಂಡಾಟಕೆ ಮನ ವೆಳಸಿತ್ತು. ಮುಮ್ಮಡಿಸಿಂಗನೃಪನ ಮುತ್ತಿನ ಚೆಂಡ ಬೇಡುವುದಕ್ಕೆ ಬಂದೆನಮ್ಮ' ಎಂದು ಹೇಳಿದ ಕುಮಾರನನ್ನು ನೋಡಿ ಹರಿಯಮ್ಮನು 'ಚೆಂಡಾಟವೆಂಬುದು ತುಱುಗಾಹಿಮಕ್ಕಳ ತಂಡಕಲ್ಲದೆ ನೃಪಸುತರಿಗೆ ಸಲ್ಲದು, ವೀರಬಲ್ಲಾಳನ ಮುಱಿಯಲಿಱಿದೆ; ಓರಗಲ್ಲಿನವನ ಕೆಣಕಿದೆ. ಹೋರಾಟವ ಮಾಡಿಕೊಂಡೆ ತುರುಕರೊಡನೆ, ಮುಂಡೆ ತುಂಬಿದ ರಾಜಕಾರ್ಯ ವಿದ್ದು ಚೆಂಡಾಟಕೆಳಸಿತೆ ಚಿತ್ತ ? ಅಲ್ಲದೆ ಅಭಿನವ ಮನಸಿಜ, ನಿನ್ನ ತನುವಿನ ಲಾವಣ್ಯರಸದ ಪೊನಲೊಳು ಈ ನಗರದ ನಳಿನನೇತ್ರಯರ ಕಣ್ಮನವಾಳ ದಿರದು, ಆಟಬೇಡ, ಇದರಿಂದ ನಿನಗೆ ಕೇಡು ತಪ್ಪದು' ಎಂದು ಬುದ್ಧಿ ಹೇಳಲು, ರಾಮನು ತಾಯಿಯ ಚರಣಾರವಿಂದಗಳಿಗೆ ಮಣಿದು ಮೃದು ಮಧುರ ಗಂಭೀರವಚನಗಳಿಂದ 'ನಿನ್ನ ನುಡಿಗಳೆನಗೆ ಸಂಜೀವನಮಂತ್ರ ಗಳಮ್ಮ, ಆನು ಅವುಗಳ ನೆಟ್ಟಗೆ ವಹಿಸಿದೆನಮ್ಮ. ನೀನೆನಗೊಲಿದು ತಂದಿತ್ತ ಪೆಣ್ಗಳಲ್ಲದೆ ಆನ್ಯಕಾಂತಾಜನಕೆ ಮಾನಸದೊಳಳುಪಿದೊಡೆ ನಿನಗೆ ರಾಯಗಾನು ಪುಟ್ಟಿದುದಿಲ್ಲಮ್ಮ. ಕಂದುಕವ ತಂದೆಪೆನೆಂದಿರಿಸಿ ಬಂದೆನು ಅರಸು ಮಕ್ಕಳನು ಬಾಗಿಲೊಳು; ತರಿಸಿಕೊಡಿಂದಿಗೆ ಚೆಂಡನು, ಇರಿಸಿ ಬಹೆನು, ಆಡೆನು ಚೆಂಡಾಟವನಾನು, ಆಡುವ ನೃಪತನಯರಿಗೆ ಪಾಡುವೇಳುತ ನಿಂದಿಹೆನಮ್ಮಾ' ಎಂದು ಬಿನ್ನವಿಸಿದನು. ತಾಯಿಯ

ಮನಸ್ಸು ಕರಗಿತು. ಕಂದುಕವ ಕೊಟ್ಟಳು. ಕೆಳೆಯರ ಗುಂಪನ್ನು ಬಂದು ಸೇರಿದನು ಕಲಿರಾಮ. ರತ್ನಾಜಿಯ ಅರಮನೆಯ ಪಕ್ಕದ ಬಯಲೇ ಆಟಕೆ ತೆಱಪಾಯಿತು. ಆಟದಲ್ಲಿ ಭಾಗವಹಿಸಲು ಅರಸು ಮಕ್ಕಳೆಲ್ಲ ಒಟ್ಟುಗೂಡಿದರು. ಕಹಳೆಕೊಂಬುಗಳು ಭೋರ್ಗರೆಯುತ್ತಿರಲು 'ಕುಂಡಲಮಂಡಲಮಂಡಿತ ಗಂಡನಾಖಂಡಲಚಂಡನಾ ರಾಮ ಗಂಡುಗಲಿಗಳು ಮುಂಕೊಂಡೊಡವರೆ ಬಗೆಗೊಂಡು ಚೆಂಡಾಟಕೆಯ್ದಿದನು. ಬೆಗಡುಗೊಂಡರೆಲ್ಲ ಬಂದು ಸೇರಿದರು ಚೆಂಡಾಟವ ನೋಡುವುದಕ್ಕೆ. ಮೊಳಗುವ ಲಗ್ಗೆವರೆಯ ದನಿ, ಸುಭಟರ ಕಳಕಳ ನಿನದ, ನೋಟಕರ ಉಲುಹು, ರತ್ನಾಜಿಯ ಕರ್ಣಯುಗಳವನ್ನು ಅಲೆದುದು. ಇದೇನೆಂದು ಕೇಳಿದ ಅವಳಿಗೆ ಸಂಗಿಯು ಅದು ಕುಟಿಲ ದೇವತೆಗಳ ಪ್ರೇರಣೆಯಿಂದ ರಾಮನಾಡುವ ಚೆಂಡಾಟದಾರವವೆಂದೂ ಅವರೊಲುಮೆಯಿಂದಲೇ ಚೆಂಡು ಅವಳ ಮುಂದೆ ಬಂದು ಬೀಳುವುದೆಂದೂ ರಾಮನೇ ಅಲ್ಲಿಗೆ ಬರುವನೆಂದೂ ಕಣ್ಣೋಟವನಮಾಡಿ ಅವನನ್ನು ಸೋಲಿಸಿಕೊಳ್ಳಬಹುದೆಂದೂ ವಿವರಿಸಿದಳು. ರತ್ನಾಜಿಗೆ ರೋಮಾಂಚವಾಯಿತು. ಕಾರ್ಯಸಿದ್ಧಿಯಾದಂತೆಯೇ ಭಾಸವಾಯಿತು.

ಇತ್ತ ರಾಜಕುಮಾರರು ಎರಡು ತಂಡವಾದರು. ತಮಗೆ ಬೇಕಾದ ಎರೆಗಳನ್ನು ಆರಿಸಿಕೊಂಡರು. ಒಂದು ಕಡೆ ಸಂಗಮದೇವನೂ ಮತ್ತೊಂದು ಕಡೆ ರಾಮನೂ ನಾಯಕರಾದರು. ಕುಮಾರಸಂಗಮನಿಗೆ ಮೊದಲಾಟ ದೊರಕಿತು. ತನ್ನ ಹೊಂತಕಾರಿಗಳ ಪಂಗಡದೊಡನೆ ರಾಮನು ಅವನ ಚೆಂಡನ್ನೆಲ್ಲ ತಡೆದು ಇಡಲು ತಲೆಕೆಳೆಗಾಗಿ ಕೆಡದೋಡಿದರು ಪಟುಭಟರು. ಸಂಗಮನಿಗೆ ರಾಮನೂ ರಾಮಗೆ ಸಂಗಮನೂ ಸಮಾನಬಲರೆಂದು ನೆರೆದ ನೆರವಿ ತಮ್ಮ ಮೆಚ್ಚುಗೆಯನ್ನು ಭೋರ್ಗರೆಯುತ್ತಿರಲು ರಾಮನು ಚೆಂಡನ್ನು ವೇಗದಿಂದ ಹಿಡಿದೆಸೆದನು. ಕುಟಿಲದೇವತೆಗಳ ಕೈಚಳಕದಿಂದ ಅದು ಎಲ್ಲರೂ ನೋಡುತ್ತಿರುವಂತೆಯೇ ರತ್ನಾಜಿಯ ಅರಮನೆಯ ಅಂಗಳದಲ್ಲಿ ಹೋಗಿ ಬಿದ್ದಿತು. ರತ್ನಾಜಿಯ ಸಂತೋಷಕ್ಕೆ ಪಾರವೇ ಇಲ್ಲ. ಅದನ್ನು ಕಂಡೊಡನೆಯೇ ಬಡವನಿಗೆ ಭಾಗ್ಯಬಂದಂತೆಯೂ ರೋಗಿಗಮೃತದ ಕೊಡ ದೊರಕಿದಂತೆಯೂ ಸಂತೋಷಗೊಂಡು ಅದನ್ನು ತೆಗೆದು ಎದೆಗಪ್ಪಿ ಮುತ್ತಿಟ್ಟು ನಲಿದು ನಿಟ್ಟಿಸಲು ತೊಡಗಿದಳು.

ಇತ್ತ ರಾಮನು ಮಾತೆಯ ನೀತಿವಾಕ್ಯಗಳನ್ನು ನೆನೆಯುತ್ತ, ಧರಾತಳಪತಿಗೆ ಬೆದರುತ್ತ, ಕಂತುಕವನ್ನು ಕಂಡು ಚಿಕ್ಕಮ್ಮನೇನೆಂದು ಚಿಂತಿಸುವಳೋ ಕೆಲಬಲದ ಕಾಂತೆಯರೇನೆಂದು ಬಗೆಯುವರೋ ಎಂದು ವಿಭ್ರಾಂತನಾಗಿ ಅಣ್ಣ ಕಾಟಣ್ಣನನ್ನು ಕರೆದು ಚೆಂಡನ್ನು ತರಲು ಚಿಕ್ಕಮ್ಮ ನಲ್ಲಿಗೆ ಅಟ್ಟಿದನು. ಅವನು ಹೋಗಿ ಬಂದ ಕಾರ್ಯವನ್ನು ನಿವೇದಿಸಲು ಬಿಂಕಕಾರಿಯಾದ ರತ್ನಾಜಿಯು ಚೆಂಡು ನನ್ನಲ್ಲಿರುವುದು ನಿಜ; ಕಂದ ರಾಮನನ್ನು ಚಿಕ್ಕಂದು ಕಂಡುದು ಇಲ್ಲಿನವರೆಗೆ ಕಂಡಿಲ್ಲ. ಮಾತೆಯ ಬಳಿಗೆ ಮಕ್ಕಳಿಗೆ ಬಹುದಕೇಕೆ ಭೀತಿ ? ಅವನೇ ಬಂದು ತೆಗೆದುಕೊಂಡು ಹೋಗಲಿ ಎಂದು ಅವನನ್ನು ನಯವಾದ ಮಾತಿನಿಂದಲೇ ಕಳುಹಿಸಿ ರಾಮನನ್ನೇ ಎದುರುನೋಡುತ್ತ ಪಕ್ಕದ ಸಂಗಾತಿಯರನ್ನೆಲ್ಲಾ ನೆವದಿಂದ ದೂರ ತೊಲಗಿಸಿ ಏಕಾಕಿಯಾಗಿ, ತಾತನಿಲ್ಲದ ಮನೆಗೇತಕೆಂದೆಂಬನೋ, ನೀತಿ ಯಲ್ಲಂತಃಪುರಕೆ ಪೋಪುದೆಂಬೆನೋ, ರಾಮನು ಬಹನೋ ಬಾರನೋ ಎಂದು ಚಿಂತಿಸುತ್ತಿದ್ದಳು.

ಕಾಟಣ್ಣನು ಬಂದು ಚಿಕ್ಕಮ್ಮನು ಹೇಳಿದ ಮಾತುಗಳನ್ನು ರಾಮನಿಗೆ ತಿಳಿಸಿದನು. ಸರಳಹೃದಯನಾದ ರಾಮನು 'ಮಾತೆಯ ಚರಣಕೆಱಗಿ ಚೆಂಡನಾನತಿಭೀತಿಯಿಂ ತಾರದೆ ನಿನ್ನನಟ್ಟಿದುದು ದುರ್ನೀತಿಯಲ್ಲವೆ' ಎಂದು ಉತ್ತರಿಸಿ ತಾನೇ ನೇರವಾಗಿ ಚಿಕ್ಕಮ್ಮನನ್ನು ಕಾಣಲು ಹೊರಟು ಅವಳ ಅರಮನೆಯನ್ನು ಪ್ರವೇಶಿಸಿ ನಮಸ್ಕಾರಮಾಡಿದನು. ಅವನನ್ನು ಕಂಡ ತಕ್ಷಣವೇ ರತ್ನಾಜಿಯು ಪ್ರಾಣವೇ ಬಂದಂತೆ ಹೆಚ್ಚಿ ಅವನನ್ನು ಆಲಿಂಗನ ಮಾಡಿಕೊಂಡು ತನ್ನ ಒಳಗನ್ನು ಅವನಿಗೆ ತೋರಿಸಿಕೊಳ್ಳದೆ ವಿನಯ ವಚನಗಳಿಂದ ಅವನನ್ನು ಸತ್ಕರಿಸಿ ಒಳಗೆ ಕರೆದುಕೊಂಡು ಹೋಗಿ ಸಿಂಹಾ ಸನದಮೇಲೆ ಕುಳ್ಳಿರಿಸಿದಳು. ಅವಳ ಆದರಾತಿಥ್ಯಗಳನ್ನೆಲ್ಲಾ ರಾಮನು ಮಾತೆಯ ಸಹಜಪ್ರೇಮವೆಂದೇ ಭಾವಿಸಿ ಅವಳನ್ನು ಚೆಂಡುಕೊಡ ಬೇಕೆಂದು ಪ್ರಾರ್ಥಿಸಿದನು. ಅವಳಾದರೋ ಅರ್ಥಾಂತರದಿಂದ ತನ್ನ ಅಳಿಮನಸ್ಸನ್ನು ವಕ್ರವಚನದಿಂದ ಸೂಚಿಸಲು ರಾಮನು ಕೋಪಾವಿಷ್ಟ ನಾಗಿ ಪರಮಪಾತಕ ಬಂದಿತೆಂದು ಕಿವಿಮುಚ್ಚಿ ಬುದ್ಧಿವಾದವನ್ನು ಹೇಳಿ ದರೂ ಕೇಳದಿರಲು ಒಡನೆದ್ದು ತನ್ನನ್ನು ಹಿಡಿದುಕೊಳ್ಳಲು ಪ್ರಯತ್ನಪಟ್ಟ

ಅವಳನ್ನು ಒದರಿ ಬಿಡಿಸಿಕೊಂಡು ವೇಗದಿಂದ ತನ್ನ ಚೆಂಡಾಟದ ಕೆಳೆಯರಲ್ಲಿಗೆ ಬಂದು ಅವರನ್ನು ಬೀಳ್ಕೊಟ್ಟು ತನ್ನರಮನೆಯನ್ನು ಸೇರಿದನು.

ಇತ್ತ ಕಂಪಿಲನೃಪತಿಯು ಬೇಟೆಯನ್ನು ಮುಗಿಸಿಕೊಂಡು ಹಿಂತಿರುಗಿ ತನ್ನ ಪ್ರೇಮದಮಡದಿಯನ್ನು ನೋಡಲು ಅವಳರಮನೆಗೆ ಹೋದನು. ಅಲ್ಲಿ ಬಾಡಿದ ಮೊಗದ ಬಳಲಿದಂಗದ ಬಿಡದೋಡುವ ಸುಯ್ಯ, ಕಣ್ಬನಿಯ ನೀಡಾಡುವ ನಿಡಗಣ್ಣ ನೀರೆಯ ನೋಡಿದನು ನರನಾಥ. ಕಂಗಾಲಾಗಿ ಕೇಳಿದನು ಕಾರಣವನಾ ಸ್ಥಿತಿಗೆ. ನೆನೆಯಬಾರದು, ನೆನೆದೊಡೆ ನಾಲಗೆಯ ತುದಿಗೊನೆಗೆಬಾರದು, ಬಂದೊಡೊಸೆದು ಅನುವದಿಸುವಡೆ ಬಾರದ ಪುಸಿಗಳ ನಾ ವನಿತೆ ಗಂಟಿಕ್ಕಿ ನುಡಿದಳು ರಾಮನ ಮೇಲೆ. 'ಇರಬೇಕೆ ರಾಮ ನಿನಗೆ, ನನ್ನ ಕೊಲಿಸು. ಆನಿರಬೇಕೆ ರಾಮನ ಕೊಲಿಸು. ನಮ್ಮಿರ್ವರನಿರಿಸಿ ಕೊಂಬುದು ನಿನಗೆ ಪರಿಹಾಸ' ಎಂದು ನುಡಿದ ತನ್ನಿಂದೀವರಾಕ್ಷಿಯ ಮನವ ಸಂತವಿಟ್ಟು ಕೋಪಾಟೋಪದಿಂದ ಪ್ಯೈಮಃಜಿತದು ಕಂಪಿಲನು ಕರೆಸಿ ಬೈಚಪ್ಪನನು ಕರುಣವಿನಿತಿಲ್ಲದೆ ತನ್ನ ಕುವರನ ಹರಣಕೆ ಮುನಿದನಜಿಯದೆಯೆ. ರಾಮನ ತಲೆಯನ್ನು ತಂದಲ್ಲದೇಳೆನಿಲ್ಲಿಂದ ಎಂದು ಹಟಮಾಡಿದನು. ಬೈಚಪ್ಪನ ಬುದ್ಧಿಮಾತುಗಳೆಲ್ಲ ಬೀತು ಬಯಲಾಯ್ತು. ಮಂತ್ರಿಯು ಬೇರೆಮಾರ್ಗವಿಲ್ಲದೆ ರಾಜನ ಆಜ್ಞೆಯನ್ನು ನೆರವೇರಿಸುವೆನೆಂದು ಹೇಳಿ ಬರುತ್ತ ದಾರಿಯಲ್ಲಿ ಈ ರೀತಿ ಯೋಚಿಸಿದನು : 'ಸಿಂಹಕ್ಕಲ್ಲದೆ ಆನೆಯ ದಂಡು ನಾಯಿಗಳ ಗುಂಪಿಗೆ ಹೆದರುವುದೆ ? ರಾಮನಿಗಲ್ಲದೆ ಉಳಿದವರಿಗೆ ನೇಮಿಯ ದಂಡು ಹಿಂಗುವುದೇ ? ಚೆಂಡನಡಗಿಸುವಂತೆ ರಾಮನನ್ನು ನೆಲಮಾಳಿಗೆಯಲ್ಲಡಗಿಸಿ ಸುರತಾಳ ಬಂದರೆ ತೋರಿಸುವೆನು ನನ್ನ ಬಲುಮೆಯನು,' ಎಂದು ಯೋಚಿಸುತ್ತ ಕುಮಾರರಾಮನನ್ನು ಬರಮಾಡಿ ಅವನಿಗೆ ಅವನ ತಂದೆಯು ಅವಿವೇಕದಿಂದ ನುಡಿದ ಮಾತುಗಳನ್ನು ತಿಳಿಸಿದನು. ವಿನೀತನಾದ ಪುತ್ರನು ತಂದೆಯಾಜ್ಞೆಯಂತೆ ನಡೆಯಲು ಎರಡಿಲ್ಲದೊಪ್ಪಿದನು. ಆದರೆ ಬುದ್ಧಿವಂತನಾದ ಬೈಚಪ್ಪನು ಕದಳಿಗಾಗಿ ಕಲ್ಪವೃಕ್ಷವನ್ನು ಕಡಿವನೆ ? ಕಾಗೆಯೋಳಿಸಿತೆಂದು ಪಿಡಿದ ಚಿಂತಾರತ್ನವನೀಡಾಡುವನೆ ? ಅವಳ ಪುಸಿನುಡಿಗಾಗಿ ಧೀರರಾಮನನು ಕೊಲ್ಲುವನೆ ? ಅವನನ್ನುಳಿಸುವ ಉಪಾಯವನ್ನು ಚಿಂತಿಸಿ ತನಗೆ ವಶವಾಗಿದ್ದ ಇಂದ್ರಜಾಲದ ಬಲದಿಂದ

ಸುರಪತಿಯನ್ನು ಬರಮಾಡಿ ಅವನೊಡನೆ ರಾಮನಿಗೆ ಬಂದ ದುರವಸ್ಥೆ ಯನ್ನು ತಿಳಿಸಿ ಪರಿಹರಿಸಬೇಕೆಂದು ಬೇಡಿದನು. ಇಂದ್ರನು ರಾಮ ರತ್ನಾಜಿಯರು ಅರ್ಜುನ ಊರ್ವಶಿಯರೆಂದೂ ತನ್ನ ಮಗನಾದುದರಿಂದ ಅವನ ರಕ್ಷಣೆ ತನಗೆ ಕರ್ತವ್ಯವೆಂದೂ ತಿಳಿಸಿ ಬೈಚಪ್ಪನೊಡನೆ ಅವನಿಗೆ ಸಹಾಯ ಮಾಡುವುದಕ್ಕಾಗಿ ತನ್ನ ಚರನೊಬ್ಬನನ್ನು ಕಳುಹಿಸಿದನು. ಮಂತ್ರಿಯಮಾತಿನಂತೆ ಇಂದ್ರದೂತನು ರಾಮನಿಗೂ ರಾಮನ ಪರಿವಾರಕ್ಕೂ ಸಕಲಸಾಮಗ್ರಿಗಳಿಂದ ಸಜ್ಜುಗೊಳಿಸಿದ ನೆಲೆಮಾಳಿಗೆಯನ್ನು ನಿರ್ಮಿಸಿ ರಾಮ ಮತ್ತು ಅವನ ಆಪ್ತಸಖರ ಪಡಿರೂಪುಗಳನ್ನು ಸೃಷ್ಟಿಸಿದನು. ಸಚಿವ ಬೈಚಪ್ಪನು ರಾಮನನ್ನು ಅವನ ಅನುಚರರೊಡನೆ ನೆಲಮನೆಯಲ್ಲಿಟ್ಟು ಪಡಿ ರೂಪುಗಳ ತಲೆಗಳನ್ನು ಹೊಯ್ಸಿ ಕಂಪಿಲನ ಮುಂದೆ ಹರಹಿದನು. ತಾನು ಮಾಡಿ ದುದು ಅವಿವೇಕವಾಯಿತೆಂದು ನೃಪತಿ ಚಿಂತಿಸಿದನು. ಈ ಸಮಾಚಾರ ವನ್ನು ಹರಿಹರದೇವಿಯೂ ಅವನ ಸೊಸೆಯಂದಿರೂ ಕೇಳಿ ಮಮ್ಮಲ ಮರುಗಿದರು. ಬೈಚಪ್ಪನಾಜ್ಞೆಯಂತೆ ಸೊಸೆಯರೆಲ್ಲರೂ ತಮ್ಮ ಸಖಿಯ ರೊಡನೆ ಅಗ್ನಿಪ್ರವೇಶಮಾಡಲು ಕೊಂಡದ ಬಳಿ ಸೇರಿದರು. ಆ ವೇಳೆಗೆ ಸರಿಯಾಗಿ ಇಂದ್ರಚರನು ಬಂದು ಮಾಯಾಲಲನೆಯರನ್ನು ಅವರವರ ಸ್ಥಾನದಲ್ಲಿರಿಸಿ ಅವರನ್ನು ಅವರವರ ಚಿತ್ತವಲ್ಲಭರ ಕೆಲದಲ್ಲಿರಿಸಿದನು. ಮಾಯಾಲಲನೆಯರು ಬೆಂದುದನ್ನು ಕಂಪಿಲನು ನಿಜವೆಂದೇ ತಿಳಿದು ಬಹು ವಾಗಿ ಶೋಕಿಸಿದನು. ಶಾಸ್ತ್ರಸಿದ್ಧಾಂತಗಳನ್ನರಿಪಿ ಬೈಚಪ್ಪನು ರಾಜ ನನ್ನು ಸಂತೈಸಿದನು. ರಾಮನು ದೇವನಿರ್ಮಿತ ಮಂದಿರದಲ್ಲಿ ಸುಖಭೋಗ ಗಳಿಂದಿರುತ್ತಿರಲು ಬೈಚಪ್ಪನು ಹರಿಹರದೇವಿಯ ದುಃಖವನ್ನು ಪರಿಹರಿಸಲು ದೇವನ ಸಹಾಯದಿಂದ ಅವಳ ಪಡಿರೂಪನ್ನೂ ಸೃಜಿಸಿ ರಾಣಿವಾಸ ದಲ್ಲಿಟ್ಟು ಅವಳನ್ನೂ ರಾಮನೊಡನೆ ಸೇರಿಸಿ ನಲಿಯುವಂತೆ ಮಾಡಿದನು.

ಈ ಮಧ್ಯೆ ರಾಮನ ಮರಣವಾರ್ತೆ ಡೆಲ್ಲಿಗೂ ತಲುಪಿತು. ಸುರತಾಳನು ಸುತೆ ಕೇಳಿಯಾ ಸುದ್ದಿಯನು ಸುರಗಿಯೊಡಲನುರ್ಚಿದಂತೆ ಪೊರಳಿದಳು ಪೂರ್ವಜನ್ಮದ ಮೋಹದಿಂದ. ಮಡಿದನಂಜದಿರು ವಿಕ್ರಮಸಿಂಹನಾ ರಾಮ ಪಡೆಯನೆಲ್ಲವ ಕೂಡಿಕೊಂಡು ಕರ್ಣಾಟ ದೇಶವನಿಱಿದು ಕುಮ್ಮಟವನ್ನು ಚೂರ್ಣೀಕೃತವ ಮಾಡೇಳು' ಎಂದು ಸುರತಾಳನು ನೇಮಿಗೆ ನೇಮಿಸಿ

ದನು. ಬಂದು ಧಾಳಾಧೂಳಿಯಿಂ ಬಿದರೆಯೊಳು ಪಾಳೆಯವ ಮಾಡಿದನ ವನು. ನುಡಿಯಬಹುದೆ ಬಾಯಿಬಿಟ್ಟೆಸಿತೆಂದು ಪಡೆಯನಾ ನೇಮಿಮಲ್ಲು ಕನ ? ಧರೆಹೊರದೆನೆ, ದೆಸೆ ನೆರೆಯದೆಂಡೆನೆ, ಬಂದು ನೆರೆದುದು ಸೇನಾ ಸಮುದ್ರವದು. ಗಡಿನಾಯಕರಿಂದ ಸುದ್ದಿಯನ್ನು ಕೇಳಿ ಕಂಪಿಲನು ಕೋಪಕೆ ಕೊಲಹೇಳಿದೆನೆಂದು ತಿಳಿಯದೆ ಪಾಪಿ ಬೈಚಪ್ಪನು ಮಗನ ಕೊಲಿಸಿದನು; ಕುಲಟಾಂಗನೆಯ ಬಾಳುವೆ, ದುರ್ಮಂತ್ರಿಯ ಕೆಳೆತನ, ದುಷ್ಟ ನೃಪತಿಯ ಒಲುಮೆಗಳ್ ಕಡೆಗೆ ಕೇಡತಾರದೆ ಬಿಡದು' ಎಂದು ಚಿಂತಿಸಿ ಮುಂದೆ ಮಾಡಬೇಕಾದ ಕಾರ್ಯಭಾರವನ್ನು ಬೈಚಪ್ಪನೊಡನೆ ಆಲೋಚಿಸಿದನು. ಮಂತ್ರಿವರ್ಯನು ಅವನಿಗೆ ಅವನ ಮಡದಿ ಮಾಡಿದ ಮೋಸದ ಪರಿಯನ್ನು ಪ್ರಕಾರಾಂತವಾಗಿ ತಿಳಿಸಿ ಸಮಯಬಂದಾಗ ರಾಮನಿಗೆ ಸರಿಸಮಾನನಾದ ಹೊಸರಾಜಪುತ್ರನನ್ನು ಬರಮಾಡಿ ನೇಮಿಯ ಸೈನ್ಯವನ್ನು ಸೂರೆಮಾಡುವು ದಾಗಿ ಭರವಸೆಕೊಟ್ಟು ಸೇನಾಸಮೇತನಾಗಿ ಸುಲ್ತಾನನ ಸೇನೆಯನ್ನಿದಿ ರಿಸಲನುವಾದನು. ನೇಮಿಯಸೈನ್ಯ ದುರ್ಗವನ್ನೇ ಮುತ್ತಿತು. ಕುಮ್ಮಟವು ಹಾಳಾಯ್ತೆಂದು ಜನವೆಲ್ಲ ಗೋಳಿಟ್ಟಿತು. ಆ ಸಮಯಕ್ಕೆ ಸರಿಯಾಗಿ ಬೈಚಪ್ಪನು ರಾಮನ ಮತ್ತು ಅವನಪರಿವಾರದ ಎಲ್ಲ ಯುದ್ಧಸಾಮಗ್ರಿ ಗಳನ್ನೂ ರಥವಾಹನಾದಿಗಳನ್ನೂ ಸಿದ್ಧಪಡಿಸಿದನು. ದೇವದೂತನನ್ನು ನೆನೆದು ಕುಮಾರರಾಮನನ್ನು ಬೇಗ ಬರಮಾಡೆಂದು ಅನುನಯನಿಂದ ಕೇಳಿದನು. ಅವನು ಭರದಿಂದ ರಾಮನೆಡೆಗಾದರದಿಂ ಪೋಗಿ 'ನೀನಿಲ್ಲದೆ ಸುರತಾಳದಂಡು ತರಹರಿಸದು. ನೀನಿಲ್ಲಿರಲು ಕುಮ್ಮಟವದು ಹಾಳಾಗು ವುದು' ಎಂದು ಹೇಳಲು ರಾಮನು ನನಗೆ ಯಾರಿಂದ ಮರಣವಾಗುವು ದೆಂಬುದನ್ನು ತಿಳಿಸಬೇಕೆಂದು ಕೇಳಿದನು. 'ಕುರುರಾಯಜನನಿಯಾದ ಗಾಂಧಾರಿಯು ನಿನ್ನ ಮತ್ತು ಭೀಮನ ಮೇಲಿನ ಕೋಪೋದ್ರೇಕದಿಂದ ಮರಣವನ್ನೆಯ್ದಿ ನಾನಾಯೊನಿಗಳಲ್ಲಿ ತಿರುಗಿ ಮತ್ತೀಗ ಮಾತಂಗಿಕುಲ ದೊಳು ಜನಿಸಿ ಪೆಸರಿನಿಂದ ಮಾತಂಗಿಯೆಂದು ಡೆಲ್ಲಿಯಲ್ಲಿ ಖ್ಯಾತಿಪಡೆದು ಸುರತಾಳನ ಪಡಿಯರತಿಯಾಗಿದ್ದಾಳೆ. ಅವಳಿಂದ ರಣದೊಳಳಿದನೆಂದು ಲೋಕಕ್ಕೆ ನೆವವಿಟ್ಟು ನಿನ್ನನ್ನು ಈಶ್ವರನು ಶಿವಲೋಕಕ್ಕೆಯ್ದಿಸುವನು. ಆ ಮಾತಂಗಿಯು ನಿನ್ನ ತಲೆಯನ್ನು ತೆಗೆದುಕೊಂಡುಹೋಗಿ ಸುರತಾಳನಿಗೆ

ತೋರಿಸುವಳು. ಸುರತಾಳಸುತೆಯು ಆ ತಲೆಯನ್ನು ನೋಡಿ ತನ್ನ ಪ್ರಾಣವನ್ನು ಬಿಡುವಳು. ಭೂಮಿಯಲ್ಲಿ ಅನೇಕರು ನಿನ್ನನ್ನು ದೇವರೆಂದು ಪೂಜಿಸುವರು' ಎಂದು ಹೇಳಿದ ವಿಬುಧನ ಮಾತನ್ನು ಕೇಳಿ ರಾಮನು ಬಹಳ ಸಂತೋಷಪಟ್ಟು ಅವನಿಗೆರಗಿ ಮಂತ್ರಿಯೆಡೆಗೆ ಬಂದು ತನ್ನ ದಿವ್ಯವಾಜಿಯನ್ನೇರಿ ಯುದ್ಧಸಾಮಗ್ರಿಗಳಿಂದ ಸನ್ನದ್ಧನಾಗಿ ಜನಗಳೆಲ್ಲರೂ ಈ ರಾಮನು ಆ ರಾಮನಂತೆಯೇ ಇದ್ದಾನೆಂದು ಹೊಗಳುತ್ತಿರಲು ನೇಮಿಯ ಬಲಕ್ಕೆ ಉತ್ಪಾತವುಸಗಿದಂತೆ ಬಂದು ತಾಗಿದನು. ಇವನನ್ನು ಕಂಡೊಡನೆಯೇ ರಾಮು ಸತ್ತುದು ಸುಳ್ಳು, ಕನ್ನಡಿಗರು ಮೋಸಮಾಡಿದರು ಎಂದು ವಜೀರ ಮಲ್ಲುಕರೆಲ್ಲ ಎದೆಗೆಟ್ಟು ನಡುಗಿದರು. ಸುಲ್ತಾನನ ಸೇನೆ ಸೂರೆಹೋಗಿ ಸೋತೋಡಿತು. ಈ ಅಭಿರಾಮನು ತನ್ನ ಮಗ ರಾಮನಲ್ಲದೆ ಬೇರೆಯವನಲ್ಲವೆಂಬುದು ತಿಳಿದು ಕಂಪಿಲನಿಗೂ ಸಂತೋಷವಾಯಿತು. ಮಂತ್ರಿಯ ಬುದ್ಧಿಕೌಶಲ್ಯವನ್ನು ಕಂಡು ಜನರೆಲ್ಲ ಬೆರಗಾದರು. ಈ ವಿಷಯ ರತ್ನಾಜಿಗೂ ತಿಳಿದು ತನ್ನ ಹಿಂದಿನ ಜನ್ಮದ ಸ್ಥಿತಿಯನ್ನು ಜ್ಞಾಪಿಸಿಕೊಂಡು ಆತ್ಮಹತ್ಯವನ್ನು ಮಾಡಿಕೊಂಡಳು. ದುಃಖಿತನಾದ ಮಹಾರಾಜನನ್ನು ಬೈಚಪ್ಪನು ಸಮಾಧಾನಪಡಿಸಿದನು.

ರಾಮನನ್ನು ಮಂತ್ರಿಯು ನೆಲಮಾಳಿಗೆಯಲ್ಲಿರಿಸಿ ಆವಶ್ಯಕತೆ ಬಂದಾಗ ಅವನನ್ನು ಹೊರಗೆ ಬರಮಾಡಿ ನೇಮಿಯ ಬಲವನ್ನು ಒಕ್ಕಲಿಕ್ಕಿದ ಸಂಗತಿ ಸುರತಾಳನಿಗೂ ತಿಳಿದು ಆವನು ರೋಷಾವಿಷ್ಟನಾದನು. ಅವನನ್ನು ಮಾತನಾಡಿಸಲು ಸಮರ್ಥರಾದ ವಜೀರಮಲ್ಲುಕರೇ ಇಲ್ಲವಾದರು. ಆವೇಳೆಗೆ ಮಾತಂಗಿಯೆಂಬ ಪಡಿಯರತಿ ಬಂದು ಚಕ್ರವರ್ತಿಗೆ ನಮಸ್ಕರಿಸಿ ರಾಮನ ತಲೆಯನ್ನು ತರಲು ತನಗೆ ಅಪ್ಪಣೆಯಾಗಬೇಕೆಂದು ಯಾಚಿಸಿದಳು. ಅವಳು ಅದಕ್ಕೆ ಸಮರ್ಥಳೆಂದು ಅರಿತು ಸುರತಾಳನು ಅವಳಿಗೆ ಬೇಕಾದ ಎಲ್ಲ ಸೌಕರ್ಯಗಳನ್ನೂ ಕಲ್ಪಿಸಿ ಕಳುಹಿಸಿದನು. ಮಾತಂಗಿಯು ಬಹು ವೈಭವದಿಂದ ಅತಿದೊಡ್ಡ ಸೈನ್ಯದೊಡನೆ ಹೊರಟು ದಕ್ಷಿಣಕ್ಕೆ ಬಂದು ನೆಲ್ಲೂರು ಕಡಬ, ಕಲ್ಲಿಕೋಟೆ, ಬಿದರೆಗಳಲ್ಲಿ ಪಾಳೆಯವನು ಬಿಟ್ಟೆದ್ದು ಕುಮ್ಮಟವನ್ನು ಮುತ್ತಿದಳು. ಆ ಸಮಾಚಾರ ತಿಳಿದೊಡನೆಯೇ ರಾಮನು ಕಾಟಣ್ಣನೊಡಗೂಡಿ ಮೂವತ್ತುಸಾವಿರ ಕುದುರೆ ಮತ್ತು ಅನೇಕ ವೀರಭಟ

ರೊಡಗೂಡಿ ತುರುಕಪಾಳೆಯವನ್ನು ಹೊಕ್ಕು ಅನೇಕ ಖಾನರನಿಱಿದು ಬೆದಱಿ ಜಂಗೊಟ್ಟೋಡುವಂತೆ ಮಾಡಿದನು. ಆದರೆ ಮಾರನೆಯ ದಿನ ಮಾತಂಗಿಯ ಹತ್ತೊಡ್ಡುಗಳಿಂದ ಕೂಡಿ ರಾಮನನ್ನು ಹಿಡಿದೇ ಹಿಡಿಯುವೆನೆಂಬ ಪಂಥ ದಿಂದ ಹೊರಟು ದೊಡ್ಡವ್ಯೂಹವನ್ನು ರಚಿಸಿ ಬಲುಗರ್ವದಿಂದ ಬಾದರನನ್ನು ತಕ್ಷಣ ಒಪ್ಪಿಸಬೇಕು, ಇಲ್ಲವಾದರೆ ಸುರತಾಳನ ಅಳಿಯನಾಗಬೇಕು ಎಂದು ಭಟರ ಮೂಲಕ ಹೇಳಿಕಳುಹಿಸಿದಳು. ರಾಮನಾಥನು ಅವರನ್ನು ನೋಡಿ ನಗುತ್ತ, ಸುರವಧುಗಳ ಬಯಸುವರಲ್ಲ, ಸುರತಾಳ ಧರಣಿಪತಿಯ ಕುವರಿ ಯನು ವರಿಸುವರಲ್ಲ, ಪರವಧುಗಳ ನೋಡಲಿಲ್ಲ, ಈಶ್ವರನಲ್ಲದಿರವಿಲ್ಲ ಹೃದಯ ಮಧ್ಯದೊಳು, ಧುರಕೆ ಸರಿಯಲ್ಲಿದು ನಿಮ್ಮ ಸರಣಿ ಎಂದು ನುಡಿದು ಮಾತಂಗಿಯ ಸೈನ್ಯದ ಮೇಲೆ ನುಗ್ಗಿ ತುರುಕ ಬಜ್ಜೆಯರನ್ನೂ ರಾವುತರನ್ನೂ ಖಾನಮಲ್ಲುಕ ವಜ್ಜೀರರನ್ನೂ ತೊತ್ತಳದುಳಿದನು. ಗಣಿಕೆ ಮೆಚ್ಚಿದಳು. ಮನದೊಳಗೆ ಸುಟ್ಟುರೆಯಂತೆ ಜಂಝಾನಿಲನಂತೆ ದೇವವಾಜಿ ತಿರುಗಿ ಕೊಳು ಗೊಳದೊಳು ದೇಹವ ಬಿಸುಟೆಯ್ದಿದುದಿಂದು ತಾನಿದ್ದೆಡೆಗೆ. ತುರಗ ಶರೀರವ ನರ್ಚಿಸಿ ಭೂಗ್ರಹದೊಳು ನಿರಿಸಿ ರಾಯಕುವರ ಬೇಗದೊಳಂತಃಪುರವ ಪೊಕ್ಕು ತನ್ನಾಯುರಂತ್ಯವು ಸಮೀಪಿಸಿದುದನ್ನು ತಿಳಿಸಿ ಅವರೂ ಸಿದ್ಧ ರಾಗಲು ಸೂಚಿಸಿದನು.

ಪತಿಯ ಮಾತನ್ನು ಕೇಳಿ ಅವನ ರಾಣಿವಾಸದವರೆಲ್ಲರೂ ಬಹು ಸಂತೋಷದಿಂದ ಅಗ್ನಿಪ್ರವೇಶಮಾಡಿದರು. ರಾಮನು ಕಾಟಣ್ಣನ ಜೊತೆ ಯಲ್ಲಿ ದೊಡ್ಡ ಸೈನ್ಯದೊಡನೆ ರಣರಂಗವನ್ನು ಪ್ರವೇಶಿಸಿದನು. ಅವನನ್ನು ನೋಡಿದತಕ್ಷಣವೇ ಮಾತಂಗಿಯು ಹತ್ತುಸಾವಿರ ಸೈನ್ಯವನ್ನು ನಡೆಯ ಬಿಟ್ಟಳು. ದೇವತೆಗಳು ಇದನ್ನು ನೋಡಿ ಸಿಂಹದ ಮರಿಯ ಮೇಲೆ ಮದ್ದಾನೆಗಳ ಗುಂಪು ಬಿದ್ದಂತಿದೆಯೆಂದು ಹೇಳಿಕೊಂಡು ಮರುಗಿದರು. ರಾಮನ ಕೂರ್ಗಣೆಗಳು ಶತ್ರುಸೈನ್ಯದ ಮೇಲೆ ಏಕಪ್ರಕಾರವಾಗಿ ಸುರಿದವು. ಖಾನವಜೀರರು ಬೊಬ್ಬಿರಿದು ಮೇಲೆ ಬೀಳಲು ರಾಮನಿಗೆ ಸ್ವಲ್ಪ ಮೆಯ್ಯ ಮರೆಯುವಂತಾಯ್ತು. ಪಕ್ಕದವರ ಶೈತ್ಯೋಪಚಾರದಿಂದ ಎಚ್ಚೆತ್ತು ನೊಂದ ಹುಲಿಯಂತೆ ಹುರಿಯೇರಿ ನುಗ್ಗುತ್ತಿರುವಾಗಲೇ ಕಾಟಣ್ಣ

ಬಾದುರಖಾನರು ಸತ್ತು ವೀರಸ್ವರ್ಗವನ್ನು ಸೇರಿದರು. ಆಗ ಮಾತಂಗಿಯೂ ತನ್ನ ಕಡೆಯವರನ್ನು ಉತ್ಸಾಹಗೊಳಿಸಿ ತಾನು ಆನೆಯ ಮೇಲೆ ನಿಂತು ಚಾಮರವನ್ನು ಬೀಸಿದಳು. ನಾನಾಕಡೆಯಿಂದ ಸೈನ್ಯ ಮುತ್ತಲು ರಾಮನ ಮೆಯ್ಯೆಲ್ಲ ಗಾಯವಾಗಿ ಕೈಕಾಲು ತಡಬಡಿಸಲು ಮುಂದೆ ಯುದ್ಧಮಾಡ ಲಾರದೆ ಒಂದು ಕಲ್ಲನ್ನು ಒರಗಿ ನಿಂತನು. ತಕ್ಷಣವೇ ಈಶ್ವರಧ್ಯಾನವು ಅವನ ಚಿತ್ತವನ್ನಾಕ್ರಮಿಸಿತು. ಸಮಾಧಿಗ್ರಸ್ತನಾದನು. ಈ ಸಮಯ ವನ್ನರಿತು ಶಿವನು ರಾಮನನ್ನು ಕರೆತರಲು ತನ್ನ ಕೈಲಾಸದಿಂದ ಪುಷ್ಪಕ ವಿಮಾನವನ್ನು ಕಳುಹಿಸಿದನು. ರಾಮನಾತ್ಮವು ಲಿಂಗದಲ್ಲೈಕ್ಯವಾಗು ವಂತೆ ಪುಷ್ಪಕವಿಮಾನವನ್ನು ಪ್ರವೇಶಿಸಿ ಕೈಲಾಸಕ್ಕೆ ನಡೆಯಿತು. 'ತರಗಲೆಗಳ ಮೆದ್ದು ದೆಸೆಗಳ ಪೊದದು ದೇಹಾಭಿಮಾನವನ್ನು ತೊರೆದು ತಳರ್ವ ತಾಪಸಿಗಳಿಗಾಗದ ಲೋಕ ತೆಱಿದೆಱಪಾಯ್ತು ಕುವರನಿಗೆ.' ಕಯ್ಯಿಕ್ಕಿ ಮಣಿದು ದಂಡವನು ಮಾಡಿದನು ಅಭವನಿಗೆ. ಪಾರ್ವತಿ ಪರಮೇಶ್ವರರಿಬ್ಬರೂ ರಾಮನನ್ನು ಆಲಿಂಗನಮಾಡಿಕೊಂಡು ನಾನಾ ರೀತಿ ಯಾಗಿ ಅವನ ಶೌಚಗುಣವನ್ನು ಕೊಂಡಾಡುತ್ತಿರಲು ಇಂದ್ರದೂತನು ಬಂದು ರಾಮನು ಭೂಲೋಕವನ್ನು ಬಿಟ್ಟುಬಂದಮೇಲೆ ನಡೆದ ಸಂಗತಿ ಯನ್ನು ಅವರಿಗೆ ವಿವರಿಸಿದನು. "ರಾಮನ ಆತ್ಮ ಶರೀರವನ್ನು ಬಿಟ್ಟೊಡ ನೆಯೇ ಮಾತಂಗಿಯು ಆತನ ತಲೆಯನ್ನು ತೆಗೆದುಕೊಂಡು ವಿವಿಧರೀತಿ ಯಲ್ಲಿ ಅಲಂಕರಿಸಿ ಡೆಲ್ಲಿಯಲ್ಲಿದ್ದ ಸುಲ್ತಾನನಿಗೆ ಕಳುಹಿಸಿಕೊಟ್ಟಳು. ಸುಲ್ತಾನನ ಮಗಳು ಅದನ್ನು ನೋಡಿ ಮೂರ್ಛೆಹೋಗಿ ಪ್ರಾಣಬಿಟ್ಟಳು. 'ಕಂದದೆ ಕಳೆಯಳಿಯದೆ ಕಾಂತಿಯಿಂ ಮೆಯಿಗುಂದದೆ ಹೊತ್ತು ಹೊತ್ತಿಗೆ ಅಂದವೇಱುತಲಿರುವ ತಲೆಯನು ಕಂಡು ಸುರತಾಳ ನೊಂದನಂತಃಕರಣ ದೊಳು. ಉಳಿವುದಲ್ಲಿದು, ಕಳೆಯುಳಿವುದಲ್ಲಿದು, ಮಣ್ಮಳಿಗೊಂಬುದಲ್ಲದಿದ ಱಿಂದ ಪೊಳಲು ಕೆಡವುದೆಂದು ಪಂಡಿತರೊರೆಯಲು ಸುರತಾಳನು ಅದನ್ನು ಕುಮ್ಮಟಕೆ ಹಿಂತಿರುಗಿಸಿದನು. ಅಲ್ಲಿಗೆ ಅದು ಸೇರಿದ ತಕ್ಷಣವೇ ಅದು ಲಿಂಗಾಕೃತಿಯಾಯಿತು.' ಈ ಮಾತನ್ನು ಕೇಳಿದ ಈಶ್ವರನು ರಾಮನ ಶೌಚಗುಣವನ್ನೂ ವೀರತ್ವವನ್ನೂ ಪರಿಪರಿಯಲ್ಲಿ ಹೊಗಳಿ ಅವನಿಗೆ ಗಣ ಪದವಿಯನ್ನಿತ್ತು ಮಹಾಪ್ರಮಥರ ಪಂಕ್ತಿಯೊಳಗೊಂದಿಸಿದನು. ರಾಮನು

ಗಿರಿರಾಜಸುತೆಯೊಡವೆರೆದ ಶಶಿಮೌಳಿಯ ಸೇವೆಯಲ್ಲಿ ನಿರತನಾಗಿ ಕೈಲಾಸದಲ್ಲಿ ಸುಖವಾಗಿದ್ದನು.

ಕುಮಾರರಾಮನ ಕತೆಯು ಕರ್ನಾಟಕದಲ್ಲಿ ಒಂದು ವಿಶೇಷಸ್ಥಾನವನ್ನಾಕ್ರಮಿಸಿದೆ. ಅದಕ್ಕೆ ರಾಮಾಯಣ ಮಹಾಭಾರತದಷ್ಟೇ ಗೌರವವಿದೆ. ಕಾರಣ ಅದು ಧರ್ಮವೀರನ ಕಥೆಯೆಂದೇ ಅನೇಕರ ಭಾವನೆ. ಧರ್ಮವು ಖಿಲವಾದಾಗ ಭಗವಂತನು ತಾನೇ ಭೂಮಿಯಲ್ಲಿ ಅವತರಿಸಿ ಅದನ್ನು ಉದ್ಧರಿಸುತ್ತಾನೆಂಬುದು ಭಾರತೀಯರ ಸ್ಥಿರವಾದ ನಂಬಿಕೆ. ಆ ಅವತಾರವು ಧಾರ್ಮಿಕನಾಯಕನಂತೆ ಆಗಬಹುದು. ಅಥವಾ ವೀರ ಪುರುಷನಂತೆ ಆಗಬಹುದು. ಧರ್ಮೋದ್ಧಾರವು ಮುಖ್ಯಧ್ಯೇಯ. ಅದಕ್ಕೆ ನೆರವಾದ ಎಲ್ಲ ಪುರುಷರೂ ಭಾರತೀಯರ ದೃಷ್ಟಿಯಲ್ಲಿ ಗಣ್ಯರೂ ಮಾನ್ಯರೂ ಆಗುತ್ತಾರೆ. ಪೂಜ್ಯರಾಗುತ್ತಾರೆ. ಪುಣ್ಯಪುರುಷರಾಗುತ್ತಾರೆ. ೧೪ನೆಯ ಶತಮಾನದ ಆದಿಭಾಗದಲ್ಲಿ ಅಖಂಡ ಭಾರತದಲ್ಲಿಯೇ ಆ ಧರ್ಮಗ್ಲಾನಿಯುಂಟಾಗಿ ಆರ್ಷೇಯ ಧರ್ಮವು ನಾಮಾವಶೇಷವಾಗಿ ಹಿಂದುಗಳಿಗೆ ಶಾಂತ ಜೀವನವು ಕುದುರೆಯ ಕೊಂಬಾಗಿದ್ದ ಕಾಲದಲ್ಲಿ ದಕ್ಷಿಣ ಭಾರತದಲ್ಲಿ ಸ್ವಲ್ಪ ಕಾಲವಾದರೂ ಧರ್ಮವಿಧ್ವಂಸಕರ ಹಾವಳಿಯನ್ನು ತಡೆಗಟ್ಟಿ ಪುರಾತನ ಸಂಸ್ಕೃತಿಗೆ ಪೋಷಕರಾದವರಲ್ಲಿ ಕಂಪಿಲನೂ ಅವನ ಮಗನಾದ ಕುಮಾರ ರಾಮನೂ ಅಗ್ರಗಣ್ಯರು. ಅವರನ್ನು ಕುರಿತ ಯಾವ ಗ್ರಂಥವಾದರೂ ಜನಾದರಣೀಯವಾಗಿರುವುದು ಆಶ್ಚರ್ಯಕರವೇನೂ ಅಲ್ಲ.

ಅಲ್ಲದೆ ಸಾಹಿತ್ಯವು ಜನಜೀವನದ ನುಡಿಗನ್ನಡಿಯೆಂಬುದು ಸರ್ವರಿಂದಲೂ ಅಂಗೀಕೃತವಾದ ವಿಷಯ. ಜನಜೀವನ ಸಾಹಿತ್ಯದಲ್ಲಿ ಎಷ್ಟೆಷ್ಟು ಸ್ಪಷ್ಟವಾಗಿ, ನಿಕಟವಾಗಿ ವರ್ಣಿತವಾಗಿದ್ದರೆ ಜನರಿಗೆ ಅದರ ಆಧಾರದ ಮೇಲೆ ತಮ್ಮ ಭಾವೀಜೀವನವನ್ನು ರೂಪಗೊಳಿಸಿಕೊಳ್ಳುವುದಕ್ಕೆ ಅಷ್ಟಷ್ಟು ಸಹಾಯವಾಗುತ್ತದೆ. ಅದರಲ್ಲಿ ಅಷ್ಟಷ್ಟು ಆತ್ಮೀಯತೆಯುಂಟಾಗುತ್ತದೆ. ಆಧ್ಯಾತ್ಮಿಕ ವಿಷಯಗಳನ್ನೇ ಪ್ರಧಾನವಸ್ತುವಾಗುಳ್ಳ ಕನ್ನಡ ಧಾರ್ಮಿಕ ಗ್ರಂಥರಾಶಿಯಲ್ಲಿ ಐಹಿಕ ಜೀವನದ ಪ್ರತಿಬಿಂಬವನ್ನು ಕಾಣುವುದು ಸುಲಭವೇನೂ ಅಲ್ಲ. ಪ್ರಾಸಂಗಿಕವಾಗಿ ಅವುಗಳ ದರ್ಶನ ಮಿಂಚಿನಂತೆ ಸುಳಿದರೂ ಅಖಂಡ ಜೀವನದ ವಿವಿಧಮುಖಗಳನ್ನೂ ಅಲ್ಲಿ ಕಾಣಲಾಗುವುದಿಲ್ಲ.

ಇತಿಹಾಸವಿಷಯಗಳನ್ನೊಳಗೊಂಡ 'ಕೆಳದಿನೃಪವಿಜಯ' ಕಂಠೀರವ 'ನರಸರಾಜವಿಜಯ' 'ಚಿಕ್ಕದೇವರಾಜ ವಿಜಯ' 'ಚಿಕ್ಕದೇವರಾಜ ವಂಶಾವಳಿ' ಮೊದಲಾದ ಗ್ರಂಥಗಳಲ್ಲಿ ತಾತ್ಕಾಲಿಕ ಜೀವನದ ಪಡಿಯಚ್ಚನ್ನು ಯಥೋಚಿತವಾಗಿ ಕಾಣಬಹುದು. ಅದೇ ಮಾದರಿಯಲ್ಲಿ ಅದಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಸಮಕಾಲೀನ ಜೀವನವನ್ನು ಪ್ರತಿಬಿಂಬಿಸುವುದರಿಂದ ಕುಮಾರರಾಮನ ಸಾಂಗತ್ಯ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಪ್ರಧಾನ ಸ್ಥಾನವನ್ನಾಕ್ರಮಿಸಿರುವುದಲ್ಲದೆ ಹೆಚ್ಚು ಆಕರ್ಷಕವಾಗಿದೆ.

ಕುಮಾರರಾಮನ ಪ್ರಾಶಸ್ತ್ಯವನ್ನು ಅರ್ಥಮಾಡಿಕೊಳ್ಳಬೇಕಾದರೆ ಆ ಕಾಲದ ಭಾರತದ ರಾಜಕೀಯ ಮತ್ತು ಆರ್ಥಿಕಸ್ಥಿತಿಯ ಅರಿವು ಅತ್ಯಾವಶ್ಯಕ. ೧೩ ನೆಯ ಶತಮಾನದ ಉತ್ತರಾರ್ಧ ದಕ್ಷಿಣಭಾರತದಲ್ಲಿ ಒಂದು ಸಂಧಿಸಮಯ. ಆ ವೇಳೆಗೆ ಯಶಸ್ವಿಯಾಗಿ ಬಾಳಿ ಒದುಕಿದ ರಾಷ್ಟ್ರಕೂಟ ಚಾಳುಕ್ಯ, ಹೊಯ್ಸಳರ ಉಚ್ಛ್ರಾಯಕಾಲ ಆಗಿಹೋಗಿತ್ತು. ಆಗ ದೇವಗಿರಿಯಲ್ಲಿ ಯಾದವರೂ ದ್ವಾರಸಮುದ್ರದಲ್ಲಿ ಹೊಯ್ಸಳರೂ ಓರಗಲ್ಲಿನಲ್ಲಿ ಆಂಧ್ರರಾದ ಕಾಕತೀಯರೂ ತೀರದಕ್ಷಿಣದ ಮಧುರೆಯಲ್ಲಿ ತಮಿಳರಾದ ಪಾಂಡ್ಯರೂ ರಾಜ್ಯಭಾರ ಮಾಡುತ್ತಿದ್ದರು. ಇವರೆಲ್ಲ ಪರಮಾಧಿಕಾರಕ್ಕಾಗಿ ಪರಸ್ಪರ ಆಗಾಗ ಜಗಳವಾಡುತ್ತಲೇ ಇದ್ದರು. ಇವರಲ್ಲಿ ಐಕಮತ್ಯವೆಂಬುದೇ ಇರಲಿಲ್ಲ.

ಈ ಕಾಲಕ್ಕೆ ಸರಿಯಾಗಿ ಉತ್ತರ ಹಿಂದೂಸ್ಥಾನದಲ್ಲಿ ಪ್ರಬಲರಾಗಿದ್ದ ಮುಹಮ್ಮದೀಯರ ಉಪದ್ರವ ದಕ್ಷಿಣಕ್ಕೂ ವ್ಯಾಪಿಸಿತು. ಮೊದಮೊದಲು ಭಾರತದ ಮೇಲೆ ದಂಡೆತ್ತಿಬಂದ ಘಜನೀಮುಹಮ್ಮದ್ ಮತ್ತು ಘೋರಿ ಮುಹಮ್ಮದರಿಗೆ ಭಾರತದ ಐಶ್ವರ್ಯದಮೇಲೆ ಕಣ್ಣಿತ್ತೇವಿನಾ ಇಲ್ಲಿ ಚಕ್ರಾಧಿಪತ್ಯವನ್ನು ಕಟ್ಟಿಕೊಂಡು ಆಳಬೇಕೆಂಬ ಆಸೆಯಿರಲಿಲ್ಲ. ಆದರೆ ಮುಂದೆ ಬಂದವರಿಗೆ ರಾಜ್ಯವಿಸ್ತರಣೆಯೂ ಮುಹಮ್ಮದೀಯ ಧರ್ಮಪ್ರಸಾರಣೆಯೂ ಪ್ರಧಾನವಾದ ಗುರಿಯಾಯಿತು. ಈ ಧ್ಯೇಯದಿಂದ ಹೊರಟ ಧರ್ಮಾಂಧರಾದ ಮುಹಮ್ಮದೀಯರ ಜಂಝಾವಾತಕ್ಕೆ ಸಿಕ್ಕಿದ ಆರ್ಷೇಯಹಿಂದೂ ಧರ್ಮವು ನಿರ್ಮೂಲವಾಗಿ ನಾಮಾವಶೇಷವಾಗುವ ಸ್ಥಿತಿಗೆ ಬಂದಿತ್ತು. ೧೨ ನೆಯ ಶತಮಾನಾಂತ್ಯದವರೆಗೆ ಇದರ ಕಾವು ದಕ್ಷಿಣಕ್ಕೆ ಮುಟ್ಟಿರಲಿಲ್ಲ.

ಶತಮಾನದ ಕೊನೆಯಲ್ಲಿ ಡೆಲ್ಲಿಯ ಸಿಂಹಾಸನವನ್ನೇರಿದ್ದವನು ಖಿಲ್ಜಿವಂಶದ ಅಲ್ಲಾವುದ್ದೀನ್. ಈತನು ೧೨೯೪ ರಲ್ಲಿ ದಕ್ಷಿಣದ ಕಡೆ ದಂಡಯಾತ್ರೆಯನ್ನು ಹೊರಟು ದೇವಗಿರಿಯನ್ನು ಮುತ್ತಿ ಅಲ್ಲಿಯ ದೊರೆಯಾದ ರಾಮರಾಯನನ್ನು ಸೋಲಿಸಿ ವಿಪುಲೈಶ್ವರ್ಯದಿಂದ ಹಿಂತಿರುಗಿದನು. ಮುಂದಿನ ವರ್ಷವೇ ಇವನ ಸೇನಾನಾಯಕನಾದ ಮಲ್ಲಿಕಾಫರನು ದೊಡ್ಡ ಸೇನೆಯೊಡನೆ ಹೊರಟು ದೇವಗಿರಿ, ದ್ವಾರಸಮುದ್ರ, ಮಲಬಾರ್ ಮೊದಲಾದ ಪ್ರಾಂತದ ರಾಜರುಗಳನ್ನು ಸೋಲಿಸಿ ರಾಮೇಶ್ವರದವರೆಗೂ ಹೋಗಿ ಅಲ್ಲಿ ಮಸೀದಿಯನ್ನು ಕಟ್ಟಿ ಅಪಾರವಾದ ದ್ರವ್ಯದಿಂದ ಡೆಲ್ಲಿಯನ್ನು ಸೇರಿಸಿದನು. ಈ ಮಧ್ಯೆ ಅಂತಃಕಲಹದ ಫಲವಾಗಿ ಮಧುರೆಯೂ ಸುಲ್ತಾನನಿಗೆ ಸೇರಿತು. ಓರಗಲ್ಲಿನ ಪ್ರತಾಪರುದ್ರನೂ ಮಹಮ್ಮದೀಯರಿಗೆ ಸೋತು ಕಪ್ಪ ಕೊಡಲು ಒಪ್ಪಿದನು ೧೩೧೫ ರವರೆಗೆ ಅನೇಕ ಸಲ ಮಹಮ್ಮದೀಯರ ಧಾಳಿ ನಡೆದುದರ ಫಲವಾಗಿ ದಕ್ಷಿಣ ಭಾರತವು ಬಹುಮಟ್ಟಿಗೆ ಶಕ್ತಿಗುಂದಿತು.

ಅಲ್ಲಾವುದ್ದೀನನಾದ ಮೇಲೆ ಅವನ ಮಗನಾದ ಮುಬಾರಕನು ರಾಜನಾದನು. ಇವನ ಕಾಲದಲ್ಲಿ ದೇವಗಿರಿಯು ಸ್ವತಂತ್ರವಾಗಲು ಪ್ರಯತ್ನಪಡಲು ಸುಲ್ತಾನನು ದೇವಗಿರಿಯನ್ನು ಮುತ್ತಿ ಸೋಲಿಸಿ ಅಲ್ಲಿಯ ರಾಜನಾದ ಹರಿಪಾಲನನ್ನು ಸಜೀವವಾಗಿ ಚರ್ಮಸುಲಿಸಿ ಕೊಲ್ಲಿಸಿದನು. ಇವನ ಸೇನಾಪತಿಯಾದ ಖುಸ್ರುಖಾನನು ೧೩೧೮ ರಲ್ಲಿ ಓರುಗಲ್ಲಿಗೆ ಮುತ್ತಿಗೆ ಹಾಕಲು ರಾಜನಾದ ಪ್ರತಾಪರುದ್ರನು ಸೋತು ಅವನ ಅಡಿಯಾಳಾದನು.

ಖುಸ್ರುವು ತನ್ನ ಒಡೆಯನನ್ನೇ ಕೊಲೆ ಮಾಡಿ ತಾನೇ ರಾಜನಾದನು. ಇವನ ಕಾಲದಲ್ಲಿ ಹಿಂದುಗಳಿಗೆ ಸಹಿಸಲಾರದಷ್ಟು ಕಷ್ಟ ನಷ್ಟಗಳುಂಟಾದವು. ಸುಮಾರು ೧೩೨೧ ರಲ್ಲಿ ತೊಗಲಕ್ ವಂಶದ ಗಯಾಸುದ್ದೀನನು ಖುಸ್ರುವನ್ನು ಸೋಲಿಸಿ ಡೆಲ್ಲಿಯ ಸಿಂಹಾಸನವನ್ನು ಏರಿದನು. ಇವನು ನಾಲ್ಕು ವರ್ಷಗಳು ಮಾತ್ರ ರಾಜನಾಗಿದ್ದು ೧೩೨೫ರಲ್ಲಿ ತನ್ನ ಮಗನಾದ ಉಲೂಫ್ ಖಾನ್ ಅಥವಾ ಮಹಮ್ಮದ್ ಬಿನ್ ತೊಗಲಕನಿಂದ ಹತನಾದನು. ಮಹಮ್ಮದನು ದಕ್ಷಿಣದಲ್ಲಿ ಅನೇಕ ಕಾಲ ಪ್ರಾಂತಾಧಿಕಾರಿಯಾಗಿದ್ದುದರಿಂದ ಇವನಿಗೆ ದಕ್ಷಿಣ ದೇಶಗಳ ಮೇಲೆ ವಿಶೇಷ ಕಣ್ಣಿತ್ತು.

ದಕ್ಷಿಣ ಭಾರತದ ಅನೇಕ ರಾಜರುಗಳ ಮೇಲೆ ದಂಡೆತ್ತಿ ಹೋಗಿ ಅವರನ್ನು ಸೋಲಿಸಿ ಅವರ ರಾಜ್ಯವನ್ನು ಕೊಳ್ಳೆಹೊಡೆದು ಅನೇಕ ದೇವಾಲಯಗಳನ್ನು ನೆಲಸಮಮಾಡಿ ಹೊಸಮಸೀತಿಗಳನ್ನು ಕಟ್ಟಿಸಿ ಗೆದ್ದ ರಾಜ್ಯಗಳಲ್ಲಿ ತನ್ನ ಕಡೆಯ ಪ್ರಾಂತಾಧಿಕಾರಿಗಳನ್ನು ನೇಮಿಸಿದನು. ದಕ್ಷಿಣ ಭಾರತವನ್ನು ಸರಿಯಾದ ಹತೋಟಿಯಲ್ಲಿಟ್ಟುಕೊಳ್ಳುವುದಕ್ಕೆ ತನ್ನ ರಾಜಧಾನಿಯನ್ನು ಡೆಲ್ಲಿಯಿಂದ ದೇವಗಿರಿಗೆ ಬದಲಾಯಿಸಿದನು.

ಇವೆಲ್ಲದರ ಫಲವಾಗಿ ದಕ್ಷಿಣ ಭಾರತದ ಹಿಂದುಗಳ ಸ್ಥಿತಿಯು ಬಹು ಶೋಚನೀಯವಾಯಿತು ಅವರ ಆಸ್ತಿ ಪಾಸ್ತಿಗಳೆಲ್ಲ ನಾಶವಾದವು. ಅವರ ಧರ್ಮವು ಕುಂಠಿತವಾಯಿತು. ಅವರ ಸಂಸ್ಕೃತಿಕೇಂದ್ರಗಳಾದ ಮಠ ದೇವಾಲಯಾದಿಗಳು ನೆಲಸಮವಾದವು. ಹಿಂದೂಸ್ತ್ರೀಯರು ಮಾನದಿಂದ ಜೀವಿಸಲು ಉಳಿಗಾಲವಿಲ್ಲವಾಯ್ತು. ಪರಧರ್ಮಿಗಳ ಬಲಾತ್ಕಾರದಿಂದ ಅನೇಕ ಆಸ್ತಿಕ ಹಿಂದುಗಳು ವಿಧರ್ಮಿಗಳಾಗಬೇಕಾಯಿತು.

ಈ ದುರ್ದಶೆಯನ್ನು ತಪ್ಪಿಸಿ ಆರ್ಷೇಯವಾದ ಹಿಂದೂ ಧರ್ಮೋದ್ಧಾರಕ್ಕಾಗಿಯೇ ಮುಂದೆ ೧೩೩೬ರ ವೇಳೆಗೆ ವಿಜಯನಗರ ಸಾಮ್ರಾಜ್ಯ ಸ್ಥಾಪಿತವಾದುದು. ಅದಕ್ಕೆ ಪೀಠಿಕೆಯಾಗಿ, ತಳಹದಿಯಾಗಿ ಧರ್ಮಸಂಸ್ಥಾಪನೆಗಾಗಿಯೂ ಪ್ರಜೆಗಳ ಸೌಕರ್ಯಕ್ಕಾಗಿಯೂ ದುಡಿದು ರಾಜ್ಯ ಕಟ್ಟಿ ವಿಸ್ತರಿಸಿ, ಉತ್ತರದಿಂದ ತಂಡೋಪತಂಡವಾಗಿ ಬರುತ್ತಿದ್ದ ಮುಹಮ್ಮದೀಯರ ಧಾಳಿಯನ್ನು ತಡೆದು ಪ್ರಸಿದ್ಧವಾದ ಹೊಯ್ಸಳ, ಯಾದವ, ಕಾಕತೀಯ, ಪಾಂಡ್ಯ ರಾಜ್ಯಗಳೆಲ್ಲ ಮಣಿದು ಅಧೀನವಾಗಿದ್ದರೂ ತಾನು ಮಣಿಯದೆ ಅಲ್ಪಕಾಲವಾದರೂ ಧರ್ಮಧ್ವಂಸಕರನ್ನು ಹಿಮ್ಮೆಟ್ಟಿಸಿದ ಕೀರ್ತಿ ಕಂಪಿಲ ಅರಸರಿಗೆ ಸಲ್ಲತಕ್ಕದ್ದು. ಅವರಲ್ಲಿ ಗಂಡುಗಲಿಯಾದವನು ಆ ರಾಜ್ಯದ ಕೊನೆಯ ಅರಸಾದ ಕುಮಾರರಾಮ. ಅವನ ಚರಿತ್ರೆ ಕನ್ನಡಿಗರಿಗೆ ಸರ್ವಾದರಣೀಯ.

ಕಂಪಿಲ ಅರಸರ ಇತಿಹಾಸವನ್ನು ಅನೇಕ ಶಾಸನಗಳಿಂದಲೂ ವಿದೇಶದಿಂದ ಇಲ್ಲಿಗೆ ಬಂದಿದ್ದ ಪ್ರವಾಸಿಗಳ ಬರವಣಿಗೆಗಳಿಂದಲೂ, ಇಲ್ಲಿಯ ಪಾಳೆಯಗಾರರ ಚರಿತ್ರೆಗಳಿಂದಲೂ ಭಿನ್ನ ಭಿನ್ನ ಕವಿಗಳಿಂದ ರಚಿತವಾದ ಕುಮಾರರಾಮ ಸಾಂಗತ್ಯಗಳ ಆಧಾರದಿಂದಲೂ ಯಥೋಚಿತವಾಗಿ

ಚಿತ್ರಿಸಬಹುದು. ಪಾಂಚಾಳಗಂಗನು ತನ್ನ 'ಕುಮಾರ ರಾಮ ಸಾಂಗತ್ಯ' ದಲ್ಲಿಯೂ ನಂಜುಂಡನು ತನ್ನ 'ಪರದಾರಸೋದರರಾಮನ ಕತೆ'ಯಲ್ಲಿಯೂ ಈ ವಿಷಯವಾಗಿ ಸಾಕಷ್ಟು ವಿವರಗಳನ್ನು ಒದಗಿಸಿದ್ದಾರೆ.

ಕಂಪಿಲ ಅರಸರ ಮೂಲಪುರುಷ ಕಸ್ತೂರಿನಾಯಕನೆಂಬುವನು. ಇವನು ಬೇಡರ ಜಾತಿಯವನು. ಇವನ ವಂಶಕ್ಕೆ ಪುವ್ವಾಲಿ ವಂಶವೆಂದು ಹೆಸರು. ಈ ವಂಶದಲ್ಲಿ ನಾಲ್ಕನೆಯವನೇ ಪ್ರಸಿದ್ಧನಾದ ಮುಮ್ಮಡಿ ಸಿಂಗ ನಾಯಕ. ಈತನು ಸೇವುಣ ಮತ್ತು ಹೊಯ್ಸಳರ ಮೇಲೆ ಅನೇಕ ಸಲ ಕಾದಿ ಅವರ ನಾಯಕನನ್ನು ಸೋಲಿಸಿದ್ದನು. ಇವರ ರಾಜ್ಯವು ಈಗಿನ ಬಳ್ಳಾರಿ ಜಿಲ್ಲೆಯ ದಕ್ಷಿಣ ಭಾಗವನ್ನೂ ಚಿತ್ರದುರ್ಗಜಿಲ್ಲೆಯ ಉತ್ತರ ಭಾಗ ವನ್ನೂ ಒಳಗೊಂಡಿತ್ತು. ಈತನಿಗೆ ಮಂಚಲೆಯೆಂಬ ರಾಣಿಯೂ ಕಂಪಿಲ ನೆಂಬ ಕುಮಾರನೂ ಬೈಚಪ್ಪನೆಂಬ ಮಂತ್ರಿಯೂ ಇದ್ದರು. ಇವನು ಎರಡು ಪಟ್ಟಗಳ ಕಾಲ ರಾಜ್ಯವಾಳಿ ಸುಮಾರು ಕ್ರಿ. ಶ. ೧೧೦೦ರ ವೇಳೆಗೆ ತೀರಿಕೊಂಡಿರಬೇಕು.

ಕಂಪಿಲನು ಜಟ್ಟಂಗಿ ರಾಮದೇವರ ವರಪ್ರಸಾದದಿಂದ ಜನಿಸಿದವನು. ಆದುದರಿಂದ ಅವನಿಗೆ ಆ ದೇವರಲ್ಲಿ ಅತಿ ಭಕ್ತಿ. ಕಂಪಿಲನು ಬಾಲ್ಯದಲ್ಲಿಯೇ ತಂದೆಯನ್ನು ಕಳೆದುಕೊಂಡುದರಿಂದ ಮಂತ್ರಿಯಾದ ಬೈಚಪ್ಪ ಮತ್ತು ತಾಯಿ ಮಂಚಲೆಯ ಮೇಲ್ವಿಚಾರಣೆಯಲ್ಲಿ ಬೆಳೆದು ಪ್ರವೃದ್ಧಮಾನ ನಾದನು. ಇವನು ಚಿಕ್ಕವನಾಗಿದ್ದಾಗ ದೊಡ್ಡ ಕ್ಷಾಮವು ತಲೆದೋರಿದುದ ರಿಂದ ಇವನು ತನ್ನ ಹನೆಯನೆಂಬ ರಾಜಧಾನಿಯನ್ನು ಬಿಟ್ಟು ಹೊಸ ಮಲೆಯೆಂಬ ಅರಣ್ಯಕ್ಕೆ ಬರಬೇಕಾಯಿತು. ಅಲ್ಲಿ ಹೊಸಮಲೆದುರ್ಗವೆಂಬ ಒಂದು ಭದ್ರವಾದ ಕೋಟೆಯನ್ನು ನಿರ್ಮಿಸಿಕೊಂಡನು. ಹರಿಯಾಲ ದೇವಿಯೆಂಬುವಳು ಈತನ ಪಟ್ಟದ ರಾಣಿ. ಕಾಟಮ್ಮ, ಹಂಪಾಜಿ, ಸಿಂಗಾಜಿ ಸಿರೋಮಣಿಯೆಂಬುವರು ಇತರ ರಾಣಿಯರು. ರತ್ನಾಜಿ ಎಂಬುವಳು ಮೋಹದ ಮಡದಿ. ಈಕೆ ಬಹು ಬೆಡಗುಗಾತಿ. ನಾಲ್ಕುಂದಿ ಮುಕ್ಕುಂದಿಯ ದೇವರೆಡ್ಡಿಯ ಮಗಳು. ಈಕೆಯ ಶೀಲ ಅಷ್ಟು ಉಚ್ಚವಾಗಿರಲಿಲ್ಲ. ಆದುದರಿಂದಲೇ ಹರಿಯಾಲದೇವಿಯು ತನ್ನ ಮಗನಾದ ಕುಮಾರರಾಮ ನಿಗೆ ಇವಳಿಂದ ಕೇಡಾಗಬಹುದೆಂದು ತಿಳಿದು ತನ್ನ ಮಗ ಪರದಾರ

ಸೋದರನಾಗಿರುವಂತೆ ಅವನಿಂದ ವಾಗ್ದಾನ ಪಡೆದು ಅದರ ಜ್ಞಾಪಕಾರ್ಥ ವಾಗಿ ಆ ವಿಶೇಷಣವನ್ನು ಕೆತ್ತಿದ್ದ ಕಾಲಂದುಗೆಯನ್ನು ಆತನು ಸದಾ ಧರಿಸು ವಂತೆ ಏರ್ಪಡಿಸಿದ್ದಳು.

ಕಂಪಿಲನಿಗೆ ಬೈಚಪ್ಪನು ಮುಖ್ಯಮಂತ್ರಿಯಾಗಿಯೂ ಮಾವ ಮಲ್ಲಿಕರಾಜ ಮತ್ತು ಭಾವ ಭೈರವರು ಇತರ ಮಂತ್ರಿಗಳಾಗಿಯೂ ಇದ್ದರು. ಕಂಪಿಲನು ಹೊಯ್ಸಳರು, ದೇವಗಿರಿಯವರು, ಓರಗಲ್ಲವರು, ಗುತ್ತಿಗೆಯವರು ಮತ್ತು ಇತರ ಪಾಳೆಯಗಾರರೊಡನೆ ಅನೇಕ ಕದನಗಳನ್ನು ನಡೆಸಿದನು. ಆದರೆ ಅವುಗಳಿಂದ ವಿಶೇಷ ಜಯ ಲಭಿಸಿದಂತೆ ಕಾಣುವುದಿಲ್ಲ. ಓರೆಗಲ್ಲಿ ನವರು ಕಂಪಿಲದೇವನ ಕೋಟೆಯನ್ನೇ ಮುತ್ತಿ ಉದ್ಯಾನವನ್ನು ಹಾಳು ಮಾಡಿದರು. ಗುತ್ತಿಗೆಯವರು ಕಂಪಿಲನಿಂದಲೇ ಕಪ್ಪವನ್ನು ಕಸಿದ ಕೊಂಡರು. ಸಿಂಗನಾಯಕನಿಗೆ ಅಧೀನರಾಗಿದ್ದ ಅನೇಕ ಪಾಳೆಯಗಾರರು ಸ್ವತಂತ್ರರಾದರು. ಆದರೂ ಕಂಪಿಲನನ್ನು ಡೆಲ್ಲಿಯ ಸುಲ್ತಾನರು ಗೆಲ್ಲಲು ಸಾಧ್ಯವಾಗಲಿಲ್ಲ. ಅವನನ್ನು ಅಧೀನನನ್ನಾಗಿ ಮಾಡಿಕೊಳ್ಳಬೇಕೆಂಬ ಅವರ ಪ್ರಯತ್ನ ಮಾತ್ರ ಕಡಿಮೆಯಾಗಿರಲಿಲ್ಲ.

ಕಂಪಿಲದೇವನಿಗೆ ಹರಿಯಾಲದೇವಿಯಲ್ಲಿ ಕುಮಾರರಾಮ, ಮಾರಮ್ಮ ಮತ್ತು ಸಿಂಗಮ್ಮ ಎಂಬ ಮಕ್ಕಳಿದ್ದರು. ಕಾಟಣ್ಣ, ಅಣ್ಣ ಭೈರವ, ಲಿಂಗಣ್ಣ ಎಂಬುವರು ಇತರ ಮಕ್ಕಳು. ಮುಹಮ್ಮದೀಯರು ಕಂಪಿಲನ ಇತರ ೧೧ ಮಕ್ಕಳನ್ನು ಸೆರೆ ಹಿಡಿದುಕೊಂಡು ಹೋದರೆಂದು ಕೆಲವು ಇತಿಹಾಸಕಾರರು ಹೇಳಿರುವುದರಿಂದ ಕಂಪಿಲನಿಗೆ ಇತರ ಮಕ್ಕಳೂ ಇದ್ದಿರಬಹುದು. ಭಂಡಾರಿ ಬುಕ್ಕ, ಹರಿಹರ ಇವರು ಭಂಡಾರದ ಅಧಿಕಾರಿಗಳು. ಭಾವಸಂಗಮನು ಪ್ರೀತಿಯ ಅಳಿಯ.

ಕಂಪಿಲ ಅರಸರಿಗೆ ನಿಜವಾದ ಪ್ರಾಶಸ್ತ್ಯ ಬಂದುದು ರಾಮನಾಥನ ಕಾಲದಲ್ಲಿ. ಹರಿಯಾಲದೇವಿಗೆ ಜಟ್ಟಂಗಿ ರಾಮದೇವರ ವರದಿಂದ ಹುಟ್ಟಿದ್ದ ರಾಮನಾಥನು ಬಹು ಶೀಘ್ರವಾಗಿ ಅಭಿವೃದ್ಧಿಗೆ ಬಂದನು. ಬಾಲ್ಯದಲ್ಲಿಯೇ ಶಸ್ತ್ರಾಸ್ತ್ರಗಳ ಪ್ರಯೋಗದಲ್ಲಿ ಪೂರ್ಣ ನೈಪುಣ್ಯವನ್ನೂ ಪಡೆದನು. ಬೇಟೆಗೆ ಹೋಗಿದ್ದ ಒಂದು ದಿವಸದಲ್ಲಿ ಅಕಸ್ಮಾತ್ತಾಗಿ ಕಂಡ ಹಳೆಯ ಕುಮ್ಮಟದುರ್ಗವು ವಾಸಕ್ಕೆ ಉತ್ತಮವೂ ಭದ್ರವೂ ಆದ ಸ್ಥಳವೆಂದು

ತಂದೆಗೆ ತಿಳಿಸಿ ಅಲ್ಲಿ ಹೊಸದಾಗಿ ಕುಮ್ಮಟವನ್ನೂ ಕಟ್ಟಿಸಿದನು. ಇದೇ ವಿದೇಶೀಯ ಪ್ರವಾಸಿಯಾದ ನ್ಯೂನಿಸ್ ಹೇಳುವ ಕ್ರಿನಮಟ. ಈತನಲ್ಲಿ ೧೨೦ ಕುದುರೆಗಳಿದ್ದವು. ಅವುಗಳಲ್ಲಿ ೩೦ ಅತ್ಯುತ್ತಮವಾದುವು. ಈತನು ತನ್ನ ಪರಾಕ್ರಮದಿಂದಲೂ ಔದಾರ್ಯದಿಂದಲೂ ಸುತ್ತಲಿನ ಎಲ್ಲ ವೀರರನ್ನೂ ತನ್ನ ಆಸ್ಥಾನಕ್ಕೆ ಸೆಳೆದುಕೊಂಡು ಸುಲ್ತಾನನನ್ನು ಎದುರಿಸುವುದಕ್ಕೆ ಯೋಗ್ಯವಾದ ಪಡೆಯನ್ನು ನಿರ್ಮಿಸಿದ್ದನು. ಗಂಗ ಮತ್ತು ನಂಜುಂಡರು ತಮ್ಮ ಕಾವ್ಯಗಳಲ್ಲಿ ರಾಮನಿಗೆ ಒಡನಾಡಿಗಳಾಗಿದ್ದವರ ಮತ್ತು ಸಹಾಯ ಮಾಡಿದವರ ಹೆಸರುಗಳನ್ನು ಸೂಚಿಸಿರುವುದನ್ನು ನೋಡಿದರೆ ಈತನ ಪಡೆಯಲ್ಲಿ ಜಾತಿ ಮತ ಪಕ್ಷಪಾತವಿಲ್ಲದೆ ಉಚ್ಚ ನೀಚ ಭಾವನೆಯಿಲ್ಲದೆ ದೇಶೋದ್ಧಾರಕ್ಕಾಗಿಯೂ ಧರ್ಮೋದ್ಧಾರಕ್ಕಾಗಿಯೂ ಭಾರತದ ವೀರರನೇಕರು ಈತನ ನಾಯಕತ್ವದಲ್ಲಿ ಒಟ್ಟುಗೂಡಿದ್ದರೆಂಬುದು ವಿಶದವಾಗುತ್ತದೆ. ಬಲಿಷ್ಠನಾದ ರಾಮನು ಮುಂಗೋಜಿ, ಬಂಗೋಜಿ, ಬಡಗೋಜಿ, ತಿಮ್ಮೋಜಿ ರಾಯರಿಗೆಲ್ಲ ಭಯಂಕರನಾಗಿದ್ದನು. ಮೊದಲು ಸುಲ್ತಾನನ ಸೈನ್ಯವನ್ನು ಗೆದ್ದ ಅದಟನಿಂದ ಪೊಯ್ಸಳ ವೀರಬಲ್ಲಾಳನು ಕುಮಾರರಾಮನ ಮೇಲೆ ಯುದ್ಧಕ್ಕೆ ಹೊರಟು ಸೋತು ಹಿಂದಿರುಗಬೇಕಾಯಿತು. ಡೆಲ್ಲಿಯ ಸುಲ್ತಾನನು ಒಂದು ಸಲ ತನ್ನ ಪಾದುಕೆಯನ್ನು ಪಲ್ಲಕ್ಕಿಯಲ್ಲಿ ಕುಮ್ಮಟಕ್ಕೆ ಕಳುಹಿಸಿ ಅದಕ್ಕೆ ರಾಮನು ಗೌರವಿಸಿ ವಂದನೆಯನ್ನು ಮಾಡಬೇಕೆಂದೂ ಇಲ್ಲದಿದ್ದರೆ ತಮ್ಮೊಡನೆ ಯುದ್ಧಕ್ಕೆ ಬರಬೇಕೆಂದು ಹೇಳಿ ಕಳುಹಿಸಿದನಂತೆ. ಇದನ್ನು ನೋಡಿ ರಾಮನಿಗೆ ಕೋಪ ಬಂದು ಆ ಪಾದುಕೆಯನ್ನು ತಾನೇ ಮೆಟ್ಟಿ ಬಂದಿದ್ದವರನ್ನು ಸೋಲಿಸಿ ಹಿಂದಕ್ಕೆ ಕಳುಹಿಸಿದನು. (ಈ ಪಾಪಾಸಿನ ವಿಷಯ ನಂಜುಂಡನ ಗ್ರಂಥದಲ್ಲಿಲ್ಲ.) ಅವರು ಗುತ್ತಿಯ ಜಗದಾಪಿಯ ಸಹಾಯದಿಂದ ಪುನಃ ಕುಮ್ಮಟವನ್ನು ಮುತ್ತಲು ರಾಮನು ಅವರನ್ನು ಸದೆಬಡಿದನು. ಜಗದಾಪಿಯು ಅವನ ಶೌರ್ಯಕ್ಕೆ ಮೆಚ್ಚಿ ತನ್ನ ಮಗಳನ್ನು ರಾಮನಿಗೆ ವಿವಾಹಮಾಡಿಕೊಟ್ಟು ಅನೇಕ ಕುದುರೆಗಳನ್ನು ಬಳುವಳಿಯಾಗಿ ಕೊಟ್ಟನು. ಇವುಗಳನ್ನು ತಂದೆಯಾದ ಕಂಪಿಲನು ತನ್ನ ಇತರ ಮಕ್ಕಳುಗಳಿಗೆ ಹಂಚಿಕೊಟ್ಟುದಕ್ಕೆ ರಾಮನು ಆಕ್ಷೇಪಿಸಲು ಕಂಪಿಲನು ನಿಜವಾದ ಶೂರನಾಗಿದ್ದರೆ ಓರೆಗಲ್ಲಿನ ಎಪ್ಪಟೆ ರಾಜನಲ್ಲಿರುವ ಬೊಲ್ಲ

ನೆಂಬ ಕುದುರೆಯನ್ನು ತರಬೇಕೆಂದು ಹಿಯ್ಯಾಳಿಸಿದನಂತೆ. ಅದೇ ಪ್ರಕಾರ ರಾಮನು ಓರೆಗಲ್ಲಿಗೆ ಹೋಗಿ ಎಪ್ಪಟೆರಾಜ ಸಹಿತನಾದ ಪ್ರತಾಪರುದ್ರನನ್ನು ಸೋಲಿಸಿ ಬೊಲ್ಲನನ್ನು ಹಿಡಿದು ತಂದನು. ಈ ಅದ್ಭುತವಾದ ಕುದುರೆಯು ಮೊದಲು ಚಾರಾಮರಾಯನ ಅಸ್ಥಾನದಲ್ಲಿದ್ದಿತಂತೆ. ಅದನ್ನು ಅಡಗಿಸ ಲಾರದೆ ಅವನು ಅದನ್ನು ಮುಂಗುಲಿ ರಾಯನಿಗೆ ಕೊಟ್ಟನಂತೆ. ಅವನು ಪುನಃ ಆದನ್ನು ಸುರತಾಳನಿಗೆ ಕಾಣಿಕೆಯಾಗಿ ಒಪ್ಪಿಸಿದನಂತೆ. ಅಲ್ಲಿಯೂ ಅದನ್ನೇರುವವರಾರೂ ಇಲ್ಲದುದಕ್ಕಾಗಿ ಸುರತಾಳನು ಅದನ್ನು ಓರಗಲ್ಲಿನ ಪ್ರತಾಪರುದ್ರನಿಗೆ ಒಂದು ಲಕ್ಷ ವರಹಗಳಿಗೆ ಮಾರಿದನಂತೆ. ಪ್ರತಾಪರುದ್ರನ ಸಚಿವೋತ್ತಮನಾಗಿದ್ದ ದೇವಿಸೆಟ್ಟಿಯ ಲಿಂಗಣ್ಣನು ಆ ಕುದುರೆಯನ್ನು ಹಿಡಿದು ತಂದು ದಳವಾಯಿತನವನ್ನೂ ಪಡೆದನಂತೆ. ಅಂದಿನಿಂದ ಆ ಕುದುರೆಯು ಓರೆಗಲ್ಲಿನಲ್ಲಿತ್ತು. ರಾಮನು ಆ ಕುದುರೆಯನ್ನು ಗೆದ್ದಮೇಲೆ ದೇವಿಸೆಟ್ಟಿಲಿಂಗಣ್ಣನು ರಾಮನ ಶೌರ್ಯಕ್ಕೆ ಮಾರುಹೋಗಿ ಅವನೊಡನೆ ಅವನ ಅನುಯಾಯಿಯಾಗಿ ಕುಮ್ಮಟಕ್ಕೆ ಬಂದು ಸೇರಿದನು.

ನಂಜುಂಡನು ಈ ಪ್ರಸಂಗವನ್ನು ಬೇರೆ ರೀತಿಯಲ್ಲಿ ವರ್ಣಿಸಿದ್ದಾನೆ. ಆತನ ಗ್ರಂಥದಲ್ಲಿ ಬೊಲ್ಲನ ಹೆಸರಾಗಲಿ ಎಪ್ಪಟೆಯ ಸಂಬಂಧವಾಗಲಿ ಬರುವುದಿಲ್ಲ. ಪರಶಿವನು ಅರ್ಜುನನ ಅಪರಾವತಾರನಾದ ರಾಮನ ಸ್ವಪ್ನದಲ್ಲಿ ಬಂದು ಇಂದ್ರನ ಉಚ್ಚೈಶ್ರವಸ್ಸೆಂಬ ಕುದುರೆಯು ಭೂಲೋಕದಲ್ಲಿ ರಾಮನ ಸಹಾಯಕ್ಕಾಗಿ ಗೋವಾ ಪಟ್ಟಣದಲ್ಲಿ ಬಂದು ಉದಿಸಿದೆಯೆಂದೂ ಅದು ಅವನಿಗಲ್ಲದೆ ಮತ್ತಾರಿಗೂ ವಶವಾಗುವುದಿಲ್ಲವೆಂದೂ ತಿಳಿಸಿದ ಪ್ರಕಾರ ತಂದೆಯ ಅಪ್ಪಣೆಯಂತೆ ಗೋವೆಯಿಂದ ಆ ಕುದುರೆಯನ್ನು ತರಿಸಿ ವಶಪಡಿಸಿಕೊಳ್ಳುತ್ತಾನೆ.

ಓರಗಲ್ಲಿನೊಡನೆ ಯುದ್ಧಮಾಡುವುದಕ್ಕೂ ಕುದುರೆ ಕಾರಣವಲ್ಲ. ರಾಮನು ತೆಲುಗುರಾಯರ ಗಂಡ ಎಂಬ ಬಿರುದನ್ನು ಘೋಷಣೆ ಮಾಡಿಸುತ್ತಿದ್ದುದನ್ನು ಕೇಳಿ ವೀರರುದ್ರನು ಕೋಪಗೊಂಡು ಸುತ್ತಣ ನಾಯಕರನ್ನು ಕೂಡಿಕೊಂಡು ೧೨೦೦ ಆನೆ ೧೨೦೦೦೦ ಕುದುರೆ ೬೦೦೦೦೦ ಕಾಲಾಳುಗಳೊಂದಿಗೆ ಹೊರಟು ಘೋರ ಯುದ್ಧವನ್ನು ನಡಸಿ ಪರಾಜಿತನಾಗಿ ಪಲಾಯನ ಮಾಡಿದನು.

ಕಾಕತೀಶ್ವರನು ಪರಾಜಿತನಾದುದನ್ನು ಕೇಳಿ ಕರಿಪತಿ ಕಪಿಲೇಶ್ವರನು ಕಂಪಿಲನ ರಾಜ್ಯವನ್ನು ಮುತ್ತಿ ಪೂರ್ಣವಾಗಿ ಸೋತು ಹಿಂತಿರುಗಿದನು.

ಈ ಕಾಲದಲ್ಲಿ ಅಂದರೆ ಸು ೧೩೨೫ ರಲ್ಲಿ ಡೆಲ್ಲಿಯ ಸಿಂಹಾಸನಾಧಿಪತಿ ಯಾಗಿದ್ದವನು ಮುಹಮುದ್ ಬಿನ್ ತೊಗಲಕ್. ಆದರೆ ನಂಜುಂಡನು ಸುಲ್ತಾನನಾಗಿದ್ದವನು ಅಲ್ಲಾವುದ್ದೀನ್ ಎಂದು ಸ್ಪಷ್ಟವಾಗಿ ಹೇಳುತ್ತಾನೆ. ಇದಕ್ಕೆ ಸುಲ್ತಾನನ ಹೆಸರು ಸರಿಯಾಗಿ ಗೊತ್ತಿಲ್ಲದುದು ಕಾರಣವಿರಬೇಕು. ಏಕೆಂದರೆ ಅಲ್ಲಾವುದೀನನು ೧೩೧೬ ರ ವೇಳೆಗೆ ತೀರಿಕೊಂಡಿದ್ದನು. ಆಮೇಲೆ ಖುಸ್ರು ಮತ್ತು ಗಯಾಸುದೀನ್ ಎಂಬ ಇಬ್ಬರು ರಾಜರುಗಳು ಸುಮಾರು ೭-೮ ವರ್ಷಗಳಕಾಲ ರಾಜ್ಯಭಾರ ಮಾಡಿದ್ದಾರೆ. ಅಲ್ಲದೆ ಹಿಂದೂ ಕಾವ್ಯಗಳಲ್ಲಿ ಮುಹಮ್ಮದೀಯರ ಹೆಸರನ್ನು ಸರಿಯಾಗಿ ಉಚ್ಚರಿಸದಿರು ವುದನ್ನು ನಾವನೇಕ ಸ್ಥಳಗಳಲ್ಲಿ ಕಾಣುತ್ತೇವೆ. ಅದೂ ಅಲ್ಲದೆ ಹಿಂದು ಗಳು ಮುಹಮ್ಮದೀಯ ರಾಜಸಾಮಾನ್ಯವನ್ನು ಸುಲ್ತಾನರೆಂದೂ ಅವರ ಸೇನಾನಿಯನ್ನೂ ನೇಮಿಯೆಂದೂ ಕರೆದುಬಿಡುವ ರೂಢಿಯೂ ಇದ್ದಂತೆ ಕಾಣುತ್ತದೆ. ಅದರಂತೆಯೇ ನೇಮಿಯೆಂಬುವನು ಈ ಕಾಲದ ಸೇನಾನಿ.

ಕೃತಿಕಾರರ ಪ್ರಕಾರ ಸುರತಾಳ ಮತ್ತು ನೇಮಿಗಳಿಬ್ಬರೂ ಬಹು ಪರಾಕ್ರಮಶಾಲಿಗಳು. ವೈಭವಯುತರು; ಆಕಾಶದಲ್ಲಿರುವ ನಕ್ಷತ್ರಮಂಡಲ ವನ್ನಾದರೂ ಎಣಿಸಬಹುದು, ಸುಲ್ತಾನನ ವಜೀರ ಮಲ್ಲುಕರ ಸಂಖ್ಯೆಯನ್ನು ಎಣಿಸುವುದಕ್ಕಾಗುವುದಿಲ್ಲ ಎಂಬುದು ನಂಜುಂಡನ ಮಾತು. ಅವರ ಅಸಾಧಾರಣವಾದ ಬಲ ಪರಾಕ್ರಮಗಳನ್ನು ಕವಿಗಳಿರ್ವರೂ ಮುಕ್ತಕಂಠ ದಿಂದ ಸ್ತೋತ್ರ ಮಾಡಿದ್ದಾರೆ.

ಸುಲ್ತಾನನಿಗೆ ಪ್ರೇಮಪಾತ್ರಳಾದ ಮಗಳಿದ್ದಳು. ಅವಳು ಕುಮಾರ ರಾಮನಲ್ಲಿ ಅನುರಕ್ತಳಾದುದನ್ನು ತಿಳಿದು ಅವನನ್ನು ಬರಮಾಡಿಕೊಳ್ಳಲು ಮಾಡಿದ ಪ್ರಯತ್ನವು ವ್ಯರ್ಥವಾಯಿತು. ಅಲ್ಲದೆ ಸುರತಾಳನ ಆಗ್ರಹಕ್ಕೆ ಪಾತ್ರನಾಗಿದ್ದ ಬಹದೂರ್‌ಷಹನಿಗೆ ರಾಮನು ಆಶ್ರಯವನ್ನಿತ್ತಿದ್ದನು. ಅವನನ್ನು ಬಿಟ್ಟು ಕಳುಹಿಸಬೇಕೆಂದು ಕಂಪಿಲನಿಗೆ ಸುರತಾಳನಿಂದ ಆಜ್ಞೆ ಬಂದಿತ್ತು. ಅದನ್ನೂ ರಾಮನು ಮನ್ನಿಸದಿದ್ದುದು ಚಕ್ರವರ್ತಿಯನ್ನು ಮತ್ತಷ್ಟು ರೇಗಿಸಿತು. ಕ್ರುದ್ಧನಾದ ಸುರತಾಳನು ನೇಮಿಯ ನೇತೃತ್ವ

ದಲ್ಲಿ ದೊಡ್ಡ ಸೈನ್ಯವನ್ನು ಕುಮ್ಮಟದ ಮೇಲೆ ಕಳುಹಿಸಿದನು. ದೊಡ್ಡ ಯುದ್ಧವಾಗಿ ತುರುಕರಿಗೆ ಪರಾಭವವಾಯಿತು. ಈ ಮಧ್ಯೆ ರತ್ನಾಜಿಯ ಪ್ರೇಮ ಪ್ರಸಂಗದ ಫಲವಾಗಿ ರಾಮನು ಮಡಿದನೆಂಬ ಸುದ್ದಿಯು ಡೆಹಲಿಗೂ ತಲುಪಿ ಪುನಃ ನೇಮಿಯು ಎರಡನೆಯ ಸಲ ಧಾಳಿಯಿಟ್ಟನು. ಈಸಲ ಮಂತ್ರಿಯಾದ ಬೈಚಪ್ಪನ ಕೌಶಲದಿಂದ ನೆಲಮಾಳಿಗೆಯಲ್ಲಿಡಲ್ಪಟ್ಟಿದ್ದ ರಾಮನು ಹೊರಗೆ ಬಂದು ಮಹಮ್ಮದೀಯ ಸೈನ್ಯವನ್ನು ನಾಶಪಡಿಸಿದನು. ಖಿನ್ನನಾದ ಸುರತಾಳನಿಗೆ ಅವನ ಆಸ್ಥಾನದಲ್ಲಿದ್ದ ಮಾದಿಗ ಜಾತಿಯವಳಾದ ಮಾತಂಗಿಯು ತಾನು ರಾಮನನ್ನು ಹಿಡಿದು ತರುವುದಾಗಿ ವಾಗ್ದಾನ ಮಾಡಿ ಬಹು ದೊಡ್ಡ ಸೈನ್ಯದೊಡನೆ ಹೊರಟು ಕುಮ್ಮಟವನ್ನು ಮುತ್ತಿ ಪರಾಜಿತಳಾಗಿ ಕೊನೆಗೆ ಅಲ್ಲಿಯೇ ಇದ್ದ ತೆಲುಗರ ಮೋಸದಿಂದ ರಾಮನ ತಲೆಯನ್ನು ತರಿದು ಡೆಲ್ಲಿಗೆ ಕಳುಹಿಸಿದಳು. ರಾಮನೊಡನೆ ಕಂಪಿಲ ರಾಜ್ಯವು ಕೊನೆಗೊಂಡಿತು. ಮಹಮ್ಮದೀಯರು ಕುಮ್ಮಟವನ್ನಾಕ್ರಮಿಸಿದರು. ಒಂದೆರಡು ವರ್ಷಗಳಾದ ಮೇಲೆ ರಾಮನ ಸ್ವಾಧೀನದಲ್ಲಿದ್ದ ಭಂಡಾರದ ಅಧಿಕಾರಿಗಳಾಗಿದ್ದ ಹಕ್ಕ ಬುಕ್ಕರೇ ಅಲ್ಲಿಗೆ ರಾಜಪ್ರತಿನಿಧಿಗಳಾಗಿ ನೇಮಕವಾದರು. ಅವರೇ ಮುಂದೆ ಆರ್ಷೇಯ ಧರ್ಮಸಂಸ್ಥಾಪನೆಗಾಗಿ ವಿದ್ಯಾತೀರ್ಥ ಸ್ವಾಮಿಗಳ ಸಹಾಯದಿಂದಲೂ ಸಮಸ್ತ ಪ್ರಜಾವರ್ಗದ ನೆರವಿನಿಂದಲೂ ವಿಜಯನಗರವನ್ನು ಸ್ಥಾಪಿಸಿದರು.

ಈ ಐತಿಹಾಸಿಕಾಂಶಗಳು ಸಮಕಾಲೀನ ಸಾಹಿತ್ಯದಿಂದಲೂ ವಿದೇಶೀಯ ಪ್ರವಾಸಿಗಳಿಂದಲೂ ಶಾಸನ ಸಾಹಿತ್ಯದಿಂದಲೂ ಪರಿಪುಷ್ಟವಾಗಿವೆ. ರಾಮನ ಮತ್ತು ಅವನ ಸಂಬಂಧವಾದ ಸ್ಮಾರಕಗಳು ಈಗಲೂ ಇದರ ಸತ್ಯಾಂಶವನ್ನು ಉದ್ಘೋಷಿಸುತ್ತವೆ. ಈಗಲೂ ಆನೆಗುಂದಿಯಿಂದ ಆರು ಮೈಲಿಯ ದೂರದಲ್ಲಿ ಗಿಣಿಗೆರೆ ರೈಲ್ವೆ ನಿಲ್ದಾಣಕ್ಕೆ ಸುಮಾರು ೧೨ ಮೈಲಿಯ ದೂರದಲ್ಲಿ ಮುಕ್ಕುಂಪೆ ಎಂಬ ಗ್ರಾಮದ ಸಮೀಪದಲ್ಲಿರುವ ಬಸಲೇ ಕಲ್ಲಪ್ಪನ ಗುಡ್ಡ, ನಚ್ಚಿಣಿಗೆ ಗುಡ್ಡ, ಬಿಲ್ಲೇದ ಗುಡ್ಡ, ಬಂಡೇಗುಡ್ಡ, ಹನುಮಂತದೇವರ ಗುಡ್ಡ, ಮಾದಿಗರ ಹಂಪಯ್ಯನಗುಡ್ಡ, ಕುಮಾರರಾಮನ ಗುಡ್ಡ ಎಂಬ ದೀರ್ಘವರ್ತುಲಾಕಾರದಲ್ಲಿರುವ ಏಳು ಗುಡ್ಡಗಳ ಮಧ್ಯಭಾಗದ ಮೈದಾನದಲ್ಲಿ ಕುಮ್ಮಟದುರ್ಗದ ಅವಶೇಷಗಳನ್ನು ನೋಡಬಹುದು. ಈ ಭಾಗ

ಗಳು ಹುಲ್ಲು ಪೊದೆಗಳಿಂದ ಆವೃತವಾಗಿವೆ. ಈ ಗುಡ್ಡಗಳ ಮಧ್ಯಭಾಗದಲ್ಲಿ ಮೂರು ಕೋಟೆಗಳಿಂದ ಆವೃತವಾದ ದುರ್ಗದ ಅವಶೇಷಗಳಿವೆ. ಮಧ್ಯೆ ಮಧ್ಯೆ ಕಣಿವೆಗಳಿವೆ. ಕಣಿವೆಗಳಿಗೆ ಅಭಿಮುಖವಾಗಿ ಶತ್ರುಗಳು ಪ್ರವೇಶ ಮಾಡುವುದಕ್ಕಾಗದಂತೆ ಕುದುರೆಕಲ್ಲೆಂಬ ಕಲ್ಲಿನ ರಾಶಿಗಳು ಅಡ್ಡಲಾಗಿವೆ. ಮೈದಾನದ ಒಳಗಡೆಯೇ ಹೊಸ ಮತ್ತು ಹಳೆಯ ಕುಮ್ಮಟಗಳಿವೆ. ಸುತ್ತಲಿನ ಗುಡ್ಡಗಳನ್ನು ದಾಟಿಕೊಂಡು ಒಳಕ್ಕೆ ಪ್ರವೇಶಮಾಡುವವರೆಗೂ ಅದು ಎಷ್ಟು ಅಭೇದ್ಯವೆಂಬುದು ತಿಳಿದು ಬರುವುದಿಲ್ಲ. ಹೊಸ ಕುಮ್ಮಟಕ್ಕೆ ಹೋಗುವ ದಾರಿಯಲ್ಲಿ ಒಂದು ಬಂಡೆಗೆ ಸಿಕ್ಕಿಕೊಂಡಿರುವ ಸರಳನ್ನು ರಾಮನು ಕೊನೆಯ ಸಲ ಮಾತಂಗಿಯ ಮೇಲೆ ಪ್ರಯೋಗ ಮಾಡಿದನೆಂದು ತೋರಿಸುತ್ತಾರೆ. ಹೊಸ ಕುಮ್ಮಟದಲ್ಲಿ ಮೇಲೆ ಅಭೇದ್ಯವಾದ ದುರ್ಗದ ಅವಶೇಷವೂ ಕೆಳಗೆ ಪೇಟೆಯ ಕುರುಹುಗಳೂ ಕಾಣುವುವು. ಅವುಗಳ ಸುತ್ತಲಿರುವ ಕೋಟೆಯು ೫ ಮೈಲಿಗಳಷ್ಟಿರಬಹುದು. ಕೋಟೆಗಳ ಸುತ್ತಲೂ ಕಂದಕಗಳಾಗಲಿ ಬುರುಜುಗಳಾಗಲಿ ಇಲ್ಲ. ಕೋಟೆಯ ಮಧ್ಯದಲ್ಲಿರುವ ಅಂಗಳದಲ್ಲಿ ಕೆಲವು ವೀರಗಲ್ಲುಗಳು, ಚಿಂತಾಲುಕಲ್ಲು, ಬೈಚಪ್ಪನ ಗುಡಿ, ಕುಮಾರ ರಾಮನ ಶಿಲಾವಿಗ್ರಹಗಳಿವೆ. ಹೆಡೆ ಬಿಚ್ಚಿದ ಸರ್ಪದ ಅಡಿಯಲ್ಲಿ ಕತ್ತಿ ಗುರಾಣಿಗಳನ್ನು ಹಿಡಿದು ಬೊಲ್ಲನ ಮೇಲೆ ಕುಳಿತಿರುವ ಶಿಲಾ ವಿಗ್ರಹವು ಕುಮಾರ ರಾಮನ ಪಡಿಯಚ್ಚಿನಂತಿದೆ. ವೀರಗಲ್ಲಿನಲ್ಲಿರುವ ಶಿಲ್ಪವು ರಾಮನು ಕೈಲಾಸಕ್ಕೆ ಹೋಗುವುದನ್ನು ಚಿತ್ರಿಸುವಂತಿದೆ. ಮಧ್ಯದಲ್ಲಿರುವುದೇ ಕುಮಾರ ರಾಮನ ದುರ್ಗ. ಇದು ಮತ್ಸ್ಯಾಕಾರವಾಗಿದೆ. ಇದರ ಪಕ್ಕದಲ್ಲಿರುವ ಮತ್ತೊಂದು ವೀರಗಲ್ಲು ಕುಮಾರ ರಾಮನನ್ನು ಅಪ್ಸರೆಯರು ಪಲ್ಲಕ್ಕಿಯಲ್ಲಿ ಒಯ್ಯುವುದನ್ನು ಸೂಚಿಸುತ್ತದೆ. ಅಲ್ಲಿಂದ ಕೋಟೆಯನ್ನು ದಾಟಿ ಮುಂದೆ ಹೋದರೆ ಜಟ್ಟಂಗಿ ರಾಮೇಶ್ವರ ದೇವಾಲಯವಿದೆ. ಒಳಗೆ ವಿಗ್ರಹಗಳಾವುವೂ ಇಲ್ಲ. ಲಿಂಗಾಕಾರದ ಒಂದು ಕಲ್ಲಿನ ಸುತ್ತಲೂ ಎಂಟು ಕಲ್ಲುಗಳಿವೆ. ಈಗ ಇಲ್ಲಿ ಪೂಜೆ ನಡೆಯುತ್ತಿಲ್ಲ. ವರ್ಷಕ್ಕೊಂದು ಸಲ ವೈಶಾಖ ಶುದ್ಧ ಪೌರ್ಣಿಮೆಯ ದಿನ ಇಲ್ಲಿ ಜಾತ್ರೆ ನಡೆಯುವುದು. ಈದಿನ ಎರಡು ಬೇರೆ ಬೇರೆ ಹಳ್ಳಿಗಳಿಂದ ಒಂದೊಂದು ತಲೆಯನ್ನು ಮಾಡಿ

ತಂದು ಪೂಜಿಸಿ ಅನೇಕ ಆಹುತಿಗಳನ್ನು ಕೊಡುತ್ತಾರೆ. ಈ ಕಾಲದಲ್ಲಿ ಕುಮಾರ ರಾಮನ ಊಟವೆಂಬ ಒಂದು ದೊಡ್ಡ ಭೋಜನಕೂಟ ನಡೆಯುತ್ತದೆ.

ಜಟ್ಟಂಗಿ ರಾಮೇಶ್ವರ ದೇವಾಲಯದ ಮುಂದೆ ಮತ್ತೊಂದು ವೀರ ಗಲ್ಲಿದೆ. ಇದರಲ್ಲಿ ರಾಮನು ಲಿಂಗೈಕ್ಯವಾಗುವುದೂ ಸೂಚಿತವಾಗಿದೆ. ಇದರ ಪಕ್ಕದಲ್ಲಿಯೇ ಒಂದು ಕುದುರೆಯ ಚಿತ್ರವಿರುವ ಕಲ್ಲಿದೆ. ಇದು ಬೊಲ್ಲನ ಚಿತ್ರವಿರಬೇಕು. ಮುಂದೆಯೇ ಬೊಲ್ಲನ ಹೆಜ್ಜೆಯ ಗುರುತುಗಳೆಂಬ ಹಳ್ಳಗಳಿವೆ. ಇಲ್ಲಿಂದ ಮುಂದೆ ಪೂರ್ವದಲ್ಲಿ ಎತ್ತರವಾದ ಒಳಕೋಟೆ ಯಿದೆ. ಅದು ಅಂಡಾಕಾರವಾಗಿದೆ. ಇಲ್ಲಿ ಒಂದರಲ್ಲೊಂದು ಅಂಗಳ ಗಳಿವೆ. ಒಳಗಿನ ಕೋಟೆಯ ಉತ್ತರದ ದ್ವಾರದಲ್ಲಿ ತುಂಗಭದ್ರೆಯ ದರ್ಶನವಾಗುತ್ತದೆ. ನೈಋತ್ಯದಲ್ಲಿ ರಾಮನ ದೋಣೆಯೆಂಬ ಕೊಳವಿದೆ. ಕೋಟೆಗೆ ಉತ್ತರದಲ್ಲಿ ದೊಡ್ಡ ಅಂಗಳವಿದೆ. ಇಲ್ಲಿಯೇ ಜೋಹರ್ ನಡೆದಿರಬೇಕು. ಕುಮಾರ ರಾಮನ ಗುಡ್ಡಕ್ಕೆ ಎದುರಿಗೆ ಕಾಟಪ್ಪನ ಗುಡ್ಡ ಗುಲಗಂಜಿಯ ಗುಡ್ಡಗಳಿವೆ. ಇವುಗಳ ಮಧ್ಯೆ ಬೊಲ್ಲನ ಗುಂಡು, ಬೊಲ್ಲನ ಕೆರೆ ಮೊದಲಾದುವು ಇವೆ. ಮುಕ್ಕುಂಪೆ ಊರಿನಿಂದ ಪೂರ್ವಕ್ಕೆ ಪಾಪಾಸ್ ಗುಡ್ಡವಿದೆ. ಇದರ ಸಮೀಪದಲ್ಲಿ ಬಹದೂರ್ ಬಂಡೆಯಿದೆ. ಇವೇ ಅಲ್ಲದೆ ಕರ್ಣಾಟಕದ ಅನೇಕ ಕಡೆಗಳಲ್ಲಿ ಕುಮಾರ ರಾಮನ ಹೆಸರನ್ನು ಅನುವದಿಸುವ, ಆತನ ವಿಗ್ರಹಪ್ರತಿಷ್ಠೆ ಮಾಡಿರುವ, ಆತನ ಶೌರ್ಯ ಪ್ರತಾಪಗಳನ್ನು ಕೊಂಡಾಡುವ ಕೆಲವು ಶಾಸನಗಳಿವೆ. ಇವೆಲ್ಲವೂ ರಾಮನ ಪ್ರಾಶಸ್ತ್ಯವನ್ನೂ ಆತನ ವಿಷಯಕವಾದ ಚರಿತ್ರೆಯ ಸತ್ಯಾಂಶಗಳನ್ನೂ ದೃಢೀಕರಿಸುತ್ತವೆ.

ನಂಜುಂಡನ ಪರದಾರ ಸೋದರ ರಾಮನ ಕತೆ: ಇದುವರೆಗೆ ಸಿಕ್ಕಿರುವ ಕುಮಾರ ರಾಮನ ವಿಷಯಕವಾದ ಗ್ರಂಥಗಳಲ್ಲಿ ನಂಜುಂಡನ ಕೃತಿಯೇ ಪ್ರಾಚೀನತಮವಾದುದು. ಕವಿಚರಿತೆಕಾರರ ಅಭಿಪ್ರಾಯದಂತೆ ಈ ಗ್ರಂಥವು ಸುಮಾರು ೧೫೨೫ರಲ್ಲಿ ರಚಿತವಾಗಿರಬಹುದಾದುದರಿಂದ ಇದು ನಾಯಕನು ಬಾಳಿದ ಕಾಲಕ್ಕಿಂತ ಸುಮಾರು ೨೦೦ ವರ್ಷಗಳ ಈಚಿನದು. ಜನಜನಿತವಾದ ಕತೆಯ ಆಧಾರದ ಮೇಲೆಯೇ ಇಷ್ಟು

ವಿಷಯಪೂರ್ಣವಾದ ಬೃಹತ್ಕೃತಿಯನ್ನು ರಚಿಸುವುದು ಸುಲಭಸಾಧ್ಯವಲ್ಲದು ದರಿಂದ ಇದೂ ಮತ್ತು ಇದರ ಮುಂದೆ ಬಂದ ಗ್ರಂಥಗಳು ಇದಕ್ಕಿಂತ ಪ್ರಾಚೀನವಾದ ಮತ್ತಾವುದೋ ಗ್ರಂಥದ ಆಧಾರದ ಮೇಲೆ ರಚಿತವಾಗಿರ ಬೇಕು. ಅದಾವುದೂ ಉಪಲಬ್ಧವಲ್ಲದುದರಿಂದ ಇದಕ್ಕೆ ಆಕರವಾವು ದೆಂದು ನಿರ್ಧರಿಸುವುದು ಕಷ್ಟವಾಗುತ್ತದೆ. ಗ್ರಂಥದ ಪ್ರಾರಂಭದ ಸುಮಾರು ಅರ್ಧಕ್ಕಿಂತ ಹೆಚ್ಚಿನ ಭಾಗವು ರಾಮನ ಶೌರ್ಯ ವೀರ್ಯ ಪರಾಕ್ರಮ ದ್ಯೋತಕವಾದ ವಿಷಯಗಳನ್ನೇ ಕುರಿತವುಗಳೇ ಆಗಿದ್ದರೂ ಗ್ರಂಥಕ್ಕೆ 'ಪರದಾರ ಸೋದರ ರಾಮನ ಕತೆ' ಎಂದು ನಾಮಕರಣಮಾಡಿರುವುದನ್ನು ನೋಡಿದರೆ ಕವಿಯ ದೃಷ್ಟಿ ರಾಮನ ಪರಾಕ್ರಮದ ಕಡೆಯಿರದೆ ಶೌಚಗುಣದ ಕಡೆಯಿರುವುದು ಸ್ಪಷ್ಟವಾಗುತ್ತದೆ. ಪೌರುಷಕ್ಕಿಂತ ಚಾರಿತ್ರ್ಯಕ್ಕೆ ಉನ್ನತ ಸ್ಥಾನವನ್ನು ಕಲ್ಪಿಸಿ ನಾಯಕನನ್ನು ಆದರ್ಶವ್ಯಕ್ತಿಯನ್ನಾಗಿ ಮಾಡುವುದು ಕವಿಯ ಆಶಯವಿರಬಹುದು. ಆದಕ್ಕಾಗಿಯೇ ಕವಿಯು ಐತಿಹಾಸಿಕ ವ್ಯಕ್ತಿಯಾದ ರಾಮನನ್ನು ಅವತಾರ ಪುರುಷನನ್ನಾಗಿಯೂ ಅಂಶಪುರುಷ ನನ್ನಾಗಿಯೂ ಉತ್ತಮ ಶಿವಭಕ್ತನನ್ನಾಗಿಯೂ ಮಾರ್ಪಡಿಸಿದ್ದಾನೆ. ಆದುದರಿಂದ ಕಥಾಗರ್ಭದಲ್ಲಿ ಕೆಲವು ಮಾರ್ಪಾಟುಗಳಾಗಿವೆ. ರಾಮನು ಅರ್ಜುನನ ಅಪರಾವತಾರ. ಶಿವಪಾರ್ವತಿಯರ ಯಾವುದೋ ಮನ ಸ್ತಾಪದ ಫಲವಾಗಿ ಆತನು ಭೂಲೋಕದಲ್ಲಿ ಜನಿಸಬೇಕಾಗುತ್ತದೆ. ಆತ ನಿಂದ ತಿರಸ್ಕೃತಳಾದ ಊರ್ವಶಿಯೇ ಅವನ ಪರೀಕ್ಷಾರ್ಥವಾಗಿ ಭೂಮಿ ಯಲ್ಲಿ ರತ್ನಾಜಿಯಾಗಿ ಹುಟ್ಟುತ್ತಾಳೆ. ಹಿಂದೆ ಅವನ ಶತ್ರುಗಳಾಗಿದ್ದ ರಾಕ್ಷಸರು ಇಂದು ತುರುಕರಾಗಿ ಹುಟ್ಟಿ ಧರ್ಮಘಾತುಕರಾಗುತ್ತಾರೆ. ಅವರನ್ನು ಸಂಹರಿಸಿ ಧರ್ಮ ಸಂಸ್ಥಾಪನೆಯನ್ನು ಮಾಡುವುದಕ್ಕಾಗಿಯೇ ಈತನು ಜನಿಸಿರುವುದು. ಆ ಕಾರ್ಯದಲ್ಲಿ ಯಶಸ್ವಿಯನ್ನಾಗಿ ಮಾಡುವುದಕ್ಕಾ ಗಿಯೇ ಈಶ್ವರನ ಆಜ್ಞೆಯ ಪ್ರಕಾರ ಇಂದ್ರನು ತನ್ನ ಉಚ್ಚೈಃಶ್ರವಸ್ಸಿನ ಅಂಶ ವನ್ನು ವನಾಯುದೇಶದಲ್ಲಿ ಕುದುರೆಯ ರೂಪದಲ್ಲಿ ಹುಟ್ಟುವ ಹಾಗೆ ಮಾಡು ತ್ತಾನೆ. ಅಲ್ಲದೆ ಅದೇ ಸಂದರ್ಭದಲ್ಲಿ ಬಾಳನ್ನೂ ಭಲ್ಲೆಯನನ್ನೂ ಶರಜಾಲ ಸಹಿತವಾದ ಶಾರ್ಙ್ಗವೊಂದನ್ನೂ ದೊರಕಿಸುತ್ತಾನೆ. ಪೂರ್ವಜನ್ಮದ ಮೋಹವೇ ರತ್ನಾಜಿಯ ಈ ಜನ್ಮದ ಕಾಮಕ್ಕೆ ಕಾರಣ. ಅಂದಿನ

ಅರ್ಜುನನಾಗಿರುವುದರಿಂದಲೇ ಇಂದು ಇಂತಹ ಮೋಹಕ್ಕೆ ಸಿಕ್ಕಿದರೂ ತಪ್ಪಿಸಿಕೊಳ್ಳಲು ಸಾಧ್ಯವಾಗುತ್ತದೆ. ಇವನ ತಲೆಯನ್ನು ತರಬೇಕೆಂದು ಕಂಪಿಲನು ಆಜ್ಞೆಮಾಡಿದಾಗ ಅವನನ್ನು ಉಳಿಸುವುದಕ್ಕೆ ಬೈಚಪ್ಪನು ಐಂದ್ರಜಾಲಿಕ ಮಂತ್ರಗಳ ಸಹಾಯದಿಂದ ಇಂದ್ರನನ್ನು ಒಲಿಸಿಕೊಳ್ಳುತ್ತಾನೆ. ಅವನಿತ್ತ ದೂತನ ಸಹಾಯದಿಂದ ತನಗೆ ಬೇಕಾದ ಎಲ್ಲ ಸೌಕರ್ಯಗಳನ್ನು ಕಲ್ಪಿಸಿಕೊಳ್ಳುತ್ತಾನೆ. ಇಂದ್ರದೂತನು ಎಲ್ಲರ ಪಡಿರೂಪಗಳನ್ನೂ ನಿರ್ಮಿಸಿ ಸೌಲಭ್ಯವನ್ನುಂಟುಮಾಡುತ್ತಾನೆ. ರಾಮನಿಗೆ ಪ್ರತಿಯೊಂದು ಸಂದರ್ಭದಲ್ಲಿಯೂ ತನ್ನ ಅವತಾರದ ಉದ್ದೇಶ ಸ್ಪಷ್ಟವಾಗಿ ಗೊತ್ತಿರುತ್ತದೆ. ಅವನು ಎಷ್ಟು ಎಚ್ಚರದಿಂದಿದ್ದರೂ ದೇವತೆಗಳ ಕೈವಾಡವು ಪ್ರಬಲವಾಗಿರುತ್ತದೆ. ರತ್ನಾಜಿಯ ಸಖಿಯಾದ ಸಂಗಿಯು ಕುಟಿಲ ದೇವತೆಗಳ ವರಪ್ರಸಾದದಿಂದ ರಾಮನು ರತ್ನಾಜಿಯ ಅರಮನೆಗೆ ಹೋಗುವ ಹಾಗೆ ಮಾಡುತ್ತಾಳೆ. ಅಮಾನುಷಶಕ್ತಿಯುಳ್ಳವನಾದುದರಿಂದಲೇ ಆ ಸನ್ನಿವೇಶವನ್ನು ದಾಟಿ ಬರಲು ರಾಮನಿಗೆ ಸಾಧ್ಯವಾಯಿತು. ರಾಮನು ತನ್ನ ಅಸಾಧಾರಣವಾದ ಶಕ್ತಿಯಿಂದ ತನ್ನ ಅವತಾರಕಾರಣವಾದ ಮ್ಲೇಚ್ಛರ ಧ್ವಂಸವನ್ನು ಮುಗಿಸಿದ ಮೇಲೆ ತನ್ನ ಅಂತ್ಯವನ್ನು ಅರಿತು ತಾನೇ ಅಂತಃಪುರಕ್ಕೆ ಹೋಗಿ ರಾಣಿವಾಸದವರಿಗೂ ತಂದೆ ತಾಯಿಗಳಿಗೂ ತಿಳಿಸಿ ಬಂದು ಯುದ್ಧಮಾಡಿ ಸ್ವಲ್ಪ ಅಶಕ್ತನಾದಾಗ ಹೃದಯ ಕಮಲದಲ್ಲಿ ಈಶ್ವರನನ್ನು ಧ್ಯಾನಿಸುತ್ತ ಸಮಾಧಿ ಸ್ಥಿತಿಯಲ್ಲಿರುವಾಗ ಶತ್ರುಗಳು ಅವನ ಪಾರ್ಥಿವ ಶರೀರದ ಮೇಲೆ ಕೈಮಾಡಿ ತಲೆಯನ್ನು ತೆಗೆದುಕೊಂಡು ಹೋಗುವರು. ಆ ವೇಳೆಗೆ ಸರಿಯಾಗಿ ಕೈಲಾಸದಿಂದ ಅಚ್ಯುತ ಕಲ್ಪ ವಿಮಾನವು ಬಂದು ರಾಮನನ್ನು ಕರೆದುಕೊಂಡುಹೋಗಿ ಪಾರ್ವತೀಪರಮೇಶ್ವರರ ಮುಂದಿಳಿಸುತ್ತದೆ. ಪರಮಹರ್ಷದಿಂದ ಮುಂಭಾಗದಲ್ಲಿ ಮಣಿದು ನುತಿಸಿದ ಕುವರನನ್ನು ಈಶನು ಆನಂದ ಕೈಮಿಗೆ ಮೆಯ್ದಡವಿ, 'ಎರಡು ಜನ್ಮದೊಳು ಬಂದೂರ್ವಶಿ ಮೇಲಿಕ್ಕೆ ಪರಿಹರಿಸಿದನೊಲ್ಲದವಳ; ಸುರನರೋರಗರೊಳಿಂತಪ್ಪ ಶುಚಿಗಳಿಲ್ಲ' ಎಂದು ಕೊಂಡಾಡಿ ರಾಜಶೇಖರನು ಗಣಪದವಿಯನ್ನಿತ್ತು ಪ್ರಮಥರ ಪಂಕ್ತಿಯೊಳಗೊಲಿದೊಂದಿಸಿದನು. ತುರುಕರು ತೆಗೆದುಕೊಂಡು ಹೋದ ತಲೆಯು ಸ್ವಲ್ಪವೂ ಕಳೆ

ಗುಂದದೆ ಬಣ್ಣವಳಿಯದೆ ಗಂಗೆಯಲ್ಲಿ ತೇಲಿಬಿಟ್ಟಾಗ ಲಿಂಗವಾಗಿ ಮಾರ್ಪಟ್ಟಿತು.

ಈ ವಿಧವಾದ ಮಾರ್ಪಾಟಿನಿಂದ ಕೆಲವು ಸಮಸ್ಯೆಗಳು ಪರಿಹಾರ ವಾಗಿ ವಾಚಕರಿಗೆ ಆಶ್ಚರ್ಯವನ್ನೂ ವಿಸ್ಮಯವನ್ನೂ ಉಂಟುಮಾಡಿದರೂ ಇದು ಐತಿಹಾಸಿಕ ವ್ಯಕ್ತಿಯ ಸಹಜಮಾನವತ್ವವನ್ನು ಸ್ವಭಾವ ಸನ್ನಿವೇಶ ಗಳನ್ನು ಮರೆಮಾಡುತ್ತದೆ. ಈ ದೃಷ್ಟಿಯಿಂದ ನೋಡುವುದಾದರೆ ಗಂಗನ ಕೃತಿಯೂ ನಾಗಸಂಗಯ್ಯನ ಸಾಂಗತ್ಯವೂ ಹೆಚ್ಚು ವಾಸ್ತವಿಕವಾಗಿವೆ; ಆತ್ಮೀಯವಾಗಿವೆ. ಸಹಜಸನ್ನಿವೇಶ ಚಿತ್ರಣಗಳಿಂದ ಕೂಡಿವೆ; ನಾಯಕನ ಮಹತ್ವವನ್ನು ಹೆಚ್ಚಿಸುವಂತಹುದಾಗಿವೆ. ವನಾಯ ದೇಶದಿಂದ ಅನಾಯಾಸ ವಾಗಿ ಕುದುರೆಯು ರಾಮನಿಗೆ ದೊರಕಿತೆಂದೂ ಅದು ಈಶ್ವರೇಚ್ಛೆಯಿಂದ ಅವನಿಗೆ ಅಡಿಯಾಳಾಯಿತೆಂದೂ ಹೇಳುವುದಕ್ಕಿಂತ, ಮುಂಗಲಿ, ಓರಂಗಲ್ ಡೆಲ್ಲಿ ಅರಸರುಗಳಿಗೆ ಬಗ್ಗದ ಕುದುರೆಯನ್ನು ರಾಮನು ಎಪ್ಪಟೆ ರಾಜನ ಮೇಲೆ ಪೌರುಷ ಪ್ರದರ್ಶನದಿಂದ ಸೆಳೆದುಕೊಂಡನೆಂಬುದು ನಾಯಕನ ಪೌರುಷಕ್ಕೆ ಪುಷ್ಟಿಯನ್ನು ಕೊಡುವುದಿಲ್ಲವೆ ? ರತ್ನಾಜಿಯ ಪ್ರೇರಣೆಗೆ ಒಳಗಾಗದಿದ್ದುದು ಅರ್ಜುನಾಂಶದಿಂದ ಎನ್ನುವುದಕ್ಕಿಂತ ರಾಮನ ಸಹಜ ಚಿತ್ತಸ್ಥೈರ್ಯದ ಫಲವಾಗಿ ಎಂದು ಹೇಳುವುದು ಮತ್ತೂ ಆಕರ್ಷಕ ವಾಗಿಲ್ಲವೆ? ರಾಮನ ತಲೆಯನ್ನು ಛೇದಿಸಬೇಕಾಗಿ ಬಂದಾಗ ಇಂದ್ರ ದೂತನ ಸಹಾಯದಿಂದ ಪಡಿ ರೂಪಗಳನ್ನು ನಿರ್ಮಿಸುವುದಕ್ಕೆ ಬದಲಾಗಿ ಕಳ್ಳಬಂಟ ರಾಮನೆಂಬುವನು ತನ್ನ ತಲೆಯನ್ನು ತೆತ್ತನೆಂಬುದರಲ್ಲಿ ರಾಮನಲ್ಲಿ ಅವನ ಬಂಟರಿಗಿದ್ದ ಸ್ವಾಮಿಭಕ್ತಿಯು ಎಷ್ಟು ಸ್ಪಷ್ಟವಾಗಿ ಪ್ರದರ್ಶಿತವಾಗುವುದು ? ಸಮಾಧಿಸ್ಥಿತಿಯಲ್ಲಿದ್ದಾಗ ರಾಮನ ತಲೆಯನ್ನು ಶತ್ರುಗಳು ಕೊಂಡೊಯ್ದರೆಂಬ ಸನ್ನಿವೇಶದಲ್ಲಿ ರಾಮನು ಎಚ್ಚರಿಕೆದಪ್ಪಿ ದಾಗ ಅವನಲ್ಲಿಯೇ ಇದ್ದ ತೆಲುಗುಮನ್ನೆಯರ ಮೋಸದಿಂದ ನಿಸ್ಸಹಾಯಕ ನಾಗಿ ಸೋತುಹೋದನೆಂದೂ ಶತ್ರುಗಳು ಬಂದು ತನ್ನ ತಲೆಗಾಗಿ ಯಾಚಿಸಿದಾಗ ತಾನೇ ತನ್ನ ಕೈಯಿಂದ ಕತ್ತರಿಸಿಕೊಟ್ಟನೆಂದು ವರ್ಣಿಸು ವುದು ಎಷ್ಟು ವಾಸ್ತವಿಕವೂ ಹೃದಯವೇಧಕವೂ ಆಗಿದೆ? ಆದರೂ ಕವಿಯು ಈ ಕತೆಯನ್ನು ಒಬ್ಬ ಉಚ್ಚ ಶಿವಭಕ್ತನ ಆದರ್ಶಜೀವನವೆಂಬುದಾಗಿ

ಭಾವಿಸಿ ಅದರ ಚಿತ್ರಣಕ್ಕೆ ಹೊರಟಿರುವುದರಿಂದ ಈ ಸೂರ್ಪಾಟುಗಳನ್ನು ಆ ದೃಷ್ಟಿಯಿಂದ ಮಾತ್ರ ವಿಮರ್ಶಿಸಬೇಕಾಗಿದೆ.

ಮೇಲೆ ತಿಳಿಸಿರುವಂತೆ ರಾಮನ ವೀರ್ಯ ಮತ್ತು ಶೌಚಗುಣಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಕವಿ ನಂಜುಂಡನು ಅಚ್ಚಗನ್ನಡದ ದೇಸಿ ರೀತಿಯಲ್ಲಿ ಉತ್ತಮವಾದ ಈ ಕಾವ್ಯವನ್ನು ರಚಿಸಿದ್ದಾನೆ. ಅವನ ಶೌರ್ಯಗುಣ ಪ್ರಕಾಶಕ್ಕೆ ಸಹಾಯಕವಾದ ಅವನ ಜೈತ್ರಯಾತ್ರೆಗಳು ಪೂರ್ವಭಾಗದಲ್ಲಿಯೂ ಶೌಚಗುಣ ಪ್ರದರ್ಶನಕ್ಕೆ ಉಪಷ್ಟಂಭಕವಾದ ರತ್ನಾಜಿಯ ಮೋಹಪ್ರಸಂಗವು ಉತ್ತರಾರ್ಧದಲ್ಲಿಯೂ ಪ್ರಧಾನವಾದ ಭಾಗಗಳನ್ನಾಕ್ರಮಿಸಿವೆ. ಈ ಎರಡು ವಿಷಯಗಳಿಗೆ ಸಹಾಯಕವಾದ ಬೇರೆ ಬೇರೆ ಸನ್ನಿವೇಶಗಳು ಕಾವ್ಯದಲ್ಲಿ ವರ್ಣಿತವಾಗಿರುವುದರಿಂದ ಕಾವ್ಯದಲ್ಲಿ ಅನುಸ್ಯೂತವಾದ ಬೆಳವಣಿಗೆಯಾಗಲಿ ಏಕರೂಪತೆಯಾಗಲಿ ಇಲ್ಲ. ಕಾವ್ಯದ ಆಕಾರವು ಬೃಹತ್ತಾಗಿ ಬೆಳೆದಿದೆಯೆಂದೇ ಹೇಳಬಹುದು. ಸುಮಾರು ಆರನೆಯ ಒಂದು ಭಾಗದಷ್ಟು ಗ್ರಂಥಪರಿಮಿತಿ ಇರುವ ಪ್ರಸಕ್ತ ಸಂಗ್ರಹವನ್ನು ನೋಡಿದರೆ ಕವಿಯು ಗ್ರಂಥವನ್ನು ಮತ್ತಷ್ಟು ಕಿರಿದನ್ನಾಗಿಸಿದ್ದರೆ ನಷ್ಟವೇನೂ ಆಗುತ್ತಿರಲಿಲ್ಲವೆಂದು ಭಾಸವಾಗುತ್ತದೆ. ಆದರೂ ಕವಿಯ ಕವಿತಾಶಕ್ತಿ ವಿಸ್ಮಯಜನಕವಾದುದು. ಆತನ ವರ್ಣನಾಶಕ್ತಿ, ಪಾತ್ರರಚನಾ ಕೌಶಲ, ಶೈಲಿಯ ಸರಳತೆ ಎಂತಹವರನ್ನೂ ತಲೆದೂಗಿಸುತ್ತದೆ. ಯಾವ ವರ್ಣನೆಯಾಗಿಲಿ ವರ್ಣಿತವಸ್ತುಗಳ, ಸನ್ನಿವೇಶಗಳ ಪ್ರತ್ಯಕ್ಷಾನುಭವವನ್ನುಂಟುಮಾಡುತ್ತದೆ. ಅದರಲ್ಲಿಯೂ ಯುದ್ಧವರ್ಣನೆಯನ್ನು ಮಾಡುವುದೆಂದರೆ ಆತನಿಗೆ ಬಹು ಪ್ರಿಯ. ಬಲು ಭಟರು ಸಿಂಗಾಡಿ, ತರಕಸ, ಲೋಹವಕ್ಕರೆ, ದಾಬೆ, ಹೊಂಗೆಲಸದ ಜೋಡು, ಸವಗ, ಸಿಂಗರಲೋವೆ, ಸೀಸಕ, ತಲೆಯ ರವುಳಿ, ನೈಜೋಡು, ಬೂಡಾಯಿತ, ತಳಪದಕತ್ತಿ, ಸುರಗಿ ಬಹಳ, ಪಂದಿ, ಪೊಟ್ಟಿಟ್ಟ, ಗದೆ, ತಲೆವರೆ ಗುಂಡುಗಳಿಂದ ಸನ್ನದ್ಧರಾಗಿ ಹೊರಡುವರು. ಕೊಟ್ಟಿಗೆ ಕೊಲ್ಲಾರದ ಬಂಡಿಗಳು ಸಾಲಿಟ್ಟವು. ಚೀನಾಂಬರದ ಪೆಟ್ಟಿಗೆಗಳು ತೆರಳಿದವು. ಪೆಟಲಕೋವಿಯ ಬಂಡಿ, ಪೆಟಲ ಬಂಡಿ, ಹುರಿದ ಭರಣಿಯ ಬಂಡಿ, ಉರುಸಿಂಗಿಯ ಬಂಡಿ, ಪೊರಿದಿಟ್ಟವಿತ್ತಿನಬಂಡಿ, ಬಿರಿದುಮ್ಮತ್ತದ ಕಾಯ್ಗಳ ಬೀಜದ ಬಂಡಿ, ಸುರೆಯ ತಿತ್ತಿಯ ಬಂಡಿ,

ಸುರಿದ ಪೀನಿಯಃ ಬಂಡಿ, ವರವತ್ಸನಾಭಿಯ ಅರೆದು ಕೂಡಿದ ಕದನದ ಬಂಡಿ ಸಾಲಿಟ್ಟುವು. ತೊಲೆ, ತಳವರನೂಲಹರಿಗೆ, ಒಡ್ಡರ ಬಂಡಿ, ಬಲೆ, ಹಗ್ಗ, ಮರಳು, ಹಲಗೆ, ಸಬಳದಸಿ, ಹಾವಿನಹೇಳಿಗೆ, ಕೈಕವಣೆ ನೆಱೆಡುವು ದುರ್ಗದೊಳ್. ಆಳುವೇಱಿಯ ಮೇಲೆ ಎಣ್ಣೆ ಕೊಪ್ಪರಿಗೆ ಗಳೆಸೆದುವೆಡಬಲದೊಳು. ಸಾಲಿಕ್ಕಿದವು ಪಂಜಿನ ಹೊರೆಗಳು; ಡೋಳು, ಚೆಂಬಕವರೆ, ಬೀರಣರೆಂಚೆ, ನಿಸ್ಸಾಳ, ಬೊಂಬುಳಿ, ಕೊಂಬು, ಕೊಳಲು, ಒತ್ತಿ ಊದುವ ಚಿನಗಾಳಿ, ಬುರುಗು, ಚಿನ್ನತಿತ್ತಿರಿ, ಶಂಖವಾಸಗಳ ಮೊತ್ತದ ನಾದ ಕೇಳ್ವರ ಕಿವಿವಾಗಲ ಕಿತ್ತುರುಬಿದವು. ಸಂಗರವೆಂಬುದು ಸಮನಂತರ ಸಮುದಿತ ರಾಜಾಂಗಣವೆ ? ಯಮನ ಕಾರಾಗ್ರಹದಂಗಣ ವಲ್ಲವೆ ? ಭಾವನರ್ತನರಂಗವೆ ಜೀವತತಿಯನು ಪಿಂಗಿಸಿ ದೇಹರಾಶಿಯ ಮಾಳ್ಪ ಯಮಖಳರಂಗವಲ್ಲವೇ ? ಎಂದು ರಾಮನು ಭಾವ ಸಂಗಮನೊಡ ನುಸುರಿದನು. ಸಿಂಗಮಱಿ ಮದದಾನೆಯ ಜಂಗುಳಿಯೊಡನೆ ಮಸಗಿದ ಭಂಗಿಯಂತಿದೆ ಸುರತಾಳ ಬಲಕೆ ರಾಮ ಸಂಗರದೊಳು ನಿಂದಿರಲು ಎಂದು ಶಚೀದೇವಿಯೊಡನೆ ದಿವಿಜಪತಿಯುಸುರಿದನು. ಮಸಗಿದ ಕಡಲಂತುರವಣಿ ಯಿಂದ ರಾಮನ ಮೇಲೆ ಸಿಂಗಾಡಿಯ ಸರಳ ಸೂಸಿದರು ಪಟುಭಟರು. ಉದಧಿಯನಿರದೆ ಮಂದರಗಿರಿ ಪೊಕ್ಕುಱಿ ಕದಡುವಂದದೊಳರಿಬಲವ ಕದಲಸಿದ ಕಂಡಕಡೆಗೋಡಿಸಿದನಾ ರಾಮ. ಕರಿಯ ಹಿಂಡನು ಕೇಸರಿ, ಕದಳೀವನಾಂತಪ ಕಾಡಾನೆ ಪೊಕ್ಕಂತೆ ಧುರಧರಣಿಯೊಳು ಕೊಂದನು ಬರಿಕೆಯ್ದನು ಸುರತಾಳಬಲವ ರಾಮ. ತರಣಿಯನೊದವಿ ನಾನಾರೂಪಿನ ಮೇಘ ಪರಿದು ಮುತ್ತುವ ತೆಱದಿಂದ ಹರಿಗೆ ಸಬಳ ಬಿಲ್ಲು ಕರಿ ತುರಗಗಳ ಮೋಹರ ಮುಸುಕಿತು ರಾಮನನು. ಅರೆಗಟ್ಟಿಗೆಗಳ ನಡುವೆ ಸಿಕ್ಕಿದ ಮದವಾರಣದಂತೆ, ಚಿತ್ತದಡವಿಯ ಹಸರದೊಳಗೆ ಹೊಕ್ಕು ಹೊಡಕರಿಸುವ ಸಿಂಗಶಿಶುವಿನಂತೆ ಸಬಳದ ಸಂದಣಿಯೊಳಗಾ ವೀರನೊಪ್ಪಿದನು. ಹೊಡಿದ ಮಂಡಿ, ನೀಡಿದ ಕೈ, ಕಿವಿಯನು ಕೂಡಿದ ತಿರು, ರಿಪುಭಟರ ನೋಡುವ ಕಣ್ ನೆಲಸಿರಲ್ ಅಂಬುಗಳು ಬಿಡದೋಡುತಿರ್ದುವು ಬಿಲ್ಲಿಂದ. ಕಟ್ಟಿದಂತಿರೆ ತಿರು ಕಿವಿಯೊಳು ಶರಜಾಲಪುಟ್ಟಿದಂತಿರೆ ಬೆನ್ನೊಳು ಕಣೆ ಯರೆಯಟ್ಟುತಿರ್ದುವು ಖಾನರನು. ಬಿಡಲು ಮೆಯುದಡವಿ ಗಿಡಗ ಗಿಳಿವಿಂಡ

ಕೊಡ ಕೊಡಹಿ ಕೊಲುವಂತೆ ಕಡುಗಲಿ ರಾಮನೆಸಲು ಕೂರ್ಗಣೆಗಳು ಬಿಡದೆ ಕೊಂಡವು ರಿಪುಗಳನು. ಸುರಚಾಪ ಬಿಲ್ಲು, ಆ ಬಿಲ್ಲಟಂಕೃತಿಗೊಳಗು ಉರುಶರಜಾಲ ಜಿಕ್ಸರಿಯು ಇರವಾಗಲಾ ರಾಮ ಮಳೆಗಱೆವಿಂದ್ರನ ಪರಿಯಂತೆಸೆದನಾಜಿಯೊಳ್. ಪಿಳುಕ ಪಿಳುಕು ಕರ್ಚಿಕೊಂಡು ಪರಿವ ಸರಳೆಳಸಿಗಿದವಂತೆ ಬಲ್ಸರಳ. ಹೊಳಹಿನಂತಾ ರಣದೊಳು ರಾಮನ ಕೈಚಳಕವನೇನ ಬಣ್ಣಿಪುದು. ಬಲಿದು ಖತಿಯನಾ ಲಲನೆ ಸಿಂಗಾಡಿಯ ಬಿಲುಗಾಱರ ನೆರವಿಯನು ಕಲಿಗಳ ತಲೆವಣಿ ರಾಮನ ಮೇಲೆ ಮೂದಲಿಸಿ ಪರಿಯಬಿಟ್ಟಳಂದು. ಸಿಡಿಲಬಳಗವೊ ಶಿವನ ಪಣೆಗಣ್ಣ ಕೆಂಗಿಡಿಯ ಜಂಗುಳಿಯೋ ವಾಡಬನ ಕುಡಿನಾಲಿಗೆಗಳ ಕೂಟವೊ ಎನಲೇಳ್ದವಂದೊಡನೆ ಸಿಂಗಾಡಿ ವಿಲ್ಲುಗಳು. ಹರಿದು ವಜ್ರಾಂಗಿಯು ಜೋಡು, ಮೆಯ್ಯೊಳೆ ನೆತ್ತರೊರತೆ ಮುಸಗೆ ಮೆಯ್ ಮಱೆದು ನೆರೆಗಲಿಯಿರ್ದನೊಂದಿನಿತುಪೊಳ್ತುಮರರು ಮಱುಗಲಂಬರತಳದೊಳಗೆ. ಹೆಚ್ಚಿದ ಹೇರಡಿವಿಯುನೆಲ್ಲವ ಕಾಳ್ಗಿಚ್ಚು ಸುಟ್ಟೊಂದು ಬಲ್ಮರನ ಕೆಚ್ಚನಾಶ್ರಯಿಸಿ ನಿಂದಂತೆ ನಿಂದನು ರಾಮನುಚ್ಚ ಶಿಲೆಯೊಂದ ನೆಮ್ಮಿ.

ರಾಮನು ಯುದ್ಧಾಂತ್ಯದಲ್ಲಿ ಕೈಲಾಸಕ್ಕೆ ತೆರಳುವ ಸನ್ನಿವೇಶವು ಬಹು ಆಕರ್ಷಕವಾಗಿದೆ.

ಕದಲಿದ ಕರಣಂಗಳನೊಬ್ಬುಳಿಯಿಕ್ಕಿ ಹೃದಯಾಂಬುಜ ಮಧ್ಯದೊಳಗೆ ।
ಮದನಾರಿಯ ಮನಗೊಳಿಸಿ ಸಮಾಧಿಯೊಳೊದವಿರ್ದನಾ ರಾಯಕುವರ ॥

ಪೊಱಗೆ ಕೆಳಗೆಲ್ಲಿ ನೋಡಿದೊಡೀಶ್ವರನಲ್ಲದಱಕೆಯ ದೈವವಿಲ್ಲೆಂಬ ।
ಕಱೆಗೊಂಡಱುವಿನಸಮಾಧಿಯೊಳಿರ್ದನಾ ನೆಱೆಗಲಿ ನೆನೆವುತ್ತಭವನ ॥

ಪುರಹರನಟ್ಟಿದ ಪುಷ್ಪಕವೆಯ್ತಂದು ವರಶುಚಿರಾಮನಮೇಲೆ ।
ಕರವೆಸೆದುದು ಕಿಂಕಿಣಿಗಳ ನಿನದವಾವರಿಸೆ ದಿಗಂತರಾಳವನು ।

ಇದು ತುಚ್ಛಗಿರಿಯಿದಱೊಳು ನಿನಗೇನು ನನ್ನುದರದೊಳಿರು ಬಾರೆಂದು ।
ಮುದದಿಂದ ಕರೆಯಲೆಯ್ತಂದಾ ತಾರಾದ್ರಿಯನು ಪೋಲ್ತುದವನ
ಮೇಲಂದು ॥

ಮಣಿಘಂಟಾ ಕಿಂಕಿಣಿಗಳ ಕಲಕಲರಣನದಿಂ ಪ್ರಮಥರುಚ್ಚರಿಪ ।
ಪ್ರಣವ ಪಂಚಾಕ್ಷರಿಯಿಂ ಶಬ್ದಬ್ರಹ್ಮದ ಕಣಿಯೆನಲದು ಕಣ್ಗೆಸೆದುದು ॥

ನೆತ್ತಿಯಿನೊಡೆದು ಕುವರನಾತ್ಮ ಪರಮಾತ್ಮನೊತ್ತಿಗೆಯ್ದಿತು
ತವಕದೊಳು ।
ಉರುಲಿಂಗದೊಳ್ಳೈಕ್ಯವೆಯ್ದುವಂತೆ ರಾಮನುರುವರಪುಷ್ಪಕೋದರವ ॥
ಭರದಿಂದ ಪೊಕ್ಕನು ದೇವದುಂದುಭಿ ಮೇಲೆ ಮೊಱೆಯೆ ಸುರಿಯೆ
ಪುಷ್ಪವೃಷ್ಟಿ ॥

ನಂದಿಕೇಶ್ವರ ಸಮ್ಯಗಣನಾಥನ ಕರೆದೊಂದಿ ಕೆಲದೊಳು ಕುಳ್ಳಿರಿಸಿ ।
ಅಂದು ಕೊಂಡೊಯ್ದುದಾ ಪುಣ್ಯ ಪುಷ್ಪಕಮೇಘವೃಂದದ ಮಧ್ಯದೊಳು
ಮೇಗಣ್ಗೆ ॥

ಹೆಣ್ಣನೊಲ್ಲದೆ ಬಿಟ್ಟು ಹೊನ್ನನೊಲ್ಲದೆ ಬಿಟ್ಟು ಮಣ್ಣನೊಲ್ಲದೆ ಬಿಟ್ಟು
ಶಿವನ
ಬಣ್ಣಿಸುವರಿಗಾಗದ ಲೋಕ ರಾಮನ ಕಣ್ಣಿಗೆ ಗೋಚರಿಸಿದುದು ॥

ತಱಗೆಲೆಗಳ ಮೆದ್ದು ದೆಸೆಗಳ ಪೊದೆದೊಲ್ದು ತೊಱೆದು ದೇಹಾಭಿ
ಮಾನವನು
ತಱಿಸಂದು ತಳೆರ್ವ ತಾಪಸರಿಗಾಗದ ಲೋಕ ತೆಱೆದೆಱೆವಾಯ್ತು
ಕುವರಗೆ ॥

ಬೆಳುದಿಂಗಳ ತೊಳೆದಿಂಗಡಲೊಳು ಕೈದಳ ಸೋಂಕದಜನೊಂದುಗೂಡಿ ।
ತಿಳಿದಿಂದ್ರನಾನೆಗೊಂಬಿಂದೊಪ್ಪವಿಟ್ಟಂತಿರೆಳಸಿತಾ ಕೈಲಾಸಾದ್ರಿ ॥

ಪಿಡಿದು ಕಡೆದು ಪಾಲ್ಗಡಲ ದೇವಾಸುರರೊಡನೆ ತೆಗೆದು ಬಯಲೊಳಗೆ ।
ಮಡಗಿದ ನವನೀತರಾಶಿಯಂತದು ಕಣ್ಗೆ ಕಡುರಮ್ಯವಾಯ್ತು ಕುವರನ ॥

ಕುಸುಮದೊಡನೆ ಕಂಪು ಬಿಸಜದೊಡನೆ ಲಕ್ಷ್ಮಿ ಪೊಸಮಣಿಯೊಳು
ಕಾಂತಿ ತಳೆರ್ವ ।
ಎಸಕದಂತೀಶ್ವರನೊಡನೆಯ್ದಿದಳಂದೊಸೆದಗರಾಜತನಯೆ ॥

ಅರೆವೆಱೆ ಬಾಂದೊಱೆ ಕೆಂಜೆಡೆ ಕಿಡಿಗಣ್ಣುರುಗಕುಂಡಲ ಕಱೆಗೊರಲು ।
ಅರೆಮೆಯ್ಯೊಳೊಡವೆರೆದಂಗನೆ ಮೆಱೆಯಲೀಶ್ವರನೆಸೆದನು ಸಭೆಯೊಳಗೆ ॥

ನೋಡುತೀಶ್ವರದಿವ್ಯಮೂರ್ತಿಯ ಮೆಯ್ಯನೀಡಾಡಿ ಮಹಿಗೆ ಮನಸಂದು ।
ನಾಡೆ ನಲವಿಂದೆಳ್ದು ನಲಿದು ಕೊಂಡಾಡಿದನಂದಭವನನು ॥

ಅಂತು ಕೊಂಡಾಡಿದ ಕುವರನನೀಶನಾನಂದ ಕೈಮಿಗೆ ಮೆಯ್ದಡವಿ ।
ಅಂತೆ ಕುಳ್ಳಿರಿಸಿಕೊಂಡನು ನಿಜ ಪಾದಾರವಿಂದದೊತ್ತಿನೊಳು ಕೈವಿಡಿದು ॥

ಧರೆ ಬೆಸಲಾದಂತೆ ಶರಧಿ ಮೇಱೆಯೆ ಮೀಱಿ ಧರಣಿಗೆ ಬಂದುದೆಂಬಂತೆ ।
ನೆರೆದ ಮಹಾಬಲದೊಡನೊರ್ವನಿಱಿದಾಡಿ ಹರಣವಳಿದ ವೀರರುಂಟೆ ॥

ಎಳವರಯವನಾಂತು ರಾಯಪದವಿಯನು ತಳೆದು ಜನಕಜನನಿಯರು ।
ಎಳಸಿ ತಂದಿತ್ತ ಪೆಣ್ಗಳನೊಲ್ಲದೊಲ್ಲೆನೆಂಬಳವು ರಾಮನಿಗಲ್ಲದುಂಟೆ ॥

ಎಂದು ಕೊಂಡಾಡಿ ರಾಮಗೆ ರಾಜಶೇಖರನಂದಿತ್ತು ಗಣಪದವಿಯನು ।
ಸಂದ ಮಹಾಪ್ರಮಥರ ಪಂಕ್ತಿಯೊಳಗೊಂದಿಸಿದನು ಕುವರನನು ॥

ರಾಮನನ್ನು ಕಂಡ ರತ್ನಾಜಿಯ ವಿವಿಧಾವಸ್ಥೆಯ ವರ್ಣನೆ ಕಣ್ಣಿಗೆ ಕಟ್ಟಿಂತಿದೆ. ಶೂಲದ ಹಬ್ಬದ ದಿನ ಅಂಗಜನ ನನೆಗಣೆಯಂತೆ ಸಿಂಗರಿಸಿಕೊಂಡು ಅಂಬರಚರಿಯುವನಿಯು ನೋಡಲೆಂದು ತನ್ನಂಬರಕೆಯ್ದುವಂತೆ ಕಾದಂಬಿನೀಚುಂಬಿತಸೌಧಾಗ್ರವನೇರಿ ಅವಿರ್ಲಲ್ಲದಂಗಜನಂತೆ ಬಿಜ್ಜರದಲಗಿಲ್ಲದಮರೇಂದ್ರನಂತೆ, ಕಲೆಯಿಲ್ಲದಿಂದುವಿನಂತೆ ಅಲ್ಲಿಗೆಯ್ತಂದ ಅಲಘುವಿಕ್ರಮ ರಾಮನಾಥನ ಕುಸುಮಕೋದಂಡನ ಗಂಡಗಾಡಿಯನು ನೋಡಿದಳು. ಆರಿವನಿಂದ್ರನೋ ನಳನೋ ಜಯಂತನೋ ಮಾರನೋ ನಳಕೂಬರನೋ ವಾರಿಜನಾಭನೋ ಶಶಿಯೋ ರವಿಯೋ ಎಂಬ ಸಂದೇಹವುಂಟಾಯ್ತು ಆ ಅಂಬುಜಾನನೆಗೆ, ತಕ್ಷಣವೇ. 'ಅಱಿವು ಅಱಿತುದು; ಲಜ್ಜೆ ನೆಱೆ ತಗ್ಗಿದುದು, ಧೈರ್ಯ ಬಱಿತೋಡಿತು, ಅಂಗಜಾಗ್ನಿ ಗಱಿಗಟ್ಟಿತು. ಪಾಳಿ ಪಾಱಿತು, ವೈದೋಱಿತು ಮದನಾಗ್ನಿ, ಜಾಱಿತು ಜಾಣ್ಮೆ, ವೈಗುಷ್ಣವೇಱಿತು, ಬೇಟ ಬೇರೂಱಿತು, ಲಜ್ಜೆ ತಟ್ಟಾಱಿತು. ಬೆಱಗುವಟ್ಟಂಗ, ಬೆದಱುವೆದೆ, ಬೆಮರಿಂದ ತುಱುಗಿದ ಮೊಗ, ಕಣ್ಗೊಳೊಳಗೆ ಒಱೆವ ನೀರೆಸದಿರಲಾ ಲಲನೆ ಅಂದಾ ಕುವರಗೆ

ಸೇಱಿಕೆಯಾದಳು. ನಡುನಡುಗೆ ಮೆಯ್, ನುಡಿ ತಡಬಡಿಸೆ, ಮೆಲ್ಲಡಿ ದಡನಡಿಸೆ ಕಯ್ಯೊಳಗೆ ಪಿಡಿದ ಜೆಳ್ಳಿಲೆ ಜೇಯೆ, ಪುಡಿಯೇಳೆ ತಂಬುಲ ಬಿಡದವನ ನೋಡಿದಳು ನುಡಿಯಱಿತುದು, ನೋಟ ನಿಂದುದು, ಮೆಯ್ಯುಲಾಟ ತಡೆದುದು, ಜೀತನವಿರದೆ ನಡುಗೆತ್ತಿಗೆಯ್ದಿ ತಾತನ ಗಾಡಿ. ಬಿಟ್ಟ ಕಣ್, ಬೀದಿವರಿವ ನೋಟ, ಸೋಂಕಲು ಸುಟ್ಟುರಿಪ್ಪುವ ಸುಯ್ಯೆಲರ್, ಮುಟ್ಟಿ ಕೈ ಜೇವ ಪ್ಪೆ ಬಿಸುಪೆಸೆದಿರೆ ಮಾಱುವಟ್ಟಿರ್ದಳಾ ಮೃಗನಯನೆ. ತೆಗೆದ ಕಣ್ಗಳ ಬಾಗಿಲಿಂದವನನು ತಂದು ಪುಗಿಸಿ ಮರಳಿ ಪೋಗದಂತೆ ಮಿಗೆ ತುರುಗೆವೆವಡಿಗತಳ್ತಿಂಬತ್ತಾಗ ಮುಗಿದುವು ಕಣ್ಗಳು. ತೇಲುವ ಕಣ್ಣು, ಜೆರಳುವಿಂದ್ರಿಯ, ತಲೆಕಾಲಿಗೆ ಹಾಕುವ ತವಕ, ಸೋಲುವ ಸೊರ್ಕು, ಕಾಣಿಸುತಿರಲವನನು ಮೆಚ್ಚಿದಳು, ಮರುಳಾದಳು, ಮೆಯ್ಮಱೆದಳು, ತೆಚ್ಚದೆ ಸುಯ್ದಳು ; ಅಂಗಜನ ಕಿಚ್ಚಿಗೀಡಾದಳು, ಅಳಲಿದಳಳವಳಿದಳು, ಬಡವಾದಳು, ಬಳಲಿದಳು, ಬಯಲಾದಳು, ತಳವೆಳಗಾದಳು, ಕೆಳದಿಯ ಕಾಲ್ವಿಡಿದಳು. ಸಕ್ಕರೆಯಿಂದ ಸಾಸಿರ್ಮಡಿ ಸವಿಯುಳ್ಳ ಚಿಕ್ಕ ಹರೆಯದ ಕುವರನ ತಕ್ಕೆಯ ಬಯಸಿದಳು, ತಂದಿತ್ತವನನೆನಗಕ್ಕನಾದೆಪೆಯೋ, ತರ ದನನ ಕೊಂಡೆನ್ನ ನಿನ್ನುದರದೊಳು ಬರಸಿಕೊಂಡು ಜನನಿಯಾದಪೆಯೋ ಎಂದು ಬಾಯುಳಿದಳು. 'ಒಲ್ಲದವರನೊಲಿಸುವೆನು, ಒಲಿದರನಿಲ್ಲದಗಲಿಸಿ ತೋಱುವೆನು, ಕುಂಟಣಿತನಕಾನಲ್ಲದಿಲ್ಲ, ಕಾಮನನು ಕಾಮಿಸುವೆ ನಿಮಿಷಮಾತ್ರದೊಳು' ಎಂದ ಕೆಳದಿ ಸಂಗಿಯ ಮಾತನು, ಕೇಳಿ ಸ್ವಲ್ಪ ಸಮಾಧಾನಗೊಂಡು ಚಿನ್ನದ ನೀರು ಪೊಱಗೆ ಪೊಱೆದಿರ್ದ ಕಬ್ಬೊನ್ನ ಪುತ್ಥಳಿಯಂತೆ ಖಿನ್ನಳಿಲ್ಲೆನಿಸುತ ನನ್ನನಿನ್ನಿಯಾಗಿರ್ದಳೆದೆಯೊಳಗೆ ; ವಾರಣ ನುಂಗಿದ ಬೇಲದ ಪಣ್ಣಂತೆ ಸಾರವಡಗಿ ಕಾಮಾಗ್ನಿಯಿಂ ದೂರಿಸು ತಿರ್ದಳು ; ಗುಹೆಯೊಳಗಣ ಗೂಢಾಗ್ನಿಯಂತವಳ ಸ್ಮರವಹ್ನಿಯೊಳಗೊಳಗೆ ದಹಿಸುತಿರ್ದುದು."

ರಾಮನಂಗನೆಯರು ಮಾಸತಿಯರಾದ ದೃಶ್ಯ ಅಂದಿನ ಜೋಹರ್ ಪದ್ಧತಿಯ ಸ್ಪಷ್ಟ ಪರಿಚಯವನ್ನುಂಟುಮಾಡುವುದು. 'ಪನಿನೀರ ಕುಪ್ಪಿಗೆ, ಕರ್ಪುರದುಂಡೆ, ಮೃಗಮದದ ತನಿಗಂಪಿನ ನೇಣು ಸಾದಿನ ಭರಣಿ ಗಳನು ಕೊಂಡಕೆ ಹಾಕಿದರು. ವೀರಮುದ್ರಿಕೆ, ನೂಪುರ, ಕಾಂಚೀ

ದಾವು, ಮಹಾಪದಕ, ಹತ್ತು ಕಟ್ಟು, ತೋರ ಮೂಕುತಿಬೊಟ್ಟು, ತುರಬಿನು ಡೆವಣಿ, ಉಂಗುರ, ಕಂಕಣ, ಬಾಹುಪೂರ, ಮುರಡಿಯು ಸರಪಣಿ, ಮುಂಗಯ್ಯ ಮುರಿ, ಹಸ್ತಸರ, ಹೊನ್ನಬಳೆ, ತೋಳಬಂದಿ, ಪಿಡಿದ ನಿಂಬೆ ಹಣ್ಣು, ಕನ್ನಡಿಯ ಕೆಯ್ಯೊಳು ಮೆಱೆದಿರಲು ಅಂದವರು ಮಾಸತಿಯ ರಾದರು.

ಕೋಪಗೊಂಡ ಸುರತಾಳನ ಚಿತ್ರ ಭಯಂಕರವಾಗಿದೆ. 'ಕುಡಿ ಮೀಸೆ ಕುಣಿದಾಡೆ ಕಡೆಗಣ್ಣಿನಿರದೆ ಕೆಂಗಡಿಯನುಗುಳೆ, ತುಟಿ ಮಿಡುಕೆ, ತೊಡರೆ ಪುರ್ಬುಗಳು, ಹೊಗೆಯೆ ಮೊಗ, ಮೆಯ್ ನಡುನಡುಗೆ ಕೋಪ ದೊಳಿರ್ದನವನು. ನುಡಿಸಲಮ್ಮರು ಮಂತ್ರಿಗಳು. ಖಾನರು ತುಟಿ ಮಿಡುಕಲಮ್ಮರು, ಮಲ್ಲುಕರು ನುಡಿಯಲಮ್ಮರು ಸುರತಾಳನ ಕೋಪದ ಕಡುಹು ಕಣ್ಣೆಡಿಸಿತೆಲ್ಲರನು.'

ಕವಿನಂಜುಂಡನ ಪಾತ್ರಚಿತ್ರಣ ಬಹುಖಚಿತವಾಗಿದೆ. ಪ್ರಧಾನ ಪಾತ್ರಗಳಾಗಲಿ ಗೌಣಪಾತ್ರಗಳಾಗಲಿ ತಮ್ಮ ತಮ್ಮ ಪ್ರತ್ಯೇಕವಾದ ವೈಶಿಷ್ಟ್ಯದಿಂದ ಮೆರೆಯುತ್ತವೆ. ಆ ಪಾತ್ರಗಳ ಅತಿ ಸೂಕ್ಷ್ಮವಾದ ಬಾಹ್ಯ ಮತ್ತು ಆಂತರ್ಯವಾದ ಶೀಲಸ್ವಭಾವಗಳು ಪ್ರಥಮ ಪರಿಚಯ ದಿಂದಲೇ ಖಚಿತವಾಗುವುವು. 'ಕರ್ಣಾಟಪತಿ ಕಂಪಿಲನು ನಿರ್ಣೀತ ಸರ್ವೋಪಾಯ ನಿಪುಣ, ಸಂಪೂರ್ಣ ವಿಭವ, ಉರುದಾನಿ, ಚೂರ್ಣೀಕೃತ ದುರ್ಗ, ನಿಡುದೋಳ್ವೆತ್ತ ವಿಕ್ರಾಂತಿ, ಸೊಬಗನಾಂತ ಕಡು ಶೌಚಗುಣ, ನಾಲಗೆಯ ಪಡೆದ ಸುವಿದ್ಯೆ, ಜೀವಂಬೆತ್ತ ಜಸವೆಂದು ನುಡಿವರಾ ನೃಪನ ಬಲ್ಲವರು. ತಿಳಿಜೊನ್ನದ ನಡುವೆ ಸಂಪೂರ್ಣೇಂದು ತಳತಳಿಸುವ ಮಾಳ್ಕೆ ಯೊಳು ತೊಳಗಿದುದಾ ನೃಪತಿಯ ಕೀರ್ತಿರುಚಿಯೊಳು ಮುಳುಗಿದ ಕಮಲಭವಾಂಡ. ಹೊಕ್ಕಿಱುವನು ಬಲ್ಲಾಳನ, ರಾಜ್ಯವನೊಕ್ಕಲಿಕ್ಕುವ ನೊರೆಗಲ್ಲ; ಎಕ್ಕತುಳಿದ ವೀರರುದ್ರನ ರಾಜ್ಯವ, ಮಿಕ್ಕವರೆಣೆಯೇ ಕಂಪಿಲಗೆ ? ಡಿಳ್ಳಿಯ ಸುರತಾಳನ ರಾಜ್ಯವನೆಲ್ಲ ಕೊಳ್ಳೆಗೊಂಬನು ಕೋಪಿಸಿದೊಡೆ, ತಳ್ಳಂಕವೆಯ್ದಿಸುವನು ಗಜಪತಿರಾಯಗುಳ್ಳ ದೇಶವನೆಲ್ಲವನು. ಒಟ್ಟಿನಲ್ಲಿ ಕಂಪಿಲನ ಗಂಭೀರತೆಗೆ ಮುನ್ನೀರ್, ಐಶ್ವರ್ಯಕ್ಕೆ ಜಂಭಾರಿ, ಸ್ಥೈರಣೆಗೆ ಕುಂಭಿನಿ, ವಿಕ್ರಮಕೆ ಪರಮೇಶ್ವರನೇ ಸರಿ.

ಆತನ ಪಟ್ಟದರಸಿ ಗುಣಾಂಬುಜಸರಸಿ ಹರಿಹರ ದೇವಿಯರಲ್ಲಿ ರತಿಯ ಚೆಲ್ವಿಕೆ, ಭಾರತಿಯ ವಿವೇಕ, ಪಾರ್ವತಿಯ ಬೆಡಂಗು, ಇಂದಿರೆಯ ಅತಿಶಯ ಭಾಗ್ಯ, ಸೀತೆಯ ಪಾತಿವ್ರತ್ಯ ಸೇರಿ ಮೆರೆದಿರುವುವು. ಆಕೆಯ ಪುತ್ರ ಪ್ರೇಮವಂತೂ ವರ್ಣನಾತೀತವಾದುದು. ಮೊದಲಿನಿಂದ ಆತನ ಕ್ಷೇಮ ದಲ್ಲಿ ಅನವರತ ಚಿಂತಿಸುತ್ತಿದ್ದು ಆ ಅಭಿನವ ಮನಸಿಜನ ಲಾವಣ್ಯರಸದ ಪೊನಲಿನಲ್ಲಿ ನಗರದ ನಳಿನನೇತ್ರೆಯರ ಕಣ್ಮನಗಳಾಳದಿರದೆಂದು ಅವನಿಗೆ ಪರನಾರೀಸಹೋದರ'ನೆಂಬ ಪೆಂಡೆಯವನ್ನು ಜ್ಞಾಪಕಾರ್ಥವಾಗಿ ತೊಡಿಸಿ ದ್ದಾಳೆ. ಚೆಂಡಾಟಕೆಳಸಿ ಕುಮಾರಕಂಠೀರವನು ತಾಯನ್ನು ಯಾಚಿಸಿ ದಾಗ ಅವಳು ಮಾಡುವ ಉಪದೇಶಗಳು ಅವಳನ್ನು ವಿವೇಕಬೃಹಸ್ಪತಿ ಯೆನ್ನುವಂತೆ ಮಾಡಿವೆ—ಜನನಿ, ಜಾಹ್ನವಿ, ಜನ್ಮಭೂಮಿ, ಜನಕ, ಜನಾರ್ದನರು ಪೂಜ್ಯತಮರು ; ಅವರ ಮಾತನ್ನು ಮೀರಲು ಬಾರದು. ಬೊಗರಿ, ಗದುಗಸ, ದುಗುಡಲಗ್ಗೆ ಹಿಡಿಗವಡೆಗಳು ರಾಜಪುತ್ರರಿಗೆ ಬಗೆಯಲು ಚಿತವೇ ? ಚೆಂಡಾಟವೆಂಬುದು ತುರುಗಾಯಿ ಮಕ್ಕಳ ತಂಡಕಲ್ಲದೆ ನೃಪ ಸುತರ ಮಂಡಳಿಗುಚಿತವೆ ? ವೀರಬಲ್ಲಾಳನ ಮುಳಿಯಲಿಳಿದೆ, ಮೇಲೋ ರಗಲ್ಲರನು ಕೆಣಕಿದೆ, ಹೋರಾಟವ ಮಾಡಿಕೊಂಡೆ ತುರುಕರೊಳಿಂತು ವೈಮನಸಿದಿಹುದೆ ? ಮಂಡೆತುಂಬಿದ ರಾಜಕಾರ್ಯವಿದ್ದು ರಾಮ ಚೆಂಡಾಟಕೆಳಸಿತೆ ಚಿತ್ತ ? ಲೆಕ್ಕವಿಲ್ಲದ ರಾಜಕಾರ್ಯ ಮುಕ್ಕಿಳಿದಿರೆ ಮಕ್ಕಳಾಡುವ ಚೆಂಡಾಟಕೆ ಮನವಿಕ್ಕುವರೆ ?' ಈ ಮಾತುಗಳನ್ನು ಆ ಗುಣ ಮಣಿಭೂಷಣನು ಸಂಜೀವನಮಂತ್ರವೆಂದೇ ಅಂಗೀಕರಿಸಿದರೂ ದುಷ್ಟ ದೇವತೆಯರ ಕೆಟ್ಟಪ್ರೇರಣೆಯಿಂದ ತೊಟ್ಟಕಾರ್ಯವನ್ನು ಬಿಟ್ಟಿರಲಾರ ದಾದ.

ಕಂಪಿಲನ ಮಂತ್ರಿಯಾದ ಬೈಚಪ್ಪನ ಚಿತ್ರವಂತೂ ಬಹು ಖಚಿತ ವಾಗಿ ಚಿತ್ರಿತವಾಗಿದೆ.

ಆತನು ನೀತಿನಿಪುಣ ನಿಖಿಲೋಪಾಯನಿರತನಭೀತನಮಲವಂಶ ಜನು. ಭೂತಹಿತನು, ನಿಜಪತಿಯ ಕಾರ್ಯನಿಷ್ಠ, ವಿನೀತ, ದಾನಿ, ದಯಾಪರನವದಾತಕೀರ್ತಿನಿದಾನನುತ್ತಮಗುಣಯುತನು. ದೀನೋ ದ್ಧರಣಧುರೀಣ, ಸತ್ಪ್ರಧಾನಿ, ಮಂತ್ರಿಶಿರೋಮಣಿ. ಇಮ್ಮಡಿಶಿಂಗನ

ಕಾಲದಿಂದ ಕಂಪಿಲದರಸುಗಳಿಗೆ ಸಚಿವನಾಗಿದ್ದು ಕರ್ತವ್ಯದಲ್ಲಿ ನಿಸ್ಪೃಷ್ಟ ಬುದ್ಧಿಯುಳ್ಳವನಾಗಿದ್ದವನು. ಅವರಿಗೊದವಿದ ಬಲುಗಾಳಿಗಗಳೆಲ್ಲೆಲ್ಲಾ ನೇರವಾದ ಸೂಚನೆಗಳನ್ನಿತ್ತು ತಾನು ತನ್ನ ವಿಕ್ರಮವನ್ನು ಮೆರೆದಿದ್ದಾನೆ. ಮಡದಿಯ ಪುಸಿನುಡಿಗಡಿಯಾಳಾಗಿ ಸುರೆಗಾಗಿ ಸುಧೆಯನ್ನು ಸೂಸು ವಂತೆಯೂ ಕಗ್ಗಲ್ಲಿಗಾಗಿ ಕಲ್ಪವೃಕ್ಷವನ್ನು ಒಡೆಯುವಂತೆಯೂ ಮೋಹಿ ಕಂಪಿಲನು ರಾಮನ ತಲೆಯನ್ನು ತರಿದೊಪ್ಪಿಸದಿರೆ ಇಲ್ಲಿಂದೇಳುವ್ರದೇ ಇಲ್ಲ ಎಂದು ಹಟಮಾಡಲು, ಅವಿವೇಕ ನೃಪರನೋಲೈಸುವ ಸುಭಟರಿಗವಿರಳ ಸಂತಾಪ ಸಲೆ ಬಾರದೆ ಮಾಣದೆಂದು ಚಿಂತಿಸಿ ಆಗ ಮಾಡಬೇಕಾದ ಕಾರ್ಯನಿಶ್ಚಯವನ್ನು ಮನಗಾಣುವನು. 'ಬಲ್ಲಾಳ ರಾಯನ ಕೂಡೆ ಜಗಳ ಓರಗಲ್ಲನನೊಡನೆ ಹೋರಾಟ ಬಲ್ಲಿದ ನೇಮಿಯ ಹಗೆತನವೀ ರಾಮನಲ್ಲದೊಡಿಲ್ಲಿವೀದುರ್ಗ. ಕರಿರಿಪುವಿಲ್ಲದ ಕಾಂತಾರದಂತಂಬರಮಣಿ ಯಿಲ್ಲದಂಬರ ಪರಿಯಂತಹುದೆಮ್ಮ ರಾಜ್ಯ, ಸೇತುಕೇದಾರದ ನಡುವೆ ಮುಸಲ್ಮಾನ ಜಾತಿಯಲ್ಲದೆ ಹಿಂದುವರ ಜಾತಿಧರ್ಮಸ್ಥಿತಿಯುಂಟೆ? ಕಡಿವೆನೇ ಕದಳಿಗೋಸಗ ಕಲ್ಪವೃಕ್ಷವನು, ಇಡುವೆನೆ ಕಾಗೆಯೇಳಿಸಲು ಪಿಡಿದ ಚಿಂತಾರತ್ನವನು, ಚಂಡನಡಗಿಪಂತೆ ಬಲು ಠೌಳಿಕಾರನ ಗಂಡು ಗಲಿಯನಡಗಿಪೆನು. ಕೊಂಡುಬಂದಿಳೆಗೆ ಕಾಣಿಸುವೆನು ಸುರತ್ರಾಳ ದಂಡು ಬಂದೊಡನೆ ಎಂದು ಬಹುದೀರ್ಘವಾಗಿ ಆಲೋಚಿಸಿ ದೇವದೂತನ ಸಹಾಯ ದಿಂದ ತನ್ನ ಕಾರ್ಯಸಿದ್ಧಿಯನ್ನು ಪಡೆದು ತನ್ನ ಉದ್ದೇಶವನ್ನು ಸಾಧಿಸಿ ದೇಶಕ್ಕೆ ಒದಗಿದ ವಿಪತ್ತನ್ನು ತನ್ನ ಕೈಲಾದಷ್ಟು ಮಟ್ಟಿಗೆ ತಪ್ಪಿಸುವನು. ಸುರತಾಳನು ಕೂಡ ಬೈಚಪ್ಪನನ್ನು ಕುರಿತು 'ಸುರಮಂತ್ರಿಯು ಸರಿಯ ಲ್ಲದೆ ಲೋಕದ ಹೊಟ್ಟಿ ಹೊರೆಕ ಮಂತ್ರಿಗಳು ಬೈಚಪ್ಪಗೆ ಸರಿಯೆ, ಸಚಿವ ನಿಂತಪ್ಪರನುಳ್ಳರಸಂಗೆ ಕಂಟಕವೆಂಬುದುಂಟೆ' ಎಂದು ಕೊಂಡಾಡುವನು.

ಸುರತಾಳನ ಮಗಳು ಕಾವ್ಯದಲ್ಲಿ ಎಲ್ಲಿಯೋ ಅಪೂರ್ವವಾಗಿ ಗೋಚರವಾಗುವಳು. ಆದರೂ ಅವಳ ಸ್ಪಷ್ಟಚಿತ್ರಣವನ್ನು ಅಲ್ಲಿ ಕಾಣ ಬಹುದು. ಮದನನ ಬಿಗಿದ ಬಿಲ್ಲಿನ ಬಿಂಕವನು ಮಿಗುವ ಮೃಗಾಕ್ಷಿ, ಮೃಗಾಂಕ ನಿಭಾನನೆ, ಮೃಗಮದಾಮೋದನಿಶ್ವಾಸೆ, ಮೊಗವೆಲ್ಲ ಕಣ್ಣು, ಕಣ್ಣೆಲ್ಲ ಮೋಹನದೇಳ್ಗೆ, ನಗೆಯೆಲ್ಲ ನನೆಗಣೆಯಾಟ, ಬಗೆಯೆಲ್ಲ ಬೇಟದ

VIJAYA EVENING COLLEGE LIBRARY
BANGALORE-4.
5302

ಬಯಕೆ, ಅಲರಂಬಿಂದ್ರಿಯಪಂಚಕವಾಗಲಾ ವಿಲಸಿತಕುಸುಮಕೋದಂಡ ಲಲನಾರೂಪವಾದುದೆನೆ ಕಣ್ಗೆಸೆವಳ್. ಪರಿಮಳ ಪರಮಾಣುಗಳ ಪುಂಜವ ತಂದು ಕರುವಿಟ್ಟು ಸುರಕಾಂತೆಯರ ಲಾವಣ್ಯದಿಂದಿರದೊಪ್ಪ ವಿಟ್ಟಂತೆ ರಂಜಿಸುವಳ್. ಚಿತ್ರಪಟದಲ್ಲಿ ಮೊತ್ತ ಮೊದಲು ರಾಮನ ರೂಪವನ್ನು ನೋಡಿದಾಗಲೆ ಅವಳ ಬೇಟವಿಮ್ಮಡಿಸಿ ಚೆಲುವರ ಗಂಡ ಚೆನ್ನಿಗರಾಮನ ರೂಪ ಅವಳೆದೆಯೊಳಗೆ ಮನೆಮಾಡಿಬಿಟ್ಟಿತು. ರಾಮ ನನ್ನು ತರಿಸಲು ಮಾಡಿದ ಪ್ರಯತ್ನವು ವಿಫಲವಾಗಲು ಸುರತಾಳನು ಕುವರಿ ತನ್ನ ಭಾವಕೆ ಬಂದ ಪುರುಷನು ಜೀವೇಶ್ವರನಾಗಿ ಮಾಡಿಕೊಳ್ಳಲಿ ಎಂದು ಸ್ವಯಂವರ ಶಾಲೆಯ ರಚಿಸಿ ಭೂವರ ಸುಕುಮಾರ ಸಂಕುಳವ ಕೂಡಿಸಲು ಕುವರಿಯು ತಾನು ಮೋಹಿಸಿದ ತನ್ನ ಮನವನ್ನನ ಬಿಟ್ಟು ಅನ್ಯರನ್ನೆಳಸದೆ ಮನದೊಳಿರ್ದ ರಾಮನಿಗೇ ಮಾಲೆಯನಿಕ್ಕಿದಳು. ಕೊನೆಗೆ ರಾಮನನ್ನು ಕೊಂದು ಕಂದದೆ ಕಳೆಯಳಿಯದೆ ಕಾಂತಿಯಿಂ ಮೆಯ್ಗುಂದದೆ ಹೊತ್ತುಹೊತ್ತಿಗೆ ಅಂದವೇಱುವ ರಾಮನ ಪಂದಲೆಯನ್ನು ಸುರತ್ರಾಣ ನಂದನೆ ನೋಡಿ ಏಳೆಂಟವಸ್ಥೆಗಳಿಗೊಳಗಾಗಿ ಕರೆಯಲಟ್ಟಿದೊಡೆ ಬಾರದೆ ನಲ್ಲನಿಲ್ಲಿಗೆ ಶಿರವನಟ್ಟಿದನು. ಇನ್ನು ನಾನಿರಲನುಚಿತವು ಎಂಬಂತೆ ಪೋದವು ಹರಣವು ಹರಿಣಲೋಚನೆಯ.

ರತ್ನಾಜಿಯು ಪರದಾರ ಸೋದರರಾಮನೆಂಬ ಮೃಗವನ್ನು ಬೇಟೆ ಯಾಡಲು ದೇವತೆಗಳು ಕಟ್ಟಿದ ದೀಹದ ಮೃಗ. ಇವಳ ಆಕರ್ಷಣೆಗೆ ಸಿಕ್ಕದೆ ತನ್ನ ಶುಚಿತ್ವವನ್ನು ಸ್ಥಾಪಿಸಿಕೊಂಡುದು ರಾಮನ ವೈಶಿಷ್ಟ್ಯ. ಯಜ್ಞಯಾಗಾದಿ ಕರ್ಮಗಳೆಲ್ಲ ಸುರಸ್ತ್ರೀಭೋಗಕ್ಕೆ; ಅವರೆ ಕೊರ್ತು ಬಂದು ರಾಗದಿಂ ಮೇಲಿಕ್ಕಲೊಲ್ಲದ ರಾಮಗೆಣೆಯುಂಟೆ? ನುಡಿವ ಚಂದಿರನಂತೆ ನಡೆ ವೆಳಲತೆಯಂತೆ ಬಿಡದೆ ಮೋಹಿಪ ಮೊಗಮೆಯ್ಯ ಕಡುಗಾಡಿಕಾರ್ತಿ ಕಾಮಿ ಸಲ್ ಒಲ್ಲದವನಿಗೆ ಪಡಿಯುಂಟೆ ಪದ್ಮಜ ಸೃಷ್ಟಿಯೊಳು ಎಂಬ ಅಭಿಪ್ರಾಯ ವನ್ನು ಕಾವ್ಯದಲ್ಲಿ ಪುಷ್ಟಿಗೊಳಿಸುವುದು ಕವಿಯ ಪರಮಧ್ಯೇಯ. ಆದುದ ರಿಂದ ರಾಮನನ್ನು ಮರುಳುಗೊಳಿಸಲು ಕಾರಣಳಾದ ರತ್ನಾಜಿಯ ಪಾತ್ರ ವನ್ನು ಅತಿ ಮೋಹಕವಾಗಿ ಚಿತ್ರಿಸಿದ್ದಾನೆ. ಅವಳು ಅಂದಿನ ಊರ್ವಶಿ. ಕಂಪಿಲನ ಮೋಹದ ಮಡದಿಯಾಗಿ ರಾಮನೆಡೆಯಲ್ಲಿಯೇ ಬಂದು ಸೇರಿ

ದ್ದಾಳೆ. ಅಂಗಜನ ನನೆಗಣೆಯಂತಿದೆ ಅವಳ ರೂಪು. ಶೂಲದ ಹಬ್ಬದ ದಿನ ತನ್ನ ನೆಲೆಮಾಡದಲಿದ್ದ ಅವಳನ್ನು ಅಲ್ಲಿ ನೆರೆದಿದ್ದ ಅರಸುಕುವರರೆಲ್ಲ ನೋಡಿ ಆರಿವಳಿಂದ್ರನ ರಾಣಿಯೋ ರಂಭೆಯೋ ಮಾರನರಸಿಯೋ ಗಂಧರ್ವನಾರಿಯೋ ನಾಗಾಂಗನೆಯೋ ಎಂದವಳನ್ನು ಕಣ್ಣಾರೆ ನೋಡಿದರು. ಆ ಲತಾಂಗಿಯ ಅಂಗದೊಳೆಸೆದವು ಜನದಾಲಿಗಳಾಕೆಯ ಮೇಲೆ ಲೀಲೆ ಕೈಮಿಗೆ ಸೂಸಿದ ಕುಸುಮಾಂಜಲಿ ಜಾಲದಂತೆ. ಮಾರನ ಪಡಿರೂಪ ದಂತಿದ್ದ ರಾಮನ ಆಕಾರವನ್ನು ನೋಡಿ ಅವಳಿಗೆ ಕಾಮಾಗ್ನಿ ಉರಿದು ಜಾಜ್ವಲ್ಯವಾಗಿ ಪಡಬಾರದವಸ್ಥೆಗೀಡಾಗಿ ತನ್ನ ಸಖಿಯಾದ ಸಂಗಿಯ ಸಹಾಯದಿಂದ ದುಷ್ಟದೇವತೆಗಳ ನೆರವನ್ನು ಪಡೆದು ರಾಮನ ಮುತ್ತಿನ ಚೆಂಡು ತನ್ನ ಅಂಗಳದಲ್ಲಿ ಬೀಳುವ ಏರ್ಪಾಡು ಮಾಡುತ್ತಾಳೆ. ಕಾಟಣ್ಣ ನನ್ನು ಕಳುಹಿಸಿ ತರಿಸಲಾರದೆ ರಾಮನು ತಾನೇ ಚೆಂಡನ್ನು ಕೇಳಲು ಹೋಗಿ ಒಯ್ಯನೆ ರೂಪುಗೊಂಡ ಕುಸುಮಕೋದಂಡನ ಕುಲದೇವತೆಯ ಮಂಡೆ ವಾಗಿಸುವ ರೂಪಿನ ಮಾನಿನಿಯನಾಖಂಡಲಸುತ ನೋಡಿದನು. ಕಾಲಿಗೆ ಮಣಿದ ರಾಮನ ಬಿಗಿಯಪ್ಪಿಕೊಂಡು ಪ್ರಾಣಬಂದಂತೆ ಪೆರ್ಚಿದಳಾ ಬಾಲೆ ಮನದೊಳಗೆ. ಸಾಲಿಕ್ಕಿರುವ ಸಾತ್ವಿಕೋದಯಗಳ ಮೆಯ್ಯಮೇಲೆ ಕಂಡು ತಡದಿರದೆ ಬೇಗ ಕೊಡೆಂದು ಕೇಳಿದ ಕಂತುಸನ್ನಿಭ ರಾಮನಿಗೆ ವಕ್ರವಚನ ದಿಂದ ಕಂತುಕೇಳಿಯ ನೀನೆನ್ನೊಳೆಸಗೆಂದು ನುಡಿಯುವಳು. ಶಿವಶಿವ ಪರಮ ಪಾತಕವೆಂದು ಜಡಿದು ಬಿಡಿಸಿಕೊಂಡು ಹೊರಟ ಅವನನ್ನು ದಡಿಗರಕ್ಕಸಿ ಯಂತೆ ಪಿಡಿದೆಳೆದು 'ಪಂಚಮಹಾಪಾತಕವಿದು, ಚಪಲತನ ಬೇಡ ಹೆತ್ತ ಮಗನೊಳು ಪಳಂಚಡೆ ಬಿಡು ತಂದೆಯರಸಿ' ಎಂದು ಬೇಡಿದವನಿಗೆ 'ನೀತಿ ಶಾಸ್ತ್ರವ ಕೇಳಬಂದೆನೆ ? ನಿನ್ನೊಳೀತಕೀ ಧರ್ಮದ ಜಡತೆ ? ಓತು ಒಡಗೋಡು ಎಂದು ಅಂಗಲಾಚುವಳು.' ಅದರಿಂದ ಏನೂ ಪ್ರಯೋಜನವಾಗದಿರಲು ನೆನೆಯಬಾರದು, ನೆನೆದೊಡೆಯುು ನಾಲಿಗೆಯ ತುದಿಗೊನೆಗೆ ತರಬಾರದ ಪುಸಿ ಗಳನು ಗಂಟಿಕ್ಕಿ ರಮಣನೊಡನೆ ಅನುವದಿಸಿ ಸಾಯಬೇಕವನು ಇಲ್ಲ ವಾದೊಡೆ ನಾನು ಬಿಡಬೇಕು ಕಾಯುುವ, ಇರ್ವರುಳಿವುದು ನ್ಯಾಯವಲ್ಲ' ಎಂದು ಬಲಾತ್ಕರಿಸಿ ರಾಜನು ಅವನು ತಲೆಯನ್ನು ಕತ್ತರಿಸಿ ತಂದೊಪ್ಪಿ ಸಲು ಆಜ್ಞೆ ಮಾಡುವಂತೆ ಪ್ರೇರೇಪಿಸುವಳು. ಅವನ ಪಡಿರೂಪಿನ ಅಳಿ

ವನ್ನು ಕಂಡು ನಿಜವೆಂದೇ ಭಾವಿಸಿ ತಾನು ಹಾಗೆ ಮಾಡಬಾರದಾಗಿತ್ತೆಂದು ಕಳವಳಿಸುವಳು. ಬೈಚಪ್ಪನ ಬುದ್ಧಿವಂತಿಕೆಯಿಂದ ರಾಮನುಳಿದಿರುವನೆಂದು ತಿಳಿದಾಗ ಅಗಜೆಯ ಹರಿಬಕೆ ಬಂದ ನಾನಾಕಾರ್ಯ ಬಗೆಬಂದುದಿಲ್ಲ. ನಾನು ಸುರಲೋಕಕೆಯ್ದಬೇಕು' ಎಂದು ಪಿಂತಣ ಜನ್ಮದರಿವನ್ನು ತಿಳಿದು ಅಸುವನ್ನು ಅಮರಲೋಕಕ್ಕೆ ಕಳುಹಿದಳು.

ಕಥಾನಾಯಕನಾದ ಕುಮಾರರಾಮನ ವ್ಯಕ್ತಿ ಚಿತ್ರಣದಲ್ಲಿ ಕವಿಯು ತನ್ನ ಸಾರಸರ್ವಸ್ವವನ್ನೂ ವ್ಯಯಮಾಡಿದ್ದಾನೆ. ಆತನು ಕರ್ಣಾಟಕದ ವೀರಕ್ಷತ್ರಿಯನ ಅಪರಾವತಾರವೆಂಬುದನ್ನು ಮನಗಾಣಿಸಿದ್ದಾನೆ. ವೀರ್ಯಶೌಚಗುಣಗಳ ಪ್ರತ್ಯಕ್ಷಮೂರ್ತಿಯೆಂಬ ಭಾವನೆ ಯಾವ ಭಾಗವನ್ನು ಓದಿದವರಿಗೂ ಮನದಟ್ಟಾಗುವಂತೆ ರಚಿಸಿದ್ದಾನೆ. ರಾಮನು ಅರ್ಜುನನ ಅಂಶದಿಂದ ಲೋಕದಲ್ಲಿ ಧರ್ಮಸಂಸ್ಥೆಗಾಗಿ ಅವತರಿಸಿದ ಕಾರಣಪುರುಷ. ತಂದೆ ತಾಯಿಗಳಿಗೆ ಜಟ್ಟಂಗಿ ರಾಮೇಶ್ವರನ ಅನುಗ್ರಹದಿಂದ ಜನಿಸಿದವನು. ಇವನು ಜನಿಸಿದ ತಕ್ಷಣವೇ ತಂದೆಯಾದ ಕಂಪಿಲನಿಗೆ ಕುಲವಿನ್ನು ಕೆಡದು, ಕುಜನರ ಕೂಗಾಟವಿನ್ನು ನಡೆಯದು. ವೀರ ವಿಕ್ರಮನ ಪರಾಕ್ರಮವಿನ್ನು ಮೆರೆಯದು, ಬಲ್ಲಾಳ ನೃಪನ ಧಾರಿಣಿಯಿನ್ನುಳಿಯದು. ನವಲಕ್ಕ ತೆಲುಗರ ಗಂಡನೆಂಬೀ ಬಲುಬಿರುದು ರವಿಶಶಿಯುಳ್ಳಬರ ದಕ್ಕಿತು ಎಂಬ ಭರವಸೆಯುಂಟಾಯಿತು. ಪಳುಕಿನ ಪೆಣ್ಗೆಣೆಯೆನಿಸಿರ್ದ ಪತಿವ್ರತಾಶಿರೋಮಣಿಯಾದ ರಾಣಿ ಹರಿಯಾಲದೇವಿಯ ಮೇಲ್ವಿಚಾರಣೆಯಲ್ಲಿ ದಿನ ದಿನ ಬೆಳೆದು ಹೆಚ್ಚಿದನು. ಸರಿಯಾದ ಆಚಾರ್ಯನು ಓದಿಸಲು ಎಲ್ಲ ಕಲೆಗಳೂ ಇವನಲ್ಲಿ ನೈಗೊಂಡಿದ್ದುವು. ಹರಯ, ರೂಪು, ಸೊಬಗು, ರೇಖೆ, ಬೆಡಗು, ಬಿಂಕ ಬೆಳೆದುಬರಲು ತಂದೆತಾಯಿಗಳು ಆರಲಂಬೈದಂಗನಾರೂಪ ಧರಿಸಿ ನಿಂತಿದೆಯೆಂತಿದ್ದ ರಾಜತನೂಜೆಯರೈವರನು ಪರಿಯಣ ಮಾಡಿಸಿದರು. ಕುಮಾರನನ್ನು ನೋಡಿ ವಿನಯ ನಾಲಗೆಯನಾಂತದೊ ವಿತರಣಗುಣ ತನುವಿಡಿದುದೋ ವೀರಧರ್ಮ ಮನುಜರೂಪಾಂತುದೊ ಎಂದು ಕೊಂಡಾಡದ ಜನಗಳಿಲ್ಲ. ವಿನಯದಿಂದ ವಿತರಣದಿಂದ ವಿವಿಧ ವಾಕ್ಚತುರತೆಯಿಂದ ಕುವರನು ಕ್ಷಿತಿಯೊಳಗುಳ್ಳ ಬಿರುದಿನ ಸಂತತಿಯ ಪೊನ್ನೀವ ಗಡ. ಸ್ಥೈರಿಪ ಗಡ, ಪರವೆಣ್ಣನಿರವ ನಿಟ್ಟಸ

ಗಡ, ಕರೆದೀವ ಗಡ, ಕಾಳೆಗದೊಳು ಬೆನ್ನೀಯಗಡ ಎಂದು ಇಳೆಯೊಳಗುಳ್ಳ ನೀರೆಲ್ಲ ಬಂದು ಅಂಬುಧಿಯ ಸೇರುವಂತೆ ಕಲಿಗಳೂ ಭಟರೂ ಬಂದು ರಾಮನ ಸೇರಿದರು. ಪ್ರತಿದಿನವೂ ಕುಮಾರನು ಪ್ರಾತಃಕಾಲದಲೆದ್ದು ವಿಭೂತಿಯನ್ನಿಟ್ಟು ರುದ್ರಾಕ್ಷಿಯನ್ನು ತೊಟ್ಟು ಬಿಳಿಯ ಪಟ್ಟೆಯನುಟ್ಟು ಚಿನ್ನದ ಹಾವುಗೆಯ ಮೆಟ್ಟಿ ದೇವಾಗಾರಕಡಿಯಿಟ್ಟು ಶಿವಲಿಂಗವ ಕಾಣುತ್ತ ಅಡಿಗೆ ತಲೆವಾಗಿ ಮೆಯ್ಯಿಕ್ಕಿ ನಿಂದು ನುತಿಸಿ ಬಳಿಕಷ್ಟವಿಧಾರ್ಚನೆಯಿಂದ ಲಿಂಗವ ಪೂಜಿಸಿ ಇಂದುಕುಲಾವತಂಸನ ತನ್ನ ಹೃದಯಾರವಿಂದದೊಳಗೆ ನೆಲೆಗೊಳಿಸಿ ಪರವೆಣ್ಗಳಮ್ಮ ಹರಿಹರ ದೇವಿಯೆ ದೊರೆಯೆಂದೀಶನ ಮುಂದೆ ಬಳಿನೀರ್ಗುಡಿವಂತೆ ತೀರ್ಥಜಲವನೀಂಟುವನು. ಬಳಿಕ ಬೀಳ್ಕೊಂಡು ಮದಾಲಸಗಮನೆಯರೊಡನೆ ಆಭರಣಾಲಯವನ್ನು ಹೊಕ್ಕು ಹತ್ತು ಕಟ್ಟೆಕ್ಕಿದ ಪದಕ ಹೀರಾವಳಿ, ಮುತ್ತಿನಸರ, ರಿಪುನೃಪರ ಬಿತ್ತರ ಗಂಡನೆಂದೆಂಬ ತೊಡವು ದೇಸೆವೆತ್ತಿರಲು ಪೂಸಿದ ಯಕ್ಷಕರ್ದಮ ಜವಾದಿಯ ಸುವಾಸನೆಯಿಂದ ದೆಸೆಗಳನ್ನು ಬಾಸಣಿಸುತ್ತ ಮೆರೆಯುವನು. ಮುಂದೆ ತೊಡರು ಝಣಝಣರವದಿಂದ ಪೊಜಮಟ್ಟು ಲೀಲೆಯಿಂದ ಮುತ್ತಿನ ಚಾವಡಿಯಿಂದೋಲಗಶಾಲೆಗೆ ಬಂದಲಂಕರಿಸುವನು ಮೆರೆವ ಸಿಂಹಾಸನವನು ರಿಪುಗಜಸಿಂಹನಂದನನನು. ಮಂಡಳಿಕರ ಮಂತ್ರಿಗಳ ಸಾಮಂತರ ದಂಡನಾಯಕರ ಮನ್ನೆಯರ ಗಂಡುಗಲಿಗಳ ಗರುಡಿಯಾಚಾರ್ಯರ ತಂಡಗಳೆಸೆದಿಹುದೋಲಗಶಾಲೆಯೊಳು. ವೀಣೆ ಕಿನ್ನರಿ ಸರಿಮಂಡಲ ತುಂಬುರುವೀಣೆಗಳನ್ನು ಬಾರಿಸುವ ಜಾಣರಿಂದ ಆನಂದವಡೆಯುವನನುದಿನವು. ಚೆಲುವರಗಂಡ, ಮೂರುರಾಯರಗಂಡ, ಗಂಡರಗಂಡ, ತೆಲುಗರಗಂಡ, ಭೂಲೋಕದ ಮದನಾವತಾರ, ರಾಯಗೋಧೂಮಗರಟ್ಟ, ಗರ್ವಿತಪರರಾಯಹರಿಣಶಾರ್ದೂಲ, ರಾಯವಿಪಿನದಾವಾನಲ, ರಾಯನಿಕಾಯತಿಮಿರತೀವ್ರಕಿರಣ ಎಂದು ವಂದಿಗಳು ಘೋಷಿಸುವರು. ಈ ವೈಭವದಿಂದ ಕೂಡಿ ಗೋವೆಯಲ್ಲಿದ್ದ ದೇವವಾರುವವನ್ನು ತನ್ನದಾಗಿಸಿದ. ಹುಲಿಯೂರಿನ ಪಾಳೆಯದವನನ್ನು ಪಾಳುಮಾಡಿಸಿದ; ಬಲ್ಲಾಳನ ಸೊಲ್ಲಡಗಿಸಿದ; ಕರಿಪತಿಯ ಮುರಿದೋಡಿಸಿದ; ಓರುಗಲ್ಲುಗನು ಮುಲುಕಲಾರದೆನಿಸಿದ. ಸುರತ್ರಾಣನನ ಹುರಿಯಾಳನ್ನು ಮೇರೆಯಿಂದಾಚೆಗೆ ತೊಲಗಿಸಿದ. ಹೆದರಿ ಬಂದ ಬಾದುರನನ್ನು

ಆದರದಿಂದ ಸ್ವೀಕರಿಸಿ ಅವನನ್ನು ಬಿಡಿಸಿಕೊಳ್ಳಲು ಬಂದ ನೇಮಿಯನ್ನು ಮಾನೌಮಿಯಪೇತಾಳನಂತಾಡಿಸಿದ. ತುರುಕರ ತಂಡವ ತರಿದೊಟ್ಟಿ ಹಿಂದುಗಳಿಗಾನಂದವನಾಗಿಸಿದ.

ಯುದ್ಧಭೂಮಿಯಲ್ಲಿ ಅವನ ಪೌರುಷ ಅತ್ಯದ್ಭುತವಾದುದು. ಎಲ್ಲಿ ನೋಡಿದರಲ್ಲಿ ರಾಮನ ಬೊಬ್ಬೆಯುಬ್ಬರವೆಲ್ಲಿ ನೋಡಿದರೆ ರಾಮುಗನ ಸೆಲ್ಲೆಹ ಶಕ್ತಿ. ಇಱಿವೃತ, ತಱಿವೃತ, ಕೊಱೆವೃತ ಜಱೆವೃತ ನೆಱೆಗಲಿಗಳ ಬೆಂಬತ್ತಿ ಸೆಱೆವಿಡಿದು ಮಂದಿ ಕುದುರೆಯೆಲ್ಲವ ಮುಱಿಯುವನು ಕಳಿದ ಹೂವಿನ ತೊಡಂಬೆಯನಾ ಬಿಱುಫಾಳಿ ಸುಳಿದು ಕೆಡುಪುವ ತೆಱದೊಳು ಕಲಹದೊಳಗೆ ಕಲಕುವನು ರಾವುತರನು ಕಂಪಿಲಾತ್ಮಜನು. ಆನೆಗಳ ಸೊಂಡಿಲನು ಕಡಿದು ಹರಹುವನು ಕಡಿಗಲಿ ರಾಮು; ಸಿಂಗಾಡಿದುಡುಕಿ ಸಿಂಗವ ಮುಱಿಯುಂತೆ ನಿಂತು ಶರಭಶಾಬಕದಂತೆ ಮುಲಿತು ಅಂಬುಗಳ ಬಂದೋಡಿಸುವನವನು ಬಿಲ್ಲಿಂದ. ಅಸಮಸಾಹಸಿ ರಾಮನನು ಸಮಕೊಳಿಸಿ ನಿಲ್ಲುವವರಿಲ್ಲವಾದರು.

ವಿರಾಮಕಾಲದಲ್ಲಿ ಗುಂಡಿಗೆ, ಕೊಡಗೊಪ್ಪರಿಗೆ, ಡೋಣಿ, ಪರಿಗೋಲು ಬೆಂಡುಮರಗಳನು ತರಿಸಿ ತುಂಗಭದ್ರೆಯೊಳು ಬಾಂದೊರೆಯಳ್ಳೈರಾವತ ಕಲಭವಾನಂದದಿಂ ನೀರಾಟವಾಡುವಂತೆ ನಲಿದು ಇಂಗಡಲಿಂದ ವೈಕುಂಠಕ್ಕೆ ಪೋಪ ಹರಯನನುಕರಿಸಿ ನಗರಿಗೆಯ್ದುವನು.

ಒಂದು ವಸಂತಕಾಲದಲ್ಲಿ ಶೂಲದ ಹಬ್ಬವು ಬಹು ವೈಭವದಿಂದ ನಡೆಯಲೇರ್ಪಾಡಾಗುವುದು. ಅಲ್ಲಿ ಅಕಸ್ಮಾತ್ತಾಗಿ ಅವನನ್ನು ಕಂಡ ಅವನ ಚಿಕ್ಕಮ್ಮ ರತ್ನಾಜಿಯು ಅವನಲ್ಲಿ ಮೋಹಗೊಳ್ಳುವಳು. ಆದಾದ ಕೆಲವು ಕಾಲಕ್ಕೆ ಸರಿಯಾಗಿ ರಾಮನು ಚಾರುಧವಳ ನವ್ಯದುಕೂಲದ ಧೋರ್ೀರಕವನುಟ್ಟು ಗಾಳಿಪೊಗುವೊಡಳವಿಲ್ಲದ ತೆರದಿ ತಮ್ಮ ಎರೆಗಳನ್ನು ನಿಲ್ಲಿಸಿ ಚೆಂಡಾಟವನ್ನಾಡುವನು. ಹಾಳು ದೈವಗಳ ಕೀಳು ಪ್ರಭಾವದಿಂದ ಚೆಂಡು ರತ್ನಾಜಿಯ ಅಂಗಳದಲ್ಲಿ ಬೀಳುವುದು. ಅದನ್ನು ತರಲು ಹೋದ ರಾಮನು ಅವಳ ದುರ್ನಡತೆಯನ್ನು ಮೊದಲು ಪಿತ್ತವಳ ಚಿತ್ತದಾನಂದವೆಂದು ತಿಳಿದು ಅವಳ ವಕ್ರಭಾವವನ್ನು ತಿಳಿದಮೇಲೆ ಒದರಿಕೊಂಡು

ಪಂಚಮಹಾಪಾತಕವೆಂಬುದೀದೋಷದಂಚಲಕೆ ಪಾಸಟೆಯೇ ಶಿವಾಶಿವಾ ಎಂದು ಬೆರಲ್ಗಳನಿಕ್ಕಿ ಕಿವಿಗಳಿಗೆ ಅವಳಿಗೆ ತಿಳಿನುಡಿಗಳನ್ನುಸುರುವನು. ಅವನ ನುಡಿಗೆ ಕಲ್ಲುಮಾಳಿಗೆ ಕರಗದಂತವಳೆದೆ ಕರಗದೇ ಹೋಗುತ್ತದೆ. ಬಿಡು ಪಾತಕಿ ಹೋಗೆನುತ ಒದರಿಕೊಂಡು ಹೊರಗಾಗುವನು. ತಲೆಯನ್ನು ತರಬೇಕೆಂಬ ತಂದೆಯಾಜ್ಞೆಯಾಗುತ್ತದೆ. ಇದನ್ನು ತಿಳಿಸಿದ ಬೈಚಪ್ಪನಿಗೆ ಬಿಡುವೆಣ್ಗಳ ಜಿಲೆವೆಣ್ಗಳ ಪರವೆಣ್ಗಳೊಡನಂಗಜಚೇಷ್ಟೆಯಿಂದ ನುಡಿದುದಿಲ್ಲಿಂದುವರ ಜನನಿಯುದರದಿಂದ ಬಂದುದು ಮೊದಲಾಗಿ. ಜನನಿ ಜನಕರು ತಂದಿತ್ತ ವನಿತಾನಿವಹವಲ್ಲದನ್ಯಾಂಗನಾಜನವ ನೆನೆದೊಡೀಶನಾಣೆ. ಸಿರಿವನರಿದು ಕೊಟ್ಟಪೆನು; ಸಂದೇಹವ ಪರಿಹರಿಸೆನ್ನ ಮೇಲವಳು ಹರಹಿಸಿದ ಹುಸಿಸುದ್ದಿಯನು. ಪರವನಿತಾಸಹೋದರನೆಂಬೆನ್ನ ಬಿರುದ ಹರಹು ಲೋಕದೊಳು ಎಂದು ಮಂತ್ರಿಯ ಕಾಲಿಗೆ ಮಣಿಯುವನು.

ಬೈಚಪ್ಪನು ದೇವದೂತನ ಸಹಾಯದಿಂದ ರಾಮನನ್ನು ನೆಲೆಮಾಳಿಗೆಯಲ್ಲಿರಿಸಿ ಸುರತಾಳನ ದಂಡು ಪುನಃ ಕುಮ್ಮಟದ ಮೇಲೆ ಮುತ್ತಿದಾಗ ಅವನನ್ನು ಹೊರಗೆ ಬರಮಾಡುವನು. ಇದನ್ನರಿತ ರತ್ನಾಜಿಯು ತನ್ನ ಗೊಡ್ಡಾಟವು ಹೊರಬೀಳುವುದೆಂದು ಆತ್ಮಹತ್ಯಮಾಡಿಕೊಳ್ಳುವಳು. ಆಗ ರಾಮನು ಬಹುಖಿನ್ನನಾಗಿ 'ಏತಕಸುವನೀಡಾಡಿಕೊಂಡಳು ಚಿಕ್ಕಮಾತೆ, ತಂದೆಯ ಸಂಸಾರಸುಖಕಂತರಾಯವಾಯಿತು. ರಾಯನ ಮನಕೆ ಬಂದುದು ಬಹಳ ವಿಷಾದ' ಎಂದು ನೊಂದನೆದೆಯೊಳಗೆ. ಮುಂದೆ ಮಾತಂಗಿ ಸುರತಾಳನ ಅಪಾರ ಸೈನ್ಯದೊಡನೆ ಕುಮ್ಮಟದ ಮೇಲೆ ನಡೆದು ಮೊದಲು ವಿಶೇಷ ಸೋತವಳಾಗಿ ಪುನಃ ಬಹುಶಃ ತೆಲುಗರ ಮೋಸದಿಂದ ರಾಮನ ಮೇಲೆ ಅಕಾಲದಲ್ಲಿ ನುಗ್ಗಿ ಅವನನ್ನು ಬಲಹೀನನನ್ನಾಗಿಸುತ್ತಾಳೆ. ರಾಮನು ಒಂದು ಶಿಲೆಯನ್ನು ಒರಗಿ ನಿಶ್ಯಕ್ತನಾಗಿ ನಿಲ್ಲುತ್ತಾನೆ. ಆ ಕೊನೆಯ ಯುದ್ಧಕ್ಕೆ ಹೊರಡುವ ಮುನ್ನ ರಾಮನು ತನ್ನ ತಂದೆಗೆ ಹೇಳಿ ಕಳುಹಿಸುವ ಈ ಕೆಳಗಿನ ಮಾತುಗಳು ಅವನ ಉಚ್ಚಸ್ವಭಾವವನ್ನು ಹೊರಗೆಡಹುವುವು—

"ಬಿರುದ ನೆನೆಯು ಹೇಳು, ಭೀತಿಯು ಬಿಡಹೇಳು, ತುರುಕರಂತಲ್ಲಿಗೆಯ್ದು
ದೊಡೆ
ಧುರವನೆಸಗಹೇಳು. ನನ್ನಾಸೆಯು ಬಿಟ್ಟೆರ ಹೇಳು.
ಜಸವಳಿಜಸವೆಂಬಿವು ತನ್ನವಲ್ಲದೆ ವಸ್ತುವಾಹನ ವಸ್ತುಗಳು
ಬಿಸಜಾಕ್ಷಿಯರು ತನ್ನವರಲ್ಲ, ಕೀರ್ತಿಯ ಮಸುಳಬೇಡೆಂದು ಪೇಳು.
ಕೆಡುವ ಒಡಲನ್ನು ನೆಚ್ಚದಿರೆನ್ನು, ಈಶ್ವರನಡಿಯು ಮರೆಯದಿರೆನ್ನು;
ಮಡದಿ ಮಕ್ಕಳ ನೆನೆಯದಿರೆನ್ನು, ರಣಕೆದೆಗೆಡದಿರೆನ್ನಯ್ಯನೊಡನೆ—"

ರಣಮಧ್ಯದಲ್ಲಿ ಮಾತಂಗಿಯ ಕಡೆ ವಂದಿಗಳು ಬಂದು ಸುರತಾಳನ ಮಗಳನ್ನು ಮದುವೆಯಾಗಿ ಸುಖದಿರೆಂದು ಹೇಳಿ ಮೋಸಗೊಳಿಸಲು ಯತ್ನಿಸಿದಾಗ ರಾಮನು ಅವರಿಗೆ ಕೊಡುವ ಉತ್ತರವೂ ಇದೇ ಮನೋಭಾವವನ್ನು ಪುಷ್ಟೀಗೊಳಿಸುವುವು.

"ಸುರ ವಧುಗಳ ಬಯಸುವವರಲ್ಲ, ಸುರತಾಳ ಕುವರಿಯ ವರಿಸುವರಲ್ಲ.
ಪರವಧುಗಳ ನೋಡಲಿಲ್ಲ, ಈಶ್ವರನಲ್ಲದಿಲ್ಲ ಹೃದಯ ಮಧ್ಯದೊಳು,
ಧುರಕೆ ಸರಿಯಲ್ಲಿದು ನಿಮ್ಮ ಸರಣಿ"

ಈ ಸ್ಥಿತಿಯನ್ನಱಿತು ಶಿವನು ತನ್ನೆಱಿಆಯಳಿಗೆ ಈ ರೀತಿ ಹೇಳುತ್ತಾನೆ. "ನೆಱಿಆಮೆಚ್ಚಿದೆನು ರಾಮನ ಶುಚಿತೆಗೆ; ದೇವಿ ಮಱಿಆ ಮಾತಿಲ್ಲ ನಿನ್ನಾಣೆ. ಸುರಲೋಕದೊಳು ಊರ್ವಶಿ ರಾಮನ ಕೀರ್ತಿ ತರುಣಿಯು ಪೊತ್ತಿಡಿಸುತ ಪರಧಾತ್ರಿಯಾದಳು ಸೂಳೆತನವ ಬಿಟ್ಟೆರದೆ; ಮೆಚ್ಚಿದೆನು ರಾಮುನಿಗೆ." ಪತಿಯ ಮಾತನ್ನು ಕೇಳಿದ ಗಿರಿಜೆಯು 'ಆದೊಡೆ ನಿನ್ನ ಸಾಲೋಕ್ಯ ಪದವಿಯು ಕೊಡು ತಡೆಬೇಡ' ಎಂಡೆನಲು ಶಿವನು 'ಕೊಟ್ಟೆನು ಸಾಲೋಕ್ಯ ಪದವಿಯು, ಕೊಟ್ಟೆನು ಗಣಪದವಿಯನು' ಎಂದು ನುಡಿದು ಪುಷ್ಪಕವಿಮಾನವನ್ನು ಕಳುಹಿಸಿ ತನ್ನಲ್ಲಿಗೆ ರಾಮುನನ್ನು ಬರಮಾಡಿಕೊಂಡು ನುಡಿದಂತೆ ನಡೆದು ಮಹಾಪ್ರಮಥರ ಪಂಕ್ತಿಯೊಳೊಂದಿಸಿದನು ಕುವರನನು.

ಕವಿ ನಂಜುಂಡನ ಶೈಲಿ ಸರಳವಾದುದು, ಸುಲಭವಾದುದು; ಹಿತ ಮಿತವಾದ ಸಂಸ್ಕೃತ ಶಬ್ದಗಳಿಂದ ಕೂಡಿ ವಾಚಕರಿಗೂ ಶ್ರೋತೃಗಳಿಗೂ ಬಹು ಮೋಹಕವಾಗಿದೆ. ಪ್ರಾಚೀನ ಸಂಪ್ರದಾಯಗಳನ್ನು ಪೂರ್ಣವಾಗಿ

ತ್ಯಜಿಸದಿದ್ದರೂ ಸಾಧ್ಯವಾದಷ್ಟು ಕವಿಸಮಯಗಳನ್ನು ದೂರಮಾಡಿದ್ದಾನೆ. ಸಾಂಗತ್ಯದ ಹೊಸ ಛಂದಸ್ಸಿನಲ್ಲಿ ರಚಿಸಿರುವುದರಿಂದ ಕಾವ್ಯವು ಸಾರ್ವಜನಿಕರ ಸ್ವತ್ತಾಗಿದೆ. ಬಾಳಿ ಬದುಕಿದ ವ್ಯಕ್ತಿಯ ಸತ್ಯಚಿತ್ರಣವಾಗಿರುವುದರಿಂದ ಜೀವನಸಂಸ್ಕಾರಕ್ಕೆ ವಿಶೇಷ ಸಹಾಯಕವಾಗಿದೆ. ಕವಿಯು ಪ್ರತಿಭಾಶಾಲಿಯಾಗಿರುವುದರಿಂದ ತನ್ನ ಕಾವ್ಯದಲ್ಲಿ ಆತ್ಮೀಯವಾದ ಸರ್ವಜನಗ್ರಾಹ್ಯವಾದ ಜೀವನದ ಭಿನ್ನಕ್ಷೇತ್ರಗಳಿಗೆ ಸಂಬಂಧಪಟ್ಟ ಅನೇಕ ರೂಪಕೋತ್ಪ್ರೇಕ್ಷೆಗಳನ್ನು ಉಪಯೋಗಿಸಿದ್ದಾನೆ. ಅವನ ಉಪಮಾನಗಳೆಲ್ಲವೂ ಉಪಮೇಯಗಳ ಸಾಕ್ಷಾತ್ಪರಿಚಯವನ್ನುಂಟುಮಾಡಲು ಶಕ್ತಿಯುಳ್ಳವು. ಎಲ್ಲವೂ ನವೀನವಾಗಿ ಕಾಣುವುವು. ಕೆಲವು ಪ್ರಾಚೀನ ಗ್ರಂಥಗಳಿಂದ ಆರಿಸಲ್ಪಟ್ಟುವಾದರೂ ಉಕ್ತಿ ವೈಚಿತ್ರ್ಯದಿಂದ ಹೊಸ ರೂಪವನ್ನು ತಾಳಿವೆ. 'ಅರಲಿರ್ಜಡೆಯೊಳಿರ್ದು ತನ್ನ ಪರಿಮಳವ ದಿಗ್ವಿಸರಕೆ ಕಳಿಪುವಂತೆ ಆ ತುರಂಗ ಸುರಲೋಕದೊಳಿರ್ದು ತನ್ನಂಶವ ಧರೆಗೆ ಕಳುಹಿಸಿತು' 'ತರಣಿಯ ಬಿಟ್ಟು ಕಿರಣ, ಕುಸುಮವ ಬಿಟ್ಟು ಪರಿಮಳವೆಯ್ದುವಂದದಲಿ ಸುರತರಗ ಬಿಟ್ಟದಟಭಾಗವನು ಬಂದೀ ಧರಣಿಯೊಳಗೆ ಜನಿಸಿದುದು' 'ಗಾರುಡಿಗನ ಕಂಡ ಘಟಸರ್ಪದಂತೆ ಕುದುರೆ ರಾಮನ ಕಂಡು ಕ್ರೂರತೆ ಬಿಟ್ಟು ಹೇಷಾರವವ ಮಾಡಿದುದು.' ಸುತ್ತ ಕವಿದ ಕತ್ತಲೆಯು ದಿನನಾಯಕನನೊತ್ತರಿಸುವಂತೆ ಮುತ್ತಿದ ಮೋಹರವ ತೊತ್ತಳದುಳಿದನು ರಾಮು,' 'ಕೊಲುವ ಹುಲಿಗೆ ಕೋಳುಗೊಡುವನಂತೆ ಕಂಪಿಲ ಬಾದರನನು ಹಿಂದಿಕ್ಕಿಕೊಂಡನು,' ಸುರಕರಿ ಗಂಗಾಪುಳಿನದೊಳು ಮೆಯ್ಗರೆವಂತೆ ನೃಪತನಯ ಪವಡಿಸದನತಿಮೃದುತಲ್ಪದೊಳು' 'ಶಶಿಮಂಡಲವೆಸೆದುದಪರಾದ್ರಿಯೊಳು ಅಮರರುಂಡು ಬಿಸುಟ ಬೆಳ್ಳಿಯ ಬಟ್ಟದಳಿಗೆಯಿರವನೇಳಿಸುತ' 'ಉರಿದೋರೆ ಜೇನಹಟ್ಟಿಯ ಬಿಟ್ಟು ನೊಣವಿರದೆ ತೆರಳುವ ತೆರದೊಳು ಸರಿದುದು ಸುರತಾಳ ಲಗ್ಗೆ ದುರ್ಗವ ಬಿಟ್ಟು' 'ತಳಿಯ ಮುರಿದು ಕರಿಪತಿ ಕದಳೀ ವನದೊಳಗೆ ಪೊಗಲು ಕಳಭಗಳು ಬಳಿಸಲುವಂತೆ ರಾಮುನೊಡನೆ ಪೊಕ್ಕುದಾ ಪರಿವಾರ.' ವಿಲಯದೊಳು ವಿಶ್ವದಾಟವಡಗೆ ಮಾಯಾಲಲನೆ ಮೆಯ್ಗರೆವ ಮಾಳ್ಕೆಯೊಳು ಮಾತಂಗಿ ಮಲಗಿದಳು ಅಬ್ಜಸಖನ ಕಾಲಾಟದ ಬಲುಮೆಯುಡಗಲು,' 'ಬಿಜ್ಜಳದಿಂದ ಬೀಸಿದ ಮಾಸಿದ ತನಿಗೆಂಡದಂತೆ ಅಸುರವಡೆದುದಾ

ಬಲ' 'ಪಡಗುನಡೆಯೆ ಪಟವೆತ್ತಿ ಜಡಧಿಯ ನೀರೊಡೆದು ದಾರಿಯ ಕೊಡುವಂತೆ ಕಡುಗಲಿ ರಾಮನಾ ಕುದುರೆಗೆ ಪಡೆಕೊಟ್ಟುದು ದಾರಿಯನು.' 'ಹೆಚ್ಚಿದ ಹೇರಡವಿಯನೆಲ್ಲವ ಕಾಳ್ಗಿಚ್ಚು ಸುಟ್ಟೊಂದು ಬಲ್ಮರನ ಕೆಚ್ಚ ನಾಶ್ರಯಿಸಿ ನಿಂದಂತೆ ನಿಂದನು ರಾಮನುಚ್ಚ ಶಿಲೆಯೊಂದನು ನೆಮ್ಮಿ.'

ಕಾವ್ಯದ ಉದ್ದಕ್ಕೂ ಉಪಯುಕ್ತವಾಗಿರುವ ಅನೇಕ ಲೋಕೋಕ್ತಿಗಳು ಕಾವ್ಯವನ್ನು ಮತ್ತಷ್ಟೂ ಆಕರ್ಷಕವನ್ನಾಗಿ ಮಾಡಿವೆ. 'ನಲ್ವೆಂಡಿರ ನುಡಿಗೇಳದ ವೀರರುಂಟೆ'; 'ನಂಬದರಾರ್ ಓತೆಳವೆಂಡಿರ ಸಟೆನುಡಿಯ; ಮಾನವನಱಿಯರು ಮೇಱೆಯು ಗಣಿಸರು ಹಾನಿವೃದ್ಧಿಗಳ ಬಗೆಯರು ಮಾನಿನಿಯರಿಗೆ ಮನವಿತ್ತ ಮಾನವರೇನ ಮಾಡರಿಳೆಯೊಳಗೆ'; ಕುಲಟಾಂಗನೆಯ ಬಾಳುವೆ ದುರ್ಮಂತ್ರಿಯ ಕೆಳೆತನ, ದುಷ್ಟನೃಪತಿಯ ಒಲುಮೆಗಳು ಕಡೆಗೆ ಕೇಡ ತಾರದಿರದು'; 'ಅರಸಿಂಗಾಱುಬಾಯಿ:' 'ಮದಕರಿ ಮರೆಯ ಹಿಂಡಿಗೆ ಕೈಮಱೆವುದೆ—ಈ ವಾಕ್ಯಗಳು ಜೀವನದ ಅರಿವನ್ನು ಖಚಿತವಾಗಿ ಶ್ರುತಪಡಿಸುತ್ತವೆ.

ಕುಮಾರ ರಾಮನ ಸಾಂಗತ್ಯ ಅಥವಾ ಪರದಾರ ಸೋದರ ರಾಮನ ಕತೆಗೆ ವಿಶೇಷವಾಗಿ ಪ್ರಾಶಸ್ತ್ಯವಿರುವುದು ಐತಿಹಾಸಿಕ ದೃಷ್ಟಿಯಿಂದ. ಅದರಲ್ಲಿ ಉಕ್ತರಾಗಿರುವವನೇಕರು ಬಾಳಿ ಬದುಕಿದ ವೀರಭಟರು. ವರ್ಣಿತರಾಗಿರುವ ರಾಜ, ಮಂತ್ರಿ ಸೇನಾಪತಿಗಳು ಭಾರತೀಯ ಐತಿಹಾಸಿಕದಲ್ಲಿ ಪ್ರಧಾನ ಪಾತ್ರವನ್ನು ವಹಿಸಿರುವರು. ಸೂಚಿತವಾದ ಸ್ಥಳಗಳೂ ಸನ್ನಿವೇಶಗಳೂ ಯುದ್ಧಗಳೂ ಇಂದಿಗೂ ಜನರ ಜೀವನಾಡಿಯಲ್ಲಿ ಸಜೀವವಾಗಿ ಉಳಿದು ಅವರನ್ನು ಸಚೇತನರನ್ನಾಗಿ ಮಾಡತಕ್ಕವು. ಇವುಗಳಲ್ಲನೇಕ ಇನ್ನೂ ಮಾನವರ ಸ್ಮೃತಿಪಥದಿಂದ ದೂರವಾಗಿರದೆ ನವೀನವಾಗಿಯೇ ಇವೆ. ಅಲ್ಲಿ ನಿರೂಪಿಸಿರುವ ಆಚಾರ ವ್ಯವಹಾರಗಳಂತೂ ಹಿಂದುಗಳ ಜೀವನದ ನಾನಾಮುಖಗಳನ್ನು ಪರಿಚಯಮಾಡುವುವು. ಕವಿಯ ಸೂಕ್ಷ್ಮದೃಷ್ಟಿ, ಕೌಶಲ್ಯ, ಕೈಚಳಕ ಎಲ್ಲೆಡೆಯಲ್ಲಿಯೂ ಸ್ಪಷ್ಟವಾಗಿ ಮೇಲೆದ್ದು ಸುಮಾರು ಆರುನೂರುವರ್ಷದ ಕನ್ನಡಿಗರ ವೀರಜೀವನವನ್ನು ಇಂದು ಸ್ಮೃತಿಪಥಕ್ಕೆ ತರುತ್ತವೆ. ಇಲ್ಲಿ ಅನುವದಿಸಿರುವ ವ್ಯಕ್ತಿ ಮತ್ತು ಸ್ಥಳಗಳಲ್ಲಿ ಬಹು ಭಾಗ ಪರಿಚಿತ ಇತಿಹಾಸಕ್ಕೆ ಅಪರಿಚಿತವಾಗಿಯೇ

ಉಳಿದಿವೆ. ಇವುಗಳು ಖಚಿತವಾದ ಸಂಶೋಧನೆಯು ಭಾರತ ಇತಿಹಾಸ ವನ್ನು ಸಂಪೂರ್ಣವನ್ನಾಗಿಸುವವಲ್ಲದೆ ಈಗಿನ ಸಿದ್ಧಾಂತಗಳನ್ನೇ ತಲೆಕೆಳಗು ಮಾಡಬಹುದು. ಆದುದರಿಂದ ಕಾವ್ಯಾಭಿಲಾಷಿಗಳಿಗೂ ಸಾಹಿತ್ಯ ಸಂಶೋಧಕರಿಗೂ ಈ ಗ್ರಂಥವು ವಿಶೇಷ ಉಪಯುಕ್ತವೂ ಬೋಧಪ್ರದವೂ ಆಗಿದೆ.

ಎಸ್. ಅನಂತರಂಗಾಚಾರ್

ಕುಮಾರರಾಮ ಸಾಂಗತ್ಯ ಸಂಗ್ರಹ

೧

ಶ್ರೀ ಗಿರಿಜಾಸ್ಯಾಂಬುಜದಿನನಾಯಕ ಭೋಗಿಭೂಷಣ ಭಾಳನೇತ್ರ ।
ಭಾಗೀರಥೀಧರ ಭವರೋಗವೈದ್ಯ ನೀನಾಗು ಶಂಕರ ಶರಣೆಮಗೆ ॥ ೧

ಗಂಗಾತುಂಗತರಂಗ ಧವಳಿತ ಮಾತಂಗಜಟಾಜೂಟ ಭಾರ ।
ಮಂಗಲಾತ್ಮಕ ಮದನಾಂಗದಹನಭಸ್ಮಾಂಗ ಕೊಡೆನಗೆ ಭಕ್ತಿಯನು ॥ ೨

ವಾಣಿಯನಖಿಳಕಲಾರೋಹಣನಿಶ್ಶ್ರೇಣಿಯನಬ್ಜಸಂಭವನ ।
ರಾಣಿಯ ಬಲಗೊಂಬೆನೊಲಿದುರು ವೀಣಾಪಾಣಿಯನುಚ್ಚವೇಣಿಯನು ॥ ೩

ಅಂದಿನ ಕವಿಗಳಿಗಿತ್ತ ಮೆಲ್ನುಡಿಗಳ ಸಂದ ಸವಿಯನೆನಗೊಲಿದು ।
ಇಂದುವದನೆ ಕೊಡು ನಿನ್ನಂಘ್ರಿವನಜಕೆ ಬಂದೆಱಗುವೆನು ಭಕ್ತಿಯೊಳು ॥ ೪

ಆರೇನ ಬಯಸಿ ಬೇಡಿದೊಡದನೊಲಿದವಿಚಾರತೆಯಿಂದವರ್ಗೀವ ।
ವಾರಣವದನ ವಾರಣದಾನವಾರಿಕುಮಾರ ಕೊಡೆನಗವಿಘ್ನತೆಯ ॥ ೫

ಆವ ಸವಿಯ ನೆಲೆವನೆಯೋ ನಿನ್ನಯ ನುಡಿ ಕೋವಿದರೊಲಿದಾಲಿಸುವ ।
ಆ ವಿಪಂಚಿಯ ರವ ಕೇಳಿಸದೆ ನಿನ್ನರಸಾವಿಲ ವಚನಕೋವಿದರು ॥ ೬

ಎಂದೆನ್ನನೊಲಿದು ಕೊಂಡಾಡಿ ಕೋವಿದರು ಪೇಳೆಂದೆನಲವರ ನುಡಿಯನು ।
ಹಿಂದುಗಳೆಯಲಮ್ಮದೀ ರಾಮನಾಥನ ಸಂದ ಕಥೆಯನುಸುರುವೆನು ॥ ೭

ತುರಗದಂಡಕೆ ಬಲುರ್ಝುಲ್ಲಿಯ ಕಟ್ಟಿದ ಬಿರುದುಳ್ಳ ರಾವುತ ನಿಮ್ಮ ।
ಹಿರಿಯಯ್ಯ ನಿಮ್ಮ ಕಿಱಿಯ ತಂದೆ ವಿಜಯನೀ ಧರಣಿಯಱಿಯೆ ಧುರದೊಳಗೆ ॥ ೮

ರಾಯದಳವ ಕಾಣುತ ತನ್ನ ಪತಿ ನಂಜರಾಯನ ಮುಂದೆ ಕುದುರೆಯ ।
ರಾಯರಾವುತರ ಮೇಲೇಱಿ ತಿವಿದು ಸುರರಾಯನಗರಿಗೆಯ್ದಿದನು ॥ ೯

ನಿನಗೀ ರಾಮನಾಥನ ಚರಿತವ ಪೇಳ್ವುದನುಚಿತವಲ್ಲ ನೀನದನು ।
ಅನುನಯದಿಂದ ಪೇಳೆನಲು ಕೋವಿದರಾನು ಮನವೊಲಿದಿದನುಸುರಿದೆನು ॥ ೧೦

ಅಂಡದ ಝಲ್ಲಿಯಾನೆಯ ನಿಗಳದ ಮಾರ್ಕೊಂಡು ಮಲೆವ ರಾವುತರ ।
ಹಿಂಡಿನ ಗಂಡ ಮಾಧವನಾತ್ಮಜ ನಂಜುಂಡನಾನಿದನುಸುರಿದೆನು ॥ ೧೧

ಚೆಂಗಳನಾಡ ಸಾಳ್ವತ್ತು ನಾಯಕ ಗಜಸಿಂಗವೆನಿಪ ಮಾಧವನ ।
ಅಂಗೋದ್ಭವ ನಂಜುಂಡನಾನಿದನು ಮನಂಗೊಳೆ ಪೇಳುವೆನೀ ಕೃತಿಯ ॥ ೧೨

ಯದುಕುಲಾಮಾತ್ಯರೆಂಬೆಂಬ ಕುಲಾಗತವಿದಿತ ಬಿರುದನಾಂತೆಸೆವ ।
ಚದುರಮಾಧವನಾತ್ಮಜ ನಂಜುಂಡ ನಾನೊದವಿ ಪೇಳಿದೆನೀ ಕೃತಿಯ ॥ ೧೩

ಪದವಾಕ್ಯಪ್ರಮಾಣಜ್ಞ ನೆಂದೆನ್ನ ಕೋವಿದರು ಕೊಂಡಾಡುವರೊಸೆದು ।
ಚದುರರು ಪೇಳೆನಲೀ ಪದಕವಿತೆಯ ಮುದದಿಂದಾನುಸುರಿದೆನು ॥ ೧೪

ರಸವಿದು ಭಾವವಿದೆಸೆವಲಂಕೃತಿಗಳ ದೆಸೆಯಿದು ಗುಣದೋಷಗಳ ।
ಎಸಕವಿದೆಂದಱಿಯದೆ ಮನಬಂದವೊಲುಸುರ್ವ ಕುಕವಿಯಲ್ಲಾನು ॥ ೧೫

ಉಭಯವಸ್ತುಕ ಕವಿತೆಯನೊರೆವೆನು ನೃಪಸಭೆ ತಲೆದೂಗುವಂದದಲಿ ।
ವಿಭುಗಳು ಪೇಳೆನಲೀ ಕೃತಿಕವಿತೆಯನಭಿಮಾನಿಸಿ ಪೇಳಿದೆನು ॥ ೧೬

ವರಶುಚಿ ವೀರರಾಮನ ಚರಿತವನಿದನೊರವೆನೊಲಿದು ಸತ್ಪುರುಷರು ।
ಇರದಾಲಿಪುದು ಶುಚಿತೆ ವೀರತೆ ಬಂದು ದೊರೆಕೊಂಬುದಂತರಂಗದೊಳು ॥ ೧೭

ಕಂದುಕ ಬೀಳಲರಮನೆಗದನಿರದೆತ್ತಿ ತಂದಪೆನೆಂದು ಕಂಪಿಲನ ।
ನಂದನನೆಯ್ದಲವನ ರೂಪಿಗೆ ಸೋಲ್ತು ಬಂದು ಪಿಡಿದಳು ರತ್ನಾಜಿ ॥ ೧೮

ಪಿಡಿಯೆ ಬಿಡಿಸಿಕೊಂಡು ಬರಲವನವಳಂದು ಕಡುನೊಂದು ಕಯ್ಯಬಳೆಗಳ ।
ಒಡೆದು ತೋಳ್ತೊಡೆಗಳೆಡೆಗಳ ಕೆಡಸಿಕೊಂಡು ಬಿಡದೆ ತೋಱಿದಳು ಕಂಪಿಲಗೆ ॥ ೧೯

ನೆಲೆಯನಱಿಯದವ ಕೊಲಿಸು ರಾಮನನೆಂದು ಬಲಿದು ಮಂತ್ರಿಗೆ ಪೇಳಲವನು ।
ನೆಲಮಾಳಿಗೆಯೊಳಟ್ಟವನ ಕೊಲಿಸಿದನೆಂದು ನೆಲೆಮಾಡಲಾ ಸುದ್ದಿಯನು ॥ ೨೦

ಕೇಳಿ ತುರುಕದಾಳಿ ಬರಲವನನು ಮಂತ್ರಿ ಲೀಲೆಯಿಂ ತಂದಾ ಬಲನ ।
ಕೋಲಾಹಲವ ಮಾಡಿಸಿದನೆಂಬುದು ಕಥಾಮೂಲವಿದನು ನಾನೊಲಿದು ॥ ೨೧

ಕನಸಿನೊಳಗೆ ಪರವೆಣ್ಣ ಕಂಡಱಿಯದ ಘನಶುಚಿರತ್ನರಾಮಗನ ।
ವಿನುತ ಚರಿತ್ರವನೊರೆಸೆನು ಸುಜನರು ಮನವೊಲಿದಿದನಾಲಿಪುದು ॥ ೨೨

೨

ಈ ಕಥೆಗಾವುದು ಮೊದಲೆನೆ ತೆರೆಗಳ ನೂಕುತಾಕಿಂದ ರತ್ನಗಳ ।
ಆಕಾರದಿಂದ ನಾನಾ ಜಲಚರಗಳಿಂದಾ ಕಡಲಿರದೊಪ್ಪುತಿಹುದು ॥ ೧

ಆ ಕಡಲುಡೆಯೊದಿಳೆಯ ನಟ್ಟನಡುವೆ ನಿಂದಾಕಾಶವ ಚುಂಬಿಸುತ ।
ಆ ಕನಕಾಚಲವೆಸೆದಿರ್ಪುದದಱದೊಂದಾಕಾರವದನೇನನೆಂಬೆ ॥ ೨

ಹರಿಯುರಮನೆ ಹರನಾಡುಂಬೊಲ ಸರಸಿರುಹಸಂಭವನೊಲಿದಿರ್ಪ ।
ಕರುಮಾಡವೆನೆ ಕನಕಾಚಲವದು ಕಣ್ಗೆ ಕರಮೆಸೆದಿಹುದು ಚೆಲ್ವಿಂದ ॥ ೩

ಆ ಮೇರುಗಿರಿಯ ದಕ್ಷಿಣಭಾಗದೊಳಭಿರಾಮತೆವಡೆದೆಸೆದಿರ್ಪ ।
ಭೂಮಿಗಳೆಡೆಯೊಳಿರ್ಪುದು ಕರ್ಣಾಟಮಹೀಮಂಡಲ ಗಾಡಿವೆತ್ತು ॥ ೪

ಆ ನಾಡನಡುವೆ ಭೂಪತಿಯ ಕುಂತಣದಂತೆ ತಾನುರೆ ಕಣ್ಗೊಳಿಸಿಹುದು ।
ಮಾನಿತ ಕುಂತಣ ಜನಪದ ಸಿರಿಯಿಂದಾ ನಾಕವನೇಳಿಸುತ ॥ ೫

ಶ್ರೀ ಕೈಲಾಸ ಕೇದಾರ ಕಾಂಚೀಪುರ ಗೋಕರ್ಣಗಳನೇಳಿಸುತ ।
ಲೋಕವಿನುತ ಪಂಪಾಕ್ಷೇತ್ರಮಿರ್ಪುದನೇಕ ಮಹಿಮೆಯಿಂದಲ್ಲಿ ॥ ೬

ಪಾವನ ತೀರ್ಥಗಳಿಂದ ಋಷಿಗಳ ತಪೋವನರಾಜಿಗಳಿಂದ ।
ಆವೆಡೆಯೊಳು ನೋಳ್ಪೊಡಾ ಪಂಪಾಕ್ಷೇತ್ರ ತೀವಿ ಕಣ್ಗೆಸೆದಿರುತಿಹುದು ॥ ೭

ನೆನೆಯೆ ಪೋಪುದು ಪಾಪ ಪೋಪೆನೆಂದೊಡೆ ಪುಣ್ಯ ನನೆಕೊನೆಯೋದಪುದೆನಲು ।
ಅನಿತಿನಿತೆಂದು ಪಂಪಾಕ್ಷೇತ್ರ ಮಹಿಮೆಯನನುವದಿಸುವನೆಗ್ಗನಲ್ತೆ ॥ ೮

ಫೇನ ತರಂಗಾವರ್ತ ಕರ್ಕಟಕ ಪಾಠೀನ ಕಮಠಗಳಿಂದ ।
ತಾನುರೆ ಕಣ್ಗೆಸದಿಹುದಲ್ಲಿ ತುಂಗಭದ್ರಾನದಿ ಕಡುಚೆಲ್ವವಡೆದು ॥ ೯

ಈ ತೆಱದಿಂದ ಪಂಪಾಕ್ಷೇತ್ರದೊಳೊಪ್ಪುವಾ ತುಂಗಭದ್ರೆಯೊತ್ತಿನೊಳು ।
ಭೂತಳವಿನುತಮನ್ಮಖಕುಂಡವೆಂಬ ಕಂಜಾತಕ ಕರಮೆಸೆದಿಹುದು ॥ ೧೦

ಆ ಕಮಲಾಕರ ಮೊದಲಾದ ತೀರ್ಥಾನೀಕದಿಂ ಪಂಪಾಕ್ಷೇತ್ರ !
ಆ ಕಾಶಿಯನಾ ಕೇದಾರಮನಾ ಗೋಕರ್ಣವ ನಗುತಿಹುದು ॥ ೧೧

ಆ ಕ್ಷೇತ್ರದ ಮಧ್ಯದಲಿ ಪಂಪಾಪುರಿ ಸಾಕ್ಷಾತ್ಕರಿಸಿ ಕಣ್ಗೆಸೆವ ।
ಮೋಕ್ಷದಂತಿರ್ಪುದು ವಿಶ್ವಾಧಿಪ ವಿರೂಪಾಕ್ಷಲಿಂಗನನೊಳಕೊಂಡು ॥ ೧೨

ಆ ವಿರೂಪಾಕ್ಷನ ನಿಳಯದ ದಕ್ಷಿಣಭೂವಳಯದೊಳು ಮೃಗಗಳ ।
ಆವಾಸದಂತಿರ್ಪುದು ಹೊಸಮಲೆಯದನಾವನೊಲಿದು ಬಣ್ಣಿಸುವನು ॥ ೧೩

ಕುಳಿ ದರಿ ಪಳ್ಳ ಪೆರ್ಗಾಡು ಮುಳ್ಮರ ಗಿಡು ಮೆಳೆದುಱುಗಲ್ ಪೊದೆ ಹೊದಱು ।
ಜಿಳೆಗಾಡು ಗೂಡು ಗುಗ್ಗರಿಗಲ್ಮೊರಡಿಗಳ ಬಳಗದಿಂ ಮೆಱೆವುದಾ ವಿಪಿನ ॥ ೧೪

ಇಡಿಕಿಱಿದಿರ್ದ ನಾನಾಕುಜಕುಲದಿಂದ ಗಿಡು ಮೆಳೆ ಪಳ್ಳಕೊಳ್ಳಗಳ ।
ಗಡಣದಿಂದೆಲರಡಿಯಿಡದಲ್ಲಿ ರವಿ ಕಯ್ದುಡಲಕಮ್ಮನು ಪೇಳ್ವೆನೇನ ॥ ೧೫

ಆ ಗಹನಾಂತರಾಳದೊಳಿರ್ಪುದೊಂದು ಮಹಾಗಿರಿದುರ್ಗವಂಬರವ ।
ತಾಗುತ ತಳರ್ವ ತರಣಿಯ ಕುದುರೆಗಳಿಗಾಗಿಹುದದು ತಾಗುದಾಣ ॥ ೧೬

ಪುರವೆಂಬ ಪುಂಡರೀಕದ ನಟ್ಟನಡುವಣ ವರಕರ್ಣಿಕೆಯಿದೆಂಬಂತೆ ।
ಸಿರಿಯಿಂದ ಸಿಂಗರದಿಂದರಮನೆ ಕಣ್ಗೆ ಕರಮೆಸೆದಿಹುದು ಚೆಲ್ವಿಂದೆ ॥ ೧೭

ಕರುಮಾಡ ಕಂಡರಿಸಿದ ಗೋಪುರ ಹೊಂಬರಹದ ಲೋವೆ ಪವಳದ ।
ಪರಿಣಯಮಂಟಪ ಮಣಿವಾಗಿಲೆಸೆಯೆ ಕಣ್ಗರಮನೆ ಗಾಡಿವೆತ್ತಿಹುದು ॥ ೧೮

ಕಲಹಂಸ ಕಮಲಾಕರದೊಳಿರ್ಪಂತಾ ವಿಲಸಿತರಾಜಗೃಹದೊಳು ।
ನೆಲಸಿರ್ಪನಹಿತಕದಳಿಕಾನನ ಕರಿಕಲಭ ಕಂಪಿಲನೆಂಬ ನೃಪತಿ ॥ ೧೯

ಉರುತರ ವಿಂಧ್ಯಾಟವಿಯೊಳ್ ಸಿಂಹನಂಬರದೊಳು ರವಿಯಿರ್ಪ ತೆಱದಿ ।
ಕರಮೆಸೆವಂತಾ ನಿಳಯದೊಳರಿಹರಿಶರಭ ಕಂಪಿಲನೊಪ್ಪುತಿಹನು ॥ ೨೦

ನಿರ್ಣೀತಸಪ್ತೋಪಾಯ ನಿಪುಣ ಸಂಪೂರ್ಣ ವಿಭವನುರುದಾನಿ ।
ಚೂರ್ಣೀಕೃತರಿಪುದುರ್ಗನಿಹನಿಲ್ಲಿ ಕರ್ಣಾಟಪತಿ ಕಂಪಿಲನು ॥ ೨೧

ನಿಡುದೋಳ್ಪೈತ್ರವಿಕ್ರಾಂತಿ ಸೊಬಗನಾಂತ ಕಡುಶೌಚಗುಣ ನಾಲಗೆಯು ।
ಪಡೆದ ಸುವಿದ್ಯೆ ಜೀವಂಬೊತ್ತ ಜಸವೆಂದು ನುಡಿವರಾ ನೃಪನ ಬಲ್ಲವರು ॥ ೨೨

ತಿಳಿಜೊನ್ನದ ನಟ್ಟನಡುವೆ ಸಂಪೂರ್ಣೇಂದು ತಳತಳಿಸುವ ಮಾಳ್ಕೆಯೊಳು ।
ತೊಳಗಿದುದಾ ನೃಪತಿಯ ಕೀರ್ತಿರುಚಿಯೊಳು ಮುಳುಗಿದ ಕಮಲಭವಾಂಡ ॥ ೨೩

ಕುಸುಮಶರನ ಕಾಂತೆಯು ಬಹುರೂಪನಾಂತೆಸೆವ ರಾಣಿಯರು ಪಲಬರು ।
ಪೊಸಗಾಡಿವಡೆದಿರುತಿಹರಾ ಕರ್ಣಾಟವಸುಧಾಧೀಶ ಕಂಪಿಲಗೆ ॥ ೨೪

ಇರಲಿಂತನಂತವನಿತೆಯರಾ ನೃಪಗಂತಃಪುರದೊಳು ಸೊಗಯಿಸುತಿಹಳು ।
ಹರಿಹರದೇವಿಯೆಂದೆಂಬ ಪೆಸರ ಪಟ್ಟದರಸಿ ಗುಣಾಂಬುಜಸರಸಿ ॥ ೨೫

ರತಿಯ ಚೆಲ್ವಿಕೆ ಭಾರತಿಯ ವಿವೇಕ ಪಾರ್ವತಿಯ ಬೆಡಂಗಿಂದಿರೆಯ ।
ಅತಿಶಯ ಭಾಗ್ಯ ಸೀತೆಯ ಪಾತಿವ್ರತ್ಯವಾ ಸತಿಯೊಳಗೊಂದಿ ಮೆಱೆದವು ॥ ೨೬

ಶಚಿಯೆಱೆಯಗೆ ಮಂತ್ರಿಯಾದಂತೆ ವಾಕ್ಪತಿಯಚಲಿತನನ್ವಯಾಗತನು ।
ಶುಚಿ ಶುದ್ಧಗುಣಿ ಬೈಚಪ್ಪನೆಂಬುವನುರು ಸಚಿವನಾಗಿಹನಾ ನೃಪಗೆ ॥ ೨೭

ಸಪ್ತೋಪಾಯಸಮನ್ವಿತನಪಗತ ದೃಪ್ತಾರಿಷಡ್ವರ್ಗನಿವಹ ।
ಸಪ್ತಮಂತ್ರಾಲೋಚನನವನವನಿಪಗಾಪ್ತ ಸಚಿವನಾಗಿಹನು ॥ ೨೮

ಯುವರಾಜನಣ್ಣ ಭೈರವದೇವನೆಂದೆಂಬ ಕುವರವೆರಸು ಕಂಪಿಲನು ।
ಅವನಿಯೆಲ್ಲವನುರೆ ಬಾಯಿಕೇಳಿಸಿ ಕೀರ್ತಿಯುವತಿಗಿತ್ತನು ದಿಕ್ತಟವನು॥ ೨೯

ಲೆಕ್ಕಿಸಬಾರದಳಿಯದಿರು ಮಕ್ಕಳು ಮಿಕ್ಕ ಸಿರಿಯ ಮನ್ನೆಯರು।
ಎಕ್ಕಟಿಗರು ರಾವುತರು ಬಲ್ನಾಯಕಮುಕ್ಕಳೊಪ್ಪಿಹರಾ ನೃಪಗೆ॥ ೩೦

ಸಿಡಿಲ ಕಡುಪಿನಂತೆ ಸಿಂಗದೇಳಿಗೆಯಂತೆ ವಡಬಾಗ್ನಿಯ ಕೋಪದಂತೆ ।
ಅಡವಿಯ ಕಿಚ್ಚಿನಾರ್ಭಟೆಯಂತೆಯಿಹರಲ್ಲಿ ಒಡೆಯನ ನೃಪನ ಸುಭಟರು ॥ ೩೧

ಹೊಕ್ಕಿಱುವನು ಬಲ್ಲಾಳನ ರಾಜ್ಯವನೊಕ್ಕಲಿಕ್ಕುವನೊರೆಗಲ್ಲ ।
ಎಕ್ಕತುಳದ ವೀರರುದ್ರನ ರಾಜ್ಯವ ಮಿಕ್ಕವರೆಣೆಯೇ ಕಂಪಿಲಗೆ ॥ ೩೨

ಡಿಳ್ಳಿಯ ಸುರತಾಳನ ರಾಜ್ಯವನೆಲ್ಲ ಕೊಳ್ಳೆಗೊಂಬನು ಕೋಪಿಸಿದೊಡೆ ।
ತಳ್ಳಂಕವೆಯ್ದಿಸುವನು ಗಜಪತಿರಾಯಗುಳ್ಳ ದೇಶವನೆಲ್ಲವನು ॥ ೩೩

ಬಲ್ಲಿದ ಸುರತಾಳನಿಕ್ಕಿದ ಠಾಣೆಯವೆಲ್ಲವ ಹೊಕ್ಕಿಱಿದಿಱಿದು ।
ಚಲ್ಲಪಿಲ್ಲಿಯ ಮಾಡಿ ಖಾನಖಾನರಿಗೆದೆದಲ್ಲಣವಾಗಿರುತಿಹನು ॥ ೩೪

ಲಾಳ ಹಮ್ಮೀರ ಗುರ್ಜರ ವಂಗ ಬರ್ಬರ ಮಾಳವ ಮಗಧದೇಶಗಳ ।
ಥಾಳಿಯಿಟ್ಟೆಱುವನು ಸುದ್ದಿಮುಟ್ಟಲು ಸುರತಾಳಗೆ ಕಂಪಿಲನೃಪತಿ ॥ ೩೫

ತೆಲುಗಾಣಿಯ ತೇರಬೀದಿ ತಿಗಳನಾಡು ತಿಳಿಜೆಡೆಯಾಡುವ ದಾರಿ ।
ಹೊಲದ ಪೆರ್ಬಟ್ಟೆ ಹೊಯ್ಸಳದೇಶವೆನೆ ಮಿಕ್ಕ ನೆಲನಿದಿರೇ ಧಾಳಿಗವನ ॥ ೩೬

ಎರೆದುದನಿತ್ತು ನಿಜಾನ್ವಯಾಗತಮಪ್ಪ ಧರಣಿಯೊಳಿಹ ಭೂಮಿಪರ ।
ನೆರವಿಯಿಲ್ಲದೆ ಕಂಪಿಲನಿದಿರಾಗಿ ಬಾಳ್ವರಸುಗಳುಂಟೇ ಭೂಮಿಯೊಳು ॥ ೩೭

ಜಾಗಕೆ ನೆರೆಯರು ಯಾಚಕರುರುಗಣ ಪೂಗವತಿಗೆ ಕವಿವರರ ।
ನಾಗಾಡಂಬರ ಸಾಲದೆಂಬೀ ಕೀರ್ತಿಗಾಗರವಾದನಾ ನೃಪತಿ ॥ ೩೮

೩

ಜನನುತ ಹರಿಹರದೇವಿಯೊಂದಾನೊಂದು ದಿನದೊಳು ಋತುಮಡಿಯಾಗಿ ।
ವಿನುತ ಚತುರ್ಥಮಂಗಲಮಜ್ಜನಂಬೊಕ್ಕಳನುರಾಗರಸದೊಡಗೂಡಿ ॥ ೧

ಮಲಯಜದಣ್ಪು ಮಲ್ಲಿಗೆಯ ಸೋರ್ಮುಡಿಯುಟ್ಟ ಬಿಳಿದು ಮುತ್ತಿನ ತೊಡವೆಸೆಯೆ ।
ಪಳುಕಿನ ಪೆಣ್ಗೆಣೆಯೆನಿಪ ವಿಲಾಸಮನೊಳಕೊಂಡೆಸೆದಳಾ ನೀಱೆ ॥ ೨

ಬಳಿಕ ಮೆಲ್ಲನೆ ಬಂದಾ ರಾಯ ಸೆಜ್ಜೆಯ ನಿಳಯದೊಳಗೆ ಕಣ್ಗೊಳಿಪ ।
ಥಳಥಳಿಸುವ ರನ್ನದ ಸೆಳೆಮಂಚದೊಳೆಳಸಿದನಂಗಜನಂತೆ ॥ ೩

ಭಾನುಬಿಂಬವನಿಂದು ಮಂಡಲವನು ಮದದಾನೆಯನಾ ಸಿಂಹವನು ।
ಮಾನಿನಿ ಕಂಡಳು ಬೆಳಗಹ ಸಮಯದೊಳೀ ನಾಲ್ಕನು ಕನಸಿನೊಳು ॥ ೪

ಉದಯಾದ್ರಿಯನೇಱುವ ರವಿರಥಚಕ್ರದುದಿತಚೀತ್ಕಾರದಿಂಚರವ ।
ಬೆದಱಿಪ ರವದ ರಥಾಂಗದುಲುಪು ಕಿವಿಗೊದವಿದವಾ ದಂಪತಿಗಳ ॥ ೫

ಮಂಗಳಗಾಯಕರೊಸೆದು ಪಾಡುವ ಗೀತಂಗಳಿಂಚರ ಪಾಠಕರ ।
ವಂಗಡದಾಲಾಪದುಲಿಪು ಮಾಡಿದವು ರಾಯಂಗೆ ಸುಖಪ್ರಬೋಧವನು ॥ ೬

ಪಸರಿಸೆ ಸುಲಿಪಲ್ಲ ಕಾಂತಿ ಮನೋಜನ ಜಸದಂತಿರೆ ಲಲಿತಾಂಗಿ ।
ಒಸೆದು ಪೇಳಿದಳರಸಿಗೆ ತಾನಿರುಳು ಕಂಡೊಸಗೆಯ ನಾಲ್ಕು ಕನಸನು ॥ ೭

ಕೇಳಿ ಮಹೀಶ್ವರನಾ ಕನಸುಗಳನು ತಾಳಿ ಮೈಯೊಳು ಪುಳಕವನು ।
ಹೇಳಿದನವಱ ಫಲವನಾ ವರಸತಿಯೊಳೆ ಸಂತಸಗಡಲೊಳಗೆ ॥ ೮

ಇನನಿಂದ ವೀರಪರಾಕ್ರಮಿ ಸಿಂಹದಿಂ ವಿನುತವಿಕ್ರಮನಿಂದುವಿಂದ ।
ಘನಕೀರ್ತಿ ಮದದಾನೆಯಿಂ ದಾನಿಯಾದಪ ನಿನಗ ತನುಜನೊರ್ವನಬಲೆ ॥ ೯

ಎನೆ ಮೇಘನಿನದವ ಕೇಳಿದ ಕೇಕಿಯ ವನಿತೆಯಂತಾ ರಾಯನರಸಿ ।
ಅನುರಾಗವಡೆದೆತ್ತಿದಳಂಗದೊಳಂದು ಘನಪುಳಕದ ಗುಡಿಗಳನು ॥ ೧೦

ಬಳಿಕ ಸಂತಸಗಳನೆಯ್ದುತ ಭೂಪತಿ ತಳರ್ದನು ಕೆಲವು ದಿನವನು ।
ಕಳೆಯಲೊಡನೆ ಗರ್ಭಚಿಹ್ನವು ಲಲಿತಾಂಗಿಗೆಳಸಿದುವಿರದೆಯ್ತಂದು ॥ ೧೧

ವಿರಚಿಸಿ ಪುಂಸವನಾದಿಕರ್ಮಂಗಳನರಸನು ಸತಿಗೆ ಲೀಲೆಯೊಳು ।
ವರವಸ್ತುವಾಹನ ಮಣಿಭೂಷಣಾಳಿಯು ಕರೆದು ಕೊಟ್ಟನು ಬುಧಜನಕೆ ॥ ೧೨

ಇಂತು ವಿನೋದಗಳಿಂದ ದಿನಂಗಳ ಸಂತತಿಯನು ಕಳೆದವಳು ।
ತಾಂ ತಡೆಯಜೆ ಪಡೆದಳು ಶುಭದಿನದೊಳು ಸಂತಾನವನು ಸುಖದೊಳು ॥ ೧೩

ಉರ್ವರೆ ರೋಹಣಾದ್ರಿಯನಿಂದುವನಾ ಶಾರ್ವರಿ ಪಡೆದಂದದಲಿ ।
ಸರ್ವಲಕ್ಷಣಯುತಸುತನ ಪಡೆದಳಂದಪೂರ್ವಲಗ್ನೋದಯದೊಳಗೆ ॥ ೧೪

ನೀರಜವಾದುದವನಿ ಕೆಱೆತೊಱೆಗಳ ನೀರಚ್ಛವಾಯ್ತು ಕುವರನ ।
ಚಾರುಚರಿತ್ರದ ನಿರ್ಮಲತೆಯನೀ ಧಾರುಣಿಗಱುಪುವಂದದಲಿ ॥ ೧೫

ಒಗೆದ ತನುಜನ ತೇಜದೊಳ್ ಮಲಿನತೆ ಪುಗದೊಗೆದುದೆಂದಱುಪುವಂದದಲಿ ।
ಪೊಗೆಯದೆ ದಕ್ಷಿಣಾವರ್ತಶಿಖಿಯೊಳಗ್ನಿ ದಗದಗಿಸುತ ಕಣ್ಗೆಸೆದುದು ॥ ೧೬

ಕೇರಿಕೇರಿಗಳೊಳು ಮನೆಮನೆಯೊಳು ಘನಸಾರಚಂದನ ಸಾಧುಗಳ ।
ಸಾರಣೆ ಪನಿನೀರ ಚಳಯ ಪೂವಲಿ ಧೂಪ ಭೂರಿವಾದ್ಯಗಳು ಮೆಱೆದವು ॥ ೧೭

ಮುತ್ತು ಹವಳ ರನ್ನಪಟ್ಟೆ ಝಲ್ಲಿಗಳಿಂದ ಬಿತ್ತರವಡೆದ ಗುಡಿಗಳು ।
ಎತ್ತಿದವರಮನೆಯೊಳಗೆ ಬೇಡಿದುದನಂದಿತ್ತನರಸ ಯಾಚಕರಿಗೆ ॥ ೧೮

ಆರೇನ ಬೇಡಿದನದನವರಿಗೆ ಕೈಯ್ಯಾರ ಕೊಟ್ಟವರ ಸತ್ಕರಿಸಿ ।
ಸೇರಿ ನೋಡಿದನೊಯ್ಯನೆ ತನುಜನ ವದನಾರವಿಂದವನಾ ರಾಯ ॥ ೧೯

ಮಾತೇನವರಿವರೆನ್ನದೆ ಬಿಡದೆ ಕಯ್ಯಾಂತು ಮಹೀಜನಂಗಳಿಗೆ ।
ಭೂತಳಾಧೀಶ್ವರನಿತ್ತು ಧನವನಂದು ಜಾತಕರ್ಮವ ಮಾಡಿಸಿದನು ॥ ೨೦

ಭೂಮಿವಿನುತ ಶುಭಕ್ಷಣದಿಂದಭಿರಾಮನಪ್ಪುದಱಿಂದ ಸುತಗೆ ।
ರಾಮನೆಂದೆಂಬನ್ವರ್ಥನಾಮವನಿಟ್ಟನಾ ಮಹೀಪತಿ ಲೀಲೆಯೊಳು ॥ ೨೧

ತರಣಿಕಿರಣಗಳಿಂ ಸೊಂಕದೆ ತನ್ನ ತಾನರಲ್ವ ತಾವರೆಮೊಗವೊಲೆಯೆ ।
ದೊರೆಯಾದುದು ನೆವವಿಲ್ಲದೆ ನಗುವ ಭೂವರಕುವರನ ಮುದ್ದುಮೊಗದ ॥ ೨೨

ಅರಳೆಲೆ ಮಾಗಾಯಿ ಪುಲಿಯುಗುರುಡೆನೂಲು ಚರಣದಂದುಗೆ ತಾತಿಘಂಟೆ ।
ಬೆರಳುಂಗುರ ದಿಟ್ಟದಂಡೆ ಮೆಱೆಯಲಾ ತರುಣನೆಸೆದನು ಲೀಲೆಯೊಳು ॥ ೨೩

ಬರೆ ಬಸುಱಿಗೆ ವಸ್ತುವಾಹನಗಳು ಬಂದವರ ಮನೆಗಾ ಶಿಶು ಪುಟ್ಟಿ ।
ಇರದೆ ಮುಟ್ಟಿತು ರಾಯಪದವಿ ಕಂಪಿಲಗಾ ತರುಣನ ಸೈಪನೇನೆಂಬೆ ॥ ೨೪

ಬಾಲತ್ವದೊಳಗೌದಾರ್ಯ ಗುಣಗಳಿಂಗಾಲಯವೆನಿಸಿದ ಸುತನ ।
ಲೀಲೆಯಿಂದೀಕ್ಷಿಸಿ ರಾಗರಸಾಬ್ಧಿಯೊಳೋಲಾಡಿದನು ಭೂವರನು ॥ ೨೫

ಕುವರಗೆ ವಿದ್ಯಾವನಿತೆಯ ಕೂಟಕಿದವಸರವೆಂದವನಿಪನು ।
ಅವನಿಗಾಚಾರ್ಯನನೋರ್ವನ ಮಾಡಿದ ವಿವಿಧಕಲಾಚತುರನನು ॥ ೨೬

ಸುಮುಹೂರ್ತದೊಳೋದಿಸೆ ಗುರು ನಾನಾವಿಮಲಕಲೆಗಳು ಚಂದ್ರನನು ।
ಕ್ರಮದಿಂದೆಯ್ದುವಂತೆಯ್ದಿದುವಾ ಭೂರಮಣನ ಸುಕುಮಾರನನು ॥ ೨೭

ಗೆಲೆ ದೇಹವಿಡದೀ ಹರಿಯಂಗಕಾಂತಿಯು ಗೆಲೆ ಗಂಡಗಾಡಿ ಮದನನ ।
ಚೆಲುವಿಕೆಯನು ಮೆಲ್ಲಮೆಲ್ಲನೆ ಯವ್ವನ ನೆಲಸಿತಾ ರಾಯಕುವರಗೆ ॥ ೨೮

ನವಯವ್ವನನಾದ ಮಗನ ಮೊಗವನಂದವಲೋಕಿಸಿ ಕಂಪಿಲನು ।
ಹವಣಿಸಬಾರದ ಹರುಷಾಂಬುನಿಧಿಯೊಳು ತವೆ ಮೂಡಿ ಮುಳುಗಾಡಿದನು ॥ ೨೯

ಕುಲವಿನ್ನು ಕೆಡದು ಕುಜನರ ಕೂಗಾಟದ ಕಲಕಲವಿನ್ನು ನಡೆಯದು ।
ಕೆಲಬಲದರಸುಗಳಾಳಲಱಿಯನ್ನು ನೆಲವನೆಂದರಸ ನಲಿದನು ॥ ೩೦

ವೀರರುದ್ರನ ವಿಕ್ರಮವಿನ್ನು ಮೆಱೆಯದು ಸೇರಿದ ಬಲ್ಲಾಳನೃಪನ ।
ಧಾರುಣಿಯುಳಿಯಲಾರದು ಇನ್ನೆಂದು ವಿಚಾರಿಸಿದನು ಕಂಪಿಲನು ॥ ೩೧

ನವಲಕ್ಕ ತೆಲುಗರ ಗಂಡನೆಂದೆಂಬೀ ಬವರದ ಬಲುಬಿರುದಿನ್ನು ।
ರವಿ ಶಶಿಯುಳ್ಳಂನೆವರ ದಕ್ಕಿತೆಮಗೆಂದು ತವೆ ನಲಿದನು ನರನಾಥ ॥ ೩೨

ಸುರತಾಳನ ದಂಡು ಸುಳಿಯಲಮ್ಮದು ನಮ್ಮ ಧರಣಿಗೆ ತೆಲುಗುಮನ್ನೆಯರ ।
ಹರಿದಾಟಹವಣಿಗೆ ನಿಂದಿತಿನ್ನೆಂದು ಭೂವರನಾನಂದವಡೆದನು ॥ ೩೩

ಮೂವರುರಾಯರ ಗಂಡನೆಂದೆಂಬೆನ್ನ ಜೀವದಂತಪ್ಪ ಬಿರುದನು ।
ಕಾವುದಕಾದನೀ ಮಗನೆಂದು ಕಂಪಿಲದೇವ ನಲಿದನೆದೆಯೊಳಗೆ ॥ ೩೪

ಮೀಸರಗಂಡನೆಂದೆಂಬ ಬಿರುದಿನ ವಿಲಾಸದ ನಡೆ ನಮಗಿನ್ನು ।
ಬೀಸರವೋಗದೆಂದೆಣಿಕೆಯನವನೀಶ ಸೂಸಿಬಿಟ್ಟನು ಮನದೊಳಗೆ ॥ ೩೫

ಮುಗಿಲ ಕೆಳಗೆ ತೋಳ್ಬೀಸಿ ನಡೆವ ಬಲುವಗೆರಾಯರ ಗಂಡನೆಂಬ
ಜಗದ ಬಿರುದು ದಕ್ಕಿತೆನಗೆಂದು ಕುವರನ ಮೊಗವ ನೋಡಿದನು ಭೂಮಿಪನು ॥ ೩೬

ಚೆಲುವರ ಗಂಡನೆಂದೆಂಬೀ ಬಿರುದಿಗೆ ನೆಲೆಯಾದನೀ ಮಗನೆಂದು ।
ನಲಿದನು ನಲವೇಱಿದನಿಂದ್ರಪದ ಕರತಳಕೆ ಬಂದಂತೆ ಪೆರ್ಚಿದನು ॥ ೩೭

ಈಯವನಿಯ ಭಾರವ ವಹಿಸುವಡೆ ಸಹಾಯವಾದನು ಮಗನಿವನು ।
ಆಯಸ ಪೋದುದಿನ್ನೆನಗೆಂದು ಕಂಪಿಲರಾಯ ನಲಿದನೆದೆಯೊಳಗೆ ॥ ೩೮

ಹರೆಯ ಸೊಬಗು ರೂಪು ರೇಖೆ ಬೆಡಗು ಬಿಂಕ ದೊರಕೊಂಡಿದೆ ಕುವರನಿಗೆ ।
ಪರಿಣಯವನು ಮಾಡಬೇಕೆಂದು ಮಂತ್ರಿಯ ಕರೆದು ಕಂಪಿಲ ಬೆಸಗೊಳಲು ॥ ೩೯

ಮಾತೇನು ರಾಯರದೇವ ಕುಮಾರಗೆ ಜಾತಿವೆಣ್ಗಳನ್ನೈವರನು ।
ಓತು ಮದುವೆಯ ಮಾಡುವುದುಚಿತವೆಂದಾತನೊರೆದನವನಿಪಗೆ ॥ ೪೦

ಜನನಿಜನಕರನುಮತದಿಂದ ಜನಪತಿ ವಿನುತಲಕ್ಷಣಯುತೆಯರನು ।
ಮನುಜೇಶ್ವರನಂದನೆಯರೈವರನನುರಾಗದಿಂ ತರಿಸಿದನು ॥ ೪೧

ಸುರವೃಕ್ಷವೈದಱ ಕೆಲದೊಳೊಗೆವ ಸುರಚಿರ ಕಲ್ಪಲತೆಗಳೆಂಬಂತೆ !
ಕರಮೆಸೆದರು ರಾಜತನುಜೆಯರೈವರು ಹರಿಹರದೇವಿ ನಲಿಯಲು ॥ ೪೨

ಅರಲಂಬುಗಳೈದಂಗನಾರೂಪ ಧರಿಸಿ ನಿಂದಂತೆ ಕಣ್ಗೆಸೆವ ।
ತರಳಲೋಚನೆಯರೈವರ ನೋಡಿ ರಾಣಿಯರಿರದೆ ಪೊಗಳಿದರವರನು ॥ ೪೩

ಮಂಗಳಗೀತ ಮಹಾವಾದ್ಯದ ರವ ಪುಣ್ಯಾಂಗನಾಶೀರ್ವಾದ ಮೊಳಗೆ ।
ಭೃಂಗಕುಂತಳೆಯರ ಪಿತೃಗಳು ಪೂರ್ಣಕುಂಭಗಳನೆತ್ತಿ ಲೀಲೆಯೊಳು ॥ ೪೪

ಸಂತಾನಾಭಿವೃದ್ಧಿಗೆ ಪೊಯಿನೀರೆಱೆವಂತಾ ಕುವರಗಂದವರು ।
ಸಂತಸ ಕೈಮೀಱೆ ಧಾರೆಯೆಱೆದರು ಭೂಕಾಂತ ನಲಿಯೆ ಮನದೊಳಗೆ ॥ ೪೫

ಈ ತೆಱದಿಂ ಪಾಣಿಗ್ರಹಣಂ ಗೆಯಿಸಿ ಭೂತಳಪತಿ ಯಾಚಕರಿಗೆ ।
ಪ್ರೀತಿ ಕೈಮಿಗೆ ವಸ್ತುವಾಹನವಿತ್ತು ಗುಣಾತಿಶಯವ ಕಾಣಿಸಿದನು ॥ ೪೬

ತಮತಮಗೆ ನಲಿದು ಕೊಂಡಾಡೆ ಪೌರರು ಭೂರಮಣನ ಸುಕುಮಾರನಿಗೆ ।
ಸುಮುಹೂರ್ತದೊಳು ಯುವರಾಜಪಟ್ಟವನಾ ಸಮಯದೊಳೊಲಿದು ಕಟ್ಟಿದರು ॥ ೪೭

ನಲಿಯೆ ನಂಟರು ಕೊಂಡಾಡೆ ಕೋವಿದರು ಮತ್ತೊಲಿಯೆ ಸಾಮಂತಸಚಿವರು ।
ಬಲವೆಲ್ಲ ಬಣ್ಣಿಸೆ ಪಟ್ಟವ ಕುವರಗೆ ನಲವಿನಿಂದರಸ ಕಟ್ಟಿದನು ॥ ೪೮

ಮದುವೆಯಮಾಡಿ ಕುಮಾರಗೆ ಯುವರಾಜಪದವಿಯನಿತ್ತು ಕಂಪಿಲನು ।
ಉದಧಿವೇಷ್ಟಿತ ಭೂತಳ ಕಯ್ಗೆ ಬಂದಂತೆ ಮುದವನ್ನೈದಿದನೆದೆಯೊಳಗೆ ॥ ೪೯

ವಿತರಣದಿಂದ ವಿನಯದಿಂದ ವಿವಿಧವಾಕ್ಚತುರತೆಯಿಂದ ಕುವರರನು ।
ಕ್ಷಿತಿಯೊಳಗುಳ್ಳ ಬಿರುದಿನ ಮಹಾವೀರಭಟರ ಸಂತತಿಯು ಕೂಡಿಸಿದ ॥ ೧

ಹೇಡಿನೃಪಾಲರೊತ್ತಿನೊಳಿರೆ ನಮಗಿನ್ನು ಖೋಡಿ ತಪ್ಪದು ಮುಂದಕೆಂದು ।
ನಾಡೊಳಗುಳ್ಳ ಬಿರುದಿನ ಭಂಟರು ಬಂದು ಕೂಡಿತಾ ರಾಯಕುವರಗೆ ॥ ೨

ಪೊನ್ನೀವ ಗಡ ಸ್ವೈರಿಪ ಗಡ ನೆಱೆ ಮನ್ನಿಪ ಗಡ ಕಾಳಗದೊಳು ।
ಬೆನ್ನೀಯ ಗಡ ರಾಮನೆಂದು ವೀರರು ಬಂದು ಚೆನ್ನರಾಮನ ಪೊರ್ದಿದರು ॥ ೩

ಪರವಸ್ತುಗಳಿಗಾಟಿಸಂ ಗಡ ಪರವೆಣ್ಣಿನಿರವ ನಿಟ್ಟಿಸಿ ನೋಡ ಗಡ ।
ಕರೆದೀವ ಗಡ ಕಲಿಗಳಿಗೆಂದು ಭಂಟರು ಭರದೊಳವನ ಸೇರಿದರು ॥ ೪

ಇಳೆಯೊಳಗಣ ನೀರೆಲ್ಲ ಬಂದಂಬುಧಿಯೊಳಪೊಗುವಂತೆ ಬೇಗದೊಳು ।
ನೆಲದೊಳಗಣ ವೀರಭಟರೆಯ್ತಂದಾ ಕಲಿರಾಮನ ಪೊರ್ದಿದರು ॥ ೫

ಪರೆದು ಸುವರ್ಣಪರಾಗವಿತತಿರಸದುರುಳಿಯ ಪಿಡಿವ ತೆಱದೊಳು ।
ಧರೆಯೊಳಗುಳ್ಳ ಕಾಲಾಳು ಮೇಲಾಳು ಬಂದಿರದೆ ಪೊರ್ದಿದರು ರಾಮನನು ॥ ೬

ರವಿಯ ಕುದುರೆಯನಿಂದ್ರನ ವಾಣಿಯನತಿಜವದಿಂದ ಜಱೆವ ತೇಜಿಗಳ ।
ನಿವಹವೆಸೆದವು ಕುವರನ ಮೆಯ್ಗಾವಲ ತವಕದ ಬಲುರಾವುತರಿಗೆ ॥ ೭

ಸಾರ ಸಕಲ ಲಕ್ಷಣ ಗುಣದಿಂ ಪಂಚ ಧಾರೆಯಿಂ ರೂಪುರೇಖೆಗಳ ।
ಚಾರುತೆಯಿಂ ರಾಜಿಪ ನೂಱುಪ್ಪತ್ತು ವಾರುವಗಳು ರಾಮನಿಗೆ ॥ ೮

ಆ ವಾರುವಗಳೊಳಗೆ ವೀರರಾಮುಗೆ ಮೂವತ್ತು ಜಾತ್ಯಶ್ವಗಳು ।
ಜೀವವಾಗಿಹವವರಿವರ ಪೊಗಳುವಡೆ ರೇವಂತರಿಗೊರ್ವರಳವೇ ॥ ೯

ಅರಮನೆಯೊಳಗಿರ್ಪುದೊಂದು ಪವಳವರ್ಣದುರುತರ ಜಾತ್ಯಶ್ವವದಱ ।
ಇರವನದವನಿಗೆ ಬಂದ ತೆಱನನಾನೊರೆವೆ ಲಾಲಿಪುದು ಕೋವಿದರು ॥ ೧೦

ಅಂದಗಜೆಯ ಕೋಪದಿಂದೀಶ್ವರ ಪೋಗೆಂಡನೆ ಮರ್ತ್ಯಕರ್ಜುನನು ।
ನೊಂದು ನುಡಿಯಲವನನಾ ಪರಮನಿಂತೆಂದು ನುಡಿದು ತಿಳುಪಿದನು ॥ ೧೧

ಹಿಂದೆ ನಿನ್ನಿಂದಳಿದಸುರರವನಿಗೆಯ್ತಂದು ತುರುಕರಾಗಿ ಪುಟ್ಟಿ।
ಕೊಂದು ಕೂಗಿಡುತ್ತೈದರೆ ಮುಂದನಱಿಯದೆ ಸಂದ ಮನುಜಲೋಕವನು॥ ೧೨

ದೇವಾಲಯಂಗಳನೊಡೆದು ಕೆಡಿಸಿದರು ದೇವರ ಕಿತ್ತು ಧರಣಿಯ।
ದೇವರ ಸತ್ಕರ್ಮಗಳ ಕೆಡಿಸಿದರು ಭೂವಳಯದೊಳು ದಾನವರು॥ ೧೩

ಆವರನಾಜಿಯೊಳಂತಕಪುರಿಗೈದಿಸಿ ದಿವಿಜಕಾಮಿನಿಯೊರ್ವಳನು।
ತವೆ ಮುಱಿದೆಮ್ಮಲ್ಲಿಗೆಯ್ತಂದು [?] ಪಾರ್ಥನಿಗೆ ಶಿವ ನುಡಿಯಲು ಕೃಪೆಯಿಂದ॥ ೧೪

ಅಂದಿನ ಬಿಲ್ಲಿಲ್ಲಂದಿನ ರಥವಿಲ್ಲಂದಿನ ಬಾಣವಿಲ್ಲವರ।
ಕೊಂದಿಕ್ಕುವಂದವೆಂತೆಂದು ಹರಗೆ ನರನಂದು ಬಿನ್ನಹವ ಮಾಡಿದನು॥ ೧೫

ಸುರರಾಜನ ದಿವ್ಯವಾಜಿ ಭೂತಳಕವತರಿಸಿ ನಿನಗೆ ದಾನವರ।
ಧುರಕೆ ಸಹಾಯವಾದಪುದದು ನಿನಗೆ ಬಂದಿರದೆ ಸೇರುವ ಸಮಯದೊಳು॥ ೧೬

ಮುರರಿಪುವಿನ ಶಾರ್ಙ್ಗ ನಕುಳನ ಭಲ್ಲೆಯ ವರಸಹದೇವನ ಖಡ್ಗ।
ದೊರಕೊಂಬುದದು ನಿನಗೆಂದಗಜಾಪತಿ ನರನ ಚಿತ್ತವ ತಿಳುಪಿದನು॥ ೧೭

ಬಳಿಕ ಬಲಾರಾತಿ ನಿಜತುರುಗಾಂಶವ ಕಳುಪಲೀಶ್ವರನಾಜ್ಞೆಯಿಂದ।
ಇಳೆಗವತರಿಸಿ ವನಾಯದೇಶದೊಳದು ಘಳಿಲನೆ ಬಂದು ಪುಟ್ಟಿದುದು॥ ೧೮

ಅರಲಿರ್ದೆಡೆಯೊಳಿರ್ದು ಪರಿಮಳವನು ದಿಗ್ವಿಸರಕೆ ಕಳಪುವಂತಾ ತುರುಗ।
ಸುರಲೋಕದೊಳಗಿರ್ದು ತನ್ನಂಶವನೀ ಧರೆಗೆ ಕಳುಪಿ ಪುಟ್ಟಿಸಿದುದು॥ ೧೯

ತರುಣಿಯ ಬಿಟ್ಟು ಕಿರಣ ಕುಸುಮವ ಬಿಟ್ಟು ಪರಿಮಳವೆಯ್ದುವಂದದಲಿ।
ಸುರತುರಗವ ಬಿಟ್ಟದಱ ಭಾಗ ಬಂದೀ ಧರಣಿಯೊಳಗೆ ಜನಿಸಿದುದು॥ ೨೦

ಊಳಿಗದವರಲ್ಲದೆ ಪೊಸಬರ ವೈಯ ಗಾಳಿ ಸೋಂಕಲು ಖುರದಿಂದ।
ಪೋಳು ಮಾಡುವುದವನಿಯನಾಕಾಶಕೆ ಧಾಳಿಯಿಡುವುದು ಕಾಲಿಂದ॥ ೨೧

ಬಂದು ನೋಡುವರು ಬಾಯಿ ನೀರೊಱಿಸುವರು ಗಂಡಂದವ ನೋಡಿ ಕುದುರೆಯ।
ವಂದನೆಯನು ಮಾಡುವರು ಬೆನ್ನ ಕೊಡದಿರೆ ನೊಂದು ಪೋಗುವರವನಿಪರು॥ ೨೨

ಗೋವಸಹಣಿಗಳಬ್ಬರ ದೆಸೆದೆಸೆಗಳ ತೀವಿರಲು ಕುದುರೆಯನು।
ಸಾವಧಾನತೆಯೊಳು ತಂದೆಯ್ದಿಸಿದನು ಗೋವೆಯನಾ ವಣಿಗ್ವರನು॥ ೨೩

ಬಿಸಿಲ ಕುದುರೆಯಂತೆ ಚಿತ್ರತುರಗದಂತೆಸೆದಿಹುದದು ಕಣ್ಗೆ ಚಿತ್ರ ।
ಪಸಿದ ಪೆರ್ಬ್ಬುಲಿಯಂತೆ ಸಿಂಹದಂತಿರದೆ ಘರ್ಜಿಸುವುದೊತ್ತಿಗೆ ಬರೆ ನರರು ॥ ೨೪

ಪೊತ್ತಿಗೆ ಸೇರಿ ಮೆಯ್ದುಡವಿದ ಸಹಣಿಗೆ ಹತ್ತು ಸಾವಿರ ಟಂಕೆಯನು ।
ಇತ್ತಪೆವೆಂದು ವಜ್ಜೀರಮಲ್ಲುಕರು ನೊಲವುತ್ತ[?] ಮನಪೊಳ್ಕೆದಿದರು ॥ ೨೫

ಕೇಳಿದನಾ ವಾರ್ತೆಯ ರಾಮನಾಥನು ಪೇಳಿದನಶ್ವವಿಕ್ರಮವ ।
ಆಲಿಸಿ ಮಗನ ನುಡಿಯನಾ ನರಪತಿಯಾಳಿದನಾನಂದಾಬ್ಧಿಯನು ॥ ೨೬

ಸೂಕಳಾಶ್ವವನದನೆಂತಱಿದಪೆ ನಿನ್ನ ಜೋಕೆಗೆದೆಂತು ಬಂದಪುದು ।
ಲೋಕದ ನರನಾಥರೊಲ್ಲದ ಕುದುರೆಯದೇಕೆ ನಿನಗೆ ಪೇಳು ಮಗನೆ ॥ ೨೭

ಬೆನ್ನ ಕೊಟ್ಟರೆ ಸಾಕು ನಿನಗದು ಬೇಡಿದ ಹೊನ್ನನಿತ್ತದ ಕಟ್ಟಿಕೊಡುವೆ ।
ಮನ್ನಿಪುದಲ್ಲ ಗಡ ದುಸಹಣಿಗಳ ಸಂಪನ್ನ ಗಡದು ದುರ್ಗುಣದೊಳು ॥ ೨೮

ನೋಡುಗುದುರೆಯಲ್ಲದದು ಸಂಗರಭೂಮಿಗೀಡಹ ಕುದುರೆಯಲ್ಲ ಗಡ ।
ಕೇಡಹುದದಱಿಂದ ನಿನಗೆ ನೀನದಱ ಮಾತಾಡಬೇಡಲೆ ಮಗ ರಾಮ ॥ ೨೯

ಎಂದು ನುಡಿದ ತಂದೆಯ ಕಿವಿಯೊತ್ತಿಗೆ ಬಂದೇಕಾಂತದೊಳವನು ।
ಅಂದತಿ ಭೀತಿ ಭಕ್ತಿಯೊಳು ಕೈಯ್ಗಳ ಬಾಯ್ಗೆ ತಂದು ಬಿನ್ನೈಸಿದನಿಂತು ॥ ೩೦

ಬಂದಪೆ ಗೋವೆಯೊಳೊಂದಶ್ವ ನೀನದಱಿಂದ ಭೂಮಿರಾಯರನು ।
ಮುಂದುಗೆಡಿಸಿ ಸುರತಾಳಬಲವ ಹಿಂದುಮುಂದುಮಾಡುವೆ ದಂಡು ಬರಲು ॥ ೩೧

ಕೊಡದದು ಬೆನ್ನ ಭೂಮಿಯರಾಯರಿಗೆ ನಿನ್ನ ನುಡಿಗೇಳದ ಮುನ್ನ ನಿನಗೆ ।
ಅಡಿಯಾದಪುದೊಳಗಾದಪುದದನೀ ತಡೆಯದೆ ಕಳಿಸಿದರೊಡೆಯ ॥ ೩೨

ಬಾಳೊಂದನು ಬಲ್ಲೆಯವನೊಂದನು ಶರಜಾಲಸಹಿತ ಶಾರ್ಙ್ಗವೊಂದ ।
ಲೀಲೆಯಿಂದೀವನು ನಿನಗದಱಿರವನು ಪೇಳುವೆ ಮಗನೆ ಕೇಳೆಂದು ॥ ೩೩

ಇಂದು ರಾತ್ರಿಯೊಳಿಂದುಶೇಖರ ಕನಸಿನೊಳ್ಬಂದು ಮಹಾಕೃಪೆಯಿಂದ ।
ನಿಂದು ನಿರೂಪಿಸಿದನು ನಗುತೆನಗೆಂದು ತಂದೆಗವನು ಪೇಳಿದನು ॥ ೩೪

ಇಂತು ಕನಸುವೇಳಿದ ನಿಜತನುಜನ ಸಂತಸಮಿಗೆ ಅಪ್ಪಿಕೊಂಡು ।
ಮುಂತಣ ಬವರಕಿನ್ನಳಿಕಿಲ್ಲವೆಂದು ಭೂಕಾಂತ ನಲಿದನೆದೆಯೊಳಗೆ ॥ ೩೫

ಬಳಿಕ ಕರೆದು ನೃಪನಾಸ್ವಪ್ನವನು ಮಂತ್ರಿಗೊಲಿದು ಪೇಳಲು ನಲಿದವನು ।
ಬಲುಸಹಣಿಗಳ ಕಳುಪಿದನು ಗೋವೆಯ ಬಲು ಪಟ್ಟಣಕವನಂದು ॥ ೩೬

ಉಡುಗೊಱೆ ಬಿಳಿಯೆಲೆಯಡಿಕೆ ಕಜ್ಜಾಯಗಳಡಿಕಿದ ಕಂಬಿ ತುರಗದ ।
ಒಡೆಯಗೆ ತೆರಳಿದವಾ ರಾಯಭಾರಿಗಳೊಡನಾ ಮಂತ್ರಿಯಾಜ್ಞೆಯೊಳು ॥. ೩೭

ಪಾವುಡಗಳ ತೆಗಯಿಸಿಕೊಂಡು ನಾಲ್ಕೈದು ಗಾವುದಗಳ ದಿನದಿನಕೆ ।
ಓವದೆ ನಡದು ಬಂದವರು ಪೊಕ್ಕರು ಬೇಗ ಗೋವೆಯ ಬಲುಪಟ್ಟಣಕೆ ॥ ೩೮

ಬಂದು ಕಂಡರು ಮೇಲವರಾ ಕುದುರೆಯ ಬಂದಿಕಾಱನ ಬೇಗದೊಳು ।
ತಂದ ಪಾವುಡಗಳನೊಪ್ಪಿಸಿದರು ಮೇಲೆ [ಬಂದ]ಕಾರ್ಯವನು ಪೇಳಿದರು ॥ ೩೯

ತೋಱಲಾ ಕುದುರೆಯನವರವರಿಗೆ ಕಣ್ಣೂಱಿಂ ನಿಟ್ಟಿಸಲವರದನು ।
ಪಾಱಿತದಱ ದುಷ್ಟತನದ ಹೇಷಾರವ ಮೀಱಿತದಕೆ ಮೇಲೆ ಮೇಲೆ ॥ ೪೦

ಒತ್ತಿಗೆ ಸೇರಿದೊಡೊಪ್ಪಿಸಿದುದು ಮೈಯ್ಯನೆತ್ತಿ ಬಾಲವ ಗುಡಿಕಟ್ಟಿ ।
ಮತ್ತೆ ಬಾಲವ ನೋಡಿದುದು ಫಲಫಲಯೆಂದಿತ್ತುದು ಮುದವನವರಿಗೆ ॥ ೪೧

ನಲಿದರು ರಾಯಭಾರಿಗಳು ಸಹಣಿಗಳಂದುಲಿದರಾ ಕುದುರೆಪರದನು ।
ನಲವೇಱಿಂದನು ನರೇಂದ್ರಪದವಿ ಕರತಲಕೆ ಬಂದಂತೆ ಪೆಚ್ಚಿದನು ॥ ೪೨

ಕರೆಯಲೊಡನೆ ರಾಯಭಾರಿಗಳೊಡನಾ ಪುರದ ಪಯಣಗತಿಯಿಂದ ।
ಭರದಿ ಪೊಕ್ಕನು ಹೊಸದುರ್ಗವನವನು ಕರೆದು ಕಂಪಿಲಮನ್ನಿಸಿದನು ॥ ೪೩

ಪಡಿಬಿಡಾರದಿಂದುಡುಗೊಱೆಯಿಂದ ಮೆಲ್ನುಡಿಯಿಂದವರನು ಸತ್ಕರಿಸಿ ।
ನಡುವಗಲಿಳಿಯೆ ನಂದನಗೂಡಿ ನರನಾಥ ತಡೆಯದೋಲಗಕೆಯ್ದಿದನು ॥ ೪೪

ಕರೆಯಿಸಲಾ ವಾರುವನ ಕೊಂಡಾ ವಣಿಗ್ವರನೆಯ್ದಿದನೋಲಗವನು ।
ತುರಗದಂಗೋಪಾಂಗಲಾವಣ್ಯಲಕ್ಷಣದಿರವ ನಿಟ್ಟಿಸಿದನರಸನು ॥ ೪೫

ಗಾರುಡಿಗನ ಕಂಡ ಘಟಸರ್ಪನಂತಾ ವಾರುವನವನನೀಕ್ಷಿಸುತ ।
ಕ್ರೂರತೆಯನು ಬಿಟ್ಟು ಬಲವನಿಟ್ಟಿಸುತ ಹೇಷಾರವವನು ಮಾಡಿದುದು ॥ ೪೬

ಚಪ್ಪರಿಸಿದನು ಕಂದವ ಮೊಗವನು ಬಿಗಿಯಪ್ಪಿಕೊಂಡನು ಮುದ್ದಿಸಿದನು ।
ಕರ್ಪೂರಗಂಧವನುಱೆ ಕೊಟ್ಟು ಶಿರಕದಱೊಪ್ಪುವ ಪದಕೆ ಮಣಿದನು ॥ ೪೭

ಪರದನಾನಂದದಿಂ ಪರವಶವ್ರೋದನಂದರಸನೆಡೆಯೊಳು ಪೆರ್ಚಿದನು |
ಪರಮಹರುಷವನೆಯ್ದಿದನು ಬೈಚಪ್ಪನಾ ತುರಗ ರಾಮನಿಗೊಳಗಾಗೆ || ೪೮

ಹರಿಪೀಠದಿಂದರಿಕರಿಹರಿ ಕಂಪಿಲನಿರದೇಳ್ದ ಲೀಲೆ ಕೈಮಿಗಿಲೂ |
ಭರದಿಂದ ಕುದುರೆಯೇಱಾಟದೆಡೆಗೆ ಬಂದನರಸು ಮೋಹರದೊಳಳ್ತಿಯೊಳು || ೪೯

ಬಂದೊಯ್ಯನೆ ರಾಮನಾಥನ ವದನಾರವಿಂದವ ನೋಡೆ ಕಂಪಿಲನು |
ಅಂದು ಕೈಯೆರಡಱಿಂ ಹಿಡಿದು ಪೊಂಗಳ ಬಲವಂದಾ ಕುದುರೆಯ ಕಾಲ್ಗೆ || ೫೦

ಪಿಡಿಪೊನ್ನಗಳನಿಕ್ಕಿ ಮಣಿದು ಮನ್ನಿಸಿ ಮೊಗದಡವಿ ಮೆಲ್ಲನೆ ಬೆಂಗೆವಾಯ್ದು |
ನಡಯಿಸಿ ನಲವೇಱಿಸಿ ಕಂದವ ತಟ್ಟಿ ಬಿಡದೆ ದಿಟ್ಟಿಸಿ ತೋಱಿಸಿದನು || ೫೧

ಇಳಿದು ಬಂದೆತ್ತಿ ಕೈಯ್ಗಳ ಮುಗಿದಾತ್ಮಜನಳವ ನಿಟ್ಟಿಸಿ ಸಂತಸದ|
ಜಳನಿಧಿಯೊಳು ಮಿಂದು ಮಾಣದೆ ಭೂಪತಿ ತಳೆದನಾನಂದಾಶ್ರುವನು || ೫೨

ಜನನಾಥನಾ ವಣಿಗ್ವರಗುಡುಗೊಱೆಯಿತ್ತು ವಿನಯೋಕ್ತಿಯಿಂದ ಸತ್ಕರಿಸಿ |
ಮನದೊಲಿದೆಯ್ತಂದು ಪೊಕ್ಕನಂದಿರದರಮನೆಯನಿಂದ್ರೈಶ್ವರ್ಯದೊಳು || ೫೩

ಪರಮಸಂತೋಷವನೆಯ್ದುತ ಪರದನು ಕರೆದು ರಾಯನನು ರಾಮನನು |
ಒರೆದನೇಕಾಂತದೊಳಾ ತುರುಗದ ಜನ್ಮದಿರವನಾ ಮಂತ್ರಿಯ ಮುಂದೆ || ೫೪

ಈ ಸಿಂಗಾಡಿಯೊಳೆಚ್ಚಡೆ ಕಣೆ ನಾಲ್ಕು ಸಾಸಿರಮಾರಂತರವ |
ಓಸರಿಸದೆ ಪೋಗಿಪುದು ನೋಡಿದಱ ವಿಲಾಸವನೆಂದು ಪೇಳಿದನು || ೫೫

ಪೊಡೆದೊಡೆ ಖಡ್ಗದಿಂ ಪಾಱಿಗಳಾನದಿಕ್ಕಡಿಯಹವೀ ಭಲ್ಲೆಯಕೆ |
ಪಡಿಯಿಲ್ಲ ತಿವಿದೊಡಾನುವ ಪಾಸಟಿಯೆಂದೊಡನೆ ಕೊಟ್ಟನು ರಾಮಗವನು || ೫೬

ಆ ಕೊಂಬುವಿಲ್ಲಿನ ಖಡ್ಗದ ಭಲ್ಲೆಯದಾ ಕಡುಸತ್ವದೇಳಿಗೆಯ |
ಭೂಕಾಂತ ಮಂತ್ರಿಗಳಿದಿರಿನೊಳಾ ರಾಮನೇಕಾಂತದೊಳಗೆ ತೋಱಿದನು || ೫೭

ನಲಿದು ಮನದೊಳವನೀಶ್ವರ ಪರದಗಂದೊಲಿದಿತ್ತು ಮತ್ತುಡುಗೊಱೆಯ |
ತಳುವುದೆಮ್ಮಲ್ಲಿಗೆ ಬರುತಬಾರಶ್ವಸಂಕುಳವ ಕೊಂಡೆಂದು ಸತ್ಕರಿಸಿ || ೫೮

ಅವನ ಕಳುಪಿದನಂದತ್ತಲೊಯ್ಯನೆ ಶತ್ರುಭವನದೊಳಗೆ ಶಸ್ತ್ರಜಾತಿ |
ತವಕದಿಂ ತಲೆಕೆಳಗಾದವಶ್ವಂಗಳ ನಿವಹ ಕಣ್ಣೀರ ಕಱೆದವು || ೫೯

ಹುಳಿಹೊರೆಯೆಂಬ ಪೆಸರಗ್ರಹಾರದೊಳಿಳಿವುಳ್ಳ ಜಾತಿಜಾಯಿಲನ ।
ಬಳಗವಿರಲು ರಾಮನಾ ವಾರ್ತೆಯ ಕೇಳಿ ಕಳುಪಿದ ಚರರನಾಯೆಡೆಗೆ ॥ ೧

ಬಂದವರಾ ಪುರದಧಿಕಾರಿಯ ಮುಂದೆ ನಿಂದು ರಾಮನ ರಾಯಸವನು ।
ತಂದು ಕೊಡಲು ನೀಡಿಕೊಂಡದನವರಿಗಿಂತೆಂದನು ಕೋಪದಿಂದವನು । ೨

ನಾ ಕೂಸು ತೆತ್ತ ಕೊಲೆಗೆ ಖಡ್ಗಮುಪ್ರೆಯಿದೇಕೆ ನಾನಿದಕಂಜಿ ತನಗೆ ।
ಬೇಕಾದ ಜಾಯಿಲಗಳ ಕಳುಪಿದೊಡೆಮ್ಮ ಭೂಕಾಂತನೆನಗೆ ಮುನಿಯನೆ ॥ ೩

ಜಾಯಿಲಗಳ ಬೇಡುವರೆ ದೂತರನೆಮ್ಮ ರಾಯನ ಬಳಿಗಟ್ಟಿದೆನಗೆ ।
ರಾಯಸ ಗಡ ನಾನಿದಕಿಂಬವನು ಗಡ ನಾಯಿಗಳನು ಚಿತ್ರನಲ್ತೆ ॥ ೪

ಬಲ್ಲಾಳರಾಯನ ರಾಜ್ಯಕೆ ತಾನೇನು ವಲ್ಲಭನೇ ನಾನು ತನ್ನ ।
ಪಲ್ಲಿಯ ಗವುಡನೆಯೆಂದು ಮಾತಿನ ಬಾಳಿನಲ್ಲಿ ಕುಯ್ದನು ಮೂಗನವರ ॥ ೫

ಸುರತಾಳರಾಜಕಾರ್ಯಕೆ ಸುತ್ತಣರಸುಗಳಿರಬೇಕೆಮಗೆಂದು ನಿಮ್ಮ ।
ಹರಿದಾಟವ ಸೈರಿಸಿದವನಲ್ಲದೊಡೆಮ್ಮ ನರಪತಿಗೆಣೆಯೇ ನಿಮ್ಮವನು ॥ ೬

ಎಂದು ನುಡಿದು ರಾಮನ ಚರರನು ಕೋಪದಿಂದ ಪಿಡಿದು ನೂಕಿಸಲು ।
ಬಂದು ದುರ್ಗವ ಪೊಕ್ಕು ರಾಮನೋಲಗಕೆಯ್ತಂದು ಕೈಮುಗಿದು ನಿಂದವರು ॥ ೭

ಉಳಿಯದೊಂದನಸನಾಡಿದ ಮಾತುಗಳೊಳಗೆ ಕುಮಾರಗಂದವನು ।
ತಳುವದೆ ಬಿನ್ನವಿಸಲು ಹರಿಪೀಠದಿಂದಿಳಿದು ಬಂದನು ತಂದೆಯೆಡೆಗೆ ॥ ೮

ಬಂದು ಕುಮಾರ ಪಣೆಗೆ ಕೈಗಳೆರಡನು ತಂದು ಬಂದನುಚರರಿಂದ ।
ಒಂದಿನಿತುಳಿಯದೆ ದೂತನಾಡಿದ ಮಾತನಂದು ರಾಯಗೆ ಕೇಳಿಸಿದನು ॥ ೯

ಕೇಳಿದನವನಿಪನೆದೆಯೊಳು ಕೋಪವ ತಾಳಿ ಕುಮಾರನ ಕೂಡೆ ।
ಪೇಳಿದನೀಗಳೆ ಪೋಗಿಯಾ ಪುರವನು ದಾಳಿಯಿಟ್ಟಿಂದು ತಾರೆಂದು ॥ ೧೦

ಸನ್ನಾಹಭೇರಿಯ ಪೊಯಿಸಿ ಬಲನ ಕೂಡಿ ತನ್ನ ರಥವನೇಱು ರಾಮ ।
ಮನ್ನೆಯರೆಕ್ಕಟಿಗರು ರಾವುತರು ನೋಡೆ ನಗುತ ತೆರಳಿದ ಪಯಣವ ॥ ೧೧

ಮುತ್ತಿದರಂದು ಕೋಟೆಯ ಮೂವಳಸಾಗಿ ಹತ್ತಿದರಾರ್ದು ಕಾಲನರು ।
ಎತ್ತಲೀಯದೆ ತಲೆಯನು ಕವಿದೆಚ್ಚರಂದೊತ್ತಿ ಬಿಲ್ಲವರು ಜೊಬ್ಬಿಡುತ ॥ ೧೨

ಕೋಳುಹೋಗದೆ ಕೋಟೆ ಕಾದುತಿರಲು ರಾಮ ತಾಳಿ ಕೋಪವ ಮನದೊಳಗೆ ।
ಆಳ ಮೂದಲಿಸುತ ಕುದುರೆಯಾನೆಗಳನು ಲೀಲೆ ಕೈಮಿಗೆ ದಾಟಿಸಿದನು ॥ ೧೩

ನೀರುಗಳನು ದಾಂಟಿ ಮಾರುವ ಕೊಂಟೆಯ ವೀರಭಟರು ಮಿಗೆ ದಾಂಟಿ ।
ಕೇರಿಕೇರಿಯೊಳು ಪರಿದು ಲೂಟಿಯಾಡಿದರೂರು ಕಿಚ್ಚಿನ ಬೀಡಾಯ್ತು ॥ ೧೪

ಬಾಗೂರ ಕಣಿವೆಯ ದಾಂಟಿತು ಸೇನಾಸಾಗರ ಬಲ್ಲಾಳನೃಪನ !
ಭೋಗಾಧಿನಾಯಕ ತಳುವೇತಕಿನ್ನೆಂದು ಆಗ ಪೇಳಿದನೋರ್ವ ಚರನು ॥ ೧೫

ಕೇಳುತ ನುಡಿಯನವನಿಪತಿ ತನ್ನ ಕಾಲಾಳಾನೆ ಕುದುರೆಯೊಗ್ಗಿನೊಳು ।
ಧಾಳಿಯಂ ಬಂದು ಬಿಟ್ಟನು ಬಲ್ಲಾಳನೃಪತಿಗಿದಿರಾಗಿ ॥ ೧೬

ಅತ್ತ ಬಲ್ಲಾಳನೃಪತಿಬೀಡಿನೊಳು ತನ್ನೊತ್ತಿದ ಬಲುಮನ್ನೆಯರ ।
ಮೊತ್ತಕೆ ನಿರವಿಸಲವರು ಬೇಗದೊಳಂದು ಬಿತ್ತರಿಸಿದರು ಪೌಜುಗಳ ॥ ೧೭

ಗಣನೆಯಿಲ್ಲದ ಗಜ ತುರಗ ಸುಭಟರ ಸಂದಣಿವೆರಸತಿಲೀಲೆಯೊಳು ।
ಅಣಿಯೊಳಿಸೆದನಂದು ದಳಪತಿ ನರಸಿಂಗು ರಣದಾಕೆವಾಳತನದಲಿ ॥ ೧೮

ಬಲ್ಲಿದ ಸೋಮದಂಡಾಧಿಪನಾಜ್ಞೆಯಿಂ ಮೆಲ್ಲಮೆಲ್ಲನೆ ಪೌಜುಗಳು ॥
ನಿಲ್ಲದೆ ನಡೆದವು ದುಂದುಭಿಗಳ ರವ ಘಲ್ಲಿಸೆ ಮುಗಿಲ ಮೋಹರವ ॥ ೧೯

ಅತ್ತ ಕಾಟಣ್ಣನಿತ್ತಲು ನಾರಸಿಂಗು ಕೈಯೆತ್ತಿ ಬೀಸಲು ಬಲವೆರಡು ।
ಹೊತ್ತವು ಬೆಟ್ಟುಗಳನು ಬಂದು ಬೆಟ್ಟುಗಳೊತ್ತರಿಸುವ ತೆಱದಿಂದ ॥ ೨೦

ವಸುಧೆ ಕಂಪಿಸೆ ಸೇನಾಪದಧೂಳಿಯಿಂ ಮುಸುಳೆ ನಿರ್ಮಲ ರವಿಬಿಂಬ ।
ಒಸೆದು ತಾಗಿದವೆರಡುಂ ಬಲವಂದು ಮಾಮುಸಗೆ ರಣಾವೇಶದಿಂದ ॥ ೨೧

ಒರ್ವರೊರ್ವರ ಕುದುರೆಯ ಮಾಘೆಯುಗಳಿಂದೊರ್ವರೊರ್ವರು ಕಯ್ಯನಿಕ್ಕಿ ।
ಇರ್ವಲದೊಳಗಿಱಿದಾಡಿ ಮಡಿದರಂದು ಕೊರ್ವಿದ ಕೊಲೆಯ ರಾವುತರು ॥ ೨೨

ಹೋರಿದ ಭಂಟರ ಹೊಯಿದು ಕೆಡಹಿದರು ಹೋರಲಮ್ಮದೆ ತೊಲಗಿದರ ।
ದೂರದೊಳಗೆ ಬಿಟ್ಟು ವೀರರಾಮನ ಪರಿವಾರ ಪೊಕ್ಕಿಱಿದುದಾ ಪೊಳಲ ॥ ೨೩

ಪಿಡಿದನುಗ್ರಾಸಿಯನೇಱಿ ತುರಂಗವ ನಡೆನೋಡುತ ದೆಸೆಗಳನು ।
ನಡೆದನು ನಲವಿಂದ ತನ್ನ ಮೆಯ್ಗಾವಲ ಪಡೆವೆರಸಾ ರಾಮನಾಥ ॥ ೬೦

ಜವನೊಳು ಸರಿಮಿಗಿಲೆನಿಸುವ ಭಟರ ನಿವಹವೆಯ್ತರೆ ಕಂಪಿಲನು ।
ತವಕದಿಂದಿದಿರಾಗಿ ನಡೆದನು ನಿಜತನುಭವವೆರಸತಿಲೀಲೆಯೊಳು ॥ ೬೧

ಎರಡು ಸಾವಿರ ತೇಜಿಯಯ್ವತ್ತು ಸಾವಿರ ವರವೀರಭಟರು ಕಾಳೆಗದ ।
ಕರಿಯೆಂಟುನೂಱೆಸದಿರೆ ಗಜಪತಿಯ ಮೋಹರವೆಸೆದುದು ಕಣ್ಗಳಿಗೆ ॥ ೬೨

ತುರುಗವೆರಡು ಸಾವಿರವೈವತ್ತು ಸಾವಿರ ಕಾಲಾಳೆಸದಿರಲು ।
ಧುರಧರಣಿಯೊಳು ಕಣ್ಗೆಸೆದುದು ವಿದ್ಯಾಧರಪಾತ್ರೆಯ ಬಲಪೌಜು ॥ ೬೩

ಇಂತು ಪರಾಕ್ರಮಬಾಹು ಶೃಂಗಾರಸಾವಂತರೆಂದೆಂಬ ಪಾತ್ರೆಗಳ ।
ಮುಂತೆಸೆದವು ಪೌಜುಗಳೆರಡದನಂತಿಂತೆಂದು ಪೇಳಲೆನ್ನಳವೇ ॥ ೬೪

ಶೃಂಗಾರಸಾವಂತಪಾತ್ರೆಯ ಪೌಜನಭಂಗ ಕಾಟಣ್ಣ ತಾಗಿದನು ।
ಪಿಂಗದೆ ವಿದ್ಯಾಧಳಪಾತ್ರೆಯ ಪೌಜಿಂಗಡ್ಡಲಾದನು ಸಂಗಮನು ॥ ೬೫

ಕಳಿದ ಹೂವಿನ ತೊಡಂಬೆಯನಾ ಬಿಱುಘಾಳಿ ಸುಳಿದು ಕೆಡಪುವ ತೆಱದೊಳು ।
ಕಲಹದೊಳಗೆ ಕರಿಪತಿಯ ರಾವುತರನು ಕಲಕಿದನಾ ರಾಮನಾಥ ॥ ೬೬

ತಳಸಂಕಲೆ ಪಂಚಘಂಟೆ ತೊಡರು ಬೆನ್ನ ಮಿಣಿ ಕಯ್ಯ ಟಿಕ್ಕೆಯವೆಸೆಯೆ ।
ತಳುವದಾನೆಗಳ ನೂಕಿದರಾರ್ದು ಜೋದರು ಕಲಿರಾಮನಾಥನ ಮೇಲೆ ॥ ೬೭

ಗಿರಿಗಳು ಬಂದು ಗೋತ್ರಾರಿಯ ಮುತ್ತುವಂತಿರೆ ಗಜಪತಿಯಾನೆಗಳು ।
ಧುರಧರಣಿಯೊಳು ಸುತ್ತಿದವು ಕುಂತಣದೇಶದರಸಿನ ಸುಕುಮಾರನನು ॥ ೬೮

ಎಡಬಲದೊಳು ಹಿಂದೆ ಮುಂದೆ ಬಂದಿರದವಗಡಿಸುವಾನೆಗಳ ಸೊಂಡಿಲನು ।
ಕಡಿದು ಹರಹಿದನು ಕಲಹಾಂಗಣದೊಳು ಕಡುಗಲಿ ಕಂಪಿಲಾತ್ಮಜನು ॥ ೬೯

ಹಿಡಿದ ಕೊಂಬುಗಳಿಂದ ಪಿಡಿದ ಪೊಂಬಳೆಗಳಿಂದೊಡೆದ ಮಸ್ತಕಗಳಿಂದೊಡನೆ ।
ಕೆಡೆದಾನೆಗಳೆಸೆದವು ವಜ್ರಿಯಿಂ ಕಡಿವಡೆದ ಕುಲಾದ್ರಿಗಳಂತೆ ॥ ೭೦

ಕಡಿದ ಕಡ್ಡಾಳ ಕಮ್ಮರಿಯಂತೆ ಕಂಸಾರಿಯಡಿಯಿಂದ ಮಡಿದ ಸರ್ಪಗಳ ।
ಪಡೆಯಂತೆ ಮೆಱೆದುದು ಕಡಿವಡೆದಾನೆಯ ನಿಡಿ ಬರಿಕೈಗಳಾಜಿಯೊಳು ॥ ೭೧

ಹಿರಿಯುಬ್ಬಣವನು ತೆಗೆದನು ವಿದ್ಯಾಧರಪಾತ್ರೆ ಸಂಗರವನೆಸಗಿ ಹರಿಶ್ಚಂದ್ರ ।
ಸುರಪನಣುಗನ ಕೈಯ್ಯಿಂ ಕಳುಹಿಸಿಕೊಂಡು ಸುರನಗರಿಯನೆಯ್ದಿದನು ॥ ೭೨

ವಿಕ್ರಮಬಾಹು ಶೃಂಗಾರಸಾಮಂತ ಪರಾಕ್ರಮಬಾಹುಪಾತ್ರೆಗಳು ।
ಶಕ್ರನಂದನನ ಕೆಣಕಿ ಸುರಲೋಕವನಾಕ್ರಮಿಸಿದರು ಬೇಗದೊಳು ॥ ೭೩

ಹರಿಬದಾಹವಕೆಯ್ತಂದು ಶಿರಶ್ಚಂದ್ರ ಶಿರವನೊಪ್ಪಿಸಿ ರಾಮನಿಗೆ ।
ತರಣಿಮಂಡಲವ ಭೇದಿಸಿ ಸುರಲೋಕದ ತರುಣಿಯರೆಡೆಗೆಯ್ದಿದನು ॥ ೭೪

ಸೆಡೆದರು ಸೆಲದ ರಾವುತರು ಪಾತ್ರೆಗಳಂದು ಪಿಡಿದರು ಗಜವಾಹಕರು ।
ಬಿಡದೆ ಬೆಂಗೊಟ್ಟರು ಕಪಿಲೇಶ್ವರನ ಬಲ ಪಿಡಿದುದು ಬಂದ ಧಾತ್ರಿಯನು ॥ ೭೫

ಮುಱಿದ ಬಲವ ಕಾಣುತ ರಾಮನಾಥನ ನೆಱೆಗಲಿಗಳು ಪೊಕ್ಕು ತಿವಿದು ।
ಪಱಿಹಂಚುಮಾಡಿ ಪಿಡಿದರಾನೆಕುದುರೆಯನಱಿವರಾರದಱ ಲೆಕ್ಕವನು ॥ ೭೬

ಒಂದು ಗಾವುದ ಪರಿಯಂತ ಮುಱಿಯಲಿಱಿದಂದು ರಾಮನ ಪರಿವಾರ ।
ಬಂದುದು ಧರ್ಮಗಹಳೆಯ ಕೊಳಾಹಳದಿಂದ ಕುಮಾರನಿರ್ದೆಡಗೆ ॥ ೭೭

ಕರಿಪತಿಯನು ಕಲಹದೊಳು ಮುಱಿಯಲಿಱಿದಿರದೆ ಕಂಪಿಲಭೂವರನು ।
ಪರಮಹರುಷದೊಳು ಪುತ್ರ ಸಹಿತ ಪುರವ ಹೊಕ್ಕನು ಲೀಲೆ ಮಿಗಲು ॥ ೭೮

ಕಾಮನಿಂದಾ ಕಮಲಾಕಾಂತ ಬುಧನಿಂದ ಸೋಮ ಜಯಂತನಿಂದಿಂದ್ರ ।
ರಾಮನಿಂ ದಶರಥನೆಸೆವಂತೆಸೆದನಾ ರಾಮನಿಂ ಕಂಪರಾಜೇಂದ್ರ ॥ ೧
ಕೊಡುವೆಡೆಯೊಳು ಕಲ್ಪತರು ಕಾಮಧೇನುಗಳೊಡನೆ ಮಚ್ಚರಿಸುತ ಜಸದ ।
ಕಡುವೆಳ್ಪಿನಿಂ ಚೆಲ್ಲವಾಡುತ ಚಂದಿರನೊಡನೆಸೆದನು ಕಂಪನೃಪತಿ ॥ ೨
ಗಂಭೀರತೆಗೆ ಮುನ್ನೀರೈಶ್ವರ್ಯಕೆ ಜಂಭಾರತಿಯು ಸ್ವೈರಣೆಗೆ ।
ಕುಂಭಿನಿ ಸರಿಯಲ್ಲದೆ ಕಂಪಿಲಗೆ ಮಿಕ್ಕ ದಂಭನೃಪರು ಪಾಸಟಿಯೆ ॥ ೩
ಹಿಂದಣ ನಳನಹುಷಾದಿಗಳಿಗೆ ದೊರೆಯೆಂದೆನಿಸುತ ಗುಣದಿಂದ ।
ನಂದನನೊಡಗೂಡಿ ರಾಜ್ಯವಾಳುತ ಸುಖದಿಂದಿರಲಿತ್ತ ಕಂಪಿಲನು ॥ ೪
ಅತ್ತ ಹಸ್ತಿನಪುರ ಡಿಳ್ಳಿಯೆಂಬಾ ಪೆಸರ್ವೆತ್ತ್ತ ಹನ್ನೆರಡು ಯೋಜನದ ।
ಬಿತ್ತರವಡೆದಳಕಾಪುರವನು ದೆಸೆಗೊತ್ತರಿಸಿದುದು ಚೆಲ್ವಿಂದ ॥ ೫
ಭಾನುಸನ್ನಿಭತೇಜನಮರಾಧೀಶಸಮಾನವಿಭವನುರುದಾನಿ ।
ಭೂನುತವಿಕ್ರಮನೆಂದೆನಿಸುವಲಾವುದೀನನಾ ನಗರಕೊಡೆಯನು ॥ ೬
ಬಾನೊಳಗಣ ತಾರೆಗಳನೆಣಿಸಬಹುದಾ ನರಲೋಕಪಾಲಕನ ।
ಖಾನ ವಜ್ಜೀರಮುಲ್ಲುಕರ ಲೆಕ್ಕಿಸಬಾರದೇನೆಂಬೆನವನ ಸಂಪದವ ॥ ೭
ಭಾನುಸಮೋಗ್ರತೇಜಸ್ವಿ ವಿಕ್ರಮಪಂಚಾನನ ನೇಮಿವೆಸರಿನ
ಖಾನನು ಸಾರ್ವಭೌಮಗೆ ಸುರತಾಳಗೆ ಸೇನಾನಿಯಾಗಿರುತಿಹನು ॥ ೮
ದೇವಗಿರಿಯ ರಾಮದೇವರಾಯನ ಬಿಟ್ಟೆ ದೇವರಾಯನ ಪಿಡಿತಂದು ।
ಭೂವರ ಸುರತಾಳಗಿತ್ತ ನೇಮಿಯ ಧಾಳಿಗಾವನಿದಿರು ಭೂಮಿಯೊಳು ॥ ೯
ರಾಮೇಶ್ವರಕೆ ತೆರಳಿ ಬಂದು ಮಧುರೆಯ ಭೂಮೀಶ್ವರನನು ಪಿಡಿದು
ಆ ಮಧುರೆಯೊಳು ಠಾಣೆಯನನಿಕ್ಕಿದನಾ ನೇಮಿ ಪರಾಕ್ರಮದಿಂದ ॥ ೧೦
ಮಗಳೊರ್ವಳುಂಟಾ ರಾಯಗೆ ಮದನನ ಬಿಗಿದ ಬಿಲ್ಲಿನ ಬಿಂಕವನು ॥
ಮಿಗುವ ಮೃಗಾಕ್ಷಿ ಮೃಗಾಂಕನಿಭಾನನೆ ಮೃಗಮದಾಮೋದ ನಿಶ್ವಾಸೆ ॥ ೧೧

ಮೊಗವೆಲ್ಲ ಕಣ್ಣು ಕಣ್ಣೆಲ್ಲ ಮೋಹನದೇಳ್ಗೆ ನಗೆಯೆಲ್ಲ ನನೆಗಣೆಯಾಟ ।
ಬಗೆಯೆಲ್ಲ ಬೇಟದ ಬಯಕೆಯಾಗಿರೆ ಕಣ್ಗೆ ಸೊಗಸಿದಳಾ ರಾಯಕುವರಿ ॥ ೧೨

ಅಲರಂಬಿಂದ್ರಿಯಪಂಚಕವಾಗಲಾ ವಿಲಸಿತ ಕುಸುಮಕೋದಂಡ ।
ಲಲನಾರೂಪಮನಾಂತುದೆಂದೆನೆ ಕಣ್ಗೆ ಸಲೆ ಸೊಗಯಿಸಿದಳಾ ಕುವರಿ ॥ ೧೩

ಪರಿಮಳಪರಮಾಣುಗಳ ಪುಂಜವ ತಂದು ಕರುವಿಟ್ಟ ಸುರಕಾಂತೆಯರ ।
ವರಲಾವಣ್ಯದಿಂದಿರದೊಪ್ಪವಿಟ್ಟಂತಿರೆ ರಂಜಿಸಿದಳಾ ಕುವರಿ ॥ ೧೪

ನವಯವ್ವನೆಯಾದ ಮಗಳ ಮೊಗವ ನೋಡಿ ಭುವನಾಧಿಪ ಸುರತಾಳ ।
ಅವಳಿಗೆ ತಕ್ಕ ವರನ ನೋಡಿ ಕಾಣದೆ ತವೆ ಚಿಂತಿಸಿದನೆದೆಯೊಳು ॥ ೧೫

ಇಂತಿರಲಿತ್ತ ಸುರತ್ರಾಣಧರಣೀಕಾಂತನಿಂದ್ರೈಶ್ವರ್ಯದೊಳು ।
ಕಂತುಸನ್ನಿಭರಾಮನಾಥನ ಕೀರ್ತಿ ದಿಗಂತರಾಳವ ಮುಸುಕಿದುದು ॥ ೧೬

ಕೇಳಿ ಭಟ್ಟರು ಡಿಳ್ಳಿಯಿಂದ ಕಂಪಿಲ ಭೂಪಾಲಕನೆಡೆಗೈತಂದು ।
ಲೀಲೆಯಿಂ ಕೊಂಡಾಡೆ ಕಲ್ಪಪಾದಪವನುಕೂಲವಾದಂತಾಯ್ತುವರಿಗೆ ॥ ೧೭

ಬಳಿಕ ಭಟ್ಟರು ರಾಮನಾಥನೋಲಗಕೆ ಬಂದೊಳುನುಡಿಯಿಂದಮೃತವನು ।
ತಳಿವುತ ಕೊಂಡಾಡಿದರಾ ರಾಮನ ಕುಲ ಚಲ ಬಿರುದಾವಳಿಯ ॥ ೧೮

ಆ ವಧುಗಿವ ತಕ್ಕನಿವನಿಗೆ ತಕ್ಕವಳಾವಧುವೆಂದು ತಮ್ಮೊಳಗೆ ।
ಭಾವಿಸಿ ಬರೆಯಿಸಿದರು ರಾಮನಾಥನ ಭಾವಚಿತ್ರವನೊರ್ವನಿಂದ ॥ ೧೯

ಅವರಾ ಭಾವಚಿತ್ರದ ಪಟವನು ತಂದು ತವಕದಿಂ ನರಲೋಕಪತಿಯ ।
ಕುವರಿಯ ಕೈಯೊಳು ಕುಡೆ ಕೇಳಿದಳವಳಿವನಾರೆಂದು ವಂದಿಗಳ ॥ ೨೦

ಹೇಳಿದರವರು ಕರ್ಣಾಟಕದೇಶವನಾಳುವರಸಿನ ಕುಮಾರ ।
ಭೂಲೋಕಮದನಾವತಾರನಿವನು ಕೇಳು ಲೋಲಾಕ್ಷಿ ರಾಮನೆಂಬುವನು ೨೧

ಎನೆ ಭವಬದ್ಧ ಮೋಹೋದ್ರೇಕದಿಂದವನನುವಿನ ಭಾವಚಿತ್ರವನು ।
ಮನವೊಲಿದಿಟ್ಟಿಸಿ ಮನಸಿಜತಾಪದಿಂ ತನುವ ಮಱೆದಳಾ ಕುವರಿ ॥ ೨೨

ಹಿಂದೀಶ್ವರ ಶಾಪದಿಂದೈವರ ಭೋಗಿಪಂದು ದ್ರುಪದನಂದನೆಗೆ ।
ಬಂದಿಹುದತಿಮೋಹ ಪಾರ್ಥನ ಮೇಲದಱಿಂದಾದುದವಳಿಗೆ ವಿರಹ ॥ ೨೩

ಜೇಡಿದ ಕಪ್ಪವ ತೆತ್ತು ಮುಗಿದಿರ್ಪ ಹೇಡಿಮನ್ನೆಯರುಗಳೆಲ್ಲ ।
ಕೂಡೆ ಬಂದಿತು ರುದ್ರದೇವನೊಡನೆ ನಮ್ಮ ನಾಡನಿಱುವ ತವಕದೊಳು ॥ ೧೨

ಆ ಮಾತುಗೇಳಿ ನೀರದನಿನದವ ಕೇಳ್ವ ಸಾಮಜವ್ಯೆರಿಯಂದದಲಿ ।
ಭೂಮಿಪ ಕಿಡಿಕಿಡಿಯೋಗುತ ಕೋಪದಿಂ ರಾಮನ ಮೊಗವ ನೋಡಿದನು ॥ ೧೩

ಮೀಸೆ ಕುಣಿಯೆ ಮೆಯ್ಯ ರೋಮ ಕಾರಿಡೆ ಕಣ್ಣು ಸೂಸೆ ಕಿಡಿಯ ಮೊಗ ಹೊಗೆಯೆ ।
ಘಾಸಿಯಾಗಲು ಗಂಟೆನಿಂ ಪುರ್ಬು ನೃಕಟ್ಟಾಸುರವನು ತಾಳಿದನು ॥ ೧೪

ಸಮರಭೇರಿಯ ಪೊಯ್ಸಿ ಸಕಲಬಲವ ಕೂಡಿ ವಿಮಲವಿಕ್ರಮ ಕಂಪನೃಪತಿ ।
ಸುಮುಹೂರ್ತದೊಳಿಳಿದನು ಗಿರಿದುರ್ಗವನಮರೇಶ್ವರವಿಭವದೊಳು ॥ ೧೫

ಅಂದಿನಿರುಳು ವೀರರುದ್ರನೋಲಗಕೆಯ್ತಂದು ತೆಲುಗುಮನ್ನೆಯರ ।
ಮುಂದೆ ನುಡಿದನು ಕಂಪಿಲನೆಮಗಿದಿರಾಗಿ ಬಂದು ಬಿಟ್ಟನು ಬಲಸಹಿತ ॥ ೧೬

ಬಂದುದು ಪಡೆಯ ಪೆರ್ಚುಗೆಯ ಪರಾಕ್ರಮದಿಂದಲ್ಲ ನಿಜನಂದನನ ।
ಸಂದ ಸಾಹಸತನದಿಂ ಬಂದನೆಂದವನಂದು ಸಭೆಯೊಳು ನುಡಿದನು ॥ ೧೭

ಕದನದೊಳಗೆ ಬಲ್ಲಾಳನ ಜಯಿಸಿದ ಮದಮುಖತನದಿಂದ ನಮಗೆ ।
ಇದಿರಾಗಿಬಿಟ್ಟನು ಕಂಪಿಲನೆಂದು ಕೋಪದೊಳಾಡಿದನು ವೀರರುದ್ರ ॥ ೧೮

ರಾಯ ನುಡಿಯಲಿಂತು ರಾವೂರ ಸಿಂಗಮನಾಯಕನೆದ್ದು ಕೈಮುಗಿದು ।
ರಾಯ ಬಿನ್ನಪವಿದನೊಂದು ಚಿತ್ತೈಸೆನ್ನ ಬಾಯಬಡಿಕನೆನ್ನದಿರು ॥ ೧೯

ರಾಮನುಱುಬೆಯ ನಿಲಿಸಿದೊಡೆ ದೇವ ಸಂಗ್ರಾಮದೊಳಗೆ ಕಂಪಿಲನ ।
ಸಾಮವಿಲ್ಲಿದೆ ಪಿಡಿವೆನು ವೀಳೆಯವ ಕೊಡು ಭೂಮಿಪ ಎಂಪೆನಲವನು ॥ ೨೦

ಪಿಡಿವೆನವನ ನಾನು ತಡೆವೆನವನ ನಾನು ತುಡುಕುವೆನವನ ಮೇಲಾನು ।
ನುಡಿಯಿದ ಬರಯಿಸೆಂದೆಂಬ ಭಟರ ಮಾತು ಬಿಡದೆಸೆದವು ಬೀಡುಗಳೊಳು ॥ ೨೧

ವೀರಸನ್ಯಾಸದೊಳಿಪ್ಪ ವಿಜಯಹಯವಾರಣತತಿಯನರ್ಚಿಸುವ ।
ವೀರರಿಂದೆರಡುಂ ಬೀಡು ಕಣ್ಗೆಸೆದವು ಸಾರದ ನಲಿಯೆ ನಭದೊಳು ॥ ೨೨

ಕಲಹದೊಳಗೆ ರಾಮ ವೀರರುದ್ರನ ಬಹುಬಲವ ಕೊಲ್ವುದ ನೋಡಲೆಂದು ।
ನಲವಿಂದ ಬಂದನೆಂಬಂತೆ ನಳಿನಮಿತ್ರ ತಲೆದೋಱಿದನು ತವಕದೊಳು ॥ ೨೩

ಸಿಂಗಮನಾಯಕ ಪೇಳಿದ ತಾಣತಾಣಂಗಳೊಳಗೆ ಫೌಜುಗಳು ।
ಸಂಗತಿವಡೆದೆಸೆದವು ಭಟತುರಗಮಾತಂಗ ಕೋಳಾಹಳ ಮಸಗೆ ॥ ೨೪

ನೆರೆದ ನೋಟಕರ ಪೇಳ್ವೊಡೆ ಸುರಗುರು ಬಂದು ಕರಣಿಕನಾಗಿ ಮಹಿಯೊಳು ।
ಬರೆದೊಡಶಕ್ಯವೆಂದೆನಲೆಂತುಟೆಂತುಟೆಂದೊರೆವೆನೆಂತದಱ ಲೆಕ್ಕವನ್ನು ॥ ೨೫

ಇತ್ತ ವಿಜಯಮುಂದುಭಿರವ ದೆಸೆಗಳನೊತ್ತರಿಸಲು ಕಂಪನೃಪತಿ ।
ಎತ್ತಿ ನಡೆದು ಬಂದನು ಸಂಗರಭೂಮಿಗುತ್ತಮಾಶ್ವದ ಮೇಲಂದು ॥ ೨೬

ಬಂದು ಕಂಡನು ಕಾಕತಿರುದ್ರದೇವನ ಸಂದ ಸೇನಾಶರಧಿಯ ।
ಕಂದಿತು ಮೊಗ ಮನಗುಂದಿತು ಬಹು ಚಿಂತೆ ಬಂದಿತು ಕಂಪನೃಪತಿಗೆ ॥ ೨೭

ಕಂಡನು ತಂದೆಯ ಕದಲನು ಕಲಿಕಾಲ ಗಾಂಡೀವಿ ವೈರಿಮೋಹರದ ।
ಗಂಡುಗಲಿಗಳ ಗಂಡನು ರಿಪುಕುವಲಯಚಂಡಕಿರಣ ವೀರರಾಮ ॥ ೨೮

ನಿಂದು ಕೈಮುಗಿದು ಬಿನ್ನಹ ರಾಯ ಚಿತ್ತೈಸೆಂದು ಚೆನ್ನಿಗರಾಮನಾಥ ।
ಕುಂದಕುಟ್ಮಲದಂತಕಾಂತಿ ಪಸರಿಸಲಿಂತೆಂದು ನುಡಿದ ತಂದೆಯೊಡನೆ ॥ ೨೯

ದೇವ ಚಿತ್ತೈಸು ಬಿನ್ನಪವನಿದನು ರುದ್ರದೇವನ ಬಲವನೆಲ್ಲವನು ।
ಜಾವದೊಳಗೆ ಜವನಗರಿಗೆ ಕಳುಪುವೆನಾವಗಹನವಿದು ನನಗೆ ॥ ೩೦

ಅಡವಿಯೆನಿತು ಕಿಡಿಯೆನಿತಾನೆಯಮಂಗಡವೆನಿತಾ ಸಿಂಗವೆನಿತು ।
ಕಡಲೆನಿತಾ ವಡಬಾನಲನೆನಿತದ ಪೊಡವಿಪ ನೀನೆ ಚಿತ್ತೈಸು ॥ ೩೧

ಹದ್ದು ಕಾಗೆಗಳಿಗೀ ಬಲವನೆಲ್ಲವ ರಾಯಬಿರ್ದಿಕ್ಕುವೆನು ಮುಂಡಗಳನು ।
ಎದ್ದಾಡಿಸುವೆನು ರಣದೊಳೀ ರುದ್ರನ ಗೆದ್ದು ತೋಱುವೆನು ಚಿತ್ತೈಸು ॥ ೩೨

ಏಕಶಿಲಾಪುರಪರಿಯಂತರವು ನಾನಾ ಕಾಕತಿರುದ್ರನನು ।
ಜೋಕೆಗೆಡಿಸಿ ಕೊಲದಿರ್ದೆನಾದೊಡೆ ಧರಣೀಕಾಂತ ನಿನಗೆ ಪುಟ್ಟಿದನೆ ॥ ೩೩

ಆ ನುಡಿಗೇಳುತಾನಂದಾಶ್ರು ಪೊಱಸೂಸಲಾ ನರಪತಿ ಮನದೊಳಗೆ ।
ದೀನತೆಯನು ಬಿಟ್ಟು ಧೀರತೆಯನು ತಳೆದೇನೆಂಬೆ ನಲವೇಱಿದನು ॥ ೩೪

ಹೊಳೆವ ನಾನಾಯುಧವಿಡಿದೆಡಬಲದೊಳು ಬಳಸಿದೂಳಿಗದ ರಾವುತರ ।
ಬಳಗದ ನಡುವೆ ಬಱೆಯ ಹುಲಿಯಂತೆ ಕಣ್ಗೊಳಿಸಿದನಾ ವೀರರಾಮ ॥ ೩೫

ಮತ್ಸರವನು ಬಿಟ್ಟು ತೆಲುಗುಮನ್ನೆಯರೆಲ್ಲ ಮೆಚ್ಚಿದರಾ ರುದ್ರದೇವ ।
ಅಚ್ಚರಿಪಟ್ಟನಾ ರಾಮನ ಶೌರ್ಯದ ಪೆರ್ಚುಗೆಯನು ನಡೆನೋಡಿ ॥ ೩೬

ಗುಣಕೆ ಹುರಡೇ ಶಿವಶಿವ ರಾಮನಾಥನೀ ಗಣನೆಗೆ ನಿಲುಕದ ಬಲಕೆ ।
ಎಣಿಸದೋರ್ವನೆ ಮಾರ್ಮಲೆದು ನಿಂದನು ಫಲುಗುಣನಲ್ಲದಿವಗೆ ಪಾಸಟಿಯೇ ॥ ೩೭

ಎಂದು ಮತ್ಸರವನುಳಿದು ವೈರಿಭೂಮಿಪರಂದು ಕುಮಾರ ರಾಮನನು ।
ಒಂದೇ ಕೊರಲೊಳು ಕೊಂಡಾಡಿ ಮದದೊಳುಱಿ ನೊಂದರಪೇನ ಪೇಳುವೆನು ॥ ೩೮

ಕಡಿದಾಡಿ ಸುಭಟರುಭಯಮೋಹರದೊಳು ಮಡಿಯೆ ರಾವೂರ ಸಿಂಗಮನು ।
ಬಿಡದೆ ಮನ್ನೆಯರ ಮೂದಲಿಸುತ ರಾಯನ ಪಡೆಯ ಕೆಣಕಿ ಕಲಕಿದನು ॥ ೩೯

ಹೊಕ್ಕನು ರಾಯನ ಪೌಜನು ರಾಮ ವ್ಯೆಯಿಕ್ಕಿ ತಿವಿದು ಪಗೆವಡೆಯ ।
ಒಕ್ಕಲಿಕ್ಕಿದನು ಪಿಡಿದು ರಾಯನ ಮುಂದಿಕ್ಕಿದನಾ ಸಿಂಗಮನ ॥ ೪೦

ಸಿಂಗಮನಾಯಕನನು ರಾಯಗೊಪ್ಪಿಸಿ ತುಂಗವಿಕ್ರಮ ರಾಮನಾಥ ।
ಸಂಗರಕಿದಿರಾದನು ಮತ್ತೆ ಮೇಲಮರಾಂಗನೆಯರು ಪರಸಿದರು ॥ ೪೧

ಎಲ್ಲಿ ನೋಡಿದರೆ ರಾಮನ ಬೊಬ್ಬೆಯಬ್ಬರವೆಲ್ಲಿ ನೋಡಿದರೆ ರಾಮುಗನ ।
ಸೆಲ್ಲೆಹ ಶಕ್ತಿಗಳೀಡೆಸೆದವು ರಣದಲ್ಲಿ ರಾಮನ ಶೌರ್ಯವೆಂತೋ ॥ ೪೨

ಇಱಿವುತ ತಱಿವುತ ಕೊಱೆವುತ ಜಱೆವುತ ನೆಱೆಗಲಿಗಳು ಬೆಂಬತ್ತಿ ।
ಸೆಱೆವಿಡಿದುದು ಮಂದಿಕುದುರೆಯೆಲ್ಲವ ತೀರ ಮುಱಿದುದು ರುದ್ರನ ಸೇನೆ ॥ ೪೩

ತೆಗೆದಪ್ಪಿಕೊಂಡು ಸಂತೋಷಾಂಬುನಿಧಿಯೊಳು ಮಿಗೆ ತೇಂಕಾಡುತಾತ್ಮಜನ ।
ಮೊಗವ ನಿಟ್ಟಿಸುತ ಮೋಹೋದ್ರೇಕದಿಂ ಕಣ್ಮುಗಿದವು ಕಂಪನೃಪತಿಗೆ ॥ ೪೪

ಚರಣಕಮಲಗಳಿಗೆರಡೆ ಬಂದೆಱಗಿದ ವರಸುತನನು ತೆಗೆದಪ್ಪಿ ।
ಪರಮಸಂತೋಷಾಂಬುನಿಧಿಯೊಳು ಮುಳುಗಿ ಮೆಯ್ಮರೆದಳಾ ಹರಿಹರದೇವಿ ॥ ೪೫

ಹದಿನೆಂಟು ವರುಷದ ಮಗನಾಕ್ಷಣದೊಳಗುದಯಿಸಿದಂತಾ ಕಾಂತೆ ।
ಮುದವನೆಯ್ದಿದಳು ಮುದಾಶ್ರುವಿಂ ಭೂಮಿಯ ಪದಗೊಳಿಸಿದಳಾ ಜನನೀ ॥ ೪೬

ಬಿರುದಿನ ಜಗಳಕೆ ಕಾಕತೀಶ್ವರ ಕಂಪಧರಣಿಪತಿಯ ಮೇಲೆ ಪೋಗಿ ।
ಧುರದೊಳು ಮುಱಿದು ಬಂದುದ ಕೇಳಿದನಾ ಕರಿಪತಿ ಕಪಿಲೇಶ್ವರನು ॥ ೪೭

ಕೇಳಿ ಷೋಡಶಪಾತ್ರೆಗಳೊಡನಾ ರಾಯನಾಳೋಚಿಸಿದನಿಂತೆಂದು ।
ತಾಳಬಾರದು ಗಡ ರಾಮನುಬ್ಬುಬೆಯನೀ ಭೂಲೋಕದ ರಾವುತರಿಗೆ ॥ ೪೮

ಖಂಡೆಯದಿಂ ಪೊಯ್ದೊಡೆ ರಾವುತರು ಕಡಿಖಂಡವಡೆದು ಧರಣಿಯೊಳು ।
ದಿಂಡುಗೆಡೆವರು ಗಡವನ ರಾವುತಿಕೆಯುದ್ದಂಡತೆಗೆಣೆಯಿಲ್ಲ ಗಡ ॥ ೪೯

ಎಂದು ನುಡಿಯೆ ಗಜಪತಿವಿದ್ಯಾಧರನೆಂದೆಂಬ ಪಾತ್ರೆ ಕೈಮುಗಿದು ।
ನಿಂದು ನುಡಿದನು ರಾವುತಪಾಯಿಕೆಯ ಪಾಡೊಂದಿದ ಬಲುಪಂಥಗಳನು ॥ ೫೦

ರಣದೊಳು ರಾಮನಾಥನನಲ್ಲದೆ ಮಿಕ್ಕ ಬಣಗು ರಾವುತ ಪಾಯಕರನು ।
ಕೆದಕಿದೆನಾದೊಡೆ ರಾಯ ಕರುಳ ಬೆನ್ನೊಳೆಣಿಸಿ ತೆಗೆಸು ಮಾತೇನು ॥ ೫೧

ಎಂದು ವಿದ್ಯಾಧರಪಾತ್ರೆ ನುಡಿಯೆ ಬೇಗದಿಂದುಳಿದ ಪಾತ್ರೆಗಳು ।
ಅಂದು ಬಿನ್ನವಿಸಿದರಾ ಗಜಪತಿಗಿಂತೆಂದು ರಾವುತಿಕೆಯಿರವನು ॥ ೫೨

ಖಂಡೆಯವನು ಝಳಪಿಸಲಚ್ಚುಯದ ಜಡಗಂಡರ ಪೊಯ್ದಂತೆನ್ನ ।
ಕಂಡು ಪೊಯ್ದಡೆ ಕಂಗಲುಸಹ ರಾಮನ ತುಂಡೇಳಪೊಯ್ವೆ ಚಿತ್ತೈಸು ॥ ೫೩

ಎಂದು ಹರಿಶ್ಚಂದ್ರಪಾತ್ರೆ ನುಡಿಯೆ ಕಡುಪಿಂದ ಶಿರಶ್ಚಂದ್ರನೆಂಬ ।
ಸಂದ ವೇಸರ ಪಾತ್ರೆ ರಾಯರ ಕೈಮುಗಿದೆಂದು ನುಡಿದನು ಪಂಥವನು ॥ ೫೪

ಹಾರೆಯನಿಕ್ಕಡಿಯಾಗಿ ಪೊಯ್ವೆನಗೆ ಕುಮಾರ ರಾಮುಗ ಸಿಕ್ಕಿದೊಡೆ ।
ಧಾರುಣೀಶ್ವರ ತುಂಡಿಗೆ ಪೊಯ್ವೆನಲ್ಲದೊಡಾರಯ್ಯದಿಕ್ಕಿಸಾಜ್ಞೆಯನು ॥ ೫೫

ಎಂದು ನುಡಿಯೆ ಹರಿಶ್ಚಂದ್ರ ವಿಕ್ರಮಬಾಹುವೆಂದೆಂಬ ಪಾತ್ರೆ ವಿಕ್ರಮದ ।
ಸಂದ ಮಾತುಗಳನಾಡಿದನಾನೆಯೊಡೆಯನ ಮುಂದೆ ಶೌರ್ಯಾತಿರೇಕದೊಳು ॥ ೫೬

ಹಸಿಯ ಗೋಡೆಯ ಕಡಿವಂತೆ ರಾಮನ ಮೆಯ್ಯ ಕುಸುರಿದಱಿಯದಿರ್ದೊಡೆನ್ನ ।
ದೆಸೆವಲಿಗೊಡಿಸು ದೇಶಾಧಿಪ ನೀನೆಂದೊಸೆದು ಬಿನ್ನವಿಸಿದನವನು ॥ ೫೭

ಷೋಡಶಪಾತ್ರೆಗಳೆಡಬಲದೊಳು ಬರೆ ಗಾಡಿಯಿಂ ಗಜಪತಿ ತನ್ನ ।
ನಾಡ ನೋಡುತ ಬಂದು ಕೃಷ್ಣವೇಣಿಯ ದಾಂಟಿ ಬೀಡಬಿಟ್ಟನು ಬೇಗದೊಳು ॥ ೫೮

ಚರರೆಯ್ತಂದಾ ಸುದ್ದಿಯ ಕಂಪಿಲಧರಣಿಪತಿಗೆ ಪೇಳಲವನು ।
ಭರದಿಂದ ಪೊಯ್ಸಿ ಸೇನಾಚಕ್ರವೆರಸಾತುರದಿಂದ ತೆರಳಿದನಂದು ॥ ೫೯

ಮುಟ್ಟಿಪಿಡಿದು ಮನೆಮನೆಗಳೊಳಗೆ ಕಟ್ಟಾಳು ಬಿಡದೆ ಪೊಕ್ಕರಸಿ ।
ಕೆಟ್ಟು ನುಡಿದ ಪೊಳಲಧಿಕಾರಿಯ ಪೆಡಕಟ್ಟಿನಿಂ ತಂದೊಪ್ಪಿಸಿದರು ॥ ೨೪

ಪಿಡಿಯಿಸಿದನು ಧರ್ಮಗಾಳೆಯ ಭೇರಿಯ ಪೊಡೆಯಿಸಿದನು ಗೂಳೆಯವ ।
ನಡೆಯಿಸಿದನು ಪಿಂತೆ ತೆರಳಿದನೊಯ್ಯನೆ ಸಡಗರದಿಂದಾ ರಾಮ ॥ ೨೫

ಸಿಕ್ಕಿದ ಸೆಱೆಗಳ ಬಿಡಿಸಿ ಕುವರ ಭಂಟರೆಕ್ಕಳ [?]ಕೊಂಡು ದುರ್ಗವನು ।
ಹೊಕ್ಕನದಱ ಸಿರಿ ಫಣಿಪತಿಗಲ್ಲದೆ ಮಿಕ್ಕವರಳವೇ ಬಣ್ಣಿಸಲು ॥ ೨೬

ಕಿಡಿಗಣ್ಣು ಕಿಡಿಸೂಸೆ ಕುಡಿಮಿಸೆ ಕುಣಿದಾಡೆ ಬಿಡದೆ ಗಂಟಿಕ್ಕೆ ಪುರ್ಬುಗಳು ।
ಒಡನೆ ಮಯ್ಯೆಲರುಚ್ಚಳಿಸೆ ವೀರಬಲ್ಲಾಳ ಕಡುರೋಷವ ತಾಳಿದನು ॥ ೨೭

ನೆಲನೀದುಪೋ ದೆಸೆ ಬೆಸಲಾದುದೋ ಬಾನಿಳೆಗಾನೆ ಕುದುರೆ ಕಾಲಾಳ ।
ಮಳೆಗಱೆದುಪೋ ಮೇಣೆನೆ ಬಲ್ಲಾಳನ ಬಲಮಯವಾದುದೀ ಭೂಮಿ ॥ ೨೮

ಬಿರಿಯೆ ಭೂತಳಪೆಟ್ಟೆ ಜರಿಯೆ ತಾರೆಗಳುಱೆ ಸುರಿಯೆ ಭೇರೀರವದಿಂದ ।
ತೆರಳಿದನಂದು ಬಲ್ಲಾಳ ಕಂಪಿಲಭೂವರನ ಮೇಲತಿವೇಗದಿಂದ ॥ ೨೯

ಗಡಿಯ ಕಾವ ಮನ್ನೆಯರಿಂ ಸುದ್ದಿಯನೊಡನೆ ಕೇಳಲು ಕಂಪಿಲನು ।
ಕಿಡಿಕಿಡಿಯೋಗುತ ರಾಮನ ಮೊಗವನು ಕಡೆಗಣ್ಣಿನಿಂದ ನೋಡಿದನು ॥ ೩೦

ನೋಡಲೊಡನೆ ರಾಮನಾಥ ದಂಡಾಧಿಪಗೂಡಿ ದಿವಾಣಗೆ ಬಂದು ।
ಕೂಡೆ ಪೊಯಿಸಲು ಸಮರಾನಂದಭೇರಿಯ ಕೂಡಿತು ಬಲವೆಯ್ತಂದು॥ ೩೧

ಕಳುಹಿದ ರಾಯಸವನು ತಲೆಯೊಳಗಾಂತು ಫಳಿಲನೆ ಗಡಿಯ ಮನ್ನೆಯರು ।
ಇಳೆ ಬೆಸಲಾದಂತೆ ಕೂಡಿತು ತಂತಮ್ಮ ಬಲವೆರಸಂದು ಬೇಗದೊಳು ॥ ೩೨

ಆನೆಯಗುಂದಿಯಿಂದಾನೆಕುದುರೆಯೊಳು ತಾನತಿವೇಗದಿಂ ಬಂದು ।
ಆನದೆ ಬಿಸಿಲ ಹಳ್ಳಿಯ ಕಣಿವೆಯ ದಾಂಟಿತೇನೆಂಬೆನದಱ ಸಂಪದವ ॥ ೩೩

ಕಣಿವೆಯಿಂ ದಂಡನಾಥನ ಕೆಱೆವರೆಗಾ ಸಂದಣಿಸದ ಚತುರಂಗಬಲವ ।
ಎಣಿಸವೊಡಹಿಪತಿಗಲ್ಲದೆ ಮಿಕ್ಕಿನ ಗಣಕರಳವೆ ಪೇಳ್ವೆನೇನ ॥ ೩೪

ಕುರುಪತಿಸೇನೆಯ ಸುರಪತಿನಂದನನಿರದೆ ಪೊಗುವ ತೆಱದಿಂದ ।
ಭರದಿಂದ ಪೊಕ್ಕನು ಕಂಪರಾಜೇಂದ್ರನ ವರಸುತನಾ ಮೋಹರವ ॥ ೩೫

ಕಾನನದಾನೆಯು ಕಂಡು ಪಸಿದ ಪಂಚಾನನ ಪೊಗುವ ತೆಱದೊಳು ।
ಆನದೆ ಬಂದು ಪೊಕ್ಕನು ಬಲ್ಲಾಳನ ಸೇನೆಯನಾ ರಾಮನಾಥ ॥ ೩೬

ಎಡವಕ್ಕ ಬಲವಕ್ಕ ಬೇಡಪೌಜು ತನ್ನ ಪಡೆವೆರಸಂದು ಬೇಗದೊಳು ।
ಕಡುಗಲಿ ನರಸಿಂಗು ಬಂದಡ್ಡಲಾದನು ತಡೆಯದೆ ರಾಮನಾಥನಿಗೆ ॥ ೩೭

ಜೋಕೆ ತಪ್ಪದೆ ಜೋಡಿಸಿ ನಿಂದ ಪರಬಲಾನೀಕವ ಕಂಡು ಬೇಗದೊಳು ।
ನೂಕಿ ಹೊಕ್ಕನು ರಾಮನಾಥನದನು ಬಲದಾಕೆವಾಳರ ಮೊಗಗೆಡಿಸಿ ॥ ೩೮

ಸರಳ ಮಳೆಯ ಕಱೆದರು ರಾಮನಾಥನ ತುರಗದ ಮೇಲೆ ಬಲ್ಲವರು ।
ಹರಿಗೆಯವರು ಹೊಕ್ಕರಾನೆಕುದುರೆ ಮೋಹರಿಸಿ ಮುಸುಕಿತು ರಾಮನನು ॥ ೩೯

ತುರಗಮೊಹರದೊಳು ಮುಳುಗಿ ಹೊಯ್ದನು ಮದಕರಿಯ ಹಿಂಡಿನೊಳಾಳಿದನು ।
ಧರಣಿಯ ರುಣ ಹರಿದುದು ರಾಮಗಿನ್ನೆಂದು ಸುರರುಲಿದರು ಮೇಘದೊಳಗೆ ೪೦

ಆಹವದೊಳು ಮೇಲೆ ಕವಿದರಿಬಿರುದರ ಮೋಹರದಾರುಬಟೆಯನು ।
ಸಾಹಸಿಗಳ ತಲೆ ರನ್ನ ಚೆನ್ನಿಗರಾಮ ಕಾಹುರ ಮಿಗೆ ನೋಡಿದನು ॥ ೪೧

ಮೂವಳಸಾಗಿ ಮುತ್ತಿದ ರಿಪುಸೇನೆಯ ಗಾವಳಿಯನು ಕಾಣುತ್ತಾ ।
ಸಾವಿರಮುಖದೊಳಿರ್ದುದು ರಾಮನೇಱಿದ ದೇವತುರಂಗ ರಣದೊಳು ॥ ೪೨

ಸುತ್ತಕವಿದ ಕತ್ತಲೆಯ ದಿನನಾಯಕನೊತ್ತರಿಸುವ ತೆಱದಿಂದ ।
ಮುತ್ತಿದ ಮೋಹರವನು ನಿಜಬಲಗೂಡಿ ತೊತ್ತಳದುಳಿದನಾ ರಾಮ ॥ ೪೩

ಬರಲೆಡಬಲದೊಳು ಬಿರುದಿನ ರಾವುತರರಿಬಲವನು ರಾಮನಾಥ ।
ಇರದೆ ಪೊಕ್ಕನು ಗೋಗ್ರಹಣದೊಳರ್ಜುನ ಕುರುಬಲವನು ಪೊಗುವಂತೆ ॥ ೪೪

ಆ ಮೋಹರವನೊಂದರೆಘಳಿಗೆಯೊಳು ಸಂಗ್ರಾಮದೊಳಿದೆಗೆಡಿಸಿದನು ।
ರಾಮನಾಥನ ರಾವುತಪಾಯಿಕೆಯ ನಿಸ್ಸೀಮತೆಯನು ಪೇಳ್ವನೇನ ॥ ೪೫

ಕಂಡನು ರಾಮನಾಥನ ರಾವುತಿಕೆಯುದ್ದಂಡತೆಯನು ಬಲ್ಲಾಳ ।
ಕೊಂಡಾಡಿದನಾ ರಾಮನ ಹಡೆದಾ ಭೂಮಂಡಲಪತಿ ಕಂಪಿಲನ ॥ ೪೬

ಆವ ನೋಂಪಿಯ ಮಾಡಿ ಪಡೆದನೋ ಕಂಪಿಲಪೇವ ಕುಮಾರರಾಮನನು ।
ಪಾವನ ಪಾರ್ಥರು ಪಾಸಟಿಯಲ್ಲದೆ ರಾವುತರೆಣೆಯೆ ರಾಮನಿಗೆ ॥ ೪೭

ಶಿವಶಿನ ಗುಣಕೆ ಮತ್ಸರವುಂಟೇ ರಾಮನ ಬವರದ ಬಲುಗ್ಗೈತನವ ।
ಹವಣಿಸಬಹುದೇ ಮಹಾದೇವ ಎನುತ ಮತ್ತ್ರವನ ಪೊಗಳಿದ ಬಲ್ಲಾಳ ॥ ೪೮

ಕೊಂದರಿಬಲವನು ಬಂದು ಕಾಲ್ಗೆಱಗಿದ ನಂದನನನು ಕಂಪಿಲನು ।
ಅಂದಪ್ಪಿಕೊಂಡಾನಂದಾಶ್ರುಜಲದೊಳು ನಾಂದನು ನಲವೇಱಿದನು ॥ ೪೯

ಅಡಪಲೊಯ್ಯನೆ ಕತ್ತ್ರಲೆ ರಾಯರೀರ್ವರ ಪಡೆ ತಂತಮ್ಮ ಪಾಳೆಯಕೆ ।
ನಡೆದುದು ನಾನಾವಾದ್ಯನಿನಾದದಿಂದೊಡೆಯಲಾಶಾಭಿತ್ತಿಗಳು ॥ ೫೦

ಸಂತಸದಂತನೆಯ್ದಿತ ಕಂಪಿಲಭೂಕಾಂತ ಕುವರನೊಡಗೂಡಿ ।
ತಾಂ ತಡೆಯದೆ ಬಂದು ಪೊಕ್ಕನು ಬೀಡನನಂತವಿಲಾಸ ಕೈಮಿಗಿಲು ॥ ೫೧

ಒಗೆದ ಚಿಂತೆಯ ಹೊಗರಳಿದ ಮೊಗದ ಮೆಯ್ದೆಗೆದ ಮಾತಿನ ಬಲವೆರಸು ।
ದುಗುಡದಿಂ ಬಂದು ಪೊಕ್ಕನು ಬೀಡನವನಿಪ ಬಿಗುಹುಗುಂದಿದ ಬಿಂಕದೊಳು ॥ ೫೨

ಆನಬಾರದು ರಾಮನಃಱುಬೆಯ ಮನ್ನೆಯರೇನ ಮಾಡುವರೆಂದೆನುತ ।
ಭೂನಾಥನೆಣಿಸುತೆದೆಯೊಳು ಪೊಕ್ಕನು ದುಮ್ಮಾನದಿಂ ಬಂದು ಬೀಡಿಕೆಯ ॥ ೫೩

ಸೋಮದಂಡಾಧಿಪ ಜೈಚದಣಾಯಕರಾ ಮಹೀಪತಿಗಳೀರ್ವರನು ।
ಸಾಮಭೇದಾದಿಗಳಿಂದ ತಿಳುಪಿ ಸಂಗ್ರಾಮವಾರ್ತೆಯ ಬಿಡಿಸಿದರು ॥ ೫೪

ತಿಳುಪಿ ನಾನಾತೆಱದಿಂದ ಮಂತ್ರಿಗಳು ಭೂಲಲನೇಶ್ವರರಿರ್ವರನು ।
ಕಲಹವ ಬಿಡಿಸಿ ಪುಗಿಸಿದರು ತಂತಮ್ಮ ಪೊಳಲನಂದತಿವೇಗದೊಳು ॥ ೫೫

ದೇಶಾಧಿಪತಿಗಳೊಡನೆ ಕಂಪಿಲಧರಣೀಶ ವಿಲಾಸ ಕೈಮಿಗಿಲು ।
ಆಶಾಪತಿವೈಭವದೊಳು ನಗರಪ್ರವೇಶ ಮಾಡಿದನೊಸೆದು ॥ ೫೬

ನರಪತಿಗಳನು ರಾವುತಪಾಯಕರನು ದೊರೆಮಕ್ಕಳ ಪೆಸರ್ವಡೆದು ।
ಕರೆದು ಕರೆದು ಸವಿನುಡಿಯಿಂದ ಕಳುಪಿ ತನರಮನೆಯನು ಪೊಕ್ಕನಂದು ॥ ೫೭

೬

ಯುವರಾಜಪಟ್ಟವನಾಂತು ಕೊರಲೊಳುರು ನವರತ್ನಮಯ ಕಂಠಿಕೆಯ ।
ತವೆ ತಳೆದನು ರಾಯನಾಣತಿಯಿಂ ಬಂಧುನಿವಹ ತಳೆಯಲು ಸಂತಸವ ॥ ೧

ವಿನಯ ನಾಲಗೆಯನಾಂತುದೊ ವಿತರಣಗುಣ ತನುವಿಡಿದುದೋ ವೀರಧರ್ಮ ।
ಮನುಜರೂಪಾಂತುದೋ ಎಂದು ಕೊಂಡಾಡದ ಜನಗಳಿಲ್ಲಾ ರಾಮನನು ॥ ೨

ಇಂಗೋಲ್ವಿಲ್ಲನನಿಂದಿರೆ ಭೀಷ್ಮನ ಗಂಗೆಯಂಜನೆ ಹನುಮನನು ।
ಪಿಂಗದೆ ಪಡೆದಂತೆ ಹರಿಹರದೇವಿಯಭಂಗನಿವನನು ಪಡೆದಳು ॥ ೩

ಎಂದು ಕೊಂಡಾಡಿಸಿಕೊಳುತ ಕೋವಿದಜನರಿಂದ ಕುಮಾರಕಂದರ್ಪ ।
ತಂದೆಯೋಜೆಯೊಳು ರಾಜ್ಯವನಾಳುತ ಸುಖದಿಂದಿರುತಿರಲಿತ್ತಲತ್ತ ॥ ೪

ಓರಗಲ್ಲೊಳು ವೀರರುದ್ರನ ದಳಪತಿ ಸೇರಿ ತೆಲುಗು ಮನ್ನೆಯರ ।
ವೀರರಾಮನ ಬಿರುದಿನ ಕೋಳಾಹಳದಾರಭಟೆಯನು ಪೇಳಿದನು ॥ ೫

ತೆಲುಗರ ಗಂಡ ಮೂವರು ರಾಯರಗಂಡ ಜೆಲುವರಗಂಡನೆಂದೆಂಬ ।
ಒಲುಮೆಯ ಬಿರುದನಾಲಿಸಿ ಕಾಕತಿರುದ್ರ ತಳೆದನೆದೆಯೊಳು ಕೋಪವನು ॥ ೬

ಗಿರಿದುರ್ಗವೇಱಿದ ಗರ್ವದಿಂದೀ ಬಲುಬಿರುದ ಪೊಗಳಿಸಿಕೊಂಬುದನು ।
ಧುರಧರೆಯೊಳು ಕಾಣಬಹುದೆಂದು ರುದ್ರಭೂವರನಾಂತನುಗ್ರಕೋಪವನು ॥ ೭

ನವಲಕ್ಷಚಾಪಾಧೀಶನಯೋನಿಜನವನೀಶ್ವರ ವೀರರುದ್ರ ।
ಜವದಿಂದ ಪೊಯಿಸಿ ಭೇರಿಯ ಪೊಱಮಟ್ಟನಾಹವಕಿನವಂಶಸಂಭವನು ॥ ೮

ಲಕ್ಕಕುದುರೆ ನೂಱು ಕರಿಘಟೆಯೊಂಬತ್ತು ಲಕ್ಕ ಕಾಲಾಳಿನೊಗ್ಗಿನೊಳು ।
ಹೊಕ್ಕನು ಕರ್ಣಾಟದೇಶವನವನಿಱಿದೊಕ್ಕಲಿಕ್ಕುತ ರಾಜ್ಯವೆಲ್ಲವನು ॥ ೯

ಚರನೋರ್ವನೆಯ್ತಂದು ಕಂಪಿಲಧರಣೀಶ್ವರನೋಲಗಶಾಲೆಯನು ।
ಭರದಿಂದ ಪೊಕ್ಕು ಮೆಯ್ಯಿಕ್ಕಿ ಬಿದ್ದೆದ್ದಾತುರದಿಂದ ಬಿನ್ನವಿಸಿದನು ॥ ೧೦

ಶರಧಿಗೋದಾವರಿಯೊಳಗುಳ್ಳ ಭೂಮೀಶ್ವರರನೆಲ್ಲರ ಕೂಡಿಕೊಂಡು ।
ಇರದೆ ಕಾಕತಿರುದ್ರ ಬಂದೆಮ್ಮ ರಾಜ್ಯದ ಸಿರಿಯನಿಱಿದು ಕೆಡಿಸಿದನು ॥ ೧೧

ನರನ ಮೇಲಣ ಮೋಹದಿಂದಾಕೆ ನಾನಾಪರಿಯ ಜನನದೊಳೆಯ್ತಂದು ।
ಸುರತಾಳಗೆ ಮಗಳಾಗಿ ಪುಟ್ಟಿದಳನಳಲರಂಬು ರೂಪುಗೊಂಡಂತೆ ॥ ೨೪

ಆ ಪಠವನು ತಂದವರ ಕೈಯಿಂದಾ ಭೂಪನ ಕಂಪಿಲಸುತನ ।
ರೂಪು ಲಾವಣ್ಯ ವಿಲಾಸ ಯವ್ವನವ ನಾನಾಪರಿಯಿಂದ ಕೇಳಿದಳು ॥ ೨೫

ಅವನ ವಿಕ್ರಮವಿತರಣ ವೀರವಿದ್ಯಾನಿವಹನನಾ ವಂದಿಗಳು ।
ಸವಿ ತಟ್ಟಿ ಕಿವಿಗೆ ಪೇಳಿದರು ಸುರತ್ರಾಣನವರಿಗಿತ್ತುಡುಗೊಱೆಗಳನು ॥ ೨೬

ಬಳಿಕ ಮಗಳ ಕರೆಯಿಸಿಕೊಂಡು ಸುರತಾಳ ತಲೆದಡವುತ ರಾಮನನು ।
ತಳುವಿಲ್ಲದೆ ಬರಿಸುವೆನು ಚಿಂತೆಯ ಬಿಡೆಂದೊಳುನುಡಿಯಿಂ ತಿಳುಪಿದನು ॥ ೨೭

ಕರೆಯಿಸಿ ರಾಯಭಾರಿಗಳನಾ ಸುರತಾಳ ಬರೆಯಿಸಿ ಕಾಗದಗಳನು ।
ಭರದಿಂದ ಕಂಪಿಲನೃಪತಿಯ ಬಳಿಗಾದರ ಮಿಗೆ ಕಳುಪಿದನಂದು ॥ ೨೮

ನಿನ್ನ ಕುಮಾರ ರಾಮನ ಕಳುಪುವುದೆಮ್ಮ ಕನ್ನೆಯನವಗಿತ್ತಪೆವು ।
ನನ್ನಿಯಿಾ ಮಾತು ಸದಾಶಿವನಾಣೆ ಕೇಳ್ನಿನ್ನ ಸಂಬಳಕೆ ರಾಜ್ಯವನು ॥ ೨೯

ಕೊಟ್ಟೆನು ಬಿದಿರೆಯ ಕೊಟ್ಟೆ ಸಗರವನು ಕೊಟ್ಟೆನು ನಿಂಬಾಪುರವ ।
ಕೊಟ್ಟೆನು ಜಮುಖಂಡಿಯನು ರಾಯಚೂರನು ಕೊಟ್ಟೆನಿಕ್ಕಿಪುದು ತೋರಣವ ॥ ೩೦

ನಿನ್ನ ಮಗನಿಗೆಮ್ಮ ಭಾಗ್ಯವೆಲ್ಲವ ಕೊಟ್ಟು ಚೆನ್ನಾಗಿ ನಡೆಯಿಸಿಕೊಂಬೆ ।
ಇನ್ನಿದಕೆಣಕೆ ನಿನಗೆ ಬೇಡವೆಂದವನನುನ್ನಯಿಸಿದನು ಕಾಗದವ ॥ ೩೧

ಕೇಳಿದನಾ ಲೇಖನಾರ್ಥವ ಕಂಪಭೂಪಾಲನಿದೊಂದು ನೆವದೊಳು ।
ಆಳಾಗಿಸಿಕೊಂಬ ಬಗೆ ನಮ್ಮನಸುರನೆಂದಾಳೋಚಿಸಿದನೆದೆಯೊಳು ॥ ೩೨

ರಾಯಸವನು ತಂದ ರಾಯಭಾರಿಗಳಿಗಾ ರಾಯನಿತ್ತುಡುಗೊಱೆಗಳನು ।
ಶ್ರೀಯುತರನು ಮಾಡಿ ಮೊಗ ನೋಡುತವರೊಡನೊಯ್ಯಾರದಿಂದ ನುಡಿದನು ॥ ೩೩

ತರುಣನೆಮ್ಮನು ಬಿಟ್ಟು ಪರದೇಶದೊಳು ತರಹರಿಸಬಲ್ಲನೇ ತಮ್ಮ ತಾಯ ।
ಹೊರೆಯನಗಲಿ ಹೊತ್ತುಗಳೆಯಬಲ್ಲನೆ ಅದಱಿವ ನೀವೇನಱಿಯದುದೆ ॥ ೩೪

ಸುರಪತಿಸಮಸುರತಾಳಭಾಗ್ಯವನಿತ್ತು ಪೊರೆದಪೆನೆಂದು ಕುವರನ ।
ಕರೆಯಿಸಲಾನಾನುವೆನೆ ಕಳುಪದೆ ರಾಮ ತರುಣನೆಂತಲ್ಲಿ ಜೀವಿಪನು ॥ ೩೫

ಎಂದು ನುಡಿದ ರಾಯನೊಡನೆ ನುಡಿದರಿಂತೆಂದವರಿದಿರುತ್ತರವನು ।
ಮುಂದರೊಡನೆ ನುಡಿವಂತೆಮ್ಮೊಡನೆ ಬಾಯ್ಗೆ ಬಂದಂತೆ ನುಡಿವರೆ ರಾಯ । ೩೬

ಸುರತಾಳ ಕುವರಿಯನಿತ್ತಪೆನೆಂದಾದರದೊಳು ಕರೆಯಲಟ್ಟಿದರೆ ।
ಭರದಿಂದ ಕುವರನ ಕಳುಪಿ ಕುಲಾಗತ ಧರೆಯೊಳಿಹುದು ರಾಜನೀತಿ ॥ ೩೭

ಬಹಳ ರಾಜ್ಯವನಿತ್ತು ಸುರತಾಳ ನಿಮ್ಮನು ವಹಿಸಿಕೊಂಬನು ಕುವರನನು ।
ವಹಿಲದಿಂ ಕಳುಪಸುರೇಂದ್ರ ಮುನಿದೊಡೆ ನಿರ್ವಹಿಸಬಹುದೇ ದುರ್ಗದೊಳಗೆ ॥ ೩೮

ಎನೆ ಕುಂತಳದೇಶಾಧಿಪ ಪೇಳ್ದನನುನಯದಿಂ ಕರೆದವರ ।
ಇನಿತೇಕೆ ನಮ್ಮೊಳು ನಿಮಗೆಂದತಿಶಯವಿನಯೋಕ್ತಿಯಂ ಕಳುಪಿದನು ॥ ೩೯

ಬಂದು ಕಂಡರು ನರಚಕ್ರವರ್ತಿಯ ಮೆಯ್ಗೊಂದಿಸಿ ಭೂತಾಳಾಗ್ರವನು ।
ನಿಂದು ಕೈಮುಗಿದು ಕಂಪಿಲದೇವನೆಂದುದನೊಂದುಳಿಯದೆ ಪೇಳಿದರು ॥ ೪೦

ಕೇಳಿ ಸುರತ್ರಾಣ ಮನದೊಳು ದುಗುಡವ ತಾಳಿ ತನಗೆ ತಕ್ಕುದನು ।
ಹೇಳಿಸುವೆನು ಬೇಗದೊಳೆನುತವನಂದು ಆಲೋಚಿಸಿದ ಮನದೊಳಗೆ ॥ ೪೧

ಮಾಡಿಸಿ ಕಾಕತಿರುದ್ರನ ಕಾರ್ಯವ ಕೂಡೆ ತೆರಳಿಸಿ ಸೇನೆಯನು ।
ನಾಡೆಲ್ಲವನಿಜುಂದೋಡಿಸಿ ಬೆಟ್ಟದ ಬೀಡ ಬಿಡಿಸುವೆನು ತನ್ನ ॥ ೪೨

ಬೆಟ್ಟದ ಬಲ್ಮೆಯಿಂದೆಮ್ಮ ರಾಯಸವನು ದಟ್ಟಿಸಿ ಕಳೆದ ಕಂಪಿಲನ ।
ಕಟ್ಟಿ ತರಿಸುವೆನೆಂದಾ ಸುರತಾಳನು ತೊಟ್ಟನವನ ಮೇಲಂದು ॥ ೪೩

ಬಳಿಕ ವಿಚಾರಿಸಿದನು ಕುವರಿಯ ಮುಖನಳಿನಕ್ಕೆ ತರಣಿಯೆನಿಸುವ ।
ಲಲಿತಲಾವಣ್ಯವಿಲಾಸ ಸೌಂದರ್ಯಮುಳ್ಳದಿಶಾವಿಕ್ರಮನೋರ್ವನನು ॥ ೪೪

ನಾವೊಪ್ಪಿದವನಿಂದೇನು ಕುವರಿ ತನ್ನ ಭಾವಕೆ ಬಂದ ಪುರುಷನ ।
ಜೀವೇಶ್ವರನನು ಮಾಡಿಕೊಳ್ಳಲಿಯೆಂದಾ ವಸುಧಾಧಿಪ ಬಗೆದು ॥ ೪೫

ವರಮಣಿಖಚಿತಸ್ವಯಂವರಶಾಲೆಯ ವಿರಚನೆಗೆಯ್ಸಿ ಬೇಗದೊಳು !
ನೆರಹಿದನಾ ಸುರತಾಳನವನಿಯ ಭೂವರಸುಕುಮಾರಸಂಕುಳವ ॥ ೪೬

ಚೆಲುವರ ಗಂಡ ಚೆನ್ನಿಗರಾಮನ ರೂಪು ನೆಲಸಿರಲವಳೆದೆಯೊಳಗೆ ।
ಒಲಿವಳೆಂತವಳನರಿಗೆ ಮೋಹಿಸಿದನ ಬಿಟ್ಟೆಳಸುವರೇ ಪೆಣ್ಗಳನ್ಯರ್ಗೆ ॥ ೪೭

ಮಾಲೆಯನಿಕ್ಕಿ ಮನದೊಳಿರ್ದ ರಾಮನ ಮೇಲವಳವನೊಡಗೂಡಿ ।
ಆಲಯಕೆಯ್ದಿದಳಿತ್ತ ಪೋದುದು ನೃಪಜಾಲ ಹಂತವಮ್ಮ ನಗರಿಗೆ ॥ ೪೮

ಬೆಟ್ಟನ ಕಿತ್ತೀಡಾಡಿಸಿ ರಾಮನ ಕಟ್ಟಿ ತರಿಸಿ ನಿನಗಾನು ।
ಕೊಟ್ಟಪೆನಿದಕೇಕೆ ಚಿಂತೆಯೆನುತ ಸಂತವಿಟ್ಟನಾ ರಾಯ ಮಗಳನು ॥ ೪೯

ಬರಿಸಿದ ನೇಮಿಖಾನನ ವೀರರುದ್ರನ ಪುರಕೆ ಜೇಗದೊಳು ಧಾಳಿಯನು ।
ತೆರಳಿಸಿದನು ಕರಿತುರುಗಕಾಲಾಳ ಮೋಹರ ಮೊಗಗೆಡಿಸಿ ಲೋಕವನು ॥ ೫೦

ಮೆಲ್ಲ ಮೆಲ್ಲನೆ ಬಂದು ವೀರರುದ್ರನ ಪುರದಲ್ಲಿ ಬಿಟ್ಟನು ಪಾಳೆಯವ ।
ನಿಲ್ಲದೆ ಕೋಪದಿಂ ಕಾಕತಿರುದ್ರ ಭೂವಲ್ಲಭನ ತಾಗಿದನು ॥ ೫೧

ಪಾಳೆಯವನು ಬಿಡಲೀಯದೆ ರುದ್ರಭೂಪಾಲ ಕೋಪಾಟೋಪದಿಂದ ।
ಕಾಳೆಗವನು ಮಾಡಿ ನೇಮಿಯ ಬಲವನು ಕೋಳಾಹಳವ ಮಾಡಿದನು ॥ ೫೨

ಖಾನಖಾನರ ಮೂದಲಿಸುತ ಕರೆದು ನೇಮಿಖಾನನಾ ಕಾಕತೀಶ್ವರನ ।
ಸೇನೆಯೆಲ್ಲವ ಬಱಕೆಯ್ದು ಪಿಡಿವನೆಂದಾ ನವನಾಥಚಂದ್ರನನು ॥ ೫೩

ಓರಗಲ್ಲಿಗೆ ಠಾಣಯವನಿರಿಸಿ ನೇಮಿವೀರರುದ್ರನ ಪಿಡಿಕೊಂಡು ।
ಓರಂತೆ ಬಂದು ಡಿಳ್ಳಿಯ ಪೊಕ್ಕು ಸುರತಾಳಭೂರಮಣನ ಕಂಡನಂದು ॥ ೫೪

ಕಾಕತಿರುದ್ರನು ಕಾಣಿಕೆಯಿತ್ತು ಭೂಲೋಕಪತಿಯ ಪಾದವನು ।
ಜೋಕೆದಪ್ಪದೆ ಬಂದು ಕಂಡನು ರಾಯನನೇಕ ಹರುಷವನೆಯ್ದಿದನು ॥ ೫೫

ಶರಧಿಹಿಮಾಚಲವೆರಡಱ ಮಧ್ಯದ ಧರಣಿಯ ಖೇಡವೆಸರಿನ ।
ಪುರವನಾಳುವ ತೆಱದಿಂದಾಳುತ್ತಿರಲಾ ಸುರತಾಳನಿರಲು ಮತ್ತತ್ತ ॥ ೧

ಪಾವುಡಗಳನಟ್ಟುವ ಕಾಲ ಬಂದಿತು ಭೂವರ ಸುರತಾಳನಿಗೆ ।
ಈವುದುಚಿತವೆಂದು ಸಚಿವರು ಮುಂಗುಲಿದೇವಗೆ ಬಿನ್ನೈಸಿದರು ॥ ೨

ಒಡಬಡಿಕೆಯ ಕಾಲ ಬಂದಿತು ಕಪ್ಪವ ಕೊಡಬೇಕು ಸುರತಾಳನಿಗೆ ।
ತಡೆವುದು ನೀತಿಯಲ್ಲೆಂದು ಮುಂಗುಲಿದೇಶದೊಡೆಯಗಮಾತ್ಯರೊರೆದರು ॥ ೩

ನುಡಿದುದ ಕೊಡದ ಕಾರಣ ಸುರತಾಳನು ನಡೆದು ಬಂದನು ದಂಡೆಂಬ ।
ನುಡಿ ಬೇಡ ನಮಗೆ ನುಡಿದುದನಟ್ಟಿದ ಬಳಿಕಡಿಯಿಡನೆಮ್ಮಲ್ಲಿಗಸುರ ॥ ೪

ತನಗೆ ತಕ್ಕುದ ಮಾಡದಿರನು ತಪ್ಪುವುದೀಗಳನುನಯವಲ್ಲ ಕಪ್ಪವನು ।
ಜನಪ ಕೇಳೀವುದುಚಿತವೆಂದು ನೃಪತಿಯ ಮನವನಾಪ್ತರು ತಿಳುಪಿದರು ॥ ೫

ಕೃತಿ ಮತಿಶಾಲಿ ವಂಶಾಗತಸಚಿವರ ಹಿತಮಿತೋಕ್ತಿಯನಾಲಿಸುವ ।
ಕ್ಷಿತಿಪತಿಗಳಿಗಿಂಗಡಲ ಮಗಳು ಪತಿವ್ರತೆಯಾಗವೆ ಪಾಣ್ಬೆಯುಹಳೆ ॥ ೬

ಆನೆ ಕುದುರೆ ಪೆಣ್ಮಾಣಿಕ ಮೇಲ್ಕಟ್ಟು ಚೀನವೆಸೆದ ತೆರೆ ಝಲ್ಲಿ ।
ಚೀನಾಂಬರಚಿತ್ರಾವಳಿಗಳು ಬಂದವೇನೆಂಬೆ ಕಂಪಕಸುರನ ॥ [?] ೭

ಸಿಂಗಾಡಿ ತರಕಸ ಲೋಹವಕ್ಕರೆ ದಾಬೆ ಹೊಂಗೆಲಸದ ಜೋಡು ಸವಗ ।
ಸಿಂಗರಲೆವೆ ಸೀಸಕಗಳೆಂಬಿವು ಪಾವುಡಂಗಳಿಗಿರದೆಯ್ದಿದವು ॥ ೮

ಖಾನರ ಭಂಗಿಸಲೆಂದಸುರೇಂದ್ರನ ಮಾನವ ಮುಱಿಯಲೆಂದರಸ ।
ಏನೆಂಬೆನಿಪ್ಪತ್ತು ನಾಲ್ಕು ಟಾಕಿನ ಘನಮಾನ ಶಾರ್ಙ್ಗವ ತರಿಸಿದನು ॥ ೯

ಒರೆದ ಬುದ್ಧಿಯ ರಾಯಭಾರಿಗಳಿಗೆ ರಾಯ ತೆರಳಿಸಲೆಂದು ಕಪ್ಪವನು ।
ಭರದೊಳವರು ಬಂದು ಪೊಕ್ಕರು ಡಿಳ್ಳಿಯನಿರದೆ ಪಯಣಗತಿಯಿಂದ ॥ ೧೦

ಪೋಗಿ ಕಂಡರು ರಾಯಭಾರಿಗಳ್ ಗಾಜಿನಬಾಗಿಲೊಳಿಹ ಮಲ್ಲುಕರನು ।
ಆಗಳವರು ಪಡಿಬೀಡಾರದಿಂದನುರಾಗವೆಯ್ದಿಸಿದರವರನು ॥ ೧೧

ಆ ವೇಳೆಯೊಳು ಮುಂಗಲದೇವನಟ್ಟಿದ ಪಾವುಡಗಳನು ಮಂತ್ರಿಗಳು |
ಭೂವನಿತಾಕಾಂತನ ಸುರತಾಳನ ಭಾವನಱಿದು ಕಾಣಿಸಿದರು || ೧೨

ಆವ ವಸ್ತುವಿಗಾವ ಗುಣವುಂಟದನುದ್ಭಾವಿಸಿ ರಾಯಭಾರಿಗಳು |
ಪಾವುಡಗಳನೊಪ್ಪಿಸಿದರು ರಾಯರ ದೇವಗೆ ಸುರತಾಳಂಗೆ || ೧೩

ಧನುವನಿದನು ತಲೆಗೊತ್ತಿ ತೆಗೆದು ಗುಱಿಗನುಗೆಯ್ದು ಶಿರವನಾರ್ದೆಸುವ |
ಘನಭುಜರುಂಟೇ ನಿಮ್ಮಲ್ಲಿಯೆಂದವರನಾ ದನುಜೇಶ್ವರ ಬೆಸಗೊಳಲು ೧೪

ಬಿಲ್ಲನಿದನು ತೆಗೆದೇಳು ಕೊಪ್ಪರಿಕೆಯುನಿಲ್ಲದೆ ತಟ್ಟುರ್ಚಲೆಸುವ |
ಬಲ್ಲಿದರುಂಟು ಮುಂಗುಲಿದೇವನೊಳಗೆಂದು ಸೊಲ್ಲಿದರವರಸುರನಿಗೆ || ೧೫

ಚಾಪವನೀಕ್ಷಿಸುತೆಡಬಲದುರುಶಾರ್ಙ್ಗ ಚಾಪಧರರ ಮೊಗಗಳನು |
ಕೋಪಾಟೋಪದಿಂ ನೋಡುತ ದಾನವಭೂಪನಿರಲು ದುಗುಡದಲಿ || ೧೬

ಹಿಂದಕೆ ಸಾರಿದ ಸಿಂಗಾಡಿಯ ಮಱಿಸುವ ಸಂದಣಿವೊಗುವ ಮಲ್ಲುಕರ |
ವೃಂದದಿಂ ಮೆಯಿಮೋಱಿದನು ಬಾದುರನೆಂಬಱಿಕೆವೆಸರ ಖಾನನೊರ್ವ [?] || ೧೭

ಜೀನಗೆಲಸದ ಕಪಾಯಿ ಪೈರಣೆಸುತ್ತ ತಾನೆಸೆದಿರೆ ಬಾದುರನು |
ದಾನವಪತಿಗೆ ಸಲಾಮುನೊಲಿದು ಮಾಡುತಾನದೆ ನುಡಿದನಿಂತೆಂದು || ೧೮

ತಿರುವನೇಱಿಸಿ ಮಿಡಿದಂಬುಗೊಳಿಸಿ ಕಿವಿವರೆಗಾಂ ತೆಗೆವೆನೀ ಬಿಲ್ಲ |
ಇರದೇಳು ಕೊಪ್ಪರಿಗೆಯನೊಡೆಯಿಸುವೆನು ತರಿಸು ದಾನವಚಕ್ರವರ್ತಿ || ೧೯

ಆ ನುಡಿಗೇಳುತ ದಾನವಪತಿ ನೇಮಿಖಾನಗೆ ನಿಯಮಿಸಲನನು |
ಆನದೆ ಕೊಪ್ಪರಿಗೆಗಳೇಳನೊಸೆದಾಸ್ಥಾನದೆಡೆಗೆ ತರಿಸಿದನು || ೨೦

ಸುರತಾಳನ ನಿಯಮದೊಳಾ ಬಿಲ್ಲಿಗೆ ತಿರುವನೇಱಿಸಿ ಬಾದುರನು |
ಬೆರಲಿಂದ ಜೇವಡೆದನು ಬಿಲುಗಾಱರ ನೆರವಿ ಕೈಯೆತ್ತಿ ಕೊಂಡಾಡೆ || ೨೧

ಒಲಿದೆಡಗಾಲುಂಗುಟದಿಂದವನಿಯ ಬಲಿದೊತ್ತಿ ಮೆಟ್ಟಿ ತಿರುವನು |
ತಲೆವಿಲ್ಲುಗೊಂಡು ಬೆರಲ್ಗಳಿಂ ತೆಗೆದನು ಬಿಲುಗಾಱರು ಬೆಱಗಾಗೆ || ೨೨

ಅರುಣಜಲದ ಧಾರೆ ಪೊಱಸೂಸೆ ಕೈಕಾಲ ಬೆರಳ್ಗಳಿಂ ಕೊಪ್ಪರಿಗೆಗಳ |
ಇರದಾರ್ದೆಚ್ಚನು ಹೊಗೆಯ ಹೊಂಕಿಡಿಗಳಾವರಿಸಲಾಸ್ಥಾನಮಂಟಪವ || ೨೩

ಅಚ್ಚರಿ ಪುಟ್ಟೆ ನೋಟಕರ ಮನಕೆ ಬಲುನುಚ್ಚರ ಪುಟ್ಟೆ ಖಾನರಿಗೆ ।
ಎಚ್ಚನಂದೊಲಿದು ಕೊಪ್ಪರಿಕೆಗಳೇಳನಂಬುಚ್ಚಳಿಸಲು ಬಾದುರನು ॥ ೨೪

ತಿರುಗುವ ಮೀನನಲ್ಲದೆ ಕೊಪ್ಪರಿಗೆಯನಾ ನರನೆಚ್ಚುದಿಲ್ಲ ಬಾದುರನ ।
ಪರಿ ಹೊಸತೇಳು ಕೊಪ್ಪರಿಗೆಯನೆಚ್ಚನೆಂದಿರದೆ ಭಟ್ಟರು ಪೊಗಳಿದರು ॥ ೨೫

ಬಿಟ್ಟನು ಬಹುವಾಡವನಾಸ್ಥಾನವ ಕೊಟ್ಟನಂದುಡುಗೊಱೆಗಳನು ।
ಕಟ್ಟಿದನವನಿಗೆ ಮಲ್ಲುಕಪದವಿಯ ಪಟ್ಟವನಾ ಸುರತಾಳ ॥ ೨೬

ಬೆಳ್ಳಿಯ ಬೆಟ್ಟದಂತೆಸೆವ ಕಪ್ಪದ ಪಾರುವಿಳ್ಳೆಯಗಳನು ಬಾದುರಗೆ ।
ಡಿಳ್ಳೀಶ್ವರನೀಯೆ ಮಲ್ಲುಕಖಾನರು ತಳ್ಳಂಕಗೊಂಡರೆದೆಯೊಳು ॥ ೨೭

ಹರೆದುದೋಲಗ ಖಾನಮಲ್ಲುಕರೊಯ್ಯನೆ ಸರಿದರೊಂದೆಡೆಗೆ ಸನ್ನೆಯೊಳು ।
ಭರದಿಂದ ಮಾತನಾಡಿದರು ಬಾದುರನಿರಲಿರಲಿಲ್ಲ ನಮಗಿಲ್ಲೆಂದು ॥ ೨೮

ಕಲಹವ ತೆಗೆದು ಡೊಂಬಿಯಲಿ ಬಾದುರನನು ಕೊಲ್ಲಬೇಕಲ್ಲದೊಡೆಮಗೆ ।
ಸಲಿಗೆ ಸನ್ಮಾನಗಳಿಲ್ಲ ರಾಯನೊಳೆಂದು ಜಲಹರಿಖಾನ ನುಡಿದನು ॥ ೨೯

ಅಬ್ಬರಖಾನ ಕದಿರಖಾನ ಜಂಭಾರಿ ಬಬ್ಬಾರಖಾನ ದೇವಾಂಕ ।
ಡಬ್ಬರಖಾನ ಮಾಧವಖಾನರೆಂಬಿವರುಬ್ಬಿ ನಲಿದರಾ ನುಡಿಗೆ ॥ ೩೦

ಇದು ತಂತ್ರೋಪಾಯವಹುದೆಂದು ಖಾನರು ಮುದದಿಂದವನ ಕೊಂಡಾಡಿ ।
ಚದುರನೋರ್ವನ ಕರೆದೊರೆದು ಬುದ್ಧಿಯನಾಗಳೊದವಿ ಕಳುಪಿದನವನನು ॥ ೩೧

ಸಂದಣಿಯೊಳಗವನೊಯ್ಯನಾ ಖಾನನ ಮಂದಿರವನು ಬಂದು ಪೊಕ್ಕು ।
ಅಂದೇಕಾಂತದೊಳಗೆ ಬಾದುರಗಿಂತೆಂದು ಪೇಳಿದನಾಪ್ತನಂತೆ ॥ ೩೨

ಏಳು ಕೊಪ್ಪರಿಗೆಯ ತಡಹಾಯಲೆಚ್ಚ ಕಟ್ಟಾಳು ಬಾದುರಖಾನನೆಮ್ಮ ।
ಆಳಲೀವನೆ ಡಿಳ್ಳಿಯನೆಂದು ಸುರತಾಳನಾಲೋಚಿಸಿದನಾಪ್ತರೊಳು ॥ ೩೩

ಕೊಲಿಸದಿರ್ದೊಡೆ ಬಾದುರಖಾನನೆಮ್ಮನು ಕೊಲುವನು ಬಲುಗಯ್ಯನವನ ।
ಉಳುಹಿದೊಡುಳುಹಿಲ್ಲ ನಮಗೆಂದು ಸುರತಾಳ ತಳುವದಾಡಿದನಾಪ್ತರೊಳು ॥ ೩೪

ಎಂದತಿಹಿತನಂತೆ ನುಡಿದು ದುರ್ಮಂತ್ರಗಳೊಂದಿದ ಪುಸಿನುಡಿಗಳನು ।
ಅಂದವನೆಯ್ದಿದನಿತ್ತ ಬಾದುರನೆಡೆ ಬಂದಿವಿಡಿದುದೆಣಿಕೆಯನು ॥ ೩೫

ಪುಸಿಯಾಗದೀ ನುಡಿ ಕೊಪ್ಪರಿಗೆಗಳೇಳನೆಸಲಂಜಿ ಸುರತಾಳನೆನ್ನ ।
ಅಸುವಿಗೆ ಮುನಿದನಿಂದಿರ್ದಡೆನಗೆ ಕಾರ್ಯ ಹಸನಲ್ಲವೆಂದು ಬಗೆದನು ॥ ೩೬

ಭರದೊಳೊಯ್ಯನೆ ಪೊಱಮಟ್ಟನು ಡಿಳ್ಳಿಯನರುಣೋದಯವೇಳೆಯೊಳು ।
ಒಕ್ಕಲಕೊಂಡು ಬಾದುರಖಾನ ತೆಂಕಣದಿಕ್ಕುವಿಡಿದು ದಾರಿಯನು ॥ ೩೭

ಅಱಿಯದಂತೊಕ್ಕಲ ಕೊಂಡು ಬಾದುರಖಾನ ಪೊಱಮಟ್ಟು ಪೋದಗಡೆಂದು ।
ಮಱುದಿವಸಕೆ ಸುದ್ದಿ ಪುಟ್ಟಿತು ಡಿಳ್ಳಿಯೊಳಱಿದರಲ್ಲಲ್ಲಿ ಮಲ್ಲುಕರು ॥ ೩೮

ಕೇಳಿ ಮಲ್ಲುಕ ನೇಮಿಖಾನನು ಸುದ್ದಿ ಹೇಳಲು ಸುರತಾಳನಿಗೆ ।
ತಾಳಿ ಕೋಪವ ಮನದೊಳು ನೇಮಿಯ ಕೂಡೆ ಹೇಳಿದನಸುರನಿಂತೆಂದು ॥ ೩೯

ಹೊಕ್ಕಲ್ಲಿ ಹೊಗಲಿ ಕಳಿಪು ಥಾಳಿಯನೊಂದು ಲಕ್ಕಕುದುರೆಯ ಜೆಂಬಿಡದೆ ।
ಸಿಕ್ಕದದೆಲ್ಲಿಗೆ ಪೋದಪನವನ ಹಿಂದಿಕ್ಕಿಕೊಂಬರಸುಗಳುಂಟೆ ॥ ೪೦

ಸುರತಾಳನಾಜ್ಞೆಯನಾಂತು ಶಿರದೊಳತಿಭರದಿಂದ ನೇಮಿನುಲ್ಲುಕ ।
ಬರಿಸಿ ಖಾನರನೊಂದು ಲಕ್ಕ ಕುದುರೆಯನು ಹರಿಯ ಬಿಟ್ಟನು ಥಾಳಿಯನು ॥ ೪೧

ಆದರಿಸುತ ಕುದುರೆಗಳನು ಖಾನರು ಹೋದರೇಳೆಂಟು ಗಾವುದವ ।
ಬಾದುರನನು ಕಂಡರು ದೂರದೊಳಗನುವಾದರು ತಾಗಲವನನು ॥ ೪೨

ಲಕ್ಕ ಕುದುರೆಯ ಥಾಳಿಯ ಕಂಡು ಮನದೊಳು ಹೆಕ್ಕಳಿಸಿದನೇ ಬಾದುರನು ।
ಒಕ್ಕಲ ಕೆರಳಿಸಿ ಮುಂದಕೆ ಬೇಗದೊಳಿಕ್ಕಿದ ಪೌಜನವರಿಗೆ ॥ ೪೩

ಹೊಕ್ಕೆಸುವಹಿತವೋಹರವನೆಲ್ಲವ ಬಿಡದೊಕ್ಕಲಿಕ್ಕಿದವು ಹಯಗಳ ।
ಹಕ್ಕರಿಕೆಯ ಹಱಗಡಿದವು ಬಾದುರನುಕ್ಕಿದ ಬೋಳೆಯಂಬುಗಳು ॥ ೪೪

ಮೊಗ್ಗೊಡೆದೋಡಿತು ಖಾನರ ವೋಹರ ಮುಗ್ಗಿತು ಮಲೆತ ರಾವುತರ ।
ನೊಗ್ಗರವೆಂದನಲಾ ಬಾದುರಖಾನನಗ್ಗಳಿಕೆಯನೇನನೆಂಬೆ ॥ ೪೫

ಅಱಕೆಯ ಖಾನರೆಲ್ಲರ ಕೊಂದು ಥಾಳಿಯ ಮುಱಿಯಲಿಱಿದು ಮುಂದುಗೆಡಿಸಿ ।
ನೆಱತಗಲಿ ಬಾದುರನೊಕ್ಕಲಕೊಂಡು ಹೆದ್ದೊಱೆಯ ದಾಂಟಿದನು ಬೇಗದೊಳು ॥ ೪೬

ಗಡಿಯ ಕಾವಲ ಮನ್ನೆಯರು ಬಾದುರನನು ತಡೆದು ನಿಲ್ಲಿಸಿ ರಾಯನೆಡೆಗೆ ।
ಒಡನೆ ಚರರನಟ್ಟಿದರು ಖಾನನೊರ್ವನ ನುಡಿಯುಬಲ್ಲನ ಕೂಡಿಕೊಟ್ಟು ॥ ೪೭

ತಳುವದವರು ಬಂದು ಕಂಡು ರಾಯನ ಪದನಳಿನವನಾ ಬಾದುರನ ।
ಒಳನುಡಿಗಾಜಿನ ಕಾಣಿಸಲವನಂದು ಇಳೆಗೆ ವ್ಯೈಯ್ಯಿಕ್ಕಿ ಬಿದ್ದೆದ್ದು ॥ ೪೮

ಬಿಲ್ಲು ಬಂದುದನದಱಿಂದ ಕೊಪ್ಪರಿಗೆಯ ನಿಲ್ಲದೆಚ್ಚುದನು ಬಾದುರಗೆ ।
ಬಲ್ಲಿದ ಸುರತಾಳನೆಣಿಸಿದ ಕಾರ್ಯವದೆಲ್ಲವ ಬಿನ್ನವಿಸಿದನು ॥ ೪೯

ಕೇಳಿ ನೃಪತಿ ಮಂತ್ರಿಯೊಡನೆ ರಾಮನ ಮುಂದಾಳೋಚಿಸಲು ಕಾರ್ಯವನು ।
ಹೇಳಿದನಾ ಮಂತ್ರಿಚೂಡಾಮಣಿ ಸರಸಾಳಾಪದಿಂದ ರಾಯನಿಗೆ ॥ ೫೦

ಬಲಯುತರೊಡನೆ ಬನರವ ಬಯಸುವ ಗಾವಿಲ ಮಲಗಿರ್ದ ಪುಲಿಯನು ।
ಸಲೆ ತಿವಿದೆಬ್ಬಿಸಿ ಸಮರಕೆಳಸುವನ ಕುಲಗುರುವಾಗದೇನಿಹನೆ ॥ ೫೧

ಎಂದು ನುಡಿಯೆ ಮಂತ್ರಿ ನೃಪತಿ ರಾಮನ ವದನೇಂದುವ ನೋಡಲಂದವನು ।
ಮಂದಹಾಸನದಿಂದ ಮಂತ್ರೀಶ್ವರಗಿಂತೆಂದು ನುಡಿದನು ಕಾರ್ಯವನು ॥ ೫೨

ಅಹುದು ನೀನಾಡಿದ ನುಡಿ ಕಾರ್ಯದ ಗಹನಗಂಭಿರೋಕ್ತಿ ನಮ್ಮ ।
ಮಹಿಮೆಯ ಕೆಡಿಸಬೇಕೆಂಬುದಲ್ಲದೆ ಮತ್ತೆ ವಹಣಿಯುಂಟೇ ದಾನವಗೆ ॥ ೫೩

ಆರ ಕರೆದುಕೊಂಡನೆಂದು ಕೆಡಿಸಿದನು ವೀರರುದ್ರನ ಸುರತಾಳ ।
ಆರ ಹಿಂದಕ್ಕಿದನೆಂದು ಏಡಿಸಿದನಂದಾರಾಮು ದೇವರಾಯನನು ॥ ೫೪

ಏನು ಮಾಡಿದನೆಂದು ರಣಹಮ್ಮೀರನ ದಾನವಪತಿಗೆಡಿಸಿದನು ।
ಏನ ಮಾಡಿದನೆಂದು ದೋರಸಮುದ್ರದ ಮಾನವಪತಿಯ ಹಿಡಿದನು ॥ ೫೫

ಹುಲಿಗೆ ಹರಿಗೆ ಬೆಕ್ಕಿಗುರಗಗೆ ಪಶು ಕರಿಯಿಲಿ ಕಪ್ಪೆಯೆಂಬಿವೆಸಗಿದ ।
ಬಲು ವೈರವಾವುದು ಬಡವನ ಬಲ್ಲಿದ ಕೊಲುತಿಹನೀ ಯುಗದೊಳಗೆ ॥ ೫೬

ತರಳಾಕ್ಷಿಯರನುಳ್ಳ ಭೂಮಿಯನೆಲ್ಲವ ವರವಸ್ತುವಾಹನಾದಿಗಳ ।
ಪಿರಿದನುಳ್ಳವನೇ ನೃಪಾಭಾಸರಿಗೆ ವೈರಿ ವರಮಂತ್ರಿ ನೀನಱಿಯದುದೆ ॥ ೫೭

ಬಾದುರಖಾನನ ಕರೆದುಕೊಳ್ಳದೊಡೆನ್ನನಾ ದನುಜೇಂದ್ರ ಬಿಟ್ಟಪನೆ ।
ಆದುದಾಗಲಿ ಮಱೆವೊಗಬಂದ ಖಾನನನಾದರದಿಂ ಬರಿಸಾರ್ಯ ॥ ೫೮

ಮಱೆಗೆ ಬಂದವ ಮಡದಿಯುರಂತಲ್ಲದೆ ಮಱೆಯೇನು ಬೇಱೆಯೊಂದಲ್ಲ ।
ಮಱೆವೊಕ್ಕವರ ಕಾವರೆಂದೆಂಬ ಬಿರುದಿನ ಹೊಱೆಗೆಯ್ದ್ಗ ಕಾರಯಿಸು ॥ ೫೯

ಭೀತಗಭಯವ ಕೈಯಾತು ಬೇಡಿದ ವಂದಿವ್ರಾತಕೆ ಕೊಡದೆ ಧನವನು ।
ಭೂತಳಾಧಿಪನೆಂದೆನಿಸಿಕೊಂಬುದಿದು ಬಲುಬೂತಾಟವೆನೆ ರಾಮನಾಥ ॥ ೬೦

ತಪ್ಪದು ರಾಮನಾಡಿದ ಮಾತಿದು ಬೈಚಪ್ಪ ಬಾದುರಖಾನನನು ।
ಬಪ್ಪಂತೆ ಮಾಡು ನೀನೇಳೆಂದು ರಾಯನಂದೊಪ್ಪಿ ಕರೆಯ ಕಳಿಸಿದನು ॥ ೬೧

ಬಲುಮನ್ನೆಯರನಟ್ಟಿ ಬೈಚಪ್ಪ ಖಾನನ ಬಲವೆರಸಂದು ಕರೆಯಿಸಿ ।
ಒಲಿದು ರಾಯನ ಕಾಣಿಸಿ ರಾಮನಾಡಿದ ಬಲುಮಾತುಗಳನು ಪೇಳಿದನು ॥ ೬೨

ಸಾವಿರ ಕುದುರೆಯ ವಳಿತವನಾ ಖಾನಗಾ ವೇಳೆಯೊಳೊಸೆದಿತ್ತು ।
ಆವುದಕೆಣಕೆ ಬೇಡೆಂದಭಯವನಿತ್ತು ಭೂವರ ಕಳುಪಿದನವನ ॥ ೬೩

ಅತ್ತ ಖಾನರು ಬಾದುರಗೆ ತಾವೆಲ್ಲ ಬೆನ್ನಿತ್ತೋಡಿಬಂದ ಸುದ್ದಿಯನು ।
ಒತ್ತರಿಸಿಂತು ನುಡಿದರು ನೇಮಿಯು ಕೂಡೆ ಹೊತ್ತ ಹೊಱೆಗೆಯಿದೆಂಬಂತೆ ॥ ೬೪

ಮುಂದಣ ಚೂಣಿಯ ಮುಱಿಯಲಿಱಿದು ಬೇಗದಿಂದ ಬಾದುರ ಬಲವೆರಸು ।
ನಿಂದಲ್ಲಿ ನಿಲ್ಲದೆ ಕಾಣಿಸಿಕೊಳ್ಳದೆ ಬಂದು ಹೊಕ್ಕನು ಕುಮ್ಮಟವನು ॥ ೬೫

ಹಿಂದಿಕ್ಕಿಕೊಂಡನು ಬಾದುರಖಾನನನೆಂದು ನುಡಿಯೆ ಕಂಪಿಲನು ।
ಬಂದೆವು ನಾವದಱಿಂದೆಂದು ಮಲ್ಲುಕರಂದು ನೇಮಿಗೆ ಬಿನ್ನವಿಸಲು ॥ ೬೬

ಸುರತಾಳಗಾ ಸುದ್ದಿಯನು ನೇಮಿಖಾನನು ಭರದಿಂದ ಹೋಗಿ ಬಿನ್ನವಿಸೆ ।
ತೆರಳಿನ್ನೇಕೆ ಸಂದೇಹ ಕುಮ್ಮಟಕೆಂದುವೊರೆದನವನಿಗಸುರೇಂದ್ರ ॥ ೬೭

ಕುಮ್ಮಟವನು ಮುತ್ತಿ ಕಂಪಿಲದೇವನ ಹಮ್ಮು ಮುಱಿದು ರಾಮನನು ।
ಘಮ್ಮನೆ ಹಿಡಿದು ತಂದೆಮಗೊಪ್ಪಿಸೆಂದವನುಮ್ಮಹದಿಂದ ನುಡಿದನು ॥ ೬೮

ಕೊಲುವ ಹುಲಿಗೆ ಕೋಳುಗೊಂಡವನಂತೆ ಕಂಪಿಲನೆನ್ನ ಬಂಟ ಬಾದುರನ ।
ನೆಲದ ಗರ್ವದೊಳು ಹಿಂದಿಕ್ಕಿಕೊಂಡನೆ ಪೋಗಿ ನೆಲಗೆಡಿಪೆಂದು ಪೇಳಿದನು ॥ ೬೯

ತುರಗ ಚಾತುರ್ಲಕ್ಷ ಕರಿ ಆಱುಸಾವಿರ ಕರಭವಿಚ್ಛಾಸಿರವೆಸೆಯೆ ।
ತೆರಳಿದನಂದತಿವಿಭವದಿಂ ಕರ್ಣಾಟಧರಣಿಗೆ ನೇಮಿಮಲ್ಲುಕನು ॥ ೭೦

ಬಂದು ಬಿದಿರೆಯೊಳು ಬಿಟ್ಟನವನು ಬೇಗದಿಂದ ಬೇಹಿನವರೆಯ್ತಂದು ।
ಅಂದು ಬಿನ್ನವಿಸೆ ಕಂಪಿಲನದನನ ತನ್ನ ನಂದನನೊಡನೆ ಪೇಳಿದನು ॥ ೭೧

ಬಳಿಕ ನುಡಿದನು ಕುಮಾರ ತಂದೆಗೆ ತನ್ನ ಬಲವನೆಲ್ಲವ ಕೂಡಿಕೊಂಡು |
ತಳುವದೆ ಕುಮ್ಮಟಕೆಯ್ದಿ ನೇಮಿಯು ಕೂಡೆ ಕಲಹವ ಮಾಡಬೇಕೆಂದು || ೭೨

ಒಡಬಟ್ಟನರಸನೊಪ್ಪಿದ ಮಂತ್ರಿ ಬಾದುರನೊಡನಹುದೆಂದು ಮೆಚ್ಚಿದನು |
ಸಡಗರಿಸಿದನು ಸಂಗಮದೇವ ರಾಮನ ನುಡಿಗೆ ಕಾಟಣ್ಣ ನಲಿದನು || ೭೩

ತಲೆಯ ರವುಳಿ ಮೆಯಿ ಜೋಡು ಬೂಡಾಯಿತ ತಳಪದ ಕತ್ತಿ ಹರಿಗೆಯು |
ಬಲುಮಂದಿ ಪೊಱಮಟ್ಟು ದಂಡನಾಥನ ಕೆಲಬಲದೊಳಗೆಯ್ದೆ ಭೋಯೆನುತ || ೭೪

ಒಕ್ಕಲಿಗರ ಪಡೆ ಕೂಡಿತು ಬೇಡರ ಜೋಕೆಯ ಮಂದಿ ನೆರೆದುದು |
ನೂಕಿ ನಡೆದದು ಬಿಡದೆ ದಂಡನಾಥನನೇಕ ಬಲವ ಕೂಡಿಕೊಂಡು || ೭೫

ದಂಡು ಬಿಟ್ಟಿತು ಹೆದ್ದೊಱೆಯೊತ್ತಿನೊಳುದ್ದಂಡಮಂಡಳಿಕ ಮನ್ನೆಯರ [?] |
ಗಂಡ ಕಂಪಿಲ ಎಂದು ಬಿನ್ನವತ್ತಳೆಯನಾ ದಂಡಾಧೀಶನಟ್ಟಿದನು || ೭೬

ತೊಱೆಗಲ್ಲು ಬಾದಾವಿ ಮುದುಗಲ್ಲು ಕೊಪಣದ ತೆಱಗೆಯ ರಾಜ್ಯವೆಲ್ಲವನು |
ಇಱಿದು ಕೆಡಿಸುತ ಕುಮ್ಮಟದುರ್ಗದೊತ್ತಿನ ತೆಱಪಿನೊಳಗೆ ಬಿಟ್ಟನೊಲಿದು || ೭೭

ಮುತ್ತಿನ ಬೀದಿಯ ಗುಡಿಯ ಬಳಸಿ ಸುತ್ತಲೆತ್ತಿದವಿಂದ್ರಗೋಪಗಳ |
ಮೊತ್ತದ ಗುಡಿಗಳು ನೇಮಿಖಾನನ ಸಂಪತ್ತನದೇನ ಬಣ್ಣಿಪೆನು || ೭೮

ಅತ್ತ ಕುಮ್ಮಟದೊಳು ಕಂಪಿಲನೋಲಗವಿತ್ತು ಕರೆಯಿಸಿ ಮನ್ನೆಯರ |
ಉತ್ತಮತುರಗಾಭರಣಗಳನು ಕೊಟ್ಟು ಮತ್ತೆ ಕೇಳಿದನು ಪಂಥವನು || ೭೯

ಉಡುಗೊಱೆಗಳನಿತ್ತುಚಿತಾಲಾಪಂಗಳಿಂದೊಡನೆ ಕಳುಪಿ ಸುಭಟರನು |
ನುಡಿದನು ನೃಪತಿ ಮಂತ್ರಿಯ ಮುಂದೆ ಮಗರಾಮನೊಡನಿಂತೆಂದು ಮಾತುಗಳ || ೮೦

ನೆಲನೀದಂತೆ ನೇಮಿಯು ದಂಡು ಬಂದಿದೆ ಕಲಹಕಿದಿರುಗೊಂಬರೆಮಗೆ |
ಬಲವಿಲ್ಲ ದುರ್ಗವ ಬಿಟ್ಟು ಪೋಪುದು ಕಾರ್ಯದೊಳಗಲ್ಲವೆಂದು ಪೇಳಿದನು || ೮೧

ಕನ್ನಕಂಡಿಯು ಕಟ್ಟಿಕೊಂಡು ನೇಮಿಯ ದಂಡ ಬನ್ನಬಡಿಸಬೇಕಲ್ಲದೊಡೆ ||
ಚೆನ್ನಾಗದು ರಾಜಕಾರ್ಯವೆಂದಾ ರಾಯ ತನ್ನ ಕುವರಗೆ ಪೇಳಿದನು || ೮೨

ಎನೆ ರಾಜಕಾರ್ಯಕೋವಿದ ಕೆಂಪಭೂಮಿಪನನುನಯದಿಂ ಕೇಳಿ ರಾಮ |
ಮನವೊಲಿದಿಂತೆಂದು ನುಡಿದನು ಕಾರ್ಯದ ಮೊನೆ ಮುಱಿಯದ ಪಂಥವಾತ || ೮೩

ಗಣನಾತೀತ ಬಲವಿದೆಂದು ಮನದೊಳಗೆಣಿಕೆ ಬೇಡವವನೀಶ ನಿನಗೆ ।
ರಣದೊಳು ನೇಮಿಯ ದಂಡ ಭೂತಂಗಳಿಗುಣಬಡಿಸುವೆನು ಚಿತ್ತೈಸು ॥ ೮೪

ಎಂದೆನೆ ಬಲ್ಲಾಳಕಾಕತಿರುದ್ರರ ಕೊಂಪೋಡಿಸಿದ ಸುಭಟನ ।
ಸಂದ ವಚನ ರಾಯನ ಮನದೊಳಗಣ ಸಂದೇಹವ ಬಿಡಿಸಿದುದು ॥ ೮೫

ಕೊಟ್ಟನು ರನ್ನದೊಡಿಗೆಯ ವಾರುವಗಳ ಕೊಟ್ಟನು ದಿವ್ಯಾಂಬರವ ।
ಕೊಟ್ಟನು ಬಲುಮಂದಿಕುದುರೆಯೆಲ್ಲವ ರಾಯ ದಿಟ್ಟಕಾಟಣ್ಣನಿಗೆಂದು ॥ ೮೬

ನಾಕು ಸಾವಿರ ತೇಜಿ ನಾಲ್ವತ್ತು ಸಾವಿರ ಜೋಕೆಯ ಮಂದಿ ನೂಱಾನೆ ।
ನೂಕಿ ನಡೆದುದು ಕಾಟಣ್ಣನೊಡನೆ ರವಿ ನೂಕಿದ ರಥವನಾಗಸಕೆ ॥ ೮೭

ಬಿಡದೆ ಹರಿಯ ಬಿಟ್ಟನು ನೇಮಿಯ ಮೇಲೆ ಗುಡಿಯ ಮುಂದಾನೆ ಕುದುರೆಯ ।
ಪಿಡಿದನು ಭೋಯೆಂದು ಹುಯ್ಯಲಾದುದು ಬಂದು ಪಡಕಣದವರು ತಾಗಿದರು ॥ ೮೮

ಭೀಮಸೇಕಾಂಗದೊಳಗೆ ಬಂದು ಕೌರವನಾ ಮೋಹರಕೆ ನಿಂದಂತೆ ।
ನೇಮಿಖಾನನ ಬಲಕಿದಿರಾಗಿ ನಲಿತನಾ ಸಂಗ್ರಾಮ ಭೂಮಿಯೊಳು ॥ ೮೯

ಕಾಂತಾರದಂತಿಸಂತತಿಗೆ ಗಜಾಂತಕನಾಂತು ಮಸಗಿ ನಿಂತಂತೆ ।
ಅಂತಿಂತಾಗದೆ ನಿಂದನು ನೇಮಿಯನಂತ ಬಲಕೆ ರಾಮನೋರ್ವ ॥ ೯೦

ಆಗಳಾ ನೇಮಿಮಲ್ಲುಕನ ಬಹಳ ಬಲಸಾಗರವನು ನಡೆನೋಡಿ ।
ಮೂಗಿನಮೇಲೆ ಬೆರಲನಿಟ್ಟು ಶಿರವನು ತೂಗಿದನಾ ಕಂಪನೃಪತಿ ॥ ೯೧

ಈ ಶಿರದೊಲಹವೇತಕೆ ರಾಯ ಬೆರಲಿನ ನಾಸಿಕದಿರವೇಕೆ ನಿನಗೆ ॥
ಈ ಸುರತಾಳಬಲಾಂಬುನಿಧಿಯ ತುಳ್ಕಿ ಸೂಸುವೆನರೆಘಳಿಗೆಯೊಳು ॥ ೯೨

ಕೊಡೆವೇಳೆಯನು ಕಟ್ಟಬಲ್ಲನ ಮಳೆಯುವಗಡಿಸಬಲ್ಲುದೇ ಕೇಳೆನ್ನ ।
ತುಡುಕಬಲ್ಲುದೇ ಬಲವಿದು ರಾಯ ಚಿಂತೆಯ ಬಿಡು ನಡೆ ಪೌಜುಗಳೆಡೆಗೆ ॥ ೯೩

ಶರಧಿಯ ತೆರೆಮಾಲೆಗಳಂತೆ ಖಾನರ ತುರುಗದ ಪೌಜೇಱುದುದು ।
ತೆರಳದೆ ತೆಕ್ಕದೆ ತೆರಹುಗೊಡದೆ ರಾಮನಿರೆ ಮೆಚ್ಚಿದರು ದೇವತೆಗಳು ॥ ೯೪

ಎಲ್ಲಿ ನೋಡಿದರೆ ರಾಮನ ಬೊಬ್ಬೆಯಬ್ಬರವೆಲ್ಲಿ ನೋಡಿದರೆ ರಾಮುಗನ ।
ಭಲ್ಲೆಯ ಲೌಡಿಯಿಂದಳಿದ ಸುಭಟರಲ್ಲದಿಲ್ಲವಾ ರಣಭೂಮಿಯೊಳು ॥ ೯೫

ಏನ ಹೇಳುವೆ ಸುರತಾಳನ ಬಲದಭಿಮಾನದ ಹಾನಿಯಿರವನು ।
ಖಾನಖಾನರು ಬೆನ್ನ ಕೊಟ್ಟೆರ್ದರು ನೇಮಿಖಾನನ ಬಿಟ್ಟು ರಣದೊಳಗೆ ॥ ೯೬

ಬಿಟ್ಟ ಸೂಳಿಯೊಳಾ ನೇಮಿಯ ಬಲ ಬೆಂಗೊಟ್ಟೋಡಿ ರಾಮನ ಭಟರು ।
ಥಟ್ಟುಗೆಡಹಿ ರಾವುತರು ಹಿಡಿದರು ಸಾಲಿಟ್ಟೋಡುವ ಕುದುರೆಗಳ ॥ ೯೭

ಚೆಲ್ಲಿತು ಕಂಡಕಡೆಗೆ ನೇಮಿಯ ಬಲವೆಲ್ಲ ರಾಮನ ರಾವುತರು ।
ಅಲ್ಲಿ ಹಿಡಿದ ಕುದುರೆಯು ಲೆಕ್ಕಿಸಲಳವಲ್ಲ ಪೌಜಿನ್ಮಡಿಸಿತ್ತು ॥ ೯೮

ಕೊಲ್ಲದ ಕೊಲೆಯ ಕೊಂದಾ ನೇಮಿಯ ದಂಡನೆಲ್ಲವನಾ ವೀರರಾಮ ।
ಮೆಲ್ಲನೆ ತಿರುಗಿದ ಮುಗಿಲ ಮೋಹರಗಳ ಘಲ್ಲಿಸೆ ವಾದ್ಯನಿನದ ॥ ೯೯

ಅಡಿಗಳಿಗೆಱಗಿದ ತನುಜನ ತೆಗೆದಪ್ಪಲೊಡನೆ ಕಂಪಿಲಗೆ ಕಣ್ಗಳೊಳು ।
ಕಡೆಗೋಡಿವರಿದುದಾನಂದಾಶ್ರು ಮೆಯ್ಯೊಳು ಗುಡಿಗಟ್ಟಿದವು ಪುಳಕಗಳು ॥ ೧೦೦

ಬಾದುರಖಾನನಾಶ್ಚರ್ಯಾಂಬುನಿಧಿಯೊಳಗಾಳ್ದನು ರಾಮ ರಣದೊಳು ।
ಕಾದಿ ನೇಮಿಯ ದಂಡ ಮುಱಿಯಲಱಿದ ವಿಕ್ರಮೋದಯದುರುವೈಭವಕೆ ॥ ೧೦೧

ಅರಸು ಮೋಹರದೊಳು ರಾಮ ಸಹಿತ ಕಂಪಧರಣೀಶ್ವರ ಗಿರಿಪುರವ ।
ಸುರರೊಡನಿಂದ್ರಜಯಂತವೆರಸು ನಿಜಪುರವನೆಯ್ದುವವೊಲೆಯ್ದಿದನು ॥ ೧೦೨

ಕುಸುಮೋಪಹಾರ ಕುಸುಮಗುಡಿತೋರಣ ಮಿಸುಪ ಕನ್ನಡಿ ಕಳಶಗಳ ।
ಎಸಕದಿಂದಮರಾವತಿಯನಲ್ಲೆನಿಸುವ ಹೊಸದುರ್ಗವ ಪೊಕ್ಕನರಸ ॥ ೧೦೩

ಬಂದು ಚೆನ್ನಿಗರಾಮ ಜನನಿಯ ಚರಣಾರವಿಂದಕೆಱಗಲಂದವಳು
ಮಿಂದಾನಂದಾಶ್ರುಜಲದೊಳು ಪುಳಕದ ಸಂದ ವಸನವ ಪೊದೆದಳು ॥ ೧೦೪

ಜನನಿಯ ಕೈಯಿಂದ ಕಳುಹಿಸಿಕೊಂಡಾ ಮನುಜೇಶ್ವರನಂದನನು ।
ಅನುನಯದಿಂ ಬಂದು ಪೊಕ್ಕನು ತನ್ನರಮನೆಯನಿಂದ್ರೈಶ್ವರ್ಯದೊಳು ॥ ೧೦೫

ಇರಲಿತ್ತಲಂತತ್ತ ನೇಮಿ ಮುಱಿದು ಪೋಗಿ ಸುರತಾಳಭೂಮೀಶ್ವರನ ।
ಹೊರಗೆ ಮೆಲ್ಲಗೆ ಪೋಗಿ ದೂರದೊಳಗೆ ನಿಂದು ಶಿರವ ಬಾಗಿದನು ಭೀತಿಯೊಳು ॥ ೧೦೬

ಹಿಂದುವ ರಾಮನೊಬ್ಬನ ಕೈಯಿಂದೆಮ್ಮ ಮಂದಿ ಕುದುರೆಯ ಕೊಲಿಸಿ ।
ಬಂದೆಮ್ಮ ಕಾಣ್ಬುದು ಹಸನಾಯ್ತೆಂದವನಂದು ನುಡಿದನು ನೇಮಿಯನು ॥ ೧೦೭

ನುಡಿಯಲಿಂತೆಂದು ಬಿನ್ನವಿಸಿದನಾ ನೇಮಿ ಪೊಡವಿಪತಿಗೆ ದಾನವಗೆ ।
ಬಿಡಬಾರದು ಪೌಜುಮಾಡಬಾರದು ಬಲಗೂಡಿ ಕುಮ್ಮಟದುರ್ಗವಿಳಿಗೆ ॥ ೧೦೮

ಗುಗ್ಗುರಿಗಲ್ಲುಂಡೆಗಲ್ಲು ಮೊರಡಿಬೆಟ್ಟು ನುಗ್ಗುಗಲ್ಲುದುರೆಗಲ್ಲುಗಳು ।
ಮೊಗ್ಗರದೊಳಕ್ಕಬಾರದು ಬಲುದುರ್ಗವಿಳಿಗೆನಲಸುರೇಂದ್ರ[?] ॥ ೧೦೯

ಸುರತಾಳ ಕೋಪದಿಂದರಮನೆಗೆಯ್ದೆ ಕಾತರತೆ ಕೈಮಿಗೆ ನೇಮಿಖಾನ ।
ಭರದಿಂದ ನಿಜನಿಳಯವನೆಯ್ದಿದನು ಕಯ್ಯಹರಣದಿಂ ಬೆದಱುತೆದೆಯೊಳು ॥ ೧೧೦

೯

ನೊಸಲ ಕಣ್ಣಿಂದೀಶ್ವರ ಕೌಸ್ತುಭದಿಂದಸುರಾರಾತಿಯೆಂಬಂತೆ ।
ಅಸಹಾಯಶೂರ ಕುಮಾರರಾಮುಗನಿಂದ ಜಸವಡೆದನು ಕಂಪನೃಪತಿ ॥ ೧

ಇಂತಾತ್ಮಜನೆರಸಾ ಕಂಪಿಲಭೂಕಾಂತನರಸುಗೆಯ್ಯುತಿರಲು ।
ಸಂತಸವನು ಸರ್ವಜನಕೆ ಮಾಡುತ್ತ ವಸಂತಸಮಯವೆಯ್ದಿದುದು ॥ ೨

ಆ ಕಾಲದೊಳು ಬಂದುದು ಶೂಲದ ಹಬ್ಬ ಲೋಕಕದನು ಕಂಪನೃಪತಿ ।
ಜೋಕೆದಪ್ಪದೆ ಮಾಡಿಸಿದನು ನಲವಿಂದನೇಕವಿಭವ ಕೈಮಿಗಿಲು ॥ ೩

ಸುರಲೋಕಕೆ ಪೋಪರಿಟ್ಟ ನಿಚ್ಚಣಿಗೆಯಂತಿರಲುನ್ನತಿವೆತ್ತು ಕಣ್ಗೆ ।
ಕರಮೆಸೆದವು ದೊರೆ ದೊರೆಗಳ ಸೂಲವು ಗಿರಿದುರ್ಗದೊಳಗೆಡವಿಡದೆ ॥ ೪

ತಾರೆಗಳಾ ಸುತ್ತುಕಟ್ಟಿದ ಮುಕ್ತಾಹಾರದಂತಿರೆ ಕಣ್ಗಳಿಗೆ ।
ಕೇರಿ ಕೇರಿಯೊಳಾಕಾಶವನಲೆವುತ ಭೂರಿಶೂಲಗಳು ಮೆಱೆದವು ॥ ೫

ಮುತ್ತಿನ ಹವಳದ ನೀಲದ ರನ್ನದ ಸುತ್ತ ಮೆರೆವ ಲಂಬಣದ ।
ಮೊತ್ತ ಕಟ್ಟಿದ ಝಲ್ಲಿಪಟ್ಟ ರಾಜಿಸಲೆಸೆದತ್ತು ರಾಮನ ವೈಜಯಂತಿ ॥ ೬

ಸುರನಾಗದಂತೆ ಮಂದರದಂತೆ ರೋಹಣಗಿರಿಯಂತೆ ನವರತ್ನಗಳ ।
ಸರಗಳಿಂ ಕನಕ ಕಲಶಗಳಿಂ ರಾಮನ ವರ ವೈಜಯಂತಿ ಮೆಱೆದುದು ॥ ೭

ನಡೆಮುಡಿಯಾರತಿ ಕರಬೋನ ಕಳಶಕನ್ನಡಿ ದಿವ್ಯಧೂಪದೀಪಗಳ ।
ಗಡಣದಿಂ ಗಾಡಿವೆತ್ತೆಸೆದವಾ ನಗರದ ನಿಡುಗೇರಿಗಳೆಡೆವಿಡದೆ ॥ ೮

ಒಳರಾಣಿವೆಯ ಕಾವಲ ಸುಗ್ಗಿಯೆಂದೆಂಬ ಲಲನೆಯೊರ್ವಳು ಬಂದದನು ।
ತಳುವದೊರೆದಳು ರತ್ನಾಜಿಗೆ ಸರ್ವಾಂಗ ಪುಳಕಿಸುತಿರಲಿಂತೆಂದು ॥ ೯

ಮಾತಲ್ಲದೆ ಬೇರೆ ಮದನಾಸ್ತ್ರವುಂಟೆಂಬ ಮಾತ ನಗುತ ಸವಿನುಡಿಯ ॥
ಜಾತಿಯನೊಸೆದುಸುರಿದಳು ಸತ್ಕವಿಕುಲ ಜಾತಿಯನುಸರುವಂದದಲಿ ॥ ೧೦

ಶೂಲಗಳತಿ ಸಿಂಗರವಡೆದವು ನೃಪಜಾಲವೆಯ್ತಂದುದಾಯೆಡೆಗೆ ।
ಏಳು ನೋಡುವರೇಳು ನೆಲೆಯುಪ್ಪರಿಗೆಗೆ ಮರಾಳಮದಾಲಸಯಾನೆ ॥ ೧೧

ಪೂಸಿದ ಗಂಧ ಪೂವಿನಸರ ಬಿಗಿದುಟ್ಟ ಕಾಸೆ ಕಿತ್ತಲಗು ಕೈಯೊಳಗೆ ।
ದೇಸಿವಡೆದು ಬಂದು ನಿಂದಿಡೆ ಶೂಲದ ಮಾಸಾಳು ನಡೆ ನೋಡುವರೆ ॥ ೧೨

ಹತ್ತ್ರಕಟ್ಟೆಕ್ಕಿದ ಪದಕ ಖಡೆಯು ಕಾಲ ಮುತ್ತಿನ ಪೆಂಡಯ ಕಯ್ಯ ।
ಕಿತ್ತ್ರಕದಾರವೆಸೆಯೆ ವೀರಮಕ್ಕಳ ನೊತ್ತ್ರ ಬಂದಡೆ ನೋಡೇಳು ॥ ೧೩

ಎನಲಾ ಮಾತಿಗೆ ಮನದೊಳು ನಲಿಯುತ ಮಿನುಗುವ ರನ್ನದೊಡಿಗೆಯ ।
ಅನುಗೊಳಿಸಿದಳಂಗಜನ ಕಯ್ಯ ನನೆಗಣೆಯಂತೆ ಮೆಱೆದಳು ॥[?] ೧೪

ಅಂಬರಚರಿಯವನಿಯು ನೋಡಲೆಂದು ತನ್ನಂಬರಕೆಯ್ದುವಂದದೊಳು ।
ಅಂಬುಜವದನೆಯೇಱಿದಳು ಕಾದಂಬಿನಿಚುಂಬಿತ ಸೌಧಾಗ್ರವನು ॥ ೧೫

ಅರಿವಳಿಂದ್ರನ ರಾಣಿಯೋ ರಂಭೆಯೋ ಮಾರನರಸಿಯೋ ಗಂಧರ್ವ ।
ನಾರಿಯೋ ನಾಗಾಂಗನೆಯೊ ಎಂದವಳ ಕಣ್ಣಾರೆ ನೋಡಿದರು ಕಾಮುಕರು ॥ ೧೬

ಆ ಲತಾಂಗಿಯಂಗದೊಳೆಸೆದವು ಜನದಾಲಿಗಳಾಕೆಯ ಮೇಲೆ ।
ಲೀಲೆ ಕೈಮಿಗೆ ಸೂಸಿದ ಕುಸುಮಾಂಜಲಿ ಜಾಲದಂತೇನ ಬಣ್ಣಿಪೆನು ॥ ೧೭

ಶೂಲದ ಹಬ್ಬವ ನೋಡಡೆ ಜನದ ಕಣ್ಣಾಲಿಗಳ ಮಾನಿನಿಯ ।
ಮೇಲಿಕ್ಕಿ ಮದವಳ ಲಾವಣ್ಯದೊಳೋಲಾಡಿದವು ಮೆಯಿ ಮಱೆದು ॥ ೧೮

ನೆಲನೀದಂತಲ್ಲಿ ನೆರದಿರ್ದರಸುಗಳ ಕುಲಬಲವಿಕ್ರಮಗಳನು ।
ನೆಲವಾಡದ ಮೇಲುನೆಲೆಯೊಳಗಿರ್ದಾ ಲಲನೆ ಕೇಳಿದಳು ಸಂಗಿಯನು ॥ ೧೯

ಹೆಣ್ಣೆ ಪೇಳೆನಗಿವನಾರು ಹೊಳೆವ ಹೊಂಬಣ್ಣದಂತೆಸೆವ ಮೆಯ್ಯವನು ।
ಅಣ್ಣ ಭೈರವದೇವನಿವ ಬೆದಱಿದ ಹುಲ್ಲೆಗಣ್ಣ ಬೆಡಂಗಿ ನಿನ್ನಾಣೆ ॥ ೨೦

ಕೊಟದ ರಿಪುಗಳ ಗಂಡನೆಂಬೀ ಕೊಂಡಾಟದ ಭಟನಾರಿವನು ।
ಮಿಾಟನ ಪೆಣ್ಗಳ ಬೈತಲೆಯೆಳೆಮುತ್ತೀ ಕಾಟಣ್ಣನಿವ ಮಗ ನಿನಗೆ ॥ ೨೧

ಹಿರಿಯುಬ್ಬಣವ ಜಡಿವುತ ಮೇಲೆ ಹರುಷದಿಂ ಬಹನಾರಿವನು ।
ಗರುವೆ ಕೇಳಿದ ಮಾಯಿದೇವ ಕಂಪಿಲಭೂವರನ ಮೋಹದ ರಾವುತನು ॥ ೨೨

ಖಂಡೆಯವೆಸೆಯೆ ಕೈಯೊಳು ಕುದುರೆಯ ತುಂಡು ತುಂಡಾಗಿ ಮಗುಚುತ ಬರ್ಪ ।
ಚಂಡನಾರಿವನಿವ ಸೋಯಿದೇವನು ನಿನ್ನ ಗಂಡನ ಮೆಯಿಗಾವಲನು ॥ ೨೩

ಜೆಳ್ಳಿವಕ್ಕರಿಕೆಯ ತೇಜಿಯವನಾರಿವನೆಳೆವಳ್ಳಿಯಂತೆಸೆವ ಮೆಯ್ಯವಳಿ ।
ಡಿಳ್ಳಿಯ ಖಾನರ ಗಂಡನೆಂಬೀ ಬಿರುದುಳ್ಳ ಕೊಳ್ಳಿಯ ನಾಗನಿವನು ॥ ೨೪

ಪರಿಪರಿಯಾಭರಣಂಗಳ ರತ್ನ ಲಹರಿಯ ಮಧ್ಯದೊಳು ಕಣ್ಗೆಸೆವ ।
ಸಿರಿಯುಳ್ಳನಾರಿವನಿವ ಭಂಡಾರದ ಹರಿಹರ ಹರಿಣಾಯತಾಕ್ಷಿ ॥ ೨೫

ಮುಕ್ಕುಳಿಸಿದ ಕಾಂತಿಯ ರನ್ನದೊಡಿಗೆಯನಿಕ್ಕಿ ಬರುವನಿವನಾರೊ ।
ಅಕ್ಕ ಪೇಳೆನಗಿವನೀಗ ಭಂಡಾರದ ಬುಕ್ಕಣ್ಣನಂಬುಜನಯನೆ ॥ ೨೬

ಇವರಾರಿವರು ಕನ್ನೋಜಿ ರಾವುತರುಗಳಿವರಾರಿವರು ತುರುಕರು ।
ಇವರಾರಿವರೊಡ್ಡಿಯ ರಾವುತರೆಂದವರೊಳಾದುದು ಸೂಳುವಾತು ॥ ೨೭

ಇವರಾರಿವರಾರಿವರೆಂದಾ ಯುವತಿ ಕೇಳಲು ಕೆಳದಿಯನು ।
ವಿವರಿಸುತಿರಲವಳಲ್ಲಿಗಾ ಸಮಯದೊಳವನಿಪಸುತನೆಯ್ದಿದನು ॥ ೨೮

ಅಲರ್ವಿಲ್ಲಿಲ್ಲದಂಗಜನಂತೆ ಬಜ್ಜರದಲಗಿಲ್ಲದಮರೇಂದ್ರನಂತೆ ।
ಕಲೆಯಿಲ್ಲದಿಂದುವಿನಂತಲ್ಲಿಗೆಯ್ತಂದನಲಘುವಿಕ್ರಮ ರಾಮನಾಥ ॥ ೨೯

ಕಂಡಳಾ ಸಮಯದೊಳಲ್ಲಿ ಕುಸುಮಕೋದಂಡನ ಗಂಡಗಾಡಿಯನು !
ಅಂಡಲೆವಂಗದ ರಾಮನಾಥನ ಮುಖಮಂಡಲವನು ರತ್ನಾಜಿ ॥ ೩೦

ಆರಿವನಿಂದ್ರನೊ ನಳನೊ ಜಯಂತನೊ ಮಾರನೊ ನಳಕೂಬರನೊ ।
ವಾರಿಜನಾಭನೊ ರವಿಯೋ ಶಶಿಯೆಂದಾರಯ್ದು ನೋಡಿದಳವನ ॥ ೩೧

ಶಿವಶಿವ ನರಜನ್ಮದೊಳಗಿಂತಪ್ಪರುದ್ಭವಿಸಿದರುಂಟೆ ಲೋಕದೊಳು ।
ದಿವಿಜರೊಳಿವನಾವನೋ ಯೆಂದವನನು ಯುವತಿ ಕಣ್ಣಿಟ್ಟು ನೋಡಿದಳು ॥ ೩೨

ಅಱವಱತುದು ಲಜ್ಜೆ ನೆಱೆ ತಗ್ಗಿದುದು ಧೈರ್ಯ ಬಿಱುತೋಡಿತಂಗಭವಾಗ್ನಿ ।
ಗಱಗಟ್ಟಿತಂದೆರ್ದೆಯೊಳಗವಳಿಗೆ ಕಣ್ಗೆ ಗುಱಯಾಗಲಾ ರಾಯಕುವರ ॥ ೩೩

ಪಾಱತು ಪಾಳಿ ಮೆಯ್ದೋಱತು ಮದನಾಗ್ನಿ ಜಾಱತು ಜಾಣ್ಮೆ ವ್ಮೆಗುಷ್ಣ ।
ಏಱತು ಬೇಟ ಬೇರೂಱತು ಲಜ್ಜೆ ತಟ್ಟಾಱತವಳಿಗೆರ್ದೆಯೊಳಗೆ ॥ ೩೪

ಬೆಱಗುವಟ್ಟಂಗ ಬೆದಱುವೆದೆ ಬೆಮರಿಂದ ತುಱುಗಿದ ಮೊಗ ಕಣ್ಗೊಳೊಳಗೆ ।
ಒಱತವ ನೀರೆಸದಿರಲಂದಾ ಕುವರಗೆ ಸೆಱೆಯಾದಳಾ ಮೃಗನೇತ್ರೆ ॥ ೩೫

ನಡನಡ ನಡುಗೆ ಮೆಯ್ ನುಡಿ ತಡಬಡಿಸೆ ಮೆಲ್ಲಡಿ ದಡದಡಿಸೆ ಕಯ್ಯೊಳಗೆ।
ಪಿಡಿದ ಬೆಳ್ಳೆಲೆ ಬೇಯೆ ಪುಡಿಯೇಳೆ ತಂಬುಲ ಬಿಡದವಳವನ ನೋಡಿದಳು॥ ೩೬

ನುಡಿಯಱತುದು ನೋಟ ನಿಂದುದು ಮೆಯ್ಯಾಟ ತವೆದುದಾ ಚೇತನವಿರದೆ।
ನಡುನೆತ್ತಿಗೆಯ್ದಿ ತಾತನ ಗಾಡಿ ಕಣ್ಗಳೊಳ್ತೊಡರಲಾ ರಾಯನಂಗನೆಗೆ॥ ೩೭

ಬಿಟ್ಟ ಕಣ್ಬೇದಿವರಿವ ನೋಟ ಸೋಂಕಲು ಸುಟ್ಟುರಿಪುವ ಸುಯ್ಯೆಲರು।
ಮುಟ್ಟಿ ಕೈ ಬೇವ ಮೈ ಬಿಸುಪೆಸೆದಿರೆ ಮಾಱುವಟ್ಟಿರ್ದಳಾ ಮೃಗನಯನೆ॥ ೩೮

ತೆಗೆದ ಕಣ್ಗಳ ಬಾಗಿಲಿಂದವನನು ತಂದು ಪುಗಿಸಿ ಮರಳಿ ಪೋಗದಂತೆ।
ಮಿಗೆ ತುಱುಗೆವೆವಡಿಗೆತ್ತಳೆಂಬಂತಾಗ ಮುಗಿದುವು ಕಣ್ಗಳವಳಿಗೆ॥ ೩೯

ತಾನಿದಿರೆಂಬುದನಱಯದೆ ಮನದೊಳಗೇನನ್ಯವನು ಭಾವಿಸದೆ।
ಮಾನವಮದನನ ಕಡುಗಾಡಿಯನಾ ಮಾನಿನಿ ಬಯಸಿ ನೋಡಿದಳು॥ ೪೦

ಒತ್ತಿನ ಕೆಳದಿಯರಂಗ ಮೆಯ್ವೆಂಕೆಯಿಂ ಪೊತ್ತೆ ಸಿಡಿಯೆ ತೊಟ್ಟ ಮುತ್ತು।
ಕತ್ತುರಿಯಣ್ಪು ಕೆಂಪೇಳೆ ಕಾಸಿದ ಪೊನ್ನ ಪುತ್ತಳಿಯಂತಿರ್ದಳವಳು॥ ೪೧

ಏನಿದೇಗೆಯ್ವೆನಾರಿಂದಿವಳೀ ಮದನಾನಲಗಟ್ಟುಳಿಯೆನುತ।
ತಾನುರೆ ಬೆದಱುತ ಸಂಗಿ ರತ್ನಾಜಿಯನೇನಿದನೆಂದು ಕೇಳಿದಳು॥ ೪೨

ಏಕದಱಂದಾಯ್ತು ನಿನಗೀ ಮದನಾತಿರೇಕ ಮಾನಿನಿ ನನ್ನೊಡನೆ।
ಏಕಾಂತದೊಳಗೊರೆ ನಿನಗಾನಲ್ಲದೆ ಬೇಕಾದವರು ಬೇರುಂಟೇ॥ ೪೩

ಸೋಜಿಗವಲ್ಲ ಸೊಬಗನಿಗೊಲಿವುದು ಸರೋಜಾಕ್ಷಿಯರಿಗೆ ಪೆಣ್ಮಣಿಯೆ।
ಸೂಜಿಗಲ್ಲನು ಸೇರಿ ಕಂಡ ಕಬ್ಬೊನ್ನು ತನ್ನೋಜೆದಪ್ಪದೆ ಸುಮ್ಮನಿಹುದೇ॥ ೪೪

ಹೊಸಹರೆಯದ ಹೊಂತಕಾಱಯ ಕಂಡು ಮೋಹಿಸದ ಪೆಣ್ಣುಂಟೇ ಲೋಕದೊಳು।
ಎಸೆವ ಸಂಪೂರ್ಣಚಂದ್ರನ ಕಂಡೊಸರದ ಶಶಿಗಲ್ಲುಂಟೇ ಲತಾಂಗಿ॥ ೪೫

ಹೆಣ್ಣುಗಳಿರವ ನಾನಱಯದುದೇ ತಳಿರ್ವಣ್ಣದುಟಿಯ ತರಳಾಕ್ಷಿ।
ಕಣ್ಣುವಿಡಿದನ ಕಂಡಡೆ ಬೆಂಕಿಯೊತ್ತಿನ ಬೆಣ್ಣೆಯಂತವರಂತರಂಗ॥ ೪೬

ಹೇಳಲೇತಕೆ ಮಱೆ ನಿನ್ನೆರ್ದೆಗೋಟೆಯ ಕೋಳುಗೊಂಡವನೆನ್ನೊಡನೆ।
ಲೀಲಾಮಾತ್ರದಿಂ ತಂದು ನಿನ್ನಡಿಗಳ ಮೇಲೆ ಕೆಡಹುವೆ ನಾವವನ॥ ೪೭

ಎಂದವಳಾಡಿದ ಸವಿನುಡಿಗಳಿಗಾನಂದವೆಯ್ದುತ ಮನದೊಳಗೆ ।
ಎಂದಳದೇ ನಿನಗಬಲೆ ವಂಚಿಪ ಕಜ್ಜವೊಂದುಂಟೇ ಪೇಳಿವನಾರು ॥ ೪೮

ಶೂಲದ ಹಬ್ಬದೊಳೈಂದ್ರಜಾಲಿಕನಿಂದ್ರಜಾಲದೊಳಗೆ ತೋಱಿಸಿದ ।
ಮೇಲಣ ಲೋಕದ ಪುರುಷನೋ ಮರ್ತ್ಯನೋ ಪೇಳಿವನಾರು ಪೆಣ್ಮಣಿಯೆ ॥ ೪೯

ಕೇಳವನಿವನೀಗ ಕಮಲಲೋಚನ ಸುರತಾಳನ ಖಾನರೆಲ್ಲರನು ।
ಕಾಳಿಗದೊಳಗೂರ್ವರಿಲ್ಲವೆಂಬಂತೆ ಕೊಱೆದಾಳುಗಳಧಿನಾಯಕನು [?] ॥ ೫೦

ಲಕ್ಕದ ಮೇಲೆ ತೊಂಬತ್ತುಸಾವಿರಲೋಹವಕ್ಕರಿಕೆಗಳಿಂದ ಮೆಱೆವ ।
ಮಿಕ್ಕಮಾನದ ಕುದುರೆಯ ನೇಮಿಖಾನನ ಸೊಕ್ಕನುಱಿದನಿವನೀಗ ॥ ೫೧

ಸುರತಾಳ ಬಲ್ಲಾಳನವಲಕ್ಕ ತೆಲುಗರ ಧುರದೊಳೋಡಿಸಿ ತಂದೆಯನು ।
ಭರದಿಂದ ಮೆಚ್ಚಿಸಿ ಬಿರುದಿನ ಖಡೆಯವನಿರದಿಕ್ಕಿದವನಿವನೀಗ ॥ ೫೨

ಧರೆಯೊಳು ಬಿರುದುಳ್ಳ ರಾಜಕುಮಾರರ ನೆರವಿಯ ಗಂಡನೆಂದೆಂಬ ।
ಬಿರುದ ಹೊಗಳಿಸಿಕೊಂಬವನಿವನೀಗ ನೋಡರವಿಂದನೇತ್ರೆ ರತ್ನಾಜಿ ॥ ೫೩

ಚೆಲುವರ ಗಂಡ ಗಂಡರಗಂಡನೆಂದೆಂಬ ಛಲಬಿರುದನು ಹೊಗಳಿಸುವ ।
ಬಲುವೀರಭಟನಿವನೀಗ ಚೆನ್ನಿಗರಾಮನಲಘುನಿತಂಬದ ನೀಱೆ ॥ ೫೪

ಹರಿಹರದೇವಿಯ ಮೋಹದ ಕಂದನು ಧುರಧೀರನೇಕಾಂಗವೀರ ।
ಹರಿಣಾಕ್ಷಿ ನೋಡಿವನೀಗ ಚೆನ್ನಿಗರಾಮ ಪರಬಲವಿಕ್ರಮಭೀಮ ॥ ೫೫

ಅಂದಿನ ಪಾರ್ಥನಂದಿನ ದಿನನಾಯಕನಂದನಗೆಣೆಯಲ್ಲದಿವಗೆ ।
ಇಂದಿನ ವೀರರಿವನಿಗೆ ಸರಿಯೇ ಕೇಳೆಂದುವದನೆ ರತ್ನಾಜಿ ॥ ೫೬

ಸುರತಾಳನ ಮಗಳಿವನಾಗಬೇಕೆಂದು ಪುರುಷರುಗಳನೊಲ್ಲದಿಹಳೆ ।
ತರುಳಲೋಚನೆ ಕೇಳಿವನ ಲಾವಣ್ಯಕೆ ಸರಿಯೇ ಜಯಂತನೆಂಬುವನು ॥ ೫೭

ಮನಸಿಜಕಣೆಗಳೆರ್ದೆಯ ನೆಱೆ ತಟ್ಟುರ್ಚೆ ಮನವ ಕೀಲಿಸಲೆಯ್ತಂದು ।
ತನುವಱಿಯದೆ ತಳ್ಳಂಕದಿಂದವನನಾ ವನಿತೆ ಕಣ್ಣಿಟ್ಟು ನೋಡಿದಳು ॥ ೫೮

ತೇಲುವ ಕಣ್ಣು ತೆರಳುವಿಂದ್ರಿಯ ತಲೆಕಾಲಿಗೆ ಹಾಕುವ ತವಕ ।
ಸೋಲುವ ಸೊರ್ಕು ಕಾಣಿಸುತಿರಲವನನಾ ಬಾಲೆಯುರರಸಿ ನೋಡಿದಳು ॥ ೫೯

ಸುರವಧು ತಾನಿಂದ್ರಸುತನವನೆಂದೆಂಬಿರವನಱಿಯದೊಡೇನವಳು ।
ಪರಮಾತ್ಮ ಜ್ಯೇಷ್ಟೆಯಿಂ ಮೊಱಿತಿರ್ದರ್ಣವ ಬಿಸುಟೆರಲಂಬಿಗೀಡಾದಳವಳು ॥ ೬೦

ಮೆಚ್ಚಿದಳ್ಮರುಳಾದಳು ಮೆಯಿ ಮಱಿತದಳು ಬೆಚ್ಚದೆ ಸುಯ್ದ್ದಳಂಗಜನ ।
ಕಿಚ್ಚಿಗೀಡಾದಳವನ ರೂಪ ಕಣ್ಗೊಳ್ಬೆಚ್ಚಳು ಬೆಱಗಾದಳವಳು ॥ ೬೧

ಇಂತು ನೋಡುವ ಸಮಯದೊಳಾಕೆಯ ಕಾಮಸಂತಾಪದುರಿಯನಾ ತರಣಿ ।
ತಾಂ ತಾಳಲಾಱದೆ ನೀರೊಳು ಪೊಕ್ಕನೆಂಬಂತೆಯ್ದಿದನು ಪಡುಗಡಲ ॥ ೬೨

ಶೂಲಗಳಿಗೆ ಕೈಗಳನೆತ್ತಿ ಮುಗಿದು ನೃಪಾಲತನುಜರೊಡಗೂಡಿ ।
ಲೀಲೆಯಿಂದರಮನೆಗರಿರಾಯಮಸ್ತಕಶೂಲನೆಯ್ದಿದನಾ ರಾಮ ॥ ೬೩

ಹರಿದುದಲ್ಲಲ್ಲಿ ನೆರವಿ ಮೊಗಗತ್ತಲೆ ಭರದಿಂದ ದೆಸೆದೆಸೆಗಳನು ।
ಪರೆಯಿತು ಪರಕಲಿಸಿತು ರತ್ನಾಜಿಗೆ ವಿರಹವೇದನೆ ಪಿರಿದಾಯ್ತು ॥ ೬೪

ವಿರಹಾಗ್ನಿಯ ತಾಳಲಾಱದೆ ಕಾಮುಕಿ ಕರುಮಾಡದಿಂದರಮನೆಗೆ ।
ಭರದಿಂದ ಬಂದು ಸಂಗಿಯನೇಕಾಂತಕ್ಕೆ ಕರೆದುಪಚರಿಸಿ ನುಡಿದಳು ॥ ೬೫

ಮನವೆಳಸಿತು ಬುದ್ಧಿಯೊಡಬಿಟ್ಟುದಾ ಚಿತ್ತವನುರಾಗಿಸಿತಹಂಕಾರ ।
ಅನುಕೂಲವಾದುದಾತನ ನೆರೆಯದೊಡಸು ತನುವಿನೊಳಿರದು ನಿನ್ನಾಣೆ ॥ ೬೬

ತಂದಿತ್ತವನನೆನಗಕ್ಕನಾದಪೆಯೋ ಪೇಳೆಂದುವದನೆ ತರದವನ ।
ಕೊಂದೆನ್ನೆ ನಿನ್ನುದರದೊಳು ಬರಿಸಿಕೊಂಡು ಸಂದ ಜನನಿಯಾದಪೆಯೊ ॥ ೬೭

ನುಡಿದಿನ್ನು ಫಲವೇನು ರಾಮನಿರ್ದೆಡೆಗೆನ್ನ ನಡೆನಡೆಯೆಂದಿದ್ರಿಯಗಳು ।
ಪಿಡಿದೆಳೆವುತಿವೆ ಪೇಳಿದಕೆ ತಕ್ಕುದನೆಂಪೆಡಿಗೆಱಗಿದಳು ಬಂದವಳು ॥ ೬೮

ಕಾಮಾತುರವಿನಿತೇತಕೆ ಕಂಚಿಯ ಕಾಮಾಕ್ಷಿಯ ಬಲಗೊಂಡು ।
ರಾಮನ ನಿನ್ನೆಡೆಗೆಯ್ದಿಸುವೆನು ಬಿಡು ತಾಮರಸಾಕ್ಷಿ ತವಕವ ॥ ೬೯

ನಿನ್ನ ರೂಪಿನ ಚಿತ್ರವನಭಿಮಂತ್ರಿಸಿ ಚೆನ್ನೆ ತೋಱಿದೊಡವನೊಲಿದು ।
ನಿನ್ನ ಕೂಡುವ ಕಡುಕಾತರದಿಂದ ಬಂದೆನ್ನ ಕಾಲ್ಪಿಡಿಯಬೇಕಮ್ಮ ॥ ೭೦

ಒಲ್ಲದವರನೊಲಿಸುವೆನೊಲಿದಿರ್ದರ ನಿಲ್ಲದಗಲಿಸಿ ತೋಱುವೆನು ।
ಪಲ್ಲವಾಧರೆ ಕುಂಟಣಿತನಕಾನಲ್ಲದಿಲ್ಲ ನಿನ್ನಾಣೆ ಲೋಕದೊಳು ॥ ೭೧

ಇಂತೆಂದು ಪೇಳಲಗ್ನಿಯ ಮೇಲೆ ತುಪ್ಪದ ತುಂತುರು ಬಿದ್ದಂತವಳ |
ಅಂತರಂಗದೊಳಂಗಜಾಗ್ನಿ ಪೊಗೆದು ತೋರ್ಪಂತೆ ಪೆರ್ಚಿದುದೇನನೆಂಬೆ || ೭೨

ಶಿಶಿರೋಪಚಾರಗಳಿಂದಿವಳಿಗೆ ಮೆಯ್ಯಿ ಬಿಸುಪೇಱುತಿದೆಯೆಂದಳವಳನು |
ಬಿಸುಟವಳಿಂತೆಂದು ಬೇಡಿಕೊಂಡಳು ಮೇಲೊಸೆದು ಪಂಪಾದೇವಿಯನು || ೭೩

ಈಯಲಱಿಯದ ಮಾಯಾದೇವತೆಗಳ್ಗೆ ಬಾಯಬಿಟ್ಟರೆ ಫಲವುಂಟೇ |
ತಾಯೆ ನಿನ್ನಂಘ್ರಿಗೆಱಗೆ ವರಗಳು ಮೇಲ್ವಾಯದಿಹವೇ ಮೇಱಿತದಪ್ಪಿ || ೭೪

ಕಂಡರಿಸಿದ ಕಲ್ಲ ಪುತ್ಥಳಿಗಳ ಮೊಗಗಂಡು ದೇವತೆಗಳೆಂದವನು |
ಕೊಂಡಾಡಿ ಪಿಡಿದರೀವವೆ ವರವನುದ್ದಂಡದೇವತೆ ನಿನ್ನಂತೆ || ೭೫

ಕಟ್ಟುವೆ ನಿನ್ನ ನೊಸಲೊಳು ರನ್ನದ ಪೊಸಪಟ್ಟವನಿವಳೆದೆವನೆಯ
ಸುಟ್ಟುರುಹುವ ವಿರಹಾಗ್ನಿಯ ಕೆಡಿಸು ಪೊಂಬೆಟ್ಟುವಿಲ್ಲನ ಪಟ್ಟದರಸಿ || ೭೬

ದೇವಿ ನುಡಿಗೆ ಬಾಯ್ ಬೀಗದಿಂ ನಿನ್ನಡಿದಾವರೆಗಳಿಗೆಱಗುವೆನು |
ಕಾವುದಿವಳ ಹರಣವನೆಲೆ ಪಂಪಾದೇವಿ ದೇವರದೇವನರಸಿ || ೭೭

ಕುರುಳ ಕೋಯ್ದೆಱಿಸುವೆನು ದೇವಿ ಹಗ್ಗದ ಹುರಿಯ ಮೆಲಾನೆಯ್ದುವೆನು |
ಶರಣಾಗತವಜ್ರಪಂಜರೆ ಪಾಲಿಸು ತರಳಲೋಚನೆಯನಿವಳನು || ೭೮

ಎನೆ ಮಂತ್ರಾಕ್ಷರ ಮಹಿಮೆಯಿಂ ಮೆಲ್ಲಮೆಲ್ಲನೆ ವಿಷವಿಳಿವಂತವಳ |
ಮನವನಾವರಿಸಿರ್ದ ಮದನಾಗ್ನಿ ಪರೆಯಲಾ ವನಿತೆ ಕಣ್ದೆಱೆದು ನೋಡಿದಳು || ೭೯

ಅಳಲಿದಳಳವಳಿದಳು ಬಡವಾದಳು ಬಳಲಿದಳ್ಬಯಲ ನೋಡಿದಳು !
ಕಳವಳಿಸಿದಳು ಕೆಳದಿಯ ಕಾಲ್ವಿಡಿದಳು ತಳವೆಳಗಾದಳಂಗದಲಿ || ೮೦

ಏಕೆ ಕಣ್ಗೆಟ್ಟಪೆ ಕುಟಿಲದೇವತೆಗಳನೇಕವುಂಟವಿಂದವನನು |
ನೂಕಿ ತರಿಸಿಕೊಡುವೆನು ನಂಬು ವಿರಹೋದ್ರೇಕವನುಳಿ ನಳಿನಾಕ್ಷಿ || ೮೧

ಎಂದಡೆಯೊಡಬಡುವಂತೆ ನುಡಿಯಲವಳೆಂದಳಕ್ಕಾಜಿ ನಿನ್ನಾಣೆ |
ಸಂದೇಹವಿಲ್ಲೆನ್ನ ಬಯಕೆ ನೀನಿರೆ ಕೈಗೆ ವಂದುದೆಂದತಿವಿನಯದೊಳು || ೮೨

ನೀನಲ್ಲದಾತ್ಮಸಖಿಯರುಂಟೇ ಪೇಳೆನ್ನ ಮಾನಸವಿರಹವೇದನೆಯ |
ಮಾನಿನಿ ನಿನಗಲ್ಲದಾರಿಗುಸುರುವೆನೆಂದಾ ನಳಿನಾಕ್ಷಿ ನುಡಿದಳು || ೮೩

ಎನಲಿಂತೆಂದಳಾ ದೂದವಿ ಪುರುಷರ ಮನವಱಿಯದೆ ಪೋಗಿ ಕರೆಯೆ ।
ಅನುಗೆಡುವುದು ಕಜ್ಜವಬಲೆ ನಿನಱಿಯದಿಂತನುವದಿಸುವರೇ ಬಲ್ಲವರು ॥ ೮೪

ಪುರುಷನೆಡೆಗೆ ಪೋಗಿ ನೀಱಿ ನಿನ್ನನು ನಾನು ವರಿಸಿದೆನೆಂದುಸುರಿದೊಡೆ ।
ಪರಿಹಾಸ ಪುಟ್ಟುವುದಲ್ಲದವನಿಗೆ ಕಾತರ ಪುಟ್ಟುವುದೇ ತರಳಾಕ್ಷಿ ॥ ೮೫

ಜನವಱಿಕೆಯ ಜಾರತನವುಂಟೇ ಕೇಳರಮನೆಯುವರಱಿದೊಡೆ ಸುಖವೆ ।
ಇನಿತು ಕಾಮೋದ್ರೇಕವ ಕಾಣಿಪುದಿದು ನಿನಗೆ ಗುಣವೇ ರಾಯನರಸಿ ॥ ೮೬

ಆರು ಕೇಳಿದರಾರು ಕಂಡರೆಂಬಂತದಱಾರೈಕೆಯೊಳಿರಬೇಕು ।
ದೂರಿಸದಿರಬೇಕು ದೂರಿಗಳುಕಬೇಕು ಜಾರತನದ ಜಾಣ್ಮೆ ಬಲುಹು ॥ ೮೭

ಏತಕೀ ನಿನಗೀ ಚಿಂತೆ ಕುಟಿಲದೇವಜಾತಿ ನನ್ನದು ನಾನೊರೆದ ।
ಮಾತು ಮೀಱದು ರಾಮನ ತಂದು ಕೊಡುವೆನೀ ಕಾತರ ಬೇಡ ಕಂಜಾಕ್ಷಿ ॥ ೮೮

ಮನೆದೈವ ನನ್ನ ಮನದ ಮೆಚ್ಚಿನವಳಾ ವನಜವದನೆ ಹುರುಕಾರ್ತಿ ।
ನೆನೆಯೆ ಬಹಳು ನನ್ನ ಬಳಿಗೆ ಬೆಸನನೀವುದೆನ್ನುತ ನನ್ನನು ನೀನಱಿಯ ॥ ೮೯

ಹೆಸರುಳ್ಳ ಮಾಕಾಳಿಯುಂಟು ಚಾಮುಂಡಿಯುಂಟೊಸೆದೇನ ಬೇಡಿದೊಡೀವ ।
ಬಿಸಿಪುಳ್ಳ ಕುಟಿಲದೇವತೆಗಳುಂಟವಱಿಂದ ನೆಗಹಿ ತರಿಸುವೆ ನಾನವನ ॥ ೯೦

ಒಲಿದೊಡಬಡಿಸಿದೆನಾದಡೆ ಶುಕ ತನ್ನ ಒಲುಮೆಯ ಬಿಟ್ಟು ನಾನೊರೆದ ।
ಲಲನೆಯರೆಡೆಗೆ ಬಂದವರ ಕಾಲ್ವಿಡಿದೆನ್ನ ಸಲಹಿಕೊಳ್ಳೆನಬೇಕವನು ॥ ೯೧

ಬಡಲಾವಣ್ಯವೇ ಶಿವಶಿವ ನಿನ್ನನು ನೋಡಿದ ಜವ್ವನಿಗರು !
ಬಡವಾಗದೆ ಬೇಟನುರುಳಾಗದಿರ್ಪರೇ ಬಡನಡುವಿನ ಬಿಂಕಕಾರ್ತಿ ॥ ೯೨

ನಸುನಕ್ಕರಿಂಗಡಲಿದೆ ಮುಂದೆ ಬಂದು ನೀನೊಸೆದು ನಿಟ್ಟಿಸಲಂಗಜನ ।
ಹೊಸನುಸೆಯಲರಬಾಣಗಳಿವೆ ಹೊಂಚಿಕೊಂಡಸಿಯುಳೆ ನಿನಗೆಣೆಯುಂಟೇ ॥ ೯೩

ಹರಿ ಸೋಲುವನು ಹರ ಮೋಹಿಸುವನು ಬೊಮ್ಮನುರುವಿರಹವನೊಯ್ದುವನು ।
ಸುರಪತಿ ಮೇಲಿಕ್ಕುವನು ನಿನ್ನ ಕಂಡರೆ ತರಳಾಕ್ಷಿ ರಾಮನೇನಿವನ ॥ ೯೪

ಸಕ್ಕರೆಯಿಂದ ಸಾಸಿರ್ಮಡಿ ಸವಿಯುಳ್ಳ ಚಿಕ್ಕ ಹರೆಯದ ಕುವರನ ।
ತೆಕ್ಕೆಯ ಬಯಸಿದೆ ತಂದ್ಯಾನು ನಿನ್ನ ಮುಂದಿಕ್ಕುವೆನವನ ಮೃಗಾಕ್ಷಿ ॥ ೯೫

ಈಸು ಪರಿಯೊಳೆನ್ನನೊಡಬಡಿಸಿದೆ ನೀನೇಸುದಿನಕೆ ತಹೆಯುವನ ।
ಆಸೆಯುನೀಯೆನಲವಳವಳಿಗೆ ಬಲುಭಾಷೆಯ ಕೊಟ್ಟಳಿಂತೆಂದು ॥ ೯೬

ಎಂದು ರಾಮನ ನಿನ್ನ ಮುಂದೆ ನಿಲಿಸುವೆನಾನಂದು ತನಕ ರತ್ನಾಜಿ ।
ಮಿಂದೊಡೆ ಮುಡಿಯ ಕಟ್ಟಿದೊಡುಟ್ಟ ಸೀರೆಯ ಕಂದಕಳಿದೊಡೆ ನಿನ್ನಾಣೆ ॥ ೯೭

ಎಂದೊಡಬಡಿಕೆಯನಿತ್ತವಳನುಮತಿಯಿಂದ ಪೋಗಲು ಸಂಗಾಯಿ ।
ಅಂದು ರಾಮನ ರೂಪನೆದೆಗೆಯ್ದಿಸಿ ಬಂದಿಯಿಕ್ಕಿದಳಾ ಬಾಲೆ ॥ ೯೮

ಇಂತಿರೆ ಭಾವರತಿಯೊಳು ಮಾಯಾಮೂರ್ಚ್ಛೆ ತಾಂ ತಡೆಯದೆ ಬಂದವಳ ।
ಅಂತರಂಗವನಾವರಿಸಲಾ ವಿರಹಾಕ್ರಾಂತಮಾನಸೆ ಮಲಗಿದಳು ॥ ೯೯

ಮೇಲೆ ಮೆಯ್ಮಱೆದು ಕಣ್ಮುಚ್ಚಿ ಮಲಗಲಾ ಬಾಲೆಗೆ ನಿದ್ರಾದೂತಿ ।
ಲೀಲೆಯಿಂ ತಂದಿತ್ತಳಾರಾಯ ಕುವರನ ಕಾಲವಱಂದು ಕನಸಿನೊಳು ॥ ೧೦೦

ಚಿನ್ನದ ನೀರು ಪೊಱಗೆ ಪೊಱಿದಿರ್ದ ಕರ್ಬೊನ್ನ ಪುತ್ಥಳಿಯಂತವಳು ।
ಖಿನ್ನಳಲ್ಲೆ ನಿಸುತಂಗಜಶರದಿಂ ನನ್ನನಿನ್ನಯರಾಗಿರ್ದಳಿದೆಯೊಳು ॥ ೧

ವಾರಣ ನುಂಗಿದ ಬೇಳಲಪಣ್ಣಂತಾ ವಾರಿಜನೇತ್ರೆಯೆದೆಯೊಳು ।
ಸಾರವಡಗಿ ಕಾಮಾಗ್ನಿಯಿಂ ರಾಮನ ದೂರಿಸುತಿರ್ದಳೇನೆಂಬೆ ॥ ೨

ಗುಹೆಯೊಳಗಣ ಗೂಢಾಗ್ನಿಯಂತವಳ ಸ್ಮರವಹ್ನಿಯೊಳಗೊಳವಳ । [?]
ದಹಿಸುತಿರ್ದುದು ಪೊಱಪೊಣ್ಮದವಳು ನಿರ್ವಹಿಸುತಿರ್ದಳು ಜಾಣ್ಮೆಯೊಳು ॥ ೩

ಇರಲವಳಂತು ಕಂಪಿಲಭೂವಿಶ್ವರನಿರದಾಕೆಯನೆಂದಿನಂತೆ ।
ಕರೆವುತ ಬಂದು ಕಂಡನು ಪೊಸೆದಲರಂತೆ ಕೊರಗಿರ್ದನಿಯಳ ಮೊಗವನು ॥ ೪

ಕಾಣುತ ಕಡುನೊಂದು ತೆಗೆದಮರ್ದಪ್ಪಿಕೊಂಡೇಣಾಕ್ಷಿ ನಿನಗಾರಿಂದ ।
ಕಾಣಿಸಿತೀ ಚಿಂತೆ ಮಱಬೇಡ ಪೇಳು ಪೇಳಾಣೆ ನಿನಗೆ ನನ್ನ ಮೇಲೆ ॥ ೫

ಪಗಲ ಚಂದಿರನಂತೆ ಪಲ್ಲಟಿಸಿದೆ ನಿನ್ನ ಮೊಗದ ನುಣ್ಪೊಗರೆನ್ನೆರ್ದೆಯ ।
ಅಗಲದಸುವೆ ಪೇಳು ಪೇಳೆಂದವಳ ಮುದ್ದು ಮೊಗವ ಮುಂಡಾಡಿ ಕೇಳಿದನು ॥ ೬

ಎನೆ ಪಸರಿಸೆ ಪಲ್ಪೆಳಗಿಂದಿಗ್ಯೆದಾಱುದಿನ ಮೊದಲೆನ್ನಯ ಮೆಯ್ಯಿಗೆ ।
ಅನುವಲ್ಲೇಕೆಂದಱಯೆನೆಂದವಳಾ ಮನುಜೇಶ್ವರಗೆ ಪೇಳಿದಳು ॥ ೭

ಆ ನುಡಿಗೇಳುತ ನರಪತಿಯೋರ್ವನಿದಾನವಱುವ ವೈದ್ಯನನು ।
ತಾನತಿವೇಗದಿಂ ಬರಿಸಿ ನೋಡಿಸಿದನಾ ಮಾನಿನಿಯಂಗದಿರವನು ॥ ೮

ವಾತಾದಿ ದೋಷಗಳಿಂದೀ ಜ್ವರ ಸಂಜಾತವಲ್ಲಿದು ದೇವಿಯರಿಗೆ ।
ಮಾತೇನು ಚಿತ್ತೈಸು ರಾಯರದೇವ ಚಿಂತಾತಿಶಯವಿದೆಂದನವನು ॥ ೯

ಎನಲಾತನ ಬೀಳ್ಕೊಟ್ಟಾ ನೃಪತಿ ತನ್ನಿನಿಯಳನಮರ್ದಪ್ಪಿಕೊಂಡು ।
ವನಿತೆ ಪೇಳ್ ನಿನ್ನಯ ಚಿಂತೆಯಿರವನೆಂದು ಮನವೊಲಿದವಳ ಕೇಳಿದನು ॥ ೧೦

ಬಳಿಕ ಪಲ್ಪೆಳಗೆಳೆವಿಂಚಿನಂತತ್ತಿತ್ತ ಪೊಳೆಯೆ ನುಡಿದಳಾಕೆ ನಿನ್ನ ।
ಲಲನೆಯರೆನ್ನ ಪಟ್ಟದವಳೇ ತಾನೆಂದಿಳಿಕೆಯ್ದಾಡಿದರೆಂದು ॥ ೧೧

ಇದಕೇಕೀ ಚಿಂತೆ ಕೋಮಲೆ ನಿನಗಾ ಸುದತಿಯರೆಲ್ಲರ ಮುಂದೆ ।
ಮುದದಿಂದ ಕಟ್ಟಿ ಪಟ್ಟವನಗ್ರಮಹಿಷೀಪದವನೀವೆನು ಲೋಕವಱಿಯೆ ॥ ೧೨

ಎಂದು ನುಡಿದು ದಿವ್ಯಾಭರಣಗಳನಾನಂದದಿಂ [?] ರೋಹಣಾಚಲವ ।
ಸಂದ ಶಿಖರವನೊಸೆದು ಮೃಗರಾಜನೆಯ್ತಂದಡರ್ವಂತೆ ಲೀಲೆಯೊಳು ॥ ೧೩

ಇಂತಿರಲೊಡ್ಡೋಲಗವಿತ್ತು ರಿಪುಕುಲಾಂತಕ ಕಂಪಿಲನೃಪತಿ ।
ಅಂತಲ್ಲಿಗೆಯ್ತಂದನು ಬೇಟೆಗಾಱನೊರ್ವಂ ತಡೆಯದೆ ಬೇಗದಿಂದಂ ॥ ೧೪

ಇಕ್ಕಿ ಹಣೆಗೆ ಕೈಗಳ ರಾಯಗೆ ಲೀಲೆ ಮಿಕ್ಕು ಬಿನ್ನವಿಸಿದನವನು ।
ಲೆಕ್ಕವಿಲ್ಲದ ಮೃಗಕುಲ ಬಂದು ತಳಿಯೊಳಪೊಕ್ಕುದು ಚಿತ್ತೈಸೆಂದು ॥ ೧೫

ಲೀಲೆಯಿಂದುಡುಗೊಱೆಗೊಟ್ಟವನಿಗೆ ಭೂಪಾಲ ಪೊಯಿಸಲು ಭೇರಿಯನು ।
ಮೇಲೆಯ್ತಂದುದು ಪಡೆ ನೆಲನೀದಂತೆ ಮೇಲೆ ಮೇಲತಿವೇಗದಿಂದ ॥ ೧೬

ಹೊಡೆದು ಕೆಲವ ಹೊಡಕರಿಸಿ ಕೆಲವ ಕರ್ಚಿಕೊಡಹಿ ಕೆಲವನಾಗಳಿಳಿಗೆ ।
ಕೆಡಿಸಿತಂಬರದಿಂದ ಪಕ್ಕಿಗಳನು ಸಾಳ್ವನೊಡನೊಡತಿವೇಗದಿಂದ ॥ ೧೭

ಉರ್ಚಿದ ಮುನ್ನ ಹಾಸವನು ಜಾಯಿಲಗಳು ಬಿಚ್ಚಿಯೋಡುವ ಮೃಗಕುಲವ ।
ಕರ್ಚಿ ಕೆಡಹಿ ಕೊಂದು ಕೂಗಿಸಿದವು ಮೆಯಿವೆರ್ಚಿ ಮಹಾರೋಷದಿಂದ ॥ ೧೮

ತಡೆವುತ ತಿರುಗಿದೊಡೋಡುತ ಪೋದಡೆ ಪಿಡಿವುತೆಕ್ಕಲವಂದಿಗಳನು ।
ಕೆಡುಪಿದವಂದು ಜಾಯಿಲಗಳು ಬೇಂಟೆಯ ಕಡುಗಲಿಗಳು ಬೊಬ್ಬಿಡಲು ॥ ೧೯

ಇಂತಿತ್ತ ಕಾನನದೊಳಗರಿನೃಪ ಕಾಲಾಂತಕನಾ ಕಂಪಿಲನು ।
ಸಂತಸದಿಂದ ಬೇಂಟೆಯನಾಡುತ್ತಿರಲತ್ತ ಕಂತುಸನ್ನಿಭ ರಾಮನಾಥ ॥ ೨೦

ತಂದೆಯೊಡನೆ ತಡೆವೇಂಟೆಗೆ ಪೋಗಬೇಕೆಂದು ಸ್ನೇಹಾಳಿಯ ಬಯಲೊಳು ।
ಬಂದು ನಿಂದನು ರಾಜಸುತರ ಸಂದಣಿಯೊಳಾಗಂದಿಂದ್ರ ತನಯನಂತವನು ॥ ೨೧

ಕೂಟದ ಕುಟಿಲದೇವಿಯರು ಮಾಡಿದ ಮಾಟದಿಂದಾ ರಾಜಸುತಗೆ ।
ಬೇಟೆಗೆ ಪೋಗುವ ಬುದ್ಧಿಯ ತೋಱದೆ ನೀರಾಟಕೆಳಸಿತು ಚಿತ್ತ ॥ ೨೨

ಗುಂಡಿಗೆ ಕೊಡಗೊಪ್ಪರಿಗೆ ಡೋಣಿ. ಪಱಿಗೋಲು ಬೆಂಡುಮರಗಳನು ತರಿಸಿ ।
ಮಂಡಲಪತಿ ಸುತರೊಡನೆಯ್ತರಲಾಖಂಡಲವಿಭವವನೆಯ್ದಿದನು ॥ ೨೩

ಪೋಗಿ ಕಂಡನು ಮೇಲಾದರವಿಲ್ಲದೆ ಭೂಗೊಲಿದಿಳೆಗೆಯ್ತಂದ ।
ಭಾಗೀರಥಿಯೆಂತೆಸೆವ ತುಂಗಭದ್ರೆಯನಾ ಗುಣನಿಧಿ ರಾಮನಾಥ ॥ ೨೪
ಕಾಳಿಂದಿಯ ಪೊಗುವಂತೆ ಕಂಸಾರಿ ಗೋಪಾಲತನಯರೊಡಗೂಡಿ ।
ಲೀಲೆಯಿಂ ಪೊಕ್ಕನಾ ತುಂಗಭದ್ರೆಯನು ನೃಪಾಲಕಸುತರೊಡನವನು ॥ ೨೫
ಬಾಂದೊಱೆಯೊಳಗೈರಾವತಕಲಭವಾನಂದದಿಂ ನೀರಾಡುವಂತೆ ।
ಸಂದ ಕಂಪಿಲನ ಕುಮಾರನಾ ನದಿಯೊಳಗಂದು ನೀರಾಟವಾಡಿದನು ॥ ೨೬
ಇಂಗಡಲಿಂದ ವೈಕುಂಠಕ್ಕೆ ಹರಿ ಪೋಪ ಭಂಗಿಯಿಂದಾ ರಾಯಕುವರ ।
ತುಂಗಭದ್ರಾನದಿಯಿಂದ ನಗರಿಗೆ ಬೆಡಂಗಿನಿಂದೆಯ್ದಿದನಿತ್ತ ॥ ೨೭
ಆ ನೀರಲಿ ಮಿಗಗೊಲೆಯರು ಮೃಗಹಿಂಸಾನುರತಿಯ ಬಿಡರೆಂದು ।
ತಾನಪರಾದ್ರಿಯ ಮಱೆಗೊಂಡನೆಂಬಂತೆ ಭಾನುವೆಯ್ದಿದನಸ್ತಮಯವ ॥ ೨೮

ಸುರಕರಿ ಗಂಗಾಪುಳಿನತಳದೊಳು ಮೆಯ್ಗರೆವಂತಾ ನೃಪತನಯ।
ಹರಿಸದಿಂ ಪೋಗಿ ಪವಡಿಸಿದನತಿಮೃದುತರ ಸಿತತಳ್ಪದೊಳಂದು॥ ೧

ಬಳಿಕ ತಣ್ಗದಿರ್ಗಳಡಗೆ ಶಶಿಮಂಡಲವೆಳಸಿದುದಪರಾದ್ರಿಯೊಳು।
ತಳುವದಮರರುಂಡು ಬಿಸುಟ ಬೆಳ್ಳಿಯಬಟ್ಟದಳಿಗೆಯಿರವನೇಳಿಸುತ॥ ೨

ಕಲೆಗಳನೀಂಟುವ ಸಮಯದೊಳಮರರೆಂಜಲಿಸಿದಂಗವ ನೀರೊಳಗೆ।
ಅಲೆವಂತಪರಾಂಬುನಿಧಿಯನೆಯ್ದಿದನಂದು ನಲವಿಂದ ನಳಿನವಿರೋಧಿ॥ ೩

ಕಾಮನರೂಪಿನಿಂ ಕಡೆಗೆ ಸಾರೆಂದೆಂಬ ರಾಮನ ಜೆಂಡಾಟವನು।
ಆಮೋದ ಮಿಗೆ ನೋಡಬಂದನೆಂಬತುಗ್ರಧಾಮನೆಯ್ದಿದನುದಯವನು॥ ೪

ಇಟ್ಟು ವಿಭೂತಿಯ ತೊಟ್ಟು ರುದ್ರಾಕ್ಷಿಯನುಟ್ಟು ಬಿಳಿಯ ಪಟ್ಟೆಯನು।
ಮೆಟ್ಟಿ ಚಿನ್ನದ ಹಾವುಗೆಯ ದೇವಾಗಾರಕಿಟ್ಟನಡಿಯನಾ ಕುವರ॥ ೫

ಪೋಗಿ ಕಾಣುತ ಶಿವಲಿಂಗದಡಿಗೆ ತಲೆವಾಗಿ ಮೆಯ್ಯಿಕ್ಕಿ ಬೀಳ್ದೆಳ್ದು।
ಆಗಳಿಂತೆಂದು ಚಿಂತಿಸಿದನೆದೆಯೊಳನುರಾಗರಸಾಂಬುಧಿ ತುಳ್ಕೆ॥ ೬

ನಿಂದು ನುತಿಸಿ ಬಳಿಕಷ್ಟವಿಧಾರ್ಚನೆಯಿಂದ ಲಿಂಗವ ಪೂಜೆಮಾಡಿ।
ಇಂದು ಕುಲಾವತಂಸನ ನಿಜಹೃದಯಾರವಿಂದದೊಳಗೆ ನೆಲೆಗೊಳಿಸಿ॥ ೭

ಪರವೆಣ್ಗಳೆನಗೆಮ್ಮ ಹರಿಹರದೇವಿಯ ದೊರೆಯೆಂದೀಶನ ಮುಂದೆ।
ಭರದಿಂದ ಬಳಿನೀರ್ಗುಡಿವಂತವನಾಗಳಿರದೀಂಟಿದನು ತೀರ್ಥಜಲವ॥ ೮

ಮೇಲೀಶನಂಘ್ರಿಗೆಱಗಿ ಬೀಳ್ಕೊಂಡು ಮದಾಲಸಗಮನೆಯರೊಡನೆ।
ಲೀಲೆಯಿಂ ಬಂದು ಪೊಕ್ಕನು ಮೆಲ್ಲನಾಭರಣಾಲಯವನು ರಾಯಕುವರ॥ ೯

ಹತ್ತಕಟ್ಟಿಕ್ಕಿದ ಪದಕ ಹೀರಾವಳಿಮುತ್ತಿನ ಸರ ರಿಪುನೃಪರ।
ಒತ್ತದ ಗಂಡನೆಂದೆಂಬ ತೊಡವು ದೇಶಿವೆತ್ತಿರೆ ಮಿಗೆ ರಂಜಿಸಿದನು॥ ೧೦

ಪೂಸಿದ ಯಕ್ಷಕರ್ದಮದ ಜವಾದಿಯ ವಾಸನೆಯಿಂ ದೆಸೆಗಳನು।
ಬಾಸಣಿಸುತ ಮಿಗೆ ಮೆಱೆದನು ಸಿಂಗರ ದೇಶಿವಡೆಯಲಾ ಕುವರ॥ ೧೧

ಮಡಿದನು ಮದನನೀಶ್ವರನಿಂದೆಂಬ ನುಡಿಯ ಮರೀಚಿಕಾ ಜಲಕೆ ।
ಪುಡಿಯೆನಿಸುತ ದೇಶೀಯ ಶೃಂಗಾರದಿಂ ಕಡುರಂಜಿಸಿದನಾ ಕುವರ ॥ ೧೨

ಮೇಲೆ ತೊಡರ ಝಣಝಣರವದಿಂದ ನೃಪಾಲಯುವನು ಪೊಱಮಟ್ಟು ।
ಲೀಲೆಯಿಂ ತಳರ್ದನು ಮುತ್ತಿನಚಾವಡಿಗೋಲಗಕಾ ನೃಪತನಯ ॥ ೧೩

ಬಂದಲಂಕರಿಸಿದನಂದು ನಾನಾರತ್ನಸಂದೋಹದಿಂ ಸಲೆ ಮೆಱೆವ ।
ಸಂದ ಸಿಂಹಾಸನವನು ರಿಪುಗಜಸಿಂಹನಂದನನಾ ನೃಪತನಯ ॥ ೧೪

ಓಲಗದವಸರವನು ಕಾದಿರ್ದನು ಮೇಲವಸರದವರೆಯ್ದೆ ।
ಲೀಲೆಯಿಂ ಕರೆದೊಳಪುಗಿಸೆ ಕುಮಾರಕನೋಲಗವೆಸೆದುದೇನೆಂಬೆ ॥ ೧೫

ಮಂಡಳಿಕರ ಮಂತ್ರಿಗಳ ಸಾಮಂತರ ದಂಡನಾಯಕರ ಮನ್ನೆಯರ ।
ಗಂಡುಗಲಿಗಳ ಗರುಡಿಯಾಚಾರ್ಯರ ತಂಡವೆಸೆದುದೋಲಗದೊಳು ॥ ೧೬

ವೀಣೆ ಕಿನ್ನರಿ ಸರಮಂಡಲ ತುಂಬರವೀಣೆಗಳನು ಬಾಜಿಸುವ ।
ಜಾಣರಿಂ ಜನಪತಿತನಯರಿಂ ಕೇಳಿಪಗಾಣರಿಂದೆಸೆದುದಾಸ್ಥಾನ ॥ ೧೭

[ಆಗ] ಸಂಗಿಗೆ ಕೊಟ್ಟ ವರವ ನೆನೆದು ಬೇಗದಿಂದ ಕುಟಿಲದೇವತೆಗಳು ।
[ಭೋಗ] ರಾಮಂಗೆ ಚೆಂಡಾಟಕ್ಕೆ ಚಿತ್ತವನಂದು ಪುಟ್ಟಿಸೆ ಬಳಿಕವನು ॥ ೧೮

ಹೊತ್ತು ಹೋಗದು ಚೆಂಡಾಟಕೆ ಮನವೆಳಸುತ್ತಿದೆಯೆಂದು ರಾಗದಲಿ ।
ಒತ್ತಿನ ಸಖರಿಗೆ ಪೇಳಲವರು ಮುದವೆತ್ತು ಬಿನ್ನವಿಸಿದರಂದು ॥ ೧೯

ಚಿತ್ತೈಸು ಪಗೆರಾಯರೆಂಬ ಶೈಲಂಗಳ ಮೊತ್ತವನಿರದೆ ಘಲ್ಲಿಸುತ ।
ಉತ್ತಮ ವಜ್ರದ ಚೆಂಡು ಚೆಂಡಾಡಕೆ ಹೊತ್ತಿದು ಚೆನ್ನಿಗರಾಮ ॥ ೨೦

ಓಲಗದೊಳು ಬಂದು ನೆಱೆದಿದೆ ಧರಣೀಪಾಲಕುಮಾರರೆಯ್ತಂದು ।
ಏಳು ಚೆಂಡಾಟಕೆ ರಾಯಕುವರ ನಿನ್ನ ಮೇಳದ ಕೆಳೆಯರೊಗ್ಗಿನೊಳು ॥ ೨೧

ಹರಿಹರದೇವಿಯರೊತ್ತಿನೊಳದೆ ಚೆಂಡು ಇರದಾಡುವ ತಾಣದೊಳಗೆ ।
ವರಪೂಜೆಯನಾಂತು ಮೆಱೆವ ಮುತ್ತಿನ ಚೆಂಡು ಬರಬೇಕು ಅದು ಲಗ್ಗೆಯೆಡೆಗೆ ॥ ೨೨

ಅದು ನಿಮ್ಮ ಹೆತ್ತೈಯ್ಯ ಮುಮ್ಮಡಿಸಿಂಗಭೂಪೊದವಿದ ನೆಱೆವರೆಯದೊಳು ।
ಮುದದಿಂದ ಪಿಡಿದಾಡುವ ಮುತ್ತಿನಚೆಂಡು ಅದು ಬೇಕೊಲಿದು ನೀನೇಳು ॥ ೨೩

ಎಂದು ಬಿನ್ನವಿಸೆ ತೊಡರು ಜಣರ್ಝಣರವದಿಂದ ಸಿಂಹಾಸನವಿಳಿದು।
ಬಂದನು ತಾಯರಮನೆಗಾಗಿ ಮೇಳದ ಸಂದ ಸುಖದ ಮೋಹರದೊಳು॥ ೨೪

ರಾಯ ಗೋಧೂಮಗಟ್ಟರಗರ್ವಿತ ಪರರಾಯಹರಿಣಶಾರ್ದೂಲ।
ರಾಯ ವಿಪಿನದಾವಾನಲ ರಾಯನಿಕಾಯತಿಮಿರತೀವ್ರಕಿರಣ॥ ೨೫

ಎಂದುಳ್ಳ ಗುಣಗಳನನುವದಿಸುತ ಬರೆ ಮುಂದೆ ವಂದಿಗಳಾ ಕುವರ।
ಬಂದಂತವುರಪೊಕ್ಕು ಮಾತೆಯ ಚರಣಾರವಿಂದಗಳಿಗೆ ನಮಿಸಿದನು॥ ೨೬

ಮುಗಿಲೊಡ್ಡಣವ ಕಂಡ ನವಿಲಂತೆ ಚಂದ್ರನ ಮೊಗವ ಕಂಡಬುಧಿಯಂತೆ।
ಮಿಗೆ ಪೆಚ್ಚುತಂತರಂಗದೊಳು ತೂಪಿಱಿದಾಗ ತೆಗೆದೆತ್ತಿದಳು ತಾಯಿ ಮಗನ॥ ೨೭

ನಾಯಕನಾಗಿಳೆಗಾಚಂದ್ರತಾರಾಸ್ಥಾಯಿಯಾಗರಿಗಳ್ಗೆ ಜಯವ।
ಈಯದ ಲೋಭಿ ನೀನಾಗೆಂದು ಮಗನನು ತಾಯಿ ಹರಸಿ ಕೇಳಿದಳು॥ ೨೮

ಸುರತಾಳನ ದಂಡುಂಟು ಕದನವುಂಟು ಬಲ್ಲಾಳನ ಬರವುಂಟುವೋರಗಲ್ಲವನ।
ಹರಿದಾಟವುಂಟು ಕಾದಲವುಂಟು ಕಂಪಿಲೇಶ್ವರನೆ ಪೇಳೆನಗೆ ಬಂದುದನು॥ ೨೯

ಹೊತ್ತುಹೋಗದು ಚೆಂಡಾಟಕೆ ಮನವೆಳಸಿತ್ತು ಮುಮ್ಮಡಿಸಿಂಗನೃಪನ।
ಮುತ್ತಿನ ಚೆಂಡ ಬೇಡುವುದಕ್ಕೆ ಬಂದೆನತ್ತಿತ್ತಣ ವಾರ್ತೆಯಲ್ಲಮ್ಮ॥ ೩೦

ಎಂದು ನುಡಿದ ತನ್ನ ಕುವರನ ವದನಾರವಿಂದವ ನಿಟ್ಟಿಸುತವಳು।
ಅಂದು ನಾನಾತೆಱದಿಂದ ಬುದ್ಧಿಯನಿಂತೆಂದು ಪೇಳಿದಳಾತ್ಮಸುತಗೆ॥ ೩೧

ಬೊಗರಿ ಗದುಗುಸ ದುಗುಡ ಲಗ್ಗೆ ಹಿಡಿಗವಡೆಗಳಿವು ರಾಜಪುತ್ರರಿಗೆ।
ಬಗೆಯಲುಚಿತವೇ ಕೇಳಿದ ಬಗೆ ರಾಯರು ನಗರೇ ನಿನ್ನಾ ಸಭೆಯೊಳಗೆ॥ ೩೨

ಚೆಂಡಾಟವೆಂಬುದು ತುಱುಗಾಯಿ ಮಕ್ಕಳ ತಂಡಕಲ್ಲದೆ ನೃಪಸುತರ।
ಮಂಡಳಿಗುಚಿತವೇ ಸಲ್ಲದು ಗಂಡರಗಂಡ ಬೇಡೀ ಚೆಂಡಿನಾಟ॥ ೩೩

ಕಾಲುರಿಚರ ಕರ್ಮವಲ್ಲದೆ ಕಂತುಕಕೇಳಿ ನೃಪಾಲತನುಜರ।
ಲೀಲೆಯಲ್ಲಿದು ನಿನ್ನಾಣೆ ಮಗನೆ ತಪ್ಪುಹೇಳೆನು ಕೇಳಾನು ನಿನಗೆ॥ ೩೪

ವೀರಬಲ್ಲಾಳನ ಮುಱಿಯಲಿಱಿದೆ ಮೇಲೋರಗಲ್ಲವನ ಕೆಣಕಿದೆ।
ಹೋರಾಟವ ಮಾಡಿಕೊಂಡೆ ತುರುಕರೊಡನಾರಿಂತು ವೈಮಱೆದಿಹರೇ॥ ೩೫

ಬೇಹುಕಾಱರ ಮೊಗದಿಂದರಿರಾಯರ ಗಾಹುಗದುಕುಗಳನಱಿದು ।
ಬೇಹಮಂತ್ರಿಗಳೊಡನೆಣಿಸದೆ ಕಾರ್ಯವ ನೀ ಹರಿದಾಟಕೆಣಿಪರೇ ॥ ೩೬

ಮಂಡೆ ತುಂಬಿದ ರಾಜಕಾರ್ಯವಿದ್ದೂ ರಾಮ ಚೆಂಡಾಟಕೆಳಸಿತೆ ಚಿತ್ರ ।
ಕಂಡವರಿವನೇತಱವನೆಂಬರಲ್ಲದೆ ಕೊಂಡಾಡುವರೇ ನಿನ್ನನವರು ॥ ೩೭

ಲೆಕ್ಕವಿಲ್ಲದ ರಾಜಕಾರ್ಯ ನಿನಗೆ ಬಂದು ಮುಕ್ಕುಱಿದಿದೆ ಮುಂದೆ ರಾಮ ।
ಮಕ್ಕಳಾಡುವ ಚೆಂಡಾಟಕೆ ಮನವನೀನಿಕ್ಕಬಹುದೇ ಯುವರಾಜ ॥ ೩೮

ಚೆಂಡಾಟದೊಳ್ಕೈಕಾಲ್ನೊಂದಡದ ಪೋಗಿ ಕೊಂಡೆಯರುಸುರೆ ತುರುಕರು ।
ದಂಡೆತ್ತಿಬಾರದೆ ಮಾಣರು ಚೆಲುವರ ಗಂಡ ಬೇಡೀ ಚೆಂಡಿನಾಟ ॥ ೩೯

ಜನನಿ ಜಾಹ್ನವಿ ಜನ್ಮಭೂಮಿ ಜನಾರ್ದನ ಜನಕರೆಂಬಿವರು ಭೂಮಿಯೊಳು ।
ತನುಜ ಕೇಳುತಬಹುದದಱಿಂದೆನ್ನ ವಿನಯವಚನವ ಮೀಱದಿರು ॥ ೪೦

ಎಂದು ಬುದ್ಧಿಯ ಪೇಳಿದ ತಾಯ ಚರಣಾರವಿಂದಗಳಿಗೆ ಭೀತಿಯಿಂದ ।
ಅಂದು ಮಣಿದು ಕೈಗಳ ಮುಗಿದವನಿಂತೆಂದು ಬಿನ್ನಹವ ಮಾಡಿದನು ॥ ೪೧

ಜನನಿ ನೀನುಸುರಿದ ನುಡಿಗಳೆನಗೆ ಸಂಜೀವನಮಂತ್ರಗಳವನೆನ್ನ ।
ಮನದೊಳಗಾನು ನೆಟ್ಟನೆ ವಹಿಸಿದೆನಿದಕನುಮಾನವಿಲ್ಲ ನಿನ್ನಾಣೆ ॥ ೪೨

ಇರಿಸಿ ಬಂದೆನು ಕಂದುಕವ ತಂದಪೆನೆಂದರಸುಮಕ್ಕಳನು ಬಾಗಿಲೊಳು ।
ತರಿಸಿಕೊಡಿಂದಿಗೆ ಚೆಂಡನವರನು ಇರಿಸಿ ಬಹೆನು ಬೇಗೆ ಪೋಗಿ ॥ ೪೩

ಆಡೆನು ಚೆಂಡಾಟವ ಚೆಂಡಾಟವನಾಡುವ ನೃಪತನಯರಿಗೆ ।
ಪಾಡುವೇಳುತ ನಿಂದಿಹೆನೆಂದು ಜನನಿಯೊಳಾಡಿದನಾ ರಾಯಕುವರ ॥ ೪೪

ಎನಲೆಂದಳವಳಭಿನವಮನಸಿಜ ನಿನ್ನ ತನುವಿನ ಲಾವಣ್ಯರಸದ ।
ಪೊನಲೊಳೀ ನಗರದ ನಳಿನನೇತ್ರೆಯರ ಕಣ್ಣನವಾಳದಿರಾಟ ಬೇಡ ॥ ೪೫

ಎನೆ ಮೃದುಮಧುರ ಗಂಭೀರನಿನಾದದಿಂ ಜನನಿಗೆ ನುಡಿದನಿಂತೆಂದು ।
ಮನದೊಳೆಣಿಸಬೇಡ ಪರವನಿತೆಯೆನಗನುಜಾಗ್ರಜೆಯರು ನಿನ್ನಾಣೆ ॥ ೪೬

ನೀನೆನಗೊಲಿದು ತಂದಿತ್ತ ಪೆಣ್ಗಳಿಗಲ್ಲದಾನನ್ಯ ಕಾಂತಾಜನಕೆ ।
ಮಾನಸದೊಳಗಳುಪಿದಡೆ ನಿನಗೆ ರಾಯಗಾನು ಪುಟ್ಟಿದುದಿಲ್ಲವಮ್ಮ ॥ ೪೭

ಹರಿ ಕೇಳು ಹರ ಕೇಳು ಸರಸಿಜಭವ ಕೇಳು ಸುರಪ ಕೇಳೀ ಶಪಥವನು ।
ಪರವೆಣ್ಗಳೆನಗೆಮ್ಮ ಹರಿಹರದೇವಿಯ ದೊರೆಯೆಂದು ಪೂಣ್ದು ನುಡಿದನು ॥ ೪೮

ಇಂತು ನಾನಾತೆಱದಿಂ ಪ್ರತಿಜ್ಞೆಯನೋರಂತೆ ಮಾಡಿದ ನಿಜಸುತನ ।
ಸಂತಸ ಮಿಗೆ ತೆಗೆದಪ್ಪಿಕೊಂಡಳು ಮೇಲಾಂತಳಾನಂದಾಶ್ರುವನು ॥ ೪೯

ಜನನಿಯ ಚರಣಕೆಱಗಿ ಪರಕೆಯನಾಂತನುನಯದಿಂದಾ ಕುವರ ।
ಮನವೊಲಿದೆಯ್ತಂದನು ಲಗ್ಗೆಯಾಟದ ಜನಪತಿತನುಜರ ಬಳಿಗೆ ॥ ೫೦

ಬಂದ ಕುವರನಾಟಕೆ ತೆಱಪಾವೆಡೆಯೆಂದು ಕೇಳಲು ನಿಜಸಖರು ।
ಎಂದರು ರಾಯರ ರಾಣಿಯ ಪೌಳಿಯ ಹಿಂದದೆ ಬಟ್ಟಬಯಲು ॥ ೫೧

ಒದಱುವ ಕಹಳೆಗಳೋದುವ ಪಾಠಕರೊದವಿ ಪೊಗಳುವ ವಂದಿಗಳು ।
ಮುದದಿಂದ ಬರೆ ಮುಂದೆ ನಡೆದನಲ್ಲಿಗೆ ರಿಪುಮದಗಜವಿದಳನಸಿಂಹ ॥ ೫೨

ಕುಂಡಲಮಂಡಲ ಮಂಡಿತ ಗಂಡನಾಖಂಡಲಚಂಡನಾ ರಾಮಾ ।
ಗಂಡುಗಲಿಗಳು ಮುಂಕೊಂಡೊಡವರೆ ಬಗೆಗೊಂಡು ಚೆಂಡಾಟಕೆಯ್ದಿದನು ॥ ೫೩

ಬೀದಿಯೊಳೆಯ್ದುತಹನೇ ರಾಮನೆಂದರು ನಾದದಿಂದೊದಱಿ ಸಖಿಯರು ।
ಹೋದನೆ ಹೋದನೆಯೆನುತ ಬಾಗಿಲನೀಕವಾದರದಿಂದ ನೋಡಿದುದು ॥ ೫೪

ಈ ತೆಱದಿಂದಿಂದುಮುಖಿಯರೊಲಿದು ಮನಸೋತು ನಿಟ್ಟಿಸುತಿರಲವನ ।
ನೀತಿಯಿಂ ನಿರ್ವಿಕಾರದೊಳೆಯ್ದಿದನಂದಾತುರದಿಂದಾಟದೆಡೆಗೆ ॥ ೫೫

ಧರೆ ಬೆಸಲಾದಂತೆ ಶರಧಿ ಮೇಱೆಯ ಮೀಱಿ ಪುರಕೆಯ್ತಂದುದೆಂಬಂತೆ ।
ನೆರೆದುದಾ ನಗರಿಯೊಳುಳ್ಳಿಕಾಱರ ನೆರವಿಯು ಚೆಂಡಾಟದೆಡೆಗೆ ॥ ೫೬

ಮೊಳಗುವ ಲಗ್ಗೆವರೆಯ ದನಿ ಸುಭಟರ ಕಳಕಳನಿನದ ನೋಟಕರ ।
ಉಲುಹು ರತ್ನಾಜಿಯ ಕರ್ಣಯುಗಳವನಂದಲೆದುದು ಬಂದು ಬೇಗದೊಳು ॥ ೫೭

ಕೇಳಿದಳೆಲ್ಲಿಯಬ್ಬರವಿದು ಸಂಗಾಯಿ ಹೇಳೆಂದು ಕೆಳದಿಯನವಳು ।
ಮೇಲೆ ನಗುತ ಪೇಳಿದಳವಳಿರವನು ಲೋಲಲೋಚನೆಗಿಂತೆಂದು ॥ ೫೮

ಧೀರೆ ಕೇಳೆಮಗಂದು ವರವಿತ್ತವನೀತ ಧಾರ ಕುಟಿಲದೇವತೆಗಳ [?] ।
ಪ್ರೇರಣದಿಂ ರಾಮನಾಡುವ ಚೆಂಡಾಟದಾರವವಿದು ಚೆಂದುಟಿಯಳೆ ॥ ೫೯

ನೋಡುವೆ ರಾಮನನೆಂದುಪ್ಪರಿಗೆಯೇಱಬೇಡ ನಿನ್ನೆಡೆಗವನೀಗ ।
ಬೇಡಬೇಡೆನೆ ಬರುತಹನೆ ಕಣ್ಬೇಟವ ಮಾಡಿ ಸೋಲಿಸಿಕೊಳ್ಳವನ ॥ ೬೦

ಬಂದು ಬಿದ್ದಪುದೀಗಳಿಂದುವದನೆ ನಿನ್ನ ಮುಂದೆ ಮುತ್ತಿನ ಚೆಂಡನದನು ।
ನಿಂದು ನಿರೀಕ್ಷಿಸುತಿರು ನಿನಗವನದಱಿಂದ ಬಹನು ನಿನ್ನ ಬಳಿಗೆ ॥ ೬೧

ಎನೆ ಜುಮ್ಮುರ್ಝುಂಮನೆ ಮೈನವಿರೇಳೆ ಕಂಪನ ಕೈಮೀಱಿ ಮೆಯ್ಯೊಳಗೆ ।
ಪೊನಲಿಡೆ ಬೆಮರು ಕಣ್ಬನಿ ಕರೆಗಣ್ಮಲಾ ವನಿತೆಗಾದುದು ಬೇಟವವನ ॥ ೬೨

ಬಳಿಕಾಕೆಯ ಕರಣಗಳೆಂಬಲಗ್ಗೆಯ ತಳುವದಿಟ್ಟಲರ ಚೆಂಡಿಂದ ।
ಕಳಕಳವೆಯ್ದಿಸಿ ಕಂತುಕಕೇಳಿಯ ಬಳಿಸಂದರವರತ್ತಲಿತ್ತ ॥ ೬೩

ಸರಿ ತನಗೀ ಭಾವ ಸಂಗಮದೇವನೆಂದೊರೆದಾಟದವರಿಗವನನು ।
ಕರೆದನುನಯದಿಂದ ತನ್ನೊಡವನ ಪೆರ್ಡೆಯ ಮಾಡಿದನಾ ಕುವರ [?] ॥ ೬೪

ಹೆಸರುಳ್ಳ ರಾಜನೃಪತಿಗಳ ತನುಜರ ಹೆಸರ ಹಿಡಿದು ಕರೆಕರೆದು ।
ಒಸೆದು ಕೊಟ್ಟನು ಭಾವಸಂಗಮದೇವಗಂದಸಹಾಯ ಶೂರನಾ ರಾಮ ॥ ೬೫

ನಿನ್ನ ಮನಕೆ ಬಂದ ಭಟರ ಸಂಗಮದೇವ ನಿನ್ನ ಕಡೆಗೆ ಮಾಡಿಕೊಂಡು ।
ನನ್ನ ಕಡೆಗೆ ಕೊಡು ನಿನಗಲ್ಲದರನೆಂದು ಚೆನ್ನಿಗರಾಮ ನುಡಿದನು ॥ ೬೬

ಅಳಿಯಮಕ್ಕಳಪ್ಪೈಕಭಾವಸಂಗಮದೇವನೊಳಗೆ ಸೇರಿತು ಪಕ್ಷವಱಿತು ।
ಕುಲವನಚೈತ್ರಕುಮಾರ ರಾಮನ ಬೆಂಬಳಿಯನೆಯ್ದಿದರು ಕುವರರು ॥ ೬೭

ಅತ್ತಲಾರಿಯ ಮಾಯಿದೇವನವರು ನೋಡಲಿತ್ತ ಕಾಟಣ್ಣನವದಿರು ।
ಮುತ್ತಿತು ಪಕ್ಷವಱಿತು ಬಲವೆರಡಾಯಿತ್ತು ಕೋಳಾಹಳ ಮಸಗೆ ॥ ೬೮

ಹಡಪದ ಬಲ್ಲುಗ ಮೊದಲಾದ ಹಳೆಯರು ತಡೆಯದೆಯ್ದಿದರು ರಾಮನನು ।
ಕಡುವೇಗದಿಂದೆಯ್ದಿದರು ಸಂಗಮದೇವನೆಡೆಗೆ ಹೋಯೆನುತ ಹೊಸಬರು ॥ ೬೯

ಬಳಿಕಾಡುವ ಚೆಂಡು ಲಗ್ಗೆವಲಗೆಗಳ ತಂದಿಳುಪಲೂಳಿಗದ ಬೋಳುಕರು ।
ತಳುವದೆ ಚೆಂಡಾಟಕನುವಾದನು ತನ್ನ ಕೆಳೆಯರೊಡನೆ ರಾಯಕುವರ ॥ ೭೦

ಬಿಗಿದ ಗಂಡುಡಿಗೆ ಬಿರುದಿನ ಖಡೆಯಕಟ್ಟಿ ಸೊಗಯಿಪ ರನ್ನದ ಬಂಕು ।
ಬಗೆಗೊಳಿಸುವ ಬಾವನ್ನದಪ್ಪೆಸೆಯೆ ಮೆಯ್ದುಗೆದನುವಾದನಾ ಕುವರ ॥ ೭೧

ಚಾರುಧವಳನವದಿವ್ಯದುಕೂಲದಘೋರುಕವೆಸೆಯೆ ತೊಡೆಯೊಳು
ಮಾರನಿನ್ನೇತಕೆನಿಸುತ ಮೆಯ್ದೆಗೆದು ಕುಮಾರಕನನುವಾದನಂದು ‖ ೭೨

ಬಳಿಕ ಮುತ್ತಿನ ಚೆಂಡನಿರಿಸಿ ಲಗ್ಗೆಯಜೇಯು ತಳೆದು ಕುಮಾರಸಂಗಮಗೆ ।
ತಳುವದೆ ಮೊದಲಾಟವಿತ್ತಿದಿರಾದನು ಕೆಳೆಯರ ಮೋಹರದೊಳಗೆ ‖ ೭೩

ಕಂತುಕ ಬಂದೊಡೆ ಪೋಗಲೀಯದೆ ಕಂಡಾಂತುಕೊಂಬುದಕಡ್ಡಲಾಗಿ ।
ಮುಂತೆ ನಿಲಿಸಿದನಾ ಕುವರನೊಲಿದು ತನ್ನ ಹೊಂತಕಾಱಗಳ ವಂಗಡವ ‖ ೭೪

ಗಾಳಿ ಪೊಗುವಡಳವಲ್ಲವೆಂಬಂತೆ ತನ್ನಾಳನಲ್ಲಲ್ಲಿಗೆ ಬಲಿದು ।
ಹೇಳುತೆಚ್ಚರಿಕೆಯನವರಿಗೊಲಿದು ಮೇಲಾಳಾಗಿರ್ದನಾ ಕುವರ ‖ ೭೫

ಮೇಲೆ ಲಗ್ಗೆಯನೊಡ್ಡಿ ದನಿಮಾಡಿ ಕುವರನ ಮೇಳದೆರೆಗಳ ಕಂತುಕವ ।
ಲೀಲೆಯಿಂ ಕೈಯ್ಯೊಳು ಪಿಡಿದು ಲಗ್ಗೆಯನಿಡಲಾಳಾದರು ನಿಜಸುತರು ‖ ೭೬

ಇಡೆ ಲಗ್ಗೆಯನವರಿವರು ಕಂತುಕವನು ಬಿಡಿದುದಾ ಕಂತುಕುವರನ ।
ಪಡೆಗೆ ಪರಾಜಯವನು ಪುಟ್ಟಿಸಲಾಗ ತಡೆಯದ್ಯೆತಂದನಾ ರಾಮು ‖ ೭೭

ಎತ್ತಿದ ತೋಳೊತ್ತಿ ಮೆಟ್ಟಿದೆಡದ ಕಾಲ್ ಕಿತ್ತು ತೊಲಗದೆ ಗುಱಯು ।
ಹೊತ್ತು ನೋಡುವ ದಿಟ್ಟಿ ಚಲಿಸದ ಮೆಯ್ ಚೆಲ್ವುವೆತ್ತಿರೆ ಮೆಱೆದೆನಾ ಕುವರ ‖ ೭೮

ಬಳಿಕ ಲಗ್ಗೆಯನಿಡಲಾ ರಾಯಕುವರನಂದೊಲಿದುದ್ದಗಲಕೆ ।
ಬಲಿದಿಡಲವನು ನರನು ಚೆಂಡಿಂ ತಲೆಕೆಳಕಾಗಿ ಕೆಡೆದರೋಡಿದರು ‖ ೭೯

ಪರಿದಾಳನಿಡುವನು ಚೆಂಡವನಿಯ ಮೇಲುರುಳದ ಮುನ್ನ ಪಿಡಿವನು ।
ಪರಿಣಾಮಿಸುವನಿದಿರ ಹರಿಗೊಡುವರನು ಪರಿಹಾಸವ ಮಾಡುವನು ‖ ೮೦

ಎಡಬಲದೊಳಗೆ ಲಗ್ಗೆಯನೊಡ್ಡಲೆಂದು ಬಂದೊಡನೆ ಕವಿವ ಕಟ್ಟಾಳ ।
ಬಿಡದಿಡಲವನವರಿಗೆ ಜೀವದ ಕಟ್ಟ ಕಡೆಯಾದುದೇನ ಪೇಳುವೆನು ‖ ೮೧

ಲಗ್ಗೆಯನೊಡ್ಡಲೆಂದೆಡಬಲದೊಳು ಬಂದು ಮುಗ್ಗಲಮ್ಮರು ಸಂಗಮನ ।
ಒಗ್ಗಿನ ಪಟುಭಟರೆನಲವನೀಡಿನೊಂದಗ್ಗಳಿಕೆಯನೇನನೆಂಬೆ ‖ ೮೨

ಈ ರಾಮನಾಥನ ಚೆಂಡಿಗೆ ನಿಲ್ವಾ ವೀರನಿವನಿಗವನಿಯೊಳು ।
ಆರೆಣೆಯೆಂದು ಸಂಗಮದೇವನನಲ್ಲಲ್ಲಿ ಪೌರಜನರು ಪೊಗಳಿದರು ‖ ೮೩

ಪಿಡಿದು ಲೀಲೆಯಿಂದಾನಲ್ಲೆಂದು ಬಾನೆಡೆಗಿಡಲದು ದೇವತೆಗಳ ।
ತಡಹಿನಿಂ ಕೈಗೆ ಬಾರದೆ ರತ್ನಿಯ ತಳಿರಡಿಗಳ ಮುಂದುರುಳಿದುದು ॥ ೮೪

ಚೆಂಡ ಕಳುವವೊಲು ಬಲು ಠೌಳಿಕಾಱರ ಚೆಂಡನೆಲ್ಲರು ನೋಡುತಿರಲು ।
ಕೊಂಡೊಯ್ದು ಕುಟಿಲದೇವತೆಗಳವಳ ಪಾದಪುಂಡರೀಕಕೆ ಸೇರಿಸಿದವು ॥ ೮೫

ನನಗಣೆಯಿಂದೆಚ್ಚು ತಣಿಯದಂಗಜನಾ ವನಿತೆಯನಿಟ್ಟ ಮಲ್ಲಿಗೆಯ ।
ಮಿನುಗುವ ಪೆಟಲಗುಂಡಿನವೊಲವಳ ಮುಂದನುವಡೆದಿರ್ದುದಾ ಚೆಂಡು ॥ ೮೬

ಕಡುಕೊರ್ತನಲ್ಲನ ಕೈಬಾಯಿ ಸೋಂಕಿದೊಡನೆ ಕೈಸೇರಿದೊಡದನು ।
ಬಿಡದೆ ಮುಂಡಾಡದೆ ಬಿಗಿಯಪ್ಪಿಕೊಳ್ಳದೆ ಬಿಡುವರೆ ಮೋಹಿವೆಣ್ಣುಗಳು ॥ ೮೭

ಬಡವಗೆ ಕಡವರ ಬಲುರೋಗಿಗಮೃತದ ಕೊಡ ಕೈಸಾರಿದಂತವನು ।
ಮಡಗುತ ತೆಗೆವುತ ನಿಟ್ಟಿಸುತಿರ್ದಳಾ ಮಡದಿ ಬೇಸರದತ್ತಲಿತ್ತ ॥ ೮೮

ಕಂತುಕವನು ಕಂಡು ಚಿಕ್ಕಮ್ಮನೇನೆಂದು ಚಿಂತಿಸುವಳೋ ಕೆಲಬಲದ ।
ಕಾಂತೆಯರೇನೆಂದು ಬಗೆವರೋ ಎನುತ ವಿಭ್ರಾಂತನಾದನು ಮನದೊಳಗೆ ॥ ೮೯

ಮಾತೆಯ ನೀತಿವಾತುಗಳ ನೆನೆವುತ ಧರಾತಳಪತಿಗೆ ಬೆದಱುತ ।
ಏತೆಱದಿಂದ ಕಂತುಕವ ತರಿಸುವೆನೆಂಬಾತುರದೊಳಗಿರ್ದನವನು ॥ ೯೦

ಬಿಡದೆ ಬಯಲೊಳು ಬರೆದ ಚಿತ್ರದಂತೆವೆಮಿಡುಕದೆ ನೋಟಕರಲ್ಲಿ ।
ಕಡುಬೆಱಗಾಗಿರೆ ಬೆದಱಿ ಕಾಟಣ್ಣನ ತಡೆಯದೆ ಕರೆದನಾ ರಾಮ ॥ ೯೧

ಚಿಕ್ಕಮಾತೆಯ ಬಳಿಗೆಯ್ದಿ ಚರಣಕೆ ಮೆಯ್ಯಿಕ್ಕಿ ಕಾಟಣ್ಣ ಕಂತುಕವ ।
ದಿಕ್ಕನೆ ಕೊಂಡುಬಾರೆಂದು ಕಳುಪಿದನಂದುಕ್ಕುವ ಭಯರಸದಿಂದ ॥ ೯೨

ಕಳುಹಿಸಿಕೊಂಡು ಬಂದೊಯ್ಯನೆ ಮಗನೆಂಬಳವಿನಿಂದವಳರಮನೆಯ ।
ಪಳಿಯಱರನುಮತಿಯಿಂ ಪೊಕ್ಕು ಕಂಡನಾ ನಳಿನದಳಾಯತೇಕ್ಷಣೆಯ ॥ ೯೩

ಮಗನೆಂಬ ಸಲಿಗೆಯಿಂದವನೆಯ್ತಂದಾ ಮೃಗನೇತ್ರೆಯಡಿದಳಿರ್ಗಳಿಗೆ ।
ಮಿಗೆ ಮೆಯ್ಯಿಕ್ಕಿ ಬೇಗದೊಳೆದ್ದು ಕೈಗಳ ಮುಗಿದು ನಿಂದನು ಭೀತಿಯಿಂದ ॥ ೯೪

ಬಂದ ಕಾರ್ಯವನೊರೆ ಕಂದ ಕಾಟಣ್ಣ ನೀನೆಂದಱಿಯದವೊಲಾ ನೀಱಿ ।
ಮಂದಹಾಸನದಿಂದ ಕೇಳಲವನು ಭೀತಿಯಿಂದ ಬಿನ್ನವಿಸಿದನಿಂತು ॥ ೯೫

ಅಮ್ಮನ ಬಳಿಗೆಯ್ದಿ ಮುಗಿದು ಕೈಗಳ ಬಿನ್ನಹಂ ಮಾಡಿ ನೀನಾ ಚೆಂಡ ।
ಘಮ್ಮನೆ ಕೊಂಡುಬಾರೆಂದೆನ್ನನಟ್ಟಿದ ನಿಮ್ಮ ಕುಮಾರ ರಾಮಯ್ಯ ॥ ೯೬

ಬಂದೆ ನಾನದಱಿಂದ ನಿಮ್ಮಡಿಗಳ ಬಳಿಗಿಂದುವದನೆ ಚೆಂಡ ಕೊಡಿಸು ।
ಕಂದ ರಾಮನ ಕಂತುಕಕೇಳಿ ನಿಂದಿದೆಯೆಂದು ಬಿನ್ನವಿಸಲಂದವನು ॥ ೯೭

ಬಳಿಕ ಕರೆದು ಬೇಗದಿಂ ಸಂಗಿ ಮೊದಲಾದ ಕೆಳದಿಯರನು ಕಂತುಕವ ।
ತಳವದರಿಸಿ ತರವೇಳ್ದಾ ತರಳಾಕ್ಷಿ ಕಳುಪಿದಳುದ್ಯಾನದೆಡೆಗೆ ॥ ೯೮

ಪೋಗಿ ಮತ್ತೊಂದೆಡೆಯೊಳು ಪೊಳ್ತುಗಳೆದತಿ ವೇಗದಿಂದವರೆಯ್ತಂದು ।
ಆಗಳಿರದೆ ಬಗೆಯಱಿದು ಬಿನ್ನವಿಸಿದರಾ ಗರುವೆಯೊಳಿಂತೆಂದು ॥ ೯೯

ಅರಸಿದೆವಮ್ಮ ಲತಾಮಂಟಪಗಳ ಮಱೆಯೊಳು ನಾಗವಲ್ಲಿಗಳ ।
ತರುಗಳೊಳಸುಗೆಯೆಡೆಗಳೊಳಾ ಕಂತುಕ ಗುಱಿಯಾದುದಿಲ್ಲೆಮ್ಮ ಕಣ್ಗೆ ॥ ೧೦೦

ಎನಲದು ಕಪಟವೆಂದಱಿದು ಕಾಟಣ್ಣನು ವನಿತೆಯೊಳೊರೆದನಿಂತೆಂದು ।
ಜನನಿ ತನುಜರೊಡನೇತಕಿನಿತು ಬಲುಬಿನದ ತರಿಸುಕೊಡು ಚೆಂಡ ॥ ೧೦೧

ಮಕ್ಕಳೊಡನೆ ಮಾಯಾವಿತನವಿದಮ್ಮ ತಕ್ಕುದೇ ತಾತನರ್ಧಾಂಗಿ ।
ಉಕ್ಕೆವವನು ಬಿಟ್ಟು ಚೆಂಡು ತರಿಸಿಕೊಟ್ಟು ಧಿಕ್ಕನೆ ಕಳುಹೇಕೆ ತಡಹು ॥ ೧೦೨

ಎಂಪೆನೆ ನಗುತ ನುಡಿದಳು ಚೆಂಡಿದೆ ಚಿಕ್ಕಂದು ಕಂಡುದು ಮೊದಲಾಗಿ ।
ಕಂದ ರಾಮನ ಕಂಡುದಿಲ್ಲ ನಾನವನನು ತಂದು ಕಾಣಿಸು ನೀನೆಂದು ॥ ೧೦೩

ಕಿಱುಗೂಸಿನೊಳಗಾನು ನೋಡಿದುದಲ್ಲದೆ ನೆಱೆದ ಬಳಿಕ ರಾಮನನು ।
ಕುಱುಹನಱಿಯೆನು ನಿನ್ನಾಣೆ ನೀನವನ ತಂದೆಱಗಿಸು ನನ್ನಡಿಗಳಿಗೆ ॥ ೧೦೪

ಮಾತೆಯು ಬಳಿಗೆ ಮಕ್ಕಳಿಗೆ ಬಹುದಕೇಕೆ ಭೀತಿ ಕಾಟಣ್ಣ ರಾಮನನು ।
ಪ್ರೀತಿ ಕೈಮಿಗೆ ಕರೆತಂದೆನ್ನ ಕಾಣಿಸೆಂದಾ ತರಳಾಕ್ಷಿ ನುಡಿದಳು ॥ ೧೦೫

ಮಾತೆಯು ಬಳಿಗೆ ಬಾರದೆ ರಾಮ ತಾನಗ್ರಜಾತನನಟ್ಟಿದನೆಂಬ ।
ಮಾತ ಹೊಱುವನಲ್ಲದಿದಱಿಂದ ತನಗೆ ವಿಖ್ಯಾತಿಯುಂಟೇ ಲೋಕದೊಳಗೆ ॥ ೧೦೬

ಅಡಿಗಳಿಗೆಱಗಿ ಬೀಳ್ಕೊಂಡವಳಾಡಿದ ನುಡಿಗಳಿಗಾನಂದಿಸುತ ।
ನಡೆದನನುಜನೆಡೆಗವನಿತ್ತಲತ್ತಲಾ ಮಡದಿಯಾಟವನೇನನೆಂಬೆ ॥ ೧೦೭

ಕೆಲದ ಕೆಳದಿಯರನೊಂದೊಂದು ನೆವದಿಂದ ತೊಲಗಿ ಪದ್ಮಪೀಠದೊಳು ।
ಒಲಿದು ಮಂಡಿಸಿ ಬಾಗಿಲ ಮುಂದೆ ಸಂಗಿಯ ನಿಲ್ಲಿಸಿ ನೋಡಿಸುತ ರಾಮನನು ॥ ೧೦೮

ತಾತನಿಲ್ಲದ ಮನೆಗೇತಕೆಂದೆಂಬನೊ ಕಾತರಿಸದೆ ಕದಲುವನೊ ।
ನೀತಿಯಲ್ಲಂತಪುರಕೆ ಪೋಪುದೆಂಬನೊ ಭೀತಿಯಿಲ್ಲದೆ ಬೇಗ ಬಹನೊ ॥ ೧೦೯

ಬಾರದಿರನು ರಾಮನಿಲ್ಲಿಗೆ ದೇವಿಯರಾರಾಧನೆ ಕೈವಿಡಿದು ।
ತಾರದಿರದು ರಾಮನನೆಂದೆದೆಯನಾ ನಾರಿ ಬಲ್ವಿಡಿದಿರ್ದಲ್ಲಿ ॥ ೧೧೦

ಇಂತಿರಲವಳಿತ್ತಲತ್ತ ಕಾಟಣ್ಣನೋರಂತೆ ರಾಮನ ಬಳಿಗೆಯ್ದಿ ।
ಸಂತಸಮಿಗೆ ಪೇಳಿದನಾ ರಾಯನ ಕಾಂತೆ ನುಡಿದ ಮಾತುಗಳನು ॥ ೧೧೧

ಮಾತೆಯ ಚರಣಕೆಱಗಿ ಚೆಂಡನಾನತಿಭೀತಿಯಿಂ ತಾರದೆ ನಿನ್ನ ।
ಆತುರದಿಂದಟ್ಟುವುದು ನನಗದು ದುರ್ನೀತಿಯಲ್ಲವೆ ಕೇಳಣ್ಣಾ ॥ ೧೧೨

ಎಂದು ನುಡಿವುತಗ್ರಜಾತಗೆ ಬೇಗದಿಂ ಬಂದರಮನೆಯ ಬಾಗಿಲೊಳು ।
ನಿಂದಿರವೇಳ್ದೊಡವಂದರನತಿಮುದದಿಂದೊಳಪೊಕ್ಕನಾ ರಾಮ ॥ ೧೧೩

ಕಂಡನೊಯ್ಯನೆ ರೂಪುಗೊಂಡ ಕುಸುಮಕೋದಂಡನ ಕುಲದೇವತೆಯ ।
ಮಂಡೆವಾಗಿಸುವ ರೂಪಿನ ಮಾನಿನಿಯನಾಖಂಡಲಸುತ ವೀರರಾಮ ॥ ೧೧೪

ಕಾಣುತ ಕಾಲ್ಗೆ ಮಣಿಯಲಾ ರಾಮನ ಮಾಣದೆ ಬಿಗಿಯಪ್ಪಿಕೊಂಡು ।
ಪ್ರಾಣಬಂದಂತೆ ಪೆರ್ಚಿದಳಾ ರಾಯನ ರಾಣಿ ಮನದೊಳಗೇನೆಂಬೆ ॥ ೧೧೫

ಸಾಲಿಕ್ಕಿದವು ಸಾತ್ವಿಕೋದಯಗಳು ಮೆಯ್ಯಮೇಲೆ ಮನದೊಳಾನಂದ ।
ಮೇಲೆ ಮೇಲಿರದೆ ಮೆಯ್ದೋಱುತವಳನಾಗಳೋಲೈಸಿದುದಿಂದ್ರಪದವಿ ॥ ೧೧೬

ಪೆತ್ತವಳಿವಳಾಗಬೇಕೆನ್ನನು ರಾಯನುತ್ತಮನಾರಿಯೆಂದಿವಳ ।
ಒತ್ತಿನೊಳಿರಲೀಯದೆ ಹರಿಹರದೇವಿಗಿತ್ತನೆಂದವನು ಬಗೆದನು ॥ ೧೧೭

ಬಳಿಕ ವಿನಯವಚನಗಳಿಂದವನ ನಳಿನವದನೆ ಸತ್ಕರಿಸಿ ।
ಒಳಗುಗಾಣಿಸಿಕೊಳ್ಳದೊಲಿದು ಸಿಂಹಾಸನದೊಳಗೆ ಕುಳ್ಳಿರಿಸಿ ಮೇಲವಳು ॥ ೧೧೮

ಕಿವಿವೇಟ ಕಣ್ವೇಟ ನುಡಿವೇಟ ಮೂಱರ ಸವಿ ತಲೆಗೇಱೆ ನೋಡಿದಳು ।
ಕೇಳಿದ ಕಿವಿವೇಟ ನೋಡಿದ ಕಣ್ವೇಟ ಸೂಳುನುಡಿಯ ಸವಿವೇಟ ॥ ೧೧೯

ಆರು ಬಲ್ಲರು ನಾರಿಯರಂತರಂಗದ ಹೊರೆಯನಾ ರಾಮನವಳ ।
ಮಾರವಿಕಾರವನರಿಯದೆ ಮೃದುಮಧುರಾರವದಿಂದ ನುಡಿದನು ॥ ೧೨೦

ಭಾವಭೇದವನಾನದಿವನವಳ ಸಾತ್ವಿಕಾವಳಿಯನು ಕಂಡವನು ।
ಭಾವಿಸಿದನು ತನುಜಾವಲೋಕನದಿಂದ ತೀವಿದಾನಂದವೆಂದದನು ॥ ೧೨೧

ಸಂದ ಮಾಯಾವಿರಹಿತ ವಿನಯೋಕ್ತಿಗಳಿಂದ ನುಡಿದ ಬಳಿಕವನು ।
ನಿಂದಿದೆ ಕಂತುಕಕೇಳಿ ಬೇಗದೊಳಮ್ಮ ತಂದುಕೊಡಿಸು ಚೆಂಡನೆನಲು ॥ ೧೨೨

ಕಂತುಕ ಕೇಳಿಗೆ ನೀನೆಲ್ಲಿ ಪೋದಪೆ ಕಂತುಸನ್ನಿಭದಿವ್ಯಾಂಗ ।
ಕಂತುಕೇಳಿಯನೀನೆಸಗೆನ್ನೊಳೆಂದರ್ಥಾಂತರದಿಂದವಳುಸುರೆ ॥ ೧೨೩

ಆ ವಕ್ರವಚನವನಾಲಿಸುತಂಬುದರಾವವ ಕೇಳ್ದ ಕೇಸರಿಯ ।
ಭಾವವನಂಗೀಕರಿಸಿ ಗದ್ದುಗೆಪೊಯ್ದಾ ವೀರನೆದ್ದನು ಕೋಪದಲಿ ॥ ೧೨೪

ಬೆರಲ್ಗಳನಿಕ್ಕಿ ಕಿವಿಗಳಿಗೆ ಶಿವಶಿವ ಪರಮಪಾತಕ ಬಂದುದೆನುತ ।
ಭರದಿಂದ ಪೋಪವಸರದೊಳಗಾಯ್ತೊಂದು ಧರೆಯೊಳಿಲ್ಲದ ವಿಚಿತ್ರ ॥ ೧೨೫

ನುಡಿ ತಡಬಡಿಸೆ ನುಣ್ದೊಡೆ ದಡದಡಿಸೆ ಮೆಯಿ ನಡನಡ ನಡುಗಲೆಯ್ತಂದು ।
ಕಡುಕಾತುರದಿಂದ ಪಿಡಿದಳಿವನನಾ ಮಡದಿ ಮೇಲಿಕ್ಕಿ ಬೇಗದೊಳು ॥ ೧೨೬

ಬಿಡು ಪಾತಕಿಯೆಂದು ಜಡಿದು ಬಿಡಿಸಿಕೊಂಡು ಬಿಡದೆಯ್ದುವನಿತರಿತೊಳವಳು ।
ಕಡುವೇಗದಿಂ ಮತ್ತೆ ಬಂದು ಮುಂದಲೆಗೆ ಕೈದುಡುಕಿದಳಾ ನೃಪಸುತನ ॥ ೧೨೭

ದಡಿಗರಕ್ಕಸಿಯರಂತಾ ನೀಱಿತಯರಾಳಿಯರೊಡನೇಳ್ತಂದು ಬೇಗದೊಳು ।
ಜಡಿದು ಕೆಡಪಲೇಳ್ದು ಬಂದು ಕಾಮುಕಿ ತೊಡಕಿ ಪಿಡಿದಳು ಮತ್ತವನ ॥ ೧೨೮

ಒಡಬಡಿಕೆಯನುಡಿಗಳ ಕೇಳದಿರೆ ಮೇಲೊಡನೀ ಪರಮಪಾತಕಿಯ ।
ಬಡಿದಿಟ್ಟು ಪೋಗುವೆನೆನುತ ರಾಮನು ನುಡಿದನಿಂತೆಂದವಳೊಡನೆ ॥ ೧೩೦

ಪಂಚಮಹಾಪಾತಕವೆಂಬುದೀ ದೋಷದಂಚಲಾಂತಕೆ ಪಾಸಟಿಯೆ ।
ಚಂಚಲತನ ಬೇಡ ಹೆತ್ತ ಮಗನೊಳು ಪಳಂಚದೆ ಬಿಡು ತಂದೆಯರಸಿ ॥ ೧೩೧

ಚಿಕ್ಕಮ್ಮ ನೀ ಹೆತ್ತ ಮಗನಿಗೆನಗೆ ಪರರೊಕ್ಕಲು ಹರಿಯಮ್ಮನಾಣೆ ।
ಅಕ್ಕ ಮಾರಮ್ಮನೋಪಾದಿಯೊಳೆನ್ನ ಪಿಂತಿಕ್ಕಿ ಪುಟ್ಟಿದ ಪೆಣ್ಗಳವರು ॥ ೧೩೨

ಮನದೊಳೆಣಿಸಿದೆನಾದೊಡೆ ಕನಸಿನೊಳೊಮ್ಮೆ ನೆನೆದೆನಾದೊಡೆ ಪರವೆಣ್ಣ |
ಜನನಿ ನಿನಗೆ ಕಂಪಿಲಜನಪತಿಗಾನು ಜನಿಸಿದವನೇ ಜಾರಜನು || ೧೩೩

ಧುರದೊಳಡಿಯು ಹಿಂದಕೆ ತೆಗೆದಳಿದೀ ಧರೆಯೊಳಡಹನೇ [?] |
ಸುರವಧುಗಳನೊಲ್ಲೆ ಪರನಾರೀಸಹೋದರನೆಂಬ ಬಿರುದ ಬಿಸುಡೆನು || ೧೩೪

ಕೊಡುವರು ಹರಣವ ಬಿಡುವರೈಶ್ವರ್ಯವ ನುಡಿಯರನೃತವ ಸಜ್ಜನರು |
ಕಡುಗಲಿಗಳು ಕೇಳವರು ದುರ್ಮಾರ್ಗದೊಳಡಿಯಿಡರಮ್ಮ ನಿನ್ನಾಣೆ || ೧೩೫

ಎನೆ ಕಲ್ಲುಮಾಳಿಗೆ ಕರಗದಂತವಳೆದೆ ನೆನೆಯದಾ ನುಡಿಗೆ ಮತ್ತವಗೆ |
ಮನವಿಕ್ಕಿದಳು ಮೋಹಿಸಿದ ಪೆಣ್ಣೆದೆಗೊಂಡವನ ಬಿಡುವಳೆ ಬಱುನುಡಿಗೆ || ೧೩೬

ನೀತಿಶಾಸ್ತ್ರವ ಕೇಳಬಂದೆನೆ ನಿನ್ನೊಳಗೇತಕೀ ಧರ್ಮದ ಜಡತೆ |
ಓತೊಡಗೂಡೆನಲೊದಱುಟ್ಟನು ಬಿಡು ಪಾತಕಿ ಹೋಗೆಂದೆನುತ || ೧೩೭

ಹದಿನಾಲ್ಕು ವರುಷದ ಹರೆಯದೊಳಾ ರಾಮನೊದವಿ ಪಿಡಿದು ತಾಟಕಿಯ |
ಒದೆದು ನಡೆದ ತೆಱದಿಂದೀ ರಾಮನು ಸುದತಿಯನೊದಱು ನಡೆದನು || ೧೩೮

ಪೋಗಿ ಚೆಂಡಾಟದ ಪರಿಜನಗಳನತಿವೇಗದಿಂ ಕರೆದು ಬೀಳ್ಕೊಟ್ಟು |
ಆಗಳೆಯ್ದಿದನರಮನೆಯನಂತಿಂತಾಗುತ ಗುಣಮಣಿಭೂಷಣನು || ೧೩೯

೧೨

ಅತ್ತ ಕಂಪಿಲ ಖಗಮೃಗಗಳ ಹರಣವ ಹೊತ್ತಡಗಿಸಿ ಯಮಪುರಿಗೆ ।
ಚಿತ್ರೇಶ್ವರಿಯ ನೆನೆದು ಹೊಸಮಲೆದುರ್ಗದತ್ತ ಮರಳಿದನಂದಿರದೆ ॥ ೧

ನರಿ ಮರೆ ಹುಲಿ ಹುಲ್ಲೆ ಕಡವೆ ಕಾಳ್ಬೆಕ್ಕು ಮುಂಗುಲಿ ಮುಚ್ಚಮೊಲ ತರುಮಂಗಿ ।
ಕರಡಿ ಕಾಡೆಮ್ಮೃಗಳನು ಹೊತ್ತು ನಾಡುಗಳಿರದೆಯ್ದೆ ನಡೆದನಾ ರಾಯ ॥ ೨

ಗಿಳಿ ಗೀಜಗ ಸೋಗೆ ನವಿಲು ಸರಗೆ ಹಾವುದಲೆಗ ಹರಡೆ ಹಂಗ ಹಸುಬ ।
ಕೊಳರ್ವಕ್ಕಿ ಕಾಡೆ ಕನ್ನವಿಲ್ಗಳ ಹೊಱೆ ಮುಂದೆ ತಳರೆ ತಡೆಯದೆಯ್ದಿದನು ॥ ೩

ಘಳಿಗೆವರುಷ ದಿನ ಯುಗವಾಗಿ ಕಾಲವ ಕಳಿದು ಕಂಪಿಲನೃಪ ತನ್ನ ।
ನಳಿನವದನೆಯ ಮೇಲಣ ಮೋಹದಿಂ ಬಂದು ಪೊಳಲ ಪೊಕ್ಕನು ಬೇಗದೊಳು ॥ ೪

ಬಳಿಕ ಕರೆದು ಕರೆದನವನೀಶ್ವರರನು ಕಳುಪಿ ಕಂಪಿಲ ತನ್ನನಿಯಳ ।
ನಿಳಯವನಿರದೆಯ್ದಿದನಾಕೆಯ ಮುಖನಳಿನವ ನೋಡುವಾಸೆಯೊಳು ॥ ೫

ಬಾಡಿದ ಮೊಗದ ಬಳಲಿದಂಗದ ಬಿಡದೋಡುವ ಸುಯ್ಯ ಕಣ್ಬನಿಯ ।
ಈಡಾಡುವ ನಿಡುಗಣ್ಣ ನೀಱೆಯನಂದು ನೋಡಿದನಾ ನರನಾಥ ॥ ೬

ಎನ್ನ ಕಣ್ಮನವನಿರದೆ ಸೂಱೆಗೊಂಡ ಸಂಪನ್ನೆ ತಾನಲ್ಲದೆ ಬೇಱೆ ।
ಚೆನ್ನೆಯರೆನಗಿಲ್ಲಿವಳಾರಿಂದೀ ಬನ್ನವನಿರದೆಯ್ದಿದಳೋ ॥ ೭

ಎಂದು ನಾನಾ ವಿಕಲ್ಪವ ಮನದೊಳಗವನಂದು ಭಾವಿಸುತ ತನ್ನವಳ ।
ಮುಂದೊಯ್ಯನೆ ಬಂದು ನಿಂದು ನುಡಿದನಿಂತೆಂದಾ ಹರಿಣಾಕ್ಷಿಯೊಡನೆ ॥ ೮

ಆನೊಳಗಾಗಿರೆ ಕೇಳಲೆ ಚಂದ್ರನಿಭಾನನೆ ನಿನ್ನ ಮಾತುಗಳ ।
ಮಾನಸದೊಳು ಮಱಲಣ್ಮನಿದಾರಿಂದೀ ನೋವು ಬಂದುದೊ ನಿನಗೆ ॥ ೯

ಕಡಿವಡೆದುರುಗಿಯಂತಿದೆ ಕಟಿಸೂತ್ರ ನಿನ್ನುಡೆಯಿಂದ ಮುಱಿದು ಬಿದ್ದಿಳೆಗೆ ।
ಮಡದಿರನ್ನವೆ ಮಱೆಮಾಡದೆ ಪೇಳೆಂದು ತಡೆಯದವಳ ಕೇಳಿದನು ॥ ೧೦

ಪಲ್ಲವೆಳಗು ಪಸರಿಸೆ ದೆಸೆದೆಸೆಗಾ ಪಲ್ಲವಾಧರೆ ಪುಸಿಗಳನು ।
ನಿಲ್ಲದೆ ಗಂಟಿಕ್ಕಿ ನುಡಿದಳಿಂತಾ ಭೂವಲ್ಲಭಗತಿರೋಷ ಪುಟ್ಟೆ ॥ ೧೧

ಹೇಳಬಾರದು ಹೇಳದೆ ಮಱಸಿದೊಡೆಮ್ಮ ಮೇಲೆ ನಿಲುವುದಪಕೀರ್ತಿ ।
ಕೇಳಾದರೆ ನಿನ್ನ ಹಿರಿಯಾಕೆಯ ಮಗನಾಳೋಚಿಸಿದ ಕಾರ್ಯವನು ॥ ೧೨

ಚೆಂಡಾಟಕೆಂದೀ ರಾಜಧಾನಿಯ ಲಂಡಪುಂಡರೆಲ್ಲರ ಕೂಡಿಕೊಂಡು ।
ಬಂಡುಗೆಲೆವುತ್ತೆಮ್ಮ ಪೌಳಿಯ ಹೊಱಗೆ ಮುಂಕೊಂಡಾಡುತಿರ್ದನುಬ್ಬಿನೊಳು ॥ ೧೩

ಇರಲಾ ಸಮಯದೊಳೊಂದು ಮುತ್ತಿನ ಚೆಂಡು ತರಹರಿಸದೆ ಬಾನಿಂದ ।
ಧರೆಗೆ ಕೆಡದ ಶಶಿಮಂಡಲದಂತೆ ಮುಂದುರು ಬೀಳೆ ಕಂಡೆತ್ತಿಕೊಂಡದನು ॥ ೧೪

ಮಗ ರಾಮನಿಡೆ ತಪ್ಪಿಬಿದ್ದಿತೆಂದೆನೆ ಮುತ್ತು ಬಿಗಿದ ಚೆಂಡಿನೊಳಾಡಿದವರು ।
ಜಗದೊಳೆಲ್ಲಿಯಚ್ಚರಿಯಿದೆನುತ ತಾನು ಬಗೆವುತಿರ್ದೆನು ಬೆಱಗಾಗಿ ॥ ೧೫

ಹಸುಳೆಗಳಿಡರಿದಱಿಂದ ಲಗ್ಗೆಯನಿದು ಹುಸಿ ರಾಮನ ಚೆಂಡಲ್ಲ ।
ಹೊಸ ಬಗೆಯಿದು ಕಾಣಬಾರದೆನುತ ಚಿಂತಿಸುತಿರ್ದೆನಾ ಸಮಯದೊಳು ॥ ೧೬

ತಳುವದಾಱೇಳು ಬಾಗಿಲ ಕಳೆದಾ ರಾಮನಳುಕದೆ ಬಂದೆನ್ನ ಮುಂದೆ ।
ನಿಲಲಾನು ಮುಂಗುಱುತಱಯದೆ ಸಖಿಯರಿಂ ತಿಳಿದಾತ್ಮಜನೆಂಬುದನು ॥ ೧೭

ಬಂದ ಕಾರ್ಯವನೊರೆ ಕಂದ ಕುಳ್ಳಿರು ಬಾರೆಂದು ಕರೆಯಲವನೆನ್ನ ।
ನಿಂದೆವೆಯುಲುಕ ದಿಟ್ಟಿಸುತಿರಲಾನು ಸಂದೇಹಿಸಿದೆನೆದೆಯೊಳಗೆ ॥ ೧೮

ಇರಬಾರದಿನ್ನಿವನಿದಿರಿನೊಳೆಂದೋಸರಿಸಿ ಕೊಂಡೇಳ್ವನಿತರೊಳು ।
ಇರದೆ ಪಿಡಿದನೆನ್ನನಳುಕದೆ ನಿನಗೆ ಕೊಕ್ಕರಿಸದ ಪರಮಪಾತಕಕೆ ॥ ೧೯

ಇಟ್ಟಗೆ ಪೋದುದೆಂಬಂತೆ ಲೋಕಕೆ ನೆವವಿಟ್ಟರಮನೆಗೆ ಕಂತುಕವ ।
ನೆಟ್ಟನೀಡಾಡಿ ಬೇಡುವ ನೆವದಿಂ ಬಂದು ಮುಟ್ಟಿ ಪಿಡಿದನವನೆನ್ನ ॥ ೨೦

ಕ್ರೀಡಾಕಂತುಕವ ಬಿಟ್ಟದಱಿಂದಾಡಿದರುಂಟೇ ಲಗ್ಗೆಯನು ।
ನೋಡು ನೊಂಡೆಂದವಳು ಮುತ್ತಿನ ಚೆಂಡನೀಡಾಡಿದಳು ಮುಂದವನ ॥ ೨೧

ಹುಸಿಯಲ್ಲ ತಪ್ಪದಿದಹುದಿವಳಿಗೆ ನೋಹಿಸಿ ರಾಮನೀ ಚೆಂಡಾಟವನು ।
ಎಸಗಿದನೆಂದೆಣಿಸಿದನಾ ಪಾಣ್ಬೆಯ ಪುಸಿನುಡಿಯನು ನಿಜವೆಂದು ॥ ೨೨

ನೆನೆಯಬಾರದು ನೆನೆದೊಡೆ ನಾಲಗೆಯ ತುದಿಗೊನೆಗೆ ಬಾರದು ಬಂದಡೊಸೆದು ।
ಅನುವದಿಸುವಡೆ ಬಾರದ ಪುಸಿಗಳನಾ ವನಿತೆ ಗಂಟಿಕ್ಕಿ ನುಡಿದಳು ॥ ೨೩

ನುಡಿನುಡಿಯೆಂದು ಪುಸಿಯನುರೆ ಗಂಟಿಕ್ಕಿ ನುಡಿವುತಿರ್ದಳು ರಾಯನದನು ।
ಬಿಡದಾಲಿಸುತಿರ್ದನೊಲಿದ ನಲ್ವೆಂಡಿರ ನುಡಿಗೇಳದ ವೀರರುಂಟೇ ॥ ೨೪

ಶಶಿಯಿಂದಗಲಿದ ರೋಹಿಣಿಯ ಬಂದಾ ರಾಹು ಮುಸುಕಿ ಪಿಡಿವ ತೆಱದಿಂದ ।
ಅಸಹಾಯಶೂರ ನೀನಿಲ್ಲದಾ ವೇಳೆಯೊಳೊಸೆದು ಪಿಡಿದನವನೆನ್ನ ॥ ೨೫

ಇನ್ನುಳಿಯದೆ ಬದುಕಿದೆನಾದೊಡೆ ರಾಯ ನನ್ನಂಥ ಜೀವಗಳ್ಳೆಯರು ।
ಇನ್ನು ಮುನ್ನಿಲ್ಲ ಲೋಕದೊಳೆಂದಾ ದಿಟ್ಟೆ ತನ್ನ ವಲ್ಲಭಗೆ ನುಡಿದಳು ॥ ೨೬

ಅಳುತ ದ್ರುಪದಸುತೆ ಬಂದು ಕೀಚಕನುಪಟಳವನೊರೆಯೆ ವಾಯುತನುಜ ।
ತಳೆದು ಪೆಣ್ಬರಿಜನವನ ಕೊಂದವಳೆದೆಯಳಲಾಱಿಸಿದುದನಱಿಯಾ ॥ ೨೭

ಈ ತೆಱದಿಂದ ನುಡಿದ ಕಾಂತೆಯ ಪುಸಿವಾತುಗಳನು ನಿಜವೆಂದು ।
ಆತನಱಿಯದೆ ನಂಬಿದನು ನಂಬದರಾರೋ ತೆಳೆವೆಂಡಿರ ಸಟೆನುಡಿಯ ॥ ೨೮

ಹೊಗೆಯೆ ಬಳಿಕ ಮೊಗ ನೆಗೆಯೆ ನೆಟ್ಟನೆ ಮೀಸೆ ಮಿಗೆ ಕೌರಿಡೆ ಮೆಯ್ಯ ನವಿರು ।
ತೆಗೆದೋಡಿ ಪೋಗೆ ವಿವೇಕ ಕೋಪಾನಲನೊಗೆದುದೆದೆಯೊಳಾ ನೃಪಗೆ ॥ ೨೯

ಫಲವ ನುಡಿದು ಫಲವೇನು ಪಾಣ್ಬನ ತಲೆಯ ಪೊಯ್ಸುದೊಡೀಗಳಸುವ ।
ತೊಲಗಿಪೆನಲ್ಲದಿರ್ದೊಡೆ ನಿನ್ನ ಮೋಹದ ಲಲನೆಯೇ ನಾನವನವಳು ॥ ೩೦

ಸಾಯಬೇಕವನಲ್ಲದೊಡಾನು ಬಿಡಬೇಕು ಕಾಯವನಿರ್ವರುಳಿವುದು ।
ನ್ಯಾಯವಲ್ಲಿದು ಬಲುಗೊಱತೆ ನಿನಗೆ ಕಂಪರಾಯ ಕೇಳೆಂದು ನುಡಿದಳು ॥ ೩೧

ಇರಬೇಕೆ ರಾಮ ನಿನಗೆ ನನ್ನ ಕೊಲಿಸಾನಿರಬೇಕೆ ರಾಮನ ಕೊಲಿಸು ।
ಇರಿಸಿಕೊಂಬುದು ನಮ್ಮಿರ್ವರ ನಿನಗೆ ಪರಿಹಾಸ ಪರರಾಯರೊಳಗೆ ॥ ೩೨

ಎಂದು ನುಡಿದ ತನ್ನಿಂದೀವರಾಕ್ಷಿಯ ನೊಂದ ಮನವ ಸಂತವಿಟ್ಟು ।
ಬಂದನು ಮೊಗಸಾಲೆಗೆ ಕೋಪಾಟೋಪದಿಂದ ಮೈಮಱೆದು ಕಂಪಿಲನು ॥ ೩೩

ಪಡೆಮಾತೇನು ಪಾತಕತೊಂಡನ ಕೆಡಹಿ ಕೊರಲ ಕೊಯಿಸುವೆನು ।
ನುಡಿದಿನ್ನು ಫಲವೇನೆನುತ ಮಂತ್ರಿಯನವನೊಡನೆ ಕರೆಯಲಟ್ಟಿದನು ॥ ೩೪

೧೩

ನೀತಿನಿಪುಣ ನಿಖಿಲೋಪಾಯನಿರತನಭೀತನಮಲವಂಶಜನು ।
ಭೂತಹಿತನು ನಿಜಪತಿಕಾರ್ಯನಿಷ್ಠವಿನೀತನೈದಿದನು ಬೈಚಪ್ಪ ॥ ೧

ದಾನಿ ದಯಾಪರನವದಾತಕೀರ್ತಿನಿದಾನಸುತ್ತಮಗುಣಯುತನು ।
ದೀನೋದ್ಧರಣಧುರೀಣನೆನಿಪ ಸತ್ಪ್ರಧಾನ ಬಂದನು ಬೈಚಪ್ಪ ॥ ೨

ಬಂದ ಮಂತ್ರಿಗೆ ತನ್ನ ತರಳಲೋಚನೆ ತನಗೆಂದ ಮಾತಿನೊಳೊಂದಿನಿತು ।
ಕುಂದದೆ ನುಡಿದು ತನಗೆ ತಲೆದೂಗಾಟ ಕುಂದದೆ ಪೇರ್ಚಲಾ ನೃಪತಿ ॥ ೩

ಪರನಾರೀ ಸಹೋದರನೆನಿಸಿಕೊಂಬ ಬಿರುದ ಬಿಟ್ಟನೆ ರಾಮನಾಥ ।
ಧರೆಯೊಳಿಲ್ಲದ ಪಾಪವನೆಣಿಸಿದನೇ ಯೆಂದಿರದೆ ತಲೆಯ ತೂಗಿದನು ॥ ೪

ತಲೆಯ ತೂಗಾಟವಿನ್ನೇತಕೆ ಬೈಚಪ್ಪ ಬಲವನೆಲ್ಲವ ಕೂಡಿಕೊಂಡು ।
ನಿಳಯುವ ಮುತ್ತಿ ಪಿಡಿದು ತಂದು ರಾಮನ ತಲೆಯ ಪೊಯ್ಸೆಂದು ಪೇಳಿದನು ॥ ೫

ಅರಸುಗಳವಿವೇಕಿಗಳೆಂಬುದಕುದಾಹರಣವಾದನು ಕಂಪಿಲನು ।
ಕರುಣವೆಳ್ಳನಿತಿಲ್ಲದೆ ತನ್ನ ಕುವರನ ಹೆರಣಕೆ ಮುನಿದನಱಿಯದೆ ॥ ೬

ಕೊಲಿಸು ಕಾಟಣ್ಣನ ಶೆಟ್ಟಿಯಲಿಂಗನ ಕೊಲಿಸು ಹಡಪದ ಬಲ್ಲುಗನ ।
ಕೊಲಿಸು ಕಾಳಂಜಿಯ ಕಂಪನನೆಂದು ಕಂಪಿಲನಾಮಾತ್ಯಗೆ ಪೇಳಿದನು ॥ ೭

ಎಣಿಸಿದನಿರದೆ ಮೇಲಾ ಮಂತ್ರಿಚೂಡಾಮಣಿ ರಾಮನಾಥನಿಂತಪ್ಪಾ ।
ಗುಣದವನಲ್ಲ ದುಷ್ಕರ್ಮದಿಂದವಗನುಗುಣವಾದುದೆಂದು ಮನದೊಳು ॥ ೮

ಮಾತಿದು ಹುಸಿಯಾಗದಿರದು ಕಡೆಗೆ ರಾಮನೀತರದವನಲ್ಲವೆಂದು ।
ಆತನೆಣಿಸಿದನಿಂತಪ್ಪ ಸುಮಂತ್ರಿಯುಳ್ಳಾತಗುಂಟೇ ಕಾರ್ಯಹಾನಿ ॥ ೯

ಬಲ್ಲಾಳರಾಯನ ಕೂಡೆ ಜಗಳ ವೋರಗಲ್ಲವನೊಡನೆ ಹೋರಾಟ ।
ಬಲ್ಲಿದ ನೇಮಿಯ ಹಗೆತನವೀ ರಾಮನಿಲ್ಲದೊಡಿಲ್ಲೀ ದುರ್ಗ ॥ ೧೦

ಎಂದು ಬಗೆವುತಿರಲಾ ಮಂತ್ರಿ ರಾಯನಿಂತೆಂದನಿನ್ನೇಕೆ ಬೈಚಪ್ಪ ।
ಸಂದೇಹ ನಿನಗೆ ರಾಮನ ಕೊಂದು ತಲೆಯನು ತಂದಲ್ಲದೇಳೆನಿಲ್ಲಿಂದಾ ॥ ೧೧

ಉದ್ರೇಕದಿಂದ ಕಂಪಿಲನೃಪನಾ ಸ್ವಾಮಿದ್ರೋಹಿಯು ನೀ ಕೊಲಿಸೆಂದು ।
ಮುದ್ರಿಕೆಯನು ತೆಗೆದಿತ್ತೇಳೇಳೆಂದುಪದ್ರವಿಸಿದನು ಮಂತ್ರಿಯನು ॥ ೧೨

ಬಳಿಕ ನುಡಿದನಾ ಮಂತ್ರಿಶಿರೋಮಣಿ ತಿಳಿದು ಮಂತ್ರದ ಹೊರಿಗೆಯನು ।
ಕಲಹವ ಮಾಡಿ ರಾಮನ ಕೊಲುವುದು ಕಾರ್ಯದೊಳಗಲ್ಲವೆಂದು ರಾಯನಿಗೆ ॥ ೧೩

ಬಿನ್ನವಿಸುವಡೆ ಬೆದಱುತಿದೆ ಮೆಯ್ ರಾಯ ನಿನ್ನಡಿಯಾಣೆ ನಾನವನ ।
ಗನ್ನಗದಿಕಿನೊಳಱಿಯದಂತೆ ಕೊಲಿಸುವೆನಿನ್ನೇತಕಿದಕೆ ಸಂದೇಹ ॥ ೧೪

ಉಗುರಿಂದ ಪೋಪುದಕೇತಕೆ ಕೊಡಲಿಯ ತೆಗೆವೆ ರಾಮನ ನಾನೊಂದು ।
ಬಗೆಯಿಂದ ಕೊಲಿಸುವೆನೀ ಪರಿ ಬೇಡಿದು ನಗೆಗೆಡೆಯೆಂದು ಪೇಳಿದನು ॥ ೧೫

ಅವನಿಪ ಕೇಳರಮನೆಯ ಮುತ್ತಿಸಿ ನಿನ್ನ ಕುವರನ ಕೊಲಿಪುದುಚಿತವೇ ।
ಕಿವಿಕಿವಿಯಱಿಯದಂತವನ ಕೊಲಿಸುವೆನೀ ಬವರವೇಕೆಂದಾಡಿದನು ॥ ೧೬

ಪೆಂಡಿರ ಪಿಡಿದನನಿದಿರ್ಗೊಂಡು ಕೊಲಲಣ್ಮದಂಡಿಸಿ ಮಱತಯೊಳು ಕೊಲುವ ।
ಬಂಡು ಬೇಡೆನಗೆ ಪಿಡಿದು ಪೊಯ್ಸಿ ತಲೆಯನು ಕೊಂಡುಬಾರೆಂದು ಕೋಪಿಸಿದ ॥ ೧೭

ಅವನಿಗೆ ಪಟ್ಟವ ಕಟ್ಟಿ ನೀನವನಿಂದವನಿಯನಾಳಿಸಬೇಕೇ ।
ಅವನನಿರಿಸಿಕೊಂಡು ಪೊಱಮಡಿಸೆನ್ನನೆಂದವನಿಪ ನೊಂದು ನುಡಿದನು ॥ ೧೮

ಎಂದಿವು ಮೊದಲಾದನೇಕ ನುಡಿಗಳಿಂದ ನೊಂದು ನುಡಿಯಲಾ ಮಂತ್ರಿ ।
ಎಂದನೀಗಳೆ ಪಿಡಿದವನ ತಲೆಯ ಪೊಯ್ಸಿ ತಂದಂಗವನೊಪ್ಪಿಸುವೆನು ॥ ೧೯

ಇಳೆಯಾಣ್ಮ ಚಿತ್ತೈಸಾದೊಡಿನ್ನೇಳೆಂಟು ಘಳಿಗೆಯೊಳಗೆ ನಾನವನ ।
ತಲೆಯ ತಂದಿರಿಸುವೆ ನಿನ್ನ ಮುಂದೆನುತೆದ್ದು ಕಳುಹಿಸಿಕೊಂಡೆಯ್ದಿದನು ॥ ೨೦

ಬರುತ ಬಟ್ಟೆಯೊಳೆದೆಯೊಳಗೆಣಿಸಿದನಾ ಸುರಮಂತ್ರಿನಿಭಮಂತ್ರಿತಿಲಕ ।
ಸುರಲೋಕವ ರಾಮನೆಯ್ದಿದೊಡೆಲ್ಲಿಯ ಧರೆಯೊಡೆತನ ರಾಯಗೆಂದು ॥ ೨೧

ರಾಮನಳಿದನೆಂಬ ಸುದ್ದಿಯ ಸುರತಾಳಭೂಮಿಪ ಕೇಳಿದೊಡೆಮಗೆ ।
ಈ ಮಹಿಯೊಳಗಿರವಿಲ್ಲೆಂದು ಚಿಂತಿಸುತಾ ಮಂತ್ರಿತಿಲಕನೆಯ್ದಿದನು ॥ ೨೨

ಕುಲವನಚೈತ್ರ ಕುಮಾರರಾಮನ ಕೊಂದಿಳೆಯೊಳಾನಪಕೀರ್ತಿಲತೆಯ ।
ಬೆಳೆಯಿಸುವೆನೆ ರಾಯನಿಕ್ಕಿದಾಣತಿಗಾನೊಳಗೆಂದೆಣಿಸಿದನಾ ಮಂತ್ರಿ ॥ ೨೩

ಸಿಂಗಕಲ್ಲದೆ ಕರಿಘಟೆ ಜಾಯಿಲಂಗಳ ಜಂಗುಳಿಗಂಜಿ ಜಾಱುವುದೆ ।
ಅಂಗವ ಬಿಟ್ಟುಳಿದವರಿಗೆ ನೇಮಿಯ ದಂಡು ಹಿಂಗುವುದೇ ರಾಮನಳಿಯೆ ॥ ೨೪

ಚೆಂಡನಡಗಿಪಂತೆ ಬಲುತೌಳಿಗಾಱಿನ ಗಂಡುಗಲಿಯನಡಗಿಪೆನು ।
ಕೊಂಡು ಬಂದಿಳೆಗೆ ಕಾಣಿಸುವೆನು ಸುರತಾಳದಂಡು ಬಂದರೆ ನಾನವನ ॥ ೨೫

ಅಳಿದನಳಿದನೆಂದು ಹುಟ್ಟಿಸಿಸುದ್ದಿಯ ನೆಲಮಾಳಿಗೆಯೊಳಡಗಿಸಿ ।
ನೆಲಹೊರದೆಂಬಂತೆ ಬಂದ ತುರುಕದಂಡ ಕೊಲಿಸಿ ತೋಱುವೆನವನಿಂದ ॥ ೨೬

ಅಂದು ಸ್ವಯಂವರದೊಳಗಿಂದ್ರತನಯನನಂದು ತೋಱಿಸಿದಂತೆ ಕೃಷ್ಣ ।
ಇಂದು ತೋಱಿಸುವೆನು ರಾಮನ ಸುರತಾಳ ಬಂದರೆ ಮುಳಿದೆಮ್ಮ ಮೇಲೆ ॥ ೨೭

ನೆಲಮಾಳಿಗೆಯೊಳಿರಿಸುವೆನು ಕಲಿಗಳ ತಲೆವಣಿ ರಾಮನನೀಗ ।
ಕೊಲಿಸಿದೆನೆಂದು ಹುಟ್ಟಿಸುವೆನು ಮೇಲೆನ್ನ ಬಲುಮೆಯ ತೋಱುವೆನಿಳೆಗೆ ॥ ೨೮

ಅಚ್ಚರಿಯರಸಗೆ ಹರಿಹರದೇವಿಗೆ ಹೆಚ್ಚಳ ರತ್ನಿಯ ಮನಕೆ ।
ಅಚ್ಚಿಗ ಪುಟ್ಟೆ ನೋಡಿದ ಕಣ್ಣವನ ರೂಪನಚ್ಚರಿಪೆನು ಮೇಲಾನು ॥ ೨೯

ಪರಿಮಿತಪರಿಜನಪರಿವೃತನಾ ಮಂತ್ರಿಪರಿವೃಢನತಿವೇಗದಿಂದ ।
ಪರಿಹೃತಪರನಾರಿರಾಮನ ರಾಮನರಮನೆಗೇಳ್ತಂದನಂದು ॥ ೩೦

ಉದಯಾದ್ರಿಯ ಮೇಲೆ ನೆಱೆವೆಳೆನೇಸರಂದವೆ ಸಿಂಹಪೀಠದೊಳೆಸೆವ ।
ಮದನನ ಸಮಕಾರ ಕುವರನಾ ಕಂಡಳು ದೂದವಿ ಬೇಗ ಬಂದು [?] ॥ ೩೧

ಮೊಗವ ನೋಡದ ಮುನ್ನ ತೆಗೆದು ಕೈಗಳನೆತ್ತಿ ಮುಗಿದಭಿಮುಖವಾಗಿ ನಿಂದು ।
ಸುಗಿಯದೆ ನೆಲ್ಲನಾ ರಾಜಸುತನಿಗಾ ಸುಗುಣೆ ಪೇಳಿದಳಿಂತೆಂದು ॥ ೩೨

ಗಂಡರಗಂಡ ಮಿಾಸರಗಂಡ ಚೆಲುವರಗಂಡ ಮಚ್ಚರಿಪ ಮನ್ನೆಯರ ।
ಗಂಡ ನೇಮಿಯ ಗಂಡ ವೀರರುದ್ರನಗಂಡ ಗಂಡ ಬಲ್ಲಾಳಭೂಪತಿಯ ॥ ೩೩

ಕೇಳೆಮ್ಮ ಮೇಲೆ ಬಂದಪುದು ಗಡಾ ಸುರತಾಳನ ದಂಡದ ನಿನಗೆ ।
ಹೇಳಿ ನಿನ್ನನು ಮಂತ್ರಿ ಕರೆಯಲಟ್ಟಿದನಿರವೇಳಲಿ ಹರಿಶಾರ್ದೂಲ ॥ ೩೪

ಪರಬಲಜಲನಿಧಿವಡಬಾನಲ ಪರಪುರುಷಾರ್ಥಶರಧಿಶಶಾಂಕ ।
ಪರದಾರಕಥನವಿದೂರ ನಿನ್ನನ್ನು ಮಂತ್ರಿ ಬರಹೇಳಿದನೊಲಿದೇಳು ॥ ೩೫

ಏಳಹಿತಾನೀಕಕದಳಿಕಾನನಕೋಳಾಹಳಮದಕರಿಕಲಭ ।
ಏಳಸಹಾಯವಿಕ್ರಮ ರಿಪುಕುಲಕಲಿಕಾಲ ಪುರಂದರಪುತ್ರ ॥ ೩೬

ಎಂದು ನುಡಿದು ಬಾಗಲಿಂದೀವರಾಕ್ಷಿಯ ಸಂದ ನುಡಿಯ ಜಾಣ್ನುಡಿಯ ।
ಅಂದಾಲಿಸಿದನು ಮಂದಹಾಸನವೆಯ್ತಂದಿರೆ ಮುಖಕಮಲದೊಳು ॥ ೩೭

ದಂಡೆಲ್ಲಿಯದು ಧಾಳಿಯೆಲ್ಲಿಯದ್ವೈಯ್ಯನಾ ಚಂಡಿಯ ನುಡಿಗೆನ್ನ ಮೇಲೆ ।
ಕೊಂಡೆಸಗಿದ ಕಜ್ಜವೆಂದು ಬಗೆದನಾ ಚಂಡವಿಕ್ರಮನೆದೆಯೊಳಗೆ ॥ ೩೮

ಹುಸಿಯ ಗಂಟಿಕ್ಕಿ ಗಂಡನ ಕೂಡೆ ಚಿಕ್ಕನ್ನನುಸುರ್ದಳೆಱೆದವನೆನ್ನ ।
ಅಸುವಿಗೆ ಮುಳಿದು ಮಂತ್ರಿಯ ಕಳುಪಿದ ಕಜ್ಜದೆಸಕವಿದೆಂದು ಬಗೆದನು ॥ ೩೯

ಎಂದು ಬಗೆವುತ ಮೇಲಾ ನೃಪನಂದನನೊಂದುಳಿಯದೆ ಮಂತ್ರಿಯೊಡನೆ ।
ತಂದೆಯ ರಾಣಿಯ ಚರಿತವನೊರೆಯಬೇಕೆಂದೆಣಿಸಿದನೆದೆಯೊಳಗೆ ॥ ೪೦

ಬರಹೇಳೇಕೆ ಬಾಗಿಲೊಳೆಂದು ಮಂತ್ರಿಯ ಬರಿಸಿ ಬಳಿಕೆ ವಿನಯದೊಳು ।
ಕರೆದುಚಿತಾಸನದೊಳಗೆ ಕುಳ್ಳಿರಿಸಿ ಮೇಲಿರದೆ ಕೇಳಿದನು ಮಂತ್ರಿಯನು ॥ ೪೧

ಶರಧಿಯ ನೀರೀಂಟಿ ಮುಗಿಲ್ಗಳೆಗೆ ಗಜಕರಣಿಯ ಮಾಡುವಂದದಲಿ ।
ಸುರಿವ ಮಳೆಯೊಳೆಲ್ಲಿಯ ದಂಡು ಪೇಳಿದರಿರವನೆನಗೆ ದಂಡನಾಥ ॥ ೪೨

ಎಂದು ನುಡಿದ ರಾಮನಾಥನೊಡನೆ ಮಂತ್ರಿಯೆಂದನೇನೆಂದಾನಱಿಯೆ ।
ಹಿಂದು ಮುಂದಾವಗಮಿಲ್ಲದ ಪಾತಕ ಬಂದಿದೆ ಕೇಳೆಂದು ನಿನಗೆ ॥ ೪೩

ಆಡುವ ಚೆಂಡನುಳಿದು ಮುತ್ತಿನ ಚೆಂಡನೀಡಾಡಿ ನೀನರಮನೆಗೆ ।
ಬೇಡುವ ನೆವದಿಂದ ಬಂದು ರತ್ನಾಜಿಯ ಕೂಡೆ ಪಿಡಿದೆ ಗಡ ಕೂರ್ತು ॥ ೪೪

ಎಂದು ನುಡಿಯೆ ಮಂತ್ರಿ ಶಿವಶಿವಯೆನುತವನಂದು ಬೆರಲ ಕಿವಿಗಳಿಗೆ ।
ಒಂದಿಸಿ ನುಡಿದನು ದಂಡನಾಯಕಗಿಂತೆಂದಾ ಕಾರ್ಯದಿರವನು ॥ ೪೫

ಸಂದೇಹವಿಲ್ಲಹುದಾಡುವ ಕಂತುಕದಿಂದಾದ ಕದನವಿದಲ್ಲ ।
ಮುಂದಿರ್ದ ಮುತ್ತಿನ ಚೆಂಡಿನಿಂದೀ ಕೇಡು ಬಂದಿತೆನಗೆ ಕೇಳದನು ॥ ೪೬

ಆಡುವೆಡೆಯೊಳರ್ಚಿಸಿರ್ದ ಮುತ್ತಿನ ಚೆಂಡ ಕೂಡೆ ತೆಗೆದುಕೊಂಡು ನೋಡಿ ।
ಈಡಾಡಿದ ನೆಗಳ್ತೆಯೆಂದಾನಲೆಂದೆಲ್ಲರಾಡುವ ತಾಣಕಾನದನು ॥ ೪೭

ಇಟ್ಟ ಚೆಂಡಿಳಿದು ಬಾರದೆ ಕೈಗಾಗಸವಟ್ಟೆಯೊಳೊಲೆದರಮನೆಗೆ | ೪೮
ನೆಟ್ಟನೆನ್ನಯ ಪಾಪವಶದಿಂದ ಬಿದ್ದಿತು ಪುಟ್ಟಿತೆನಗೆ ಮೇಲೆ ಭೀತಿ ||

ಕಂತಕದೊಡನಸು ಗಗನಕೆ ಪೋದುದೆಂಬಂತೆ ಮೆಯ್ಯಿಮುಱಿದು ನಾನಾಗ |
ಚಿಂತಿಸುತಿರ್ದೆನೆನ್ನಳವಲ್ಲ ಕೇಳದನಂತಿಂತೆಂದು ಪೇಳುವಡೆ || ೪೯

ಮಕ್ಕಳಾಟಿಕೆ ಮಾರಿಯಾದುದೆಂದೆನಗೆನುತುಕ್ಕುವ ಭಯರಸದಿಂದ |
ಬೆಕ್ಕಸಬೆಱಗಾದೆನು ಮಂತ್ರಿ ಮೇಲೆ ಮನಕ್ಕೆ ಬಂದುದು ಬಲುಚಿಂತೆ|| ೫೦

ರಾಯನೊಡನೆ ಬೇಂಟೆಗೆ ಪೋದುದಿಲ್ಲ ಮೇಲೊಯ್ಯಾರದಿಂದಿರ್ದುದಿಲ್ಲಾ |
ದಾಯ ಬಂದಿತು ದುಡಿವರಿಗೆನ್ನ ಮೇಲೆನುತಾಯಸಗೊಂಡೆನೆದೆಯೊಳು || ೫೧

ಮಾಡಿದ ತಪ್ಪಿದೆ ರಾಯ ಪೇಳ್ದವೊಲೆನ್ನ ಮಾಡು ನೀನೆಂದನಾ ರಾಮ |
ನೀಡಿದನಾ ಮಂತ್ರಿಯ ಕೈಗೆ ಪಿಡಿದಿರ್ದ ರೂಢಿವಡೆದ ಖಂಡೆಯವನು || ೫೨

ಅನಿಮಿಷಾಂಗನೆಯಾಗಲಿ ಪರವೆಣ್ಗಳ ನೆನೆದೆನಾದೊಡೆ ಮನದೊಳಗೆ |
ಜನನಿಗನುಜೆಗಗ್ರಜೆಗೆ ತಪ್ಪಿದವನೆಂದನುವದಿಸಿದನು ಮತ್ತವನು || ೫೩

ಜನನಿಯುದರದಿಂದ ಬಂದುದು ಮೊದಲಾಗಿ ಜನನಿಜನಕರು ತಂದಿತ್ತ |
ವನಿತಾನಿವಹವನಲ್ಲದನ್ಯಾಂಗನ ಜನವ ನೆನೆದೊಡೀಶನಾಣೆ || ೫೪

ಬಿಡುವೆಣ್ಗಳ ಬೆಲೆವೆಣ್ಗಳ ಪರವೆಣ್ಗಳೊಡನಂಗಜ ಚೇಷ್ಟೆಯಿಂದಾ |
ನುಡಿದುದಿಲ್ಲಿಂದುವರಿಂದುಶೇಖರನ ಮೆಲ್ಲಡಿದಾವರೆಗಳ ಮೇಲಾಣೆ || ೫೫

ಎನಗೇಕಿನಿತೊಡಂಬಡಿಕೆ ಕುವರ ನಿನ್ನ ಮನವ ಬಲ್ಲೆನು ನಾನವಳ |
ಅನುವ ಬಲ್ಲೆನು ರಾಯನುರೆ ನಂಬಿದನಾ ವನಿತೆಯ ಪುಸಿಮಾತುಗಳನು || ೫೬

ಅಲ್ಲಹುದೆನಬಾರದಾನು ಸುಮ್ಮನೆ ಕಯ್ಯಗಲ್ಲದಿಂದಿರೆ ರಾಯ ನಿನ್ನ |
ಕೊಲ್ಲೆಂದು ಕೋಪದಿಂ ಮುದ್ರಿಕೆಗುಱಿಪಿತ್ತು ನಿಲ್ಲದೆನ್ನನು ಕಳುಪಿದನು || ೫೭

ಕೊಂದವನಂಗವ ತಂದಲ್ಲದಾನಿಲ್ಲಿಂದೇಳೆನೆಂದವನಿಪನು |
ಮುಂದಱಿಯದೆ ಮುಳಿದೆನ್ನನಟ್ಟಿದ ಕೇಳೆಂದು ಪೇಳಿದನಾ ಮಂತ್ರಿ || ೫೮

ಇಂತು ನುಡಿದ ಮಂತ್ರಿಶೇಖರಗವನಂತಿಂತಾಗದಂತರಂಗದೊಳು |
ಸಂತಸ ಮಿಗೆ ನುಡಿದನು ರಾಯ ನಿನಗೊರದಂತೆ ತಳುವದೆ ಮಾಡೆಂದು || ೫೯

ಶಿರವನರಿದು ಕೊಟ್ಟಪೆನು ಸಂದೇಹವ ಪರಿಹರಿಸೆನ್ನಮೇಲವಳು ।
ಹರಹಿದ ಹುಸಿಯು ಸುದ್ದಿಯು ಹುಸಿಮಾಡಾರ್ಯ ಪರಮೋಪಕಾರವಿದೆನಗೆ ॥ ೬೦

ಪರವನಿತಾಸಹೋದರನೆಂಬೆನ್ನ ಬಿರುದ ಹರವು ಲೋಕದೊಳಗೆ ।
ವರಶುಚಿಯೆನಿಸೆನ್ನನೆಂದು ಮಂತ್ರಿಯ ಕಾಲ್ಗೆ ಶಿರವ ಮಣಿದನಾ ಕುವರ ೬೧

ಬಗೆಯೊಳೊಗೆದ ಕರುಣಾರಸ ಕಣ್ಣೊಳು ನೆಗೆದಂತಿರೆ ಬಾಷ್ಪಾಂಬು ।
ತೆಗೆದಪ್ಪಿಕೊಂಡು ಕುವರನ ಕಾಲ್ಗೆರಗಿ ಕೈಮುಗಿದು ಬಿನ್ನವಿಸಿದನಂತು ॥ ೬೨

ಭೇದವ ಪುಟ್ಟಿಸಿ ತಂದೆಮಕ್ಕಳನು ಸಹೋದರರನು ಬಂಧುಗಳನು
ಕಾದಿಸಿನೋಡುವ ಕಾಪುರುಷನೆ ನಾನು ಕಾದುಕೊಂಬೆನು ನಾನು ಕುವರ ॥ ೬೩

ಕಡಿವೆನೇ ಕದಳಿಗೋಸುಗ ಕಲ್ಪವೃಕ್ಷವನಿಡುವೆನೇ ಕಾಗೆಯೋಳಿಸಲು ।
ಪಿಡಿದ ಚಿಂತಾರತ್ನರತ್ನವನಾಕೆಯ ಪುಸಿನುಡಿಗಾನು ಕೊಲ್ಲುವೆನೆ ॥ ೬೪

ಕೊಲಲಾನು ನಿನ್ನನು ಸುರತಾಳನ ಬಲಜಲಧಿ ಮೇಲಿರಿತಯ ಮೀರಿ ನಮ್ಮ ।
ನೆಲಕೆ ಬಂದಡೆ ನೆಲೆಗಂಡದ ಕಲಕುವ ಕಲಿಗಳುಂಟೇ ಲೋಕದೊಳಗೆ ॥ ೬೫

ಅಳಿಯೆ ನೀನಾಂಧ್ರಕರ್ಣಾಟದ್ರಾವಿಡ ಭೂತಳ ತುಳು ಮಳೆಯಾಳಗಳ ।
ತುಳಿವರು ಹೊಕ್ಕು ತುರುಕರು ಧರ್ಮಸ್ಥಿತಿಯಳಿವುದು ಕುವರ ನಿನ್ನಾಣೆ ॥ ೬೬

ಕರಿರಿಪುಯಿಲ್ಲದ ಕಾಂತಾರದಂತಂಬರಮಣಿಯಿಲ್ಲದಂಬರದ ।
ಪರಿಯಂತಹುದೆಮ್ಮ ರಾಜ್ಯ ನೀನಳಿಯೆ ಪುತ್ರರವುಂಟೆ ರಾಯನಿಗಿಲ್ಲಿ ॥ ೬೭

ಹೊಸಮಲೆಯೊಳು ನೇಮಿಯು ಠಾಣಾಂತರವೆಸೆವುದು ರಾಮೇಶ್ವರದ ।
ದೆಸೆಗಸುರನ ಕಂಡು ನಡೆವುದೀ ಲೋಕಕುಬ್ಬಸವಹುದಿಂದು ನೀನಳಿಯೆ ॥ ೬೮

ಸೇತು ಕೇದಾರದ ನಡುವೆ ಮುಸಲುಮರ ಜಾತಿಯಲ್ಲದೆ ಹಿಂದುವರ ।
ಜಾತಿಧರ್ಮಸ್ಥಿತಿಯುಂಟೆ ನೀನಳಿಯೋ ಬಿಡೆತಕಾ ಮಾತದಂತಿರಲಿ ॥ ೬೯

ಅವಿವೇಕಿ ನೃಪನನೋಲೈಸುವ ಸುಭಟರಿಗವಿರಳದುಃಖ ಸಂತಾಪ ।
ತವೆ ಬಾರದೆ ಮಾಣದೆಂದಾ ಮಂತ್ರಿಪುಂಗವನೆಣಿಸಿದನೆದೆಯೊಳಗೆ ॥ ೭೦

ಬಳಿಕ ವಿಚಾರಿಸಿದನು ಸಪ್ತೋಪಾಯದೊಳಗಾವುದರಿಂದವರನು ।
ಉಳುಹಿಕೊಂಡಸುರನ ಧಾಳಿ ಬಂದಡೆ ಬಿಟ್ಟಳವು ಮಾಡಿಸುವ ಬಗೆಯನು ॥ ೭೧

ಮಾಯೆ ಭೇದಿಸಬಹುದಿಂದ್ರಜಾಲದ ಸಂಪ್ರದಾಯವಭೇದ್ಯ ನರರಿಗೆ।
ದಾಯ ಬಂದಿತು ನನಗಿದನಿಂದ್ರಜಾಲೋಪಾಯದಿಂ ಜಯಿಸಿ ತೋಱುವೆನು ॥ ೭೨

ಎನುತ ತಣ್ಣಗಿರಗದ ನೀರಿಂದ ತೊಳೆದಾನನಕರಚರಣಂಗಳನು।
ಅನಿಮಿಷಪತಿಯ ಕುರಿತು ಮಂತ್ರಂಗಳ ಮನವೊಲಿದುಚ್ಚರಿಸಿದನು ॥ ೭೩

ಬೀಜಾಕ್ಷರಮಾಲಾವಿನ್ಯಾಸದಿಂ ರಾಜಿಸುವಮಲಮಂತ್ರಗಳ।
ಓಜೆಯಿಂ ಜಪಿಸಿದನಾ ಮಂತ್ರಿ ನಿರ್ಜರರಾಜನ ಕುರಿತು ಬೇಗದೊಳು ॥ ೭೪

ಜ್ವಾಲಾಮಾಲಿನಿ ಕಲ್ಪೋಕ್ತವರಮಂತ್ರಮಾಲಾಕ್ಷರಗಳನವನು।
ಮೇಲೆ ಮೇಲೊಲಿದುಚ್ಚರಿಸಿ ಮತ್ತೆ ಜ್ಞಾನದಿಂದೋಲೈಸಿದನಿಂದ್ರನನು ॥ ೭೫

ಅರೆಮುಗುಳಾದ ಕಣ್ಗಳ ನಾಸಾಗ್ರದೊಳಿರಿಸಿ ಹೃತ್ಕಮಲಕರ್ಣಿಕೆಗೆ।
ಬರಿಸಿ ಬಳಿಕ ಜಾನಿಸಿದನಂತಾ ಮಂತ್ರಿ ಸುರಪತಿಯಮಲಮೂರ್ತಿಯನು ॥ ೭೬

ಗರುಡಗಂಧರ್ವರ ಗಾನಾಮೃತರಸ ಪರಿದು ಕಿವಿಯ ದಾರಿಯೊಳು।
ಕರಗಿಸಲಂತರಂಗವ ಮಂತ್ರಿ ಕಣ್ದೆಱೆದಿರದೆ ಕಂಡನು ಸುರಪತಿಯ ॥ ೭೭

ಕಾಣುತವನ ಕಾಯದೊಳುರುಪುಳಕ ಶ್ರೇಣಿ ಕಟ್ಟಿದ ಗುಡಿಯೆನಲು।
ಕಾಣಿಸೆ ಮೆಯ್ಯನೀಡಾಡಿದನವನಿರ್ದ ತಾಣದ ದೆಸೆಗಾ ಮಂತ್ರಿ ॥ ೭೮

ತೀವಿದ ಭಕ್ತಿಭರದೊಳು ತನ್ನಡಿಗಳಿಗೋವದೆ ಸಾರ್ಚಿ ಪಣೆಯನು।
ಸಾವಧಾನದೊಳೆದ್ದು ನಿಂದ ಸಚಿವಗಾ ದೇವರೊಡೆಯನಿಂತೆಂದ ॥ ೭೯

ಏನು ಕಾರಣ ಮಂತ್ರಿ ನೀನೆಮ್ಮನಿಲ್ಲಿಗನೇಕಮಂತ್ರಾಕ್ಷರದಿಂದ।
ಆಕರುಷಣವ ಮಾಡಿದೆ ಪೇಳದ ನಿನಗಾಕೆಯಿಲ್ಲದೆ ಮಾಡಿಕೊಡುವೆ ॥ ೮೦

ಎನೆ ನುಡಿದನು ಮಂತ್ರಿ ರಾಯನ ಪಟ್ಟದ ವನಿತೆ ರತ್ನಾಜಿಯೆಂಬವಳು।
ಜನಪನ ಹಿರಿಯರಸಿಯ ಮಗ ರಾಮನೆಂಬನಿಗೆ ಮೋಹಿಸಿ ಬಂದವನ ॥ ೮೧

ಪಿಡಿದಳು ಕಂಡು ಪಿಡಿದರವನೊಲ್ಲದೆ ಕಡೆ ನೂಂಕಿ ಬರಲು ಮೇಲವಳು।
ಕಡುನೊಂದವನ ಮೇಲೆ ರಾಯನೊಡನೆ ಪಿಸುಣ್ನುಡಿದಳು ರಾಯ ನಂಬಿದನು ॥ ೮೨

ಬಳಿಕ ಕೊಂದವನಂಗವ ಕೊಂಡುಬಾರೆಂದು ಕಳುಪಿದನೆನ್ನನಾ ರಾಯ।
ಕೊಲುವುದುಚಿತವಲ್ಲ ನಿರ್ದೋಷಿಯನೆಂದು ತಿಳಿದು ನೋಡಿದೆನುಪಾಯಗಳ ॥ ೮೩

ಏಳುಪಾಯದೊಳಿಂದ್ರಜಾಲೋಪಾಯವನಾಳೋಚಿಸಿದೆ ದೇವ ನಿನ್ನ ।
ಏಳಿಸಿ ತಂದೆನ್ನೀಯೆಡೆಗೆಂದಾ ಮಂತ್ರಿ ಪೇಳಿದನಾ ಸುರಪತಿಗೆ ॥ ೮೪

ಆ ನುಡಿಗೇಳಿ ನಾಕಾಧಿನಾಯಕ ಮಂತ್ರಿ ನೀನವರೊಂದು ಸಂಗತಿಯ ।
ಏನೆಂದಱಿಯೆ ಪೇಳುವೆನದ ಕೇಳವಧಾನದೊಳೆಂದು ಪೇಳಿದನು ॥ ೮೫

ನರನವನೂರ್ವಶಿಯುವಳವರೀರ್ವರ ಪರಿ ಗೋಚರವಲ್ಲ ನಿಮಗೆ ।
ವರಸುತನವನೆಮಗದಱಿಂ ಜಯಂತಗೆ ಸರಿಮಿಗಿಲವಗೆ ಬಂದುದನು ॥ ೮೬

ಪರಿಹರಿಸುವೆನೆಂದು ಪೇಳಿ ಮಂತ್ರಿಗೆ ತನ್ನ ಹೊರೆಯ ದೇವನೊರ್ವನನು ।
ಕರದೀ ಮಂತ್ರಿ ಪೇಳ್ದಂತೆ ಮಾಡೆಂದಾದರದೊಳವನನಿರಿಸಿದನು ॥ ೮೭

ನೀನಾವ ಕಜ್ಜವನೆಣಿಸಿದೆಯದ ನಿನಗಾನದಿವನು ಮಾಡುವನು ।
ಆನೆಯ್ದಿದಪೆನೆಂದೊರೆದವನಂತಾರ್ಧಾನವೆಯ್ದಿದನತ್ತಲಿತ್ತ ॥ ೮೮

ಬಂದು ಬೈಚಪ್ಪ ರಾಮನ ಬಳಿಗತಿಮುದದಿಂದಿಂದ್ರನೆಯ್ತಂದು ತನಗೆ ।
ಅಂದಿನ ನರನೂರ್ವಶಿಯ ಕಥನವನೊರೆದಂದವನೊಲಿದು ಪೇಳಿದನು ॥ ೮೯

ಹೇಳು ಹೇಳಿನ್ನೊಮ್ಮೆ ಬೈಚಪ್ಪ ನಿನಗಿಂದ್ರ ಹೇಳಿದ ವಾರ್ತೆಯನೆಂದು ।
ಕೇಳಿ ಸಂತೋಷಾಂಬುನಿಧಿಯೊಳಗಾ ರಾಮನಾಳಿದನಾ ಸಮಯದೊಳು ॥ ೯೦

ಬಳಿಕೊಯ್ಯನೊಯ್ಯನೆ ಜಾತಿಸ್ಮರತೆ ಬಂದು ನೆಲಸಲಂತಃಕರಣದೊಳು ।
ತಿಳಿದನು ತನ್ನ ರತ್ನಾಜಿಯಯಿರವನಂದು ತಳೆದನಾನಂದಾಶ್ರುವನು ॥ ೯೧

ನೆನೆದು ಮನದೊಳೀಶ್ವರನ ಸಾಲೋಕ್ಯದ ಘನತರಸುಖದಿನಿರಸವ ।
ಮನಸಿಜಾರಿಯ ನೆದೆದಾವರೆಗೆಯ್ದಿಸಿ ತನುವಱಿಯದೆ ಚಿಂತಿಸಿದ ॥ ೯೨

ಬಿಡು ಬಿಡು ಚಿಂತೆ ನಿನಗೆ ರಾಮ ನೀ ಮುನ್ನ ಪಡೆದ ಸಾಲೋಕ್ಯಪದವನು ।
ಕೊಡುವೆನಂಜದಿರೆಂದಾಕಾಶದೊಳಗೊಂದು ನುಡಿಯಾದುದಾ ಸಮಯದೊಳು ॥ ೯೩

ಆ ನುಡಿಗೇಳುತಾನಂದಾಶ್ರು ಕಣ್ಣೊಳು ಪೊನಲ್ವರಿದುದು ಮೆಯ್ಯೊಳಗೆ ।
ಆನದೆ ರೋಮಾಂಚನ ಗುಡಿಗಟ್ಟಿದುದಾ ನರನಾಥನಂದನಗೆ ॥ ೯೪

ತಡವು ಬೇಡಿನ್ನು ತರಣಿ ಪೂರ್ವಾದ್ರಿಯೊಳಡಿಯನಿಡದ ಮುನ್ನ ನೀನು ।
ತೊಡಗಿಂದ್ರಜಾಲವನೆಂದು ಬೈಚಪ್ಪನು ನುಡಿದನಿಂದ್ರನ ಚರನೊಡನೆ ॥ ೯೫

ಒಡನಾಡಿಗಳುಗೂಡಿ ರಾಮನಾಥನನೊಂದೆಡೆಯೊಳಡಗಿಸು ಮತ್ತವರ ।
ಪಡಿರೂಪುದೋಱು ಕೊಂದವರಂಗವ ರಾಯಗೊಡನೊಪ್ಪಿಸಬೇಕು ನಾನು ॥ ೯೬

ಎಂದೆನೆ ಮಂತ್ರಿಯು ದೇವನೆಲದೊಳಾನಂದ ಕೈಮಿಗಿಲರಮನೆಯು ।
ಅದೊಂದು ರಮ್ಯದೇಶದೊಳು ನೆಗಳಿದ ಪುರಂದರಸುತಗೆ ಲೀಲೆಯೊಳು ॥ ೯೭

ಮಲಗುನ ಮನೆ ಮಜ್ಜನದಗೃಹ ಭೋಜನನಿಲಯ ಮಂಟಪ ಮೊಗಶಾಲೆ ।
ವಿಲಸಿತವಿದ್ಯಾಭವನವಂತಃಪುರ ನೆಲದೊಳೆಸೆದವೇನನೆಂಬೆ ॥ ೯೮

ವಿರಚಿಸಿದೆನು ನೆಲದೊಳಗರಮನೆಯನೆಂದೊರೆಯಲಾ ದೇವನ ಮಂತ್ರಿ ।
ಕರೆದು ಕುಮಾರರಾಮನ ನೋಡುತಾದರದೊಳಿಂತೆಂದು ಪೇಳಿದನು ॥ ೯೯

ಇರು ದೇವ ಪೇಳಿದೆಡೆಯೊಳವ ತಂದಿತ್ತ ಸುರಚಿರಾಹಾರವನುಂಡು ।
ತುರುಕದಂಡೆತ್ತಿ ಬಂದರೆ ನಿನ್ನನಿಲ್ಲಿಗೆ ಕರೆದುಕೊಂಬೆನು ಕಲಿರಾಮ ॥ ೧೦೦

ಎನಲಾ ರಾಮ ನಿರ್ದೋಷಿಯ ನೀನೆನ್ನನಿನಿತವಸ್ಥೆಯೆಯ್ದಿಸುವುದು ।
ಅನುಚಿತವಿದು ನಿನಗೆನಲಾ ಮಂತ್ರಿಯಿಂತನುವದಿಸಿದನವನೊಡನೆ ॥ ೧೦೧

ಕಜ್ಜ ಕೈಗೂಡುವನ್ನಬರ ನಾನಾಪರಿಯುಜ್ಜುಗದೊಳು ಬಲ್ಲವರು ।
ಪಜ್ಜೆಯಿಡುವರಿದು ಸಜ್ಜನಪದ್ಧತಿ ಲಜ್ಜೆಯಿದೇತಕೆ ನಿನಗೆ ॥ ೧೦೨

ತಿಳಿವನ್ನಬರ ರಾಯನ ಕೋಪ ನೀನಾ ನೆಲಮಾಳಿಗಯೊಳಿರೆಂದು ।
ತಿಳುಪಿ ಕುಮಾರನ ಚಿತ್ತವನಾ ಮಂತ್ರಿ ಕಳುಪಿದನಾ ದೇವನೊಡನೆ ॥ ೧೦೩

ಅನುಜಾತರೊಡನಂತಕಾತ್ಮಜನಡವಿಯೊಳನುನಯದಿಂದಿರ್ಪಂತೆ ।
ಅನುಚರಜನಮೊಡನಾ ರಾಮನಾ ನೆಲವನೆಯೊಳಿರ್ದನು ಲೀಲೆಯಿಂದ ॥ ೧೦೪

ಅನರನಾ ಮನೆಯೊಳಿರಿಸಿ ಮಂತ್ರಿಯೆಡೆಗಾ ದಿವಿಜನೆಯ್ತಂದು ಮತ್ತವರ ।
ಹವಣಿನ ಪಡಿರೂಪ ತೋಱಿಸಲಾ ಮಂತ್ರಿ ತವೆನೊಂದನು ಮನದೊಳಗೆ ॥ ೧೦೫

ಪೆಡಗೈಯ ಕಟ್ಟಿಸಿ ಪಡಿರೂಪಗಳ ತನ್ನಪಡೆವೆರಸಾ ಪುರವರದ ।
ನಡುಕೇರಿಯೊಳೆಲ್ಲರು ನೋಡುವಂದದಿ ನಡೆಯಿಸಿದನು ಮಂತ್ರಿಯವರ ॥ ೧೦೬

ತಲೆವೊಯ್ಯುವದಕೆ ಚೆನ್ನಿಗರಾಮನಾಥನ ಕೆಳೆಯರು ಸಹ ಬೈಚಪ್ಪಾ ।
ಬಲುಪಿಂದ ಕೊಂಡೊಯ್ಯುತಿರ್ದರು ಗಡಮೆಂದು ಪೊಗಳಲು ನೆರೆದೆಡವಿಡದೆ ॥ ೧೦೭

ಅನುಚಿತವಿದನೆಸಗಿದನೆ ಕಂಪಿಲಭೂವನಿತೇಶನೆಂದಲ್ಲಲ್ಲಿ ।
ಜನಕಲಕಲವೆಸೆದುದು ಜಲರಾಸಿಯ ಘನಘುಳುಘುಳುರವದಂತೆ ॥ ೧೦೮

ಕಟ್ಟಾಳು ರಾಮ ಮಡಿಯೆ ಹಾ ಹಾ ದುರ್ಗಕಿಟ್ಟಡೆಯಾಗದೆ ಬಿಡದು ।
ಕೆಟ್ಟಿತು ಕಾರ್ಯ ತುರಕದಂಡಿಗೆ ಕಾಲುವಟ್ಟೆಯಾದುದು ಕರ್ಣಾಟ ॥ ೧೦೯

ಕಿಱುದೆರೆಯೊತ್ತರಿಸಿದ ಶೋಣಕಂಜದ ತೆಱನೆನಲಾ ಖಡ್ಗದಿಂದ ।
ಮೆಱೆವ ಚೆನ್ನಿಗರಾಮನ ಮುದ್ದುಮೊಗ ಕಣ್ಗೆಗುಱಿಯಾದುದಾ ಸಮಯದೊಳು ॥

ಕಱೆಯೆ ಕಲ್ಪಜರು ಕುಸುಮವರ್ಷವ ಮೇಲೆ ಮಱುಗೆ ನೆರೆದ ಪುರಜನರು ।
ನೆಱೆಗಲಿರಾಮ ಕೊರಲ ಘರಿಘರಿಲೆನೆ ಕೊಱೆದಾಂತನು ಕೈಯೊಳಗೆ ॥ ೧೧೧

ಬಳಿಕ ಮಂತ್ರೀಶ್ವರನಾ ರಾಮನಾಥನ ಕೆಳೆಯರುಗಳ ತಲೆಗಳನು ।
ಘಳಿಲನೆ ಪೊಯ್ಸಲಿಳೆಯೊಳವು ಬಿರ್ದವು ಕಳಕಳಿಸುತ ನಸುನಗುತ ॥ ೧೧೨

ಮಡದಿಯ ಮಾಯವನಱಿಯದ ಕಂಪಿಲಪೊಡವಿಪತಿಯ ನಗುವಂತೆ ।
ಬಿಡದೆಸೆದೆವು ವೀರಭಟರ ತಲೆಗಳಾಯೆಡೆಯೊಳು ಮೊಗರಸದಿಂದ ॥ ೧೧೩

ಹರಹಿದ ತಲೆಗಳು ಪರಿಯಣದೊಳು ಭೂವರನ ಸಭಾಮಧ್ಯದೊಳಗೆ ।
ಹರಹಸ್ತಕಮಲದೊಳಗೆ ಬೊಮ್ಮನ ತಲೆ ಕರಮೆಸೆವಂತೆ ಸಚಿವನ ॥ ೧೧೪

ಮಲೆತ ಮನ್ನೆಯರ ತಲೆಯ ತಂದು ತನಗೀವ ಕಲಿಗಳೆಱೆಯ ನಿಜಸುತನ ।
ತಲೆಯ ಕಾಣುತ ತಲೆ ಕೆಳಗಾಗಿ ಪೀಠದಿಂ ನೆಲಕೆ ಬಿದ್ದನು ನರನಾಥ ॥ ೧೧೫

ನೆಗಪಿ ಕುಳ್ಳಿರಿಸಿ ಬೈಚಪ್ಪನಾ ರಾಯನ ಮೊಗದೊಳು ಪರಿವ ಕಣ್ಣೀರ ।
ದುಗುಲದಿಂ ತೊಡೆದು ದುಃಖವಿದೇಕಿನಿತೆಂದು ಮಿಗೆ ಸಂತೈಸಿ ಮತ್ತವನು ॥ ೧೧೬

ಮುಂದಱಿಯದೆ ನಾನು ನುಡಿದುದನೆ ನಿಜವೆಂದವಿಚಾರದಿಂ ನೀನು ।
ಕೊಂದೆ ಕುಮಾರನನೆಂದು ಮನದೊಳುರೆ ನೊಂದುನುಡಿದನು ಮಂತ್ರಿಯನು ॥ ೧೧೭

ಮಡಗಿ ಮಗನನೊಂಡೆಡೆಯೊಳುಳಿದರ ತಲೆಗಡಿದು ತೋಱಿಸಿದೊಡೆ ನಿನಗೆ ।
ಕೊಡುವೆ ರಾಜ್ಯದೊಳರ್ಧವನೆಂದು ಕಂಪಿಲ ನುಡಿದನಮಾತ್ಯಶೇಖರಗೆ ॥ ೧೧೮

ಕೋಪಕೆ ಕೊಲಹೇಳಿದನೆಂದು ತಿಳಿಯದೆ ಕಾಪುರುಷರ ತೆಱದಿಂದಾ ।
ಈ ಪರಿಮಾಡುವುದುಚಿತವೇ ನಿನಗೆಂದ ಭೂಪಗೆ ನುಡಿದನಾ ಮಂತ್ರಿ ॥ ೧೧೯

ಮಾಡಬಾರದ ಕೃತ್ಯವ ಮಾಡಿ ಕಂಪಿಲ ನಾಡ ಮೆಚ್ಚಿಸಬೇಕೆಂದು ।
ಮಾಡುತಿರ್ದಪನಿವನೆಂದು ರಿಪುನೃಪರಾಡದೆ ಬಿಡುವರೆ ಪಿನ್ನ ॥ ೧೨೦

ಅಪರಾಧಿಗಳಿಗಾಜ್ಞೆಯನೆಸಪುದಿದು ನೃಪನೀತಿಯಲ್ಲದಿದೊಂದು ।
ವಿಪರೀತವರ್ತನವಲ್ಲವೆಂಬಂತೆ ನೀನುಪಸಂಹರಿಸು ದುಃಖವನು ॥ ೧೨೧

ಬಿಡು ಚಿಂತೆಯ ನಿಮ್ಮ ನಡೆಯರಮನೆಗೆಂದು ನುಡಿದು ನೃಪತಿಯು ಬೀಳ್ಕೊಡಲು ।
ಒಡನೆಯ್ದಿತು ಸುದ್ದಿಯಾ ಹರಿಹರದೇವಿಯೆಡೆಗೆ ಮಡಿದ ರಾಮನೆಂದು ॥ ೧೨೨

ಹರಹರ ಮಗರಾಮ ಪರನಾರಿಯರ ಕಂಡು ವರಿಸಬಲ್ಲನೆ ಮನದೊಳಗೆ ।
ದುರುಳೆಯವಳು ನನ್ನ ಮೇಲಣ ಸವತಿಯ ಮತ್ಸರದಿಂದೊರೆದು ಕೊಲಿಸಿದಳು ॥ ೧೨೩

ಮಡದಿಯ ಮಾತನು ಮಿಗೆ ನಂಬಿ ಮಗನನು ಮಡುಹಿದನೇ ಕಂಪಿಲನು ।
ಕಡುಪಾಪಿ ಮೋಹವ ಮಾಡಿದರವಳಿಗೆ ಕೊಡಬಾರದೇ ತನ್ನ ತ್ರಾಣನ ॥ ೧೨೪

ಮಾನವನಱಿಯರು ಮೇರೆಯನೆಣಿಸರು ಹಾನಿವೃದ್ಧಿಗಳ ಬಗೆಯರು ।
ಮಾನಿನಿಯರಿಗೆ ಮನವನಿತ್ತ ಮಾನವರೇನೇನ ಮಾಡರಿಳೆಯೊಳು ॥ ೧೨೫

ಎಂದು ಮಮ್ಮಲ ಮಱುಗುತ ಹಾಹಾರವದಿಂದವನಿಯ ಮೇಲೆ ಬಿದ್ದು ।
ಅಂದಳುವತ್ತೆಯ ಬಳಿಗೆ ಸೊಸೆಯರೆಯ್ತಂದು ನುಡಿದರಿಂತೆಂದು ॥ ೧೨೬

ನಿಮ್ಮ ಕುಮಾರನೆಮ್ಮನು ಬಿಟ್ಟು ಸಗ್ಗದ ಚೆನ್ನೆಯರಿಗೆ ಮನಸೋತು ।
ಗನ್ನದಿಂ ಗಮಿಸಿದ ಸಾಕ್ಷಿಗನಲನುಂಟು ತಮ್ಮನಾವುರಿಗೆ ಕೊಟ್ಟಪೆವು ॥ ೧೨೭

ತಡವೇಕಿನ್ನು ತಲೆಯನೆಮ್ಮ ಕೈಯೊಳು ಕೊಡಿಸು ರಾಯನ ಕೈಯಿಂದ ।
ಕೊಡಿಸು ನಮಗೆ ಕಿಚ್ಚ ನಿಮ್ಮ ಮಗನ ಬೆನ್ನ ಬಿಡದೆಯ್ದಬೇಕು ಬೇಗದೊಳು ॥ ೧೨೮

ಬಳಿಕ ಬೈಚಪ್ಪನ ಬಳಿಗೆ ಕೆಳದಿಯರ ಕಳುಪಿ ನಿಳಯಕೆ ಕರೆಯಿಸಿ ।
ಕುಲಟೆಯ ಕುಹಕದ ನುಡಿಗೇಳಿ ಕಂಪಿಲ ಕೊಲಹೇಳಿದರೆ ಮಗನನು ॥ ೧೨೯

ಕೊಲುವರೆ ಸಾಮಭೇದಾದಿಗಳಿಂದ ನೀನುಳುಹಿಕೊಳ್ಳದೆ ಬೈಚಪ್ಪ ।
ಬಲುಮಂತ್ರಿಯಲ್ಲವೆ ನೀನೆಂದು ರಾಯನ ಲಲನೆ ಬಿದ್ದಳು ನೆಲದೊಳಗೆ ॥ ೧೩೦

ಬಿಱುಗಾಳಿ ಬಿಡದೆ ಬೀಸಲು ತರಹರಿಸವೆ ಮುಱಿದು ಭೂಮಿಯ ಮೇಲೆ ।
ನೆಱೆ ಪೊರಳ್ವೆಳೆಲತೆಯಂತೆ ಪೊರಳಿದಳಕ್ಕರು ಕೈಮಿಱೆ ಮನದೊಳು ॥ ೧೩೧

ರಾಹುವದನದಿಂದ ಬಳಿಗೆ ಭೂಮಿಗೆ ಬೀಳ್ವ ಹಾಹಾರವದಿಂದ ಪೊರಳ್ವ ।
ರೂಹುವಡೆದ ಶಶಿಗಲೆಯಂತೆ ಪೊರಳಿದಳಾ ಹರಿಹರವೇವಿಯಲ್ಲಿ ॥ ೧೩೨

ತಂದೆಯೊಡನೆ ಕಾಡುವುದುಚಿತವಲ್ಲೆಂದಳಿಡೆಯೊ ರಾಮಯ್ಯ ।
ಹಂದೆತನದಿ ಮಡಿದೆಯೊ ಪೇಳಿದಱಿಕೂಂದಂದವನೆಂದಳಲಿದಳು ॥ ೧೩೩

ತಮ್ಮ ಬಾ ತರಳಾಯುತೇಕ್ಷಣೆಯರ ಕಣ್ಣ ಕಮ್ಮಗಣೆಯೆ ಬಾರೆಂದು ।
ಸುಮ್ಮಾನದಿಂದಾರ ಕರೆವೆನೆಂದಕ್ಕ ಮಾರಮ್ಮನಿರದೆ ಶೋಕಿಸಿದಳು ॥ ೧೩೪

ಅಣ್ಣ ರಾಮಯ್ಯ ಬಾ ಹರಿಹರದೇವಿಯ ಚಿಣ್ಣ ರಾಮಯ್ಯ ಬಾರೆಂದು ।
ಬಣ್ಣಿಸಿ ಯಾರ ಕರೆವೆನೆಂದು ಸಿಂಗಮ್ಮ ಕಣ್ಣೀರಿನೊಳು ಕೈತೊಳೆದಳು ॥ ೧೩೫

ಸುರೆಗಾಗಿ ಸುಧೆಯ ಸೂಸಿದೆ ಸಿದ್ಧರಸವನ್ನು ಸುರಿದೆ ಪೊಳೆಯ ಸಿರಿಗಾಗಿ ।
ಧುರಧೀರರಾಮನ ಕೊಲಿಸಿದೆ ನೀ ನಿನ್ನ ತರುಣಿಯ ಪುಸಿನುಡಿಗಾಗಿ ॥ ೧೩೬

ಕಡಿದೆ ಕಗ್ಗಲ್ಲಿಗೋಸುಗ ಕಲ್ಪವೃಕ್ಷವನೊಡದೆ ಕಲ್ಲಿಗೋಸುಗರ ।
ಬಿಡೆದೆ ಚಿಂತಾಮಣಿಯನು ಕಾಮಧೇನುವ ಕೆಡಹಿದೆ ಮಡದಿಗಾಗವನ ॥ ೧೩೭

ಹರಿಹರದೇವಿಯ ಮೇಲೆ ಸವತಿಮತ್ಸರದಿಂದ ಪೇಳ್ದಳೆಂಬುದನು ।
ಪರಿಕಿಸದಿಂತು ರಾಮನ ಕೊಲಿಸಿದೆ ಹೋಗಿರು ನಿನ್ನ ಮೋಹದವಳೊಳು ॥ ೧೩೮

ಸುರತಾಳ ದಂಡೆತ್ತಿ ಬಹ ಪರಿಯಂತ ನೀನಿರು ದುರ್ಗದೊಳು ಬರಲೊಡನೆ ।
ತರುಣಿಯೊಡನೆ ತೆರಳಡವಿಗೆಂದವರಂದು ಸುರಿದರು ಕಣ್ಬನಿಗಳನು ॥ ೧೩೯

ಬಳಿಕ ಬೈಚಪ್ಪನೊಳಾ ಹರಿಹರದೇವಿ ತಿಳಿದು ನುಡಿದಳಿಂತೆಂದು ।
ತಲೆಯ ತರಿಸಿಕೊಡು ಸೊಸೆಯರನುರಿಗೊಂಡದೊಳಗೆ ಬೀಳ್ವಂತೆ ಮಾಡೆನಲು ॥ ೧೪೦

ಅರಸಿಯನುಜ್ಞೆಯಿಂದಾ ರಾಮನಾಥನ ಶಿರವ ತರಿಸಿ ಕೊಟ್ಟು ಬಳಿಕ ।
ಸಿರಿಗಂಧದ ಕೊರಡುಗಳಿಂದಲಾ ಮಂತ್ರಿವುರಿಗೊಂಡವ ಮಾಡಿಸಿದನು ॥ ೧೪೧

ಪನಿನೀರ ಕುಪ್ಪಿಗೆ ಕರ್ಪುರದಂಡೆ ಪೂವಿನ ಪೊಟ್ಟಣ ಮೃಗಮದದ ।
ತನಿಗಂಪಿನ ವೀಣೆ ಸಾದಿನ ಭರಣಿಗಳನಲಕೊಂಡಕೆ ಹಾಕಿದರು ॥ ೧೪೨

ವೀರಮುದ್ರಿಕೆ ನೂಪುರ ಕಾಂಚಿಯ ದಾಮ ಹಾರ ಪದಕ ಹಸ್ತಕಟ್ಟು ।
ತೋರಮೂಕುತಿ ಬೊಟ್ಟು ತುರುಬಿನ ಮುಡಿಮಣಿ ಸೇರಿ ಕಣ್ಗೆಸೆದವರಿಗೆ ॥ ೧೪೩

ಉಂಗುರ ಕಂಕಣ ಬಾಹುಪೂರ ಮನಂಗೊಳಿಸುವ ಭುಜಕೀರ್ತಿ ।
ಸಂಗಡಿಸಿದ ವಜ್ರದೋಲೆ ಮೆಱೆಯೆ ರಾಮನಂಗನೆಯರು ಕಣ್ಗೆಸೆದರು ॥ ೧೪೪

ಮುರುಡಿಯ ಸರಪಣಿ ಮುಂಗಯ್ಯ ಮುರಿ ಹಸ್ತಸರ ಹೊನ್ನಬಳೆ ತೋಳಬಂದಿ ।
ಕರಮೆಸೆಯಲು ಮಾಸತಿಯರಾದರು ರಾಮನರಸಿಯರಂದು ರಾಗದೊಳು ॥ ೧೪೫

ಪಿಡಿದ ನಿಂಬೆಯಹಣ್ಣು ಕನ್ನಡಿ ಕೈಯೊಳು ಬಿಡಸೆ ಮೆಱೆಯಲಂದವರು ।
ಸಡಗರದಿಂ ಬಂದು ಹರಿಹರದೇವಿಯರಡಿಗೆಱಗಿದರು ಮೋಹರಿಸಿ ॥ ೧೪೬

ಪುರುಡುಬೇಡಕ್ಕತಂಗಿಯರೊಳು ಪುರುಷನೊಳಿರವುಗಾಣಿಸಬೇಡವೆಂದು ।
ಒರೆದು ಬುದ್ಧಿಯ ಸೊಸೆಯರ ಬೀಳ್ಕೊಟ್ಟಳಾ ಹರಿಹರದೇವಿ ಕೊಂಡಕ್ಕೆ ॥ ೧೪೭

ಪಲ್ಲಕ್ಕಿಗಳ ಮೇಲೆ ಚೆನ್ನಿಗರಾಮನ ವಲ್ಲಭೆಯರ ಕುಳ್ಳಿರಿಸಿ ।
ನಿಲ್ಲದೆ ಕೊಂಡೆಯ್ದಿ ಕೊಂಡದ ಕೆಲದಲ್ಲಿ ನಿಲ್ಲಿಸಿ ತೆರಗಳ ಹಿಡಿದರು ॥ ೧೪೮

ಉಳಿದ ಸುಭಟರ ಮಾಸತಿಯರನಾ ಕೊಂಡಗಳ ಕೆಲಕೆಲದೊಳಗೆ ನಿಲಿಸಿ ।
ಬಳಿಕ ದೇವನವರ ತೊಲಗಿಸಿ ಮಾಯಾಲಲನೆಯರನು ನಿಲಿಸಿದನು ॥ ೧೪೯

ಬಳಿಕ ಕೃತಕದ ಮಾಸತಿಯರು ಪುರಜನಗಳ ಪರಸುತ ಲೀಲೆ ಮಿಗಿಲು ।
ಘಳಿಲನುರಿವ ಕೊಂಡದೊಳಗೆ ಬಿದ್ದರು ಪುರಲಲನೆಯರೆಲ್ಲ ಗೋಳಿಡಲು ॥ ೧೫೦

ಅತ್ತಲಾ ದೇವನಾ ಸತಿಯರ ಕೈವಿಡಿದೆತ್ತಿಕೊಂಡೊಯ್ದುವರವರ ।
ಚಿತ್ರವಲ್ಲಭರ ಕೆಲದೊಳಿರಿಸಲು ಮುದವೆತ್ತು ನಲಿದರವರಲ್ಲಿ ॥ ೧೫೧

ಹೊಳಿಸಿ ಹುತವಹಕುಂಡವನಾ ಮಂತ್ರಿ ಪೇಳಲಾ ಕಂಪನೃಪತಿ ।
ಕೇಳಿ ಶೋಕಾಂಬುನಿಧಿಯ ಬಲುಸುಳಿಯೊಳಗಾಳಿದನೇನ ಪೇಳುವೆನು ॥ ೧೫೨

ಅಳಲಿದನಳವಳಿದನು ಕಣ್ಬನಿಗಳ ಮಳೆಗಱೆದನು ಮೈಮಱೆದು ।
ಕಳವಳಿಸಿದನು ಕಂಪಿಲದೇವನಾತ್ಮಜರಳಿವ ಸೈರಿಸಲೊರ್ವರಳವೇ ॥ ೧೫೩

ಇಂತು ವಿಷಾದವಿಹ್ವಳನಾ ಧರಣೀಕಾಂತನ ಮನದೊಳೊಗೆದ ।
ಸಂತಾಪವ ತೊಲಗಿಸಿದನು ಶಾಸ್ತ್ರಸಿದ್ಧಾಂತವ ಪೇಳಿ ಸಚಿವನು ॥ ೧೫೪

ಹಿಂದಣಭವದೊಳಮರಲೋಕದೊಳಗೆ ಪುರಂದರಪುರದೊಳಿರ್ಪಂತೆ ।
ಅಂದಿರ್ದನಾ ರಾಮನಾ ದೇವ ನಿರ್ಮಿತ ಮಂದಿರದೊಳು ಸುಖದಿಂದ ॥ ೧೫೫

ಇಂತತಿಶಯಸುಖದಿಂ ರಾಮನಿರಲತ್ತಲಂತಪುರದೊಳು ರತ್ನಾಜಿ |
ಕಂತುಸಂತಾಪಕ್ಕೈವಿಸಾಱಿ ನುಡಿದಳೇಕಾಂತದೊಳಾ ಸಂಗಿಯೊಡನೆ || ೧೫೬

ಎಲೆ ಸಖಿ ಚೆನ್ನಿಗರಾಮನಳಿಯದಿರೆ ಹಲವುಬುದ್ಧಿಗಳಿಂದವನನು |
ಒಲಿಸಬಹುದು ಬಯಲಿಗೆ ಕೋಪದಿಂದಾನು ಕೊಲಿಸಿದೆನೆಂದಳಲಿದಳು || ೧೫೭

ನೋಡಬಹುದು ಪಲತೆಱದಿಂದ ಜೇಟವ ಮಾಡಬಹುದು ಪುಣ್ಯದಿಂದ |
ಕೂಡಬಹುದು ದೇಹವಿರಲಾನವನಿಗೆ ಕೇಡ ಬಗೆದೆ ಮುಂದಱಿಯದೆ || ೧೫೮

ಒಡಬಡಿಕೆಯ ಮಾತಿಲ್ಲದೆ ದೂತಿಯರೆಡೆಯಾಟವಿಲ್ಲದಂಜಿಕೆಯ |
ಬಿಡುಗಡೆಯಿಲ್ಲದೆ ಪೆಣ್ಗಳು ಬಲುಪಿಂದ ಪಿಡಿಯೆ ಕೋವಿದರು ಮೋಹಿಪರೇ || ೧೫೯

ಕುಱಿಪ ಕಳುಪದೆ ಕೂರ್ಪರನೊಲಿದಟ್ಟದೆ ಕುಱುತೆಡೆಗವನ ಬರಿಸದೆ |
ದುಱುದುಂಬಿತನದಿಂದೆ ಪಿಡಿಯೆ ಪೆಣ್ಗಳು ಮೆಯಿಮಱೆವರೆ ಜಾತಿಪುರುಷರು || ೧೬೦

ಎನುತ ಹಾ ಹಾ ರಾಮ ಹಾರಾಮಯೆಂದಾಗ ಮನಸಿಜತಾಪದಿಂ ಬೀಳ್ದು |
ತನುವನಱಿಯದೆ ತಳವೆಳಗಾದಳದನನಿತಿನಿತೆಂದು ಪೇಳಲೆನ್ನಳವೇ || ೧೬೧

ಮಱುಗಿದಳ್ಕನಗುಂದಿದಳು ಮಱುಳಾದಳು ಬೆಱಗುವಟ್ಟಳು ಬೆಮರಿದಳು |
ಕಱೆದಳು ಕಣ್ಬನಿಯನು ಕಳವಳಿಸಿದಳೊಱಗಿದಳ್ಮೈಮಱೆದವಳು || ೧೬೨

ಹರಿಹರದೇವಿಯ ದುಃಖವನುಪಸಂಹರಿಸುವನೆಂದು ಬೈಚಪ್ಪ |
ಅರಮನೆಗೆಯ್ತಂದು ಕಟ್ಟೇಕಾಂತದೊಳೊರೆದನವಳಿಗಿಂತೆಂದು || ೧೬೩

ಅರಸಿಯುಳಲನಡಗಿಸು ಮಗರಾಮ ಮರಣವನೆಯ್ದಿದುದಿಲ್ಲ |
ಇರಿಸಿದೆನೊಂದೆಡೆಯೊಳಗಿಂದ್ರಜಾಲವ ವಿರಚಿಸಿ ನಂಬು ನೀನಿದನು || ೧೬೪

ಎನಲಿದು ಹುಸಿ ತಲೆಯನು ಕಟ್ಟಿಕೊಂಡೆನ್ನ ತನುಜನ ತರಳಾಕ್ಷಿಯರು |
ಅನಲಕೊಂಡವ ಪೊಕ್ಕರೀ ಪ್ರತ್ಯಕ್ಷವನೆನಗೆ ನೀನಪಲಾಪಿಸುವುದು || ೧೬೫

ಅಡಗಿಸಬೇಡೆನ್ನ ಶೋಕವನೆಂದು ನೀ ನುಡಿವುದಿದಲ್ಲದೆ ನಿಜದ |
ನುಡಿಯಲ್ಲವೆನಲಾ ಮಂತ್ರಿಯಾ ದೇವಿಯರೊಡನೆ ಬಿನ್ನವಿಸದನಿಂತು || ೧೬೬

ಜನನಿ ನಿನ್ನಣುಗನ ಕಾಣಿಸಿದೊಡೆ ನಿನ್ನ ಮನಕೆ ನಂಬುಗೆಯಾದಪುದೆ |
ಎನಲಾ ಹರಿಹರದೇವಿ ಸಂತೋಷದ ವನನಿಧಿಯೊಳು ಮುಳುಗಿದಳು || ೧೬೭

ತಡವೇಕೆ ತಂದು ತೋಱುಸು ತನುಜನನೆಂದಡಿಗೆಱಗುವ ಸಮಯದೊಳು ।
ಪಿಡಿದೆತ್ತಿ ನಡನಡ ನಡುಗುತ್ತ ದೇವನನೊಡನೆ ಬರಿಸಿ ಬೈಚಪ್ಪ ॥ ೧೬೮

ನುಡಿಯಲಾ ದೇವನು ಹರಿಹರಿದೇವಿಯ ಪಡಿರೂಪನಿರಿಸಿ ಮತ್ತವಳ ।
ತಡೆಯದೆ ಕೊಂಡೊಯ್ದನಾ ರಾಮನಾಥನಿರ್ದೆಡೆಯೊಳೊಲಿದು ನಿಲಿಸಿದನು ॥ ೧೬೯

ಅನಿತಱೊಳಾ ದೇವನಾ ವನಿತೆಯನರಮನೆಗೆಯ್ದಿಸಲು ಮತ್ತತ್ತ ।
ದಿನಗಳ ಪಲಪಕಾವಾರ್ತೆ ಮೆಲ್ಲನೆ ಪೋಗಿ ಜನಿಸಿದುದಾ ಡಿಳ್ಳಿಯೊಳಗೆ ॥ ೧೭೦

ಸುರತಾಳನ ಸುತೆ ಕೇಳಿಯಾ ಸುದ್ದಿಯ ಸುರಗಿಯೊಡಲನುರ್ಚಿದಂತೆ ।
ಪೊರಳ್ದಳು ಪೂರ್ವಜನ್ಮದ ಮೋಹಬಂದಾವರಿಸಲಂತಃಕರಣವನು ॥ ೧೭೧

ಭಾವಚಿತ್ರವ ಭಾವಿಸುತನ್ಯವಸ್ತುವ ಭಾವಿಸದವನ ಮೋಹದೊಳು ।
ಜೀವಮಾತ್ರದೊಳು ಜೀವಿಸುತಿರ್ದಳಾ ರಾಜೀವಲೋಚನೆ ವಿರಹದೊಳು ॥ ೧೭೨

ಚರನೊರ್ವನೆಯ್ತಂದು ಸುರತಾಳಭೂಮೀಶ್ವರಗೆ ಭೂಮಿಯೊಳು ಮೆಯ್ಯಿಕ್ಕಿ ।
ನರಲೋಕನಾರಾಯಣ ಬಿನ್ನಪವನಿದನಿರದೆ ಚಿತ್ತೈಸು ಕಂಪಿಲನು ॥ ೧೭೩

ಚೆಂಡಿನ ನೆವದಿಂದ ಬಂದು ತನ್ನಬಲೆಯ ಕಂಡು ಪಿಡಿದ ರಾಮನೆಂದು ।
ಕೊಂಡೊಯ್ದು ತಲೆಯ ಪೊಯಿಸಿದನೆಂದವನೆದೆಗೊಂಡು ರಾಯಗೆ ಪೇಳಿದನು ॥ ೧೭೪

ಕೇಳಿ ಸುರತ್ರಾಣನಾ ಸುದ್ದಿಯನಂದು ಹೇಳಿದ ನೇಮಿಮಲ್ಲುಕಗೆ ।
ಧಾಳಿಧಾಳಿಯಿಂ ಪೋಗಿ ಕುಮ್ಮಟವನು ಪಾಳನಿರದೆ ಮಾಡೆಂದು ॥ ೧೭೫

ಕರ್ಣಾರ್ಜುನರಿಗೆಣೆಯ ಭಟನಳಿದ ಸುಪೂರ್ಣಮನೋರಥನಾದೆ ।
ಕರ್ಣಾಟದೇಶವನಿಱಿದು ಕುಮ್ಮಟವನು ಚೂರ್ಣೀಕೃತವ ಮಾಡೇಳು ॥ ೧೭೬

ಮಡಿದನಂಜದಿರು ವಿಕ್ರಮಸಿಂಹನಾ ರಾಮಪಡೆಯನೆಲ್ಲವ ಕೂಡಿಕೊಂಡು ।
ನಡೆ ಕರ್ಣಾಟಕಮಹೀಮಂಡಲಕೆಂದು ನುಡಿಯೆ ನೇಮಿಗೆ ಸುರತಾಳ ॥ ೧೭೭

ಎಱೆಯನಾಡಿದ ಮಾತುಗೇಳಿ ಕಟಾಕ್ಷವೆಂದಱಿದಾ ನೇಮಿಮಲ್ಲುಕನು ।
ಎಱಗಿ ಶಿರವನಾ ರಾಯಗೆ ಪಂಥವ ಹೊರಿಗೆಯ ನುಡಿದನಿಂತೆಂದು ॥ ೧೭೮

ಮಡಿಯಲಿ ಮಡಿಯದಿರ್ದಡೆ ಮಾಣಲಿ ರಾಮನೊಡನೆ ಧಾಳಿಯನಿಕ್ಕಿದಾನು ।
ಕೆಡಿಸಿ ಕುಮ್ಮಟವನು ಕಂಪಿಲದೇವನ ಹಿಡಿದು ತಹೆನು ನಿನ್ನ ಬಳಿಗೆ ॥ ೧೭೯

ಎನಲುಡುಗೊಱೆಯಿತ್ತು ನೇಮಿಖಾನನಾ ಮನುಜೇಶ್ವರ ಬೀಳುಕೊಡಲು ।
ವಿನುತ ಲಗ್ನದೊಳೊಯ್ಯನೆ ಪೊಱಮಟ್ಟನಂದನನುನಯದಿಂದ ಡಿಳ್ಳಿಯನು ೧೮೦

ಮೂಱುಲಕ್ಕದ ಮೇಲೆ ಲೆಕ್ಕಿಸೆ ತೊಂಬತ್ತಾಱುಸಾವಿರತೇಜಿಗಳ ।
ಕೀಱಿ ತೆಗೆದುಕೊಂಡು ಧಾಳಿಯಿಕ್ಕಿದನಂದು ಚೀಱುವ ಕಹಳೆಯೊಗ್ಗಿನೊಳು ॥ ೧೮೧

ಅಲ್ಲಿಗಲ್ಲಿಗೆ ಮನ್ನೆಯರ ಕಾಣಿಸಿಕೊಳುತಲ್ಲಿಗಲ್ಲಿಗೆ ಬೀಡುಬಿಡುತ ।
ಬಲ್ಲಿದ ಖಾನರ ಮೋಹರದೊಳು ನೇಮಿಮಲ್ಲುಕ ಧಾಳಿಮಾಡಿದನು ॥ ೧೮೨

ಮಾಳವ ಮಗಧ ನೇಪಾಳ ಗುರ್ಜರ ಪಂಚಾಳದೇಶಗಳ ಹಿಂದಿಕ್ಕಿ ।
ಧಾಳಾಧೂಳಿಯಿಂ ಬಂದು ಬಿದಿರೆಯೊಳು ಪಾಳೆಯವನು ಮಾಡಿದನು ॥ ೧೮೩

ಗಡಿಯ ಕಾವಲನಾಯಕರಾ ಸುದ್ದಿಯನೊಡನೆ ಪೇಳಲು ಕಂಪನೃಪತಿ ।
ಕಡುವೇಗದಿಂ ಕರೆಯಿಸಿ ಬೈಚಪ್ಪಗೆ ನುಡಿದನು ಕಾರ್ಯದಿರವನು ॥ ೧೮೪

ಈ ದುರ್ಗದೊಳಗಲ್ಲದೆ ಕುಮ್ಮಟದೊಳು ಕಾದುವರನುವಲ್ಲವೆಮಗೆ ।
ಹೋದನು ಹೋರಾಟದ ವೀರಭಟನಿನ್ನು ಭೇದಿಪರಾರರಿಬಲವ ॥ ೧೮೫

ಸುರತಾಳಬಲಸೂಱೆಗಾಱ ಚೆನ್ನಿಗರಾಮ ಸುರಲೋಕವನೆಯ್ದಿದನು ।
ತರಹರಿಸುವರಾರಿನ್ನದಱೊಳಗೆಂದು ಸುರಿದನರಸ ಕಣ್ಬನಿಗಳ ॥ ೧೮೬

ಎಂದು ಮಂತ್ರಿಗೆ ರಾಯನೆಂದನು ನೀ ಬಲುಮುಂದಿಕುದುರೆಯೊಡಗೂಡಿ ।
ಮುಂದೆ ತೆರಳಿ ದುರ್ಗವನು ಜೋಕೆ ಮಾಡಿಸು ಹಿಂದೆ ಬಂದಪೆನು ಬೇಗದೊಳು ॥ ೧೮೭

ದಳವಾಡಸಹಿತ ಬೈಚಪ್ಪ ದುರ್ಗವ ಪೊಕ್ಕು ತಳುವದದಱ ಬಯಕೆಯನು ।
ಬಳಸಿನೋಡೀ ದುರ್ಗಸಂವರಣೆಯನಂದಲಸದೆ ಮಿಗೆ ಮಾಡಿಸಿದನು ॥ ೧೮೮

ಅತ್ತ ಬಿದಿರೆಯೊಳು ನೇಮಿಖಾನಗೆ ಕೂಡಿತ್ತು ವಜ್ಜೀರಮಲ್ಲುಕರು ।
ಮೊತ್ತಗಳನು ಕೂಡಿ ಜಗಳವ ತಲೆಯೊಳು ಹೊತ್ತು ಮಹಾವೇಗದಿಂದ ॥ ೧೮೯

ಅಂಗ ಬಂಗಾಳ ಕೊಂಕಣ ಕೋಸಲ ಕುರುಜಾಂಗಣ ಹೂಣ ಹಮ್ಮೀರ ।
ಬಂಗ ಬರ್ಬರ ಖನ್ನೋಜಿ ಖರ್ಪರದೇಶಂಗಳರಸುಗಳೆಯ್ದಿದರು ॥ ೧೯೦

ಧರೆ ಹೊಱದೆನೆ ದೆಸೆ ನೆರೆಯುಡೆಂದೆನೆ ಬಂದು ನೆರೆದ ಸೇನಾಸಮುದ್ರವನು ।
ಪರಿಕಿಸಿ ಪ್ರಸ್ಥಾನಭೇರೀರವಮುಣ್ಮೆ ತೆರಳಿದನಾ ನೇಮಿಖಾನ ॥ ೧೯೧

ಕುಡಿಯಲಿರದೆ ನೀರ ಕೆಱೆತೊಱೆಗಳ ಬಲುಮಡುಗಳು ಬಱತವೆಂದೆನಲು ।
ನುಡಿಯಬಹುದೆ ಬಾಯಿಬಿಟ್ಟನಿತಿನಿತೆಂದು ಪಡೆಯನಾ ನೇಮಿಮಲ್ಲುಕನ ॥ ೯೨

ನೆಲಸಮನಾದವು ನೆಗೆದ ಮೊರಡಿ ಪಳ್ಳ ಕುಳಿಕೊಳ್ಳಬೆಂಚೆಗಳ ।
ಬಳಗವೆಂದೆನಲಾ ನೇಮಿಯ ದಂಡೊರ್ವರಳವೇ ಬಣ್ಣಿಸಲು ಬಾಯಳಿದು ॥ ೯೩

ಎದ್ದು ನಡೆವ ಬಲಜಲಧಿಯ ಕಡೆಯನು ಹೊದ್ದಲಾಱದೆ ಖಗನಿವಹ ।
ಇದ್ದವು ಕೆಲವು ಪತಾಕಾಗ್ರದೊಳಲ್ಲಿ ಬಿದ್ದವು ಕೆಲವು ನೆಲದೊಳು ॥ ೯೪

ತುಱುಗಿದ ಖಾನರ ಮೋಹರದೊಳು ನಾಡೆಱೆಯರ ಬಲುಸಂದಣಿಯೊಳು ।
ನೆಱೆ ರಾವುತರೊಗ್ಗಿನೊಳಾ ನೇಮಿ ಹೆದ್ದೊಱೆಯನಿರದೆ ದಾಂಟಿದನು ॥ ೯೫

ಹೇಳಿ ಕಳುಹಲದ ಮಂತ್ರಿ ಕಂಪಿಲಭೂಪಾಲ ಸಮರಭೇರಿ ಮೊಳಗೆ ।
ಕಾಳೆಗಕನುವಾಗಿ ತೆರಳಿದನಂದು· ಕಾಲಾಳು ಮೇಲಾಳೊಡಗೂಡಿ ॥ ೯೬

ನಾಯಕರೆಕ್ಕಟಿಗರು ಬಲುರಾವುತಪಾಯಕರೊಡನೆಯ್ತರಲು ।
ಪಾಯವಧಾರೆಂಬ ವೇತ್ರಧಾರಿಗಳ ವಿಡಾಯ ಕೈಮಿಗಲೆಯ್ದಿದನು ॥ ೯೭

ಬಂದು ಕುಮ್ಮಟದುರ್ಗವನು ಪೊಕ್ಕು ಕಂಪಿಲ ಸಂದ ಭಟರ ಮೊಗನೋಡಿ ।
ಅಂದು ನುಡಿದನವರೊಳಗನಱಿಯಬೇಕೆಂದು ಕೆಲವು ಮಾತುಗಳನು ॥ ೯೮

ಲೋಕೈಕವೀರ ಕುಮಾರರಾಮುಗ ಮೇಲುಲೋಕಕ್ಕೆಕ್ಕಿದನು ಧಾಳಿಯನು ।
ನೂಕದೀ ದುರ್ಗದೊಳೆಮಗೆ ಕಾಳೆಗವೆಂದು ಭೂಕಾಂತ ನೊಂದು ನುಡಿದನು ॥ ೯೯

ಕಾಳೆಗವಿದಱೊಳು ಸಾಗದೆಮಗೆ ಸುರತಾಳದಂಡದು ಬಹಳ ಗಡ ।
ಹೇಳದೆಮಗೆ ಸುರಪತಿಗಾಗಿ ದನುಜರ ಮೇಲೆ ಹೋದನು ವೀರರಾಮ ॥ ೧೦೦

ರಾಮನಳಿವು ನೇಮಿಯ ಮನೋರಥಕಾಯ್ತು ನೇಮಿಗೆಮ್ಮಾ ಬಲವೆಲ್ಲ ।
ಭೂಮಿಯ ಮೇಲೆ ಹರಡಿದ ಕಮಲನಾಳಸ್ತೋಮವಾದುದು ಮಾತೇನು ॥ ೧೦೧

ಕೋಪಕೆ ಕೊಲಹೇಳಿದನೆಂದು ತಿಳಿಯದೆ ಪಾಪಿ ಬೈಚಪ್ಪ ಮಗನನು ।
ಕಾಪಿಕ್ಕಿಕೊಂಡಿರಲಱಿಯದೆ ಕೊಂದೆನಗಾಪತ್ತನು ಮಾಡಿದನು ॥ ೧೦೨

ಕುಲಟಾಂಗನೆಯ ಬಾಳುವೆ ದುರ್ಮಂತ್ರಿಯ ಕೆಳೆತನ ದುಷ್ಟನೃಪತಿಯ ।
ಒಲುಮೆಗಳ್ ಕಡೆಗೆ ಕೇಡ ತಾರದೆ ಬಿಡದೆಂದಳಲಿದನವನೀಶ್ವರನು ॥ ೧೦೩

ಬಳಿಕ ಮೆಲ್ಲನೆ ಬೈಚಪ್ಪರಾಯನ ಕಿವಿಗಳಿಗಮೃತಪ್ರಾಯವೆನಿಪ ।
ಸುಲಲಿತವಚನಾಚ್ಛಾದಿತನಿಜಕಾರ್ಯದಳವ ಪೇಳಿದನು ಕಂಪಿಲಗೆ ॥ ೨೦೪

ರಾಯ ಚಿತ್ತೈಸು ಬಲ್ಲಿದನೊರ್ವ ರಾವುತ ಪಾಯಕನುಂಟವನೆಡೆಗೆ ।
ರಾಯಭಾರಿಗಳನಟ್ಟಿದೆನವ ಬಹ ದಿನವಾಯಿತು ತಳುವಿಲ್ಲವಿನ್ನು ॥ ೨೦೫

ಭುವನವ ಕವಿದ ಕತ್ತಲೆಯನುದಯಕಾಲದ ರವಿಯಿಂದೋಡಿಸುವ ತೆಱದೊಳು ।
ಜವದಿಂದ ಬಂದ ನೇಮಿಯ ದಂಡನವನಿಂದ ಜವನಗರಿಯನೆಯ್ದಿಸುವೆನು ॥ ೨೦೬

ಎನೆ ಮಂತ್ರಿ ರೋಮಾಂಚನ ಜುಮ್ಮಜುಮ್ಮೆನೆ ತನುವಿನ ಮೇಲೆ ತಳರಲು ।
ಅನುನಯದಿಂದನುರಾಗದಿಂದವನ ಮನುಜೇಶ್ವರ ಕೇಳಿದನು ॥ ೨೦೭

ಅವನ ಪಟ್ಟಣವಾವುದವನ ವಂಶವದಾವುದವನ ಜನಕನಾರದನು ।
ವಿವರಿಸು ಕೇಳಬೇಕೆನೆ ರಾಯಗದನಂದವನೊರೆದನು ಜಾಣ್ಮೆಯೊಳು ॥ ೨೦೮

ಭೂವರ ಕೇಳ್ನಿಮ್ಮ ಪೂರ್ವದರಸು ರಾಮದೇವ ರಾಜಾಧಿರಾಜನಿಗೆ ।
ಭಾವಿಸೆ ನಾಲ್ವರು ರಾಜಪುತ್ರರು ಸಂಭಾವಿತಸೇನಾನಿಗಳು ॥ ೨೦೯

ಅವನ ಪರಂಪರೆಯೊಳು ಕಂಪನೆಂದೆಂಬವನೀಶ್ವರ ಪುಟ್ಟಿದನು ।
ಅವನುದರಾಂಬುಧಿಯೊಳಗೊಗೆದನು ರಾಮಕುವರವೆಸರ ಸುತಚಂದ್ರ ॥ ೨೧೦

ಅವನಂಗಲಾವಣ್ಯದಿದಿರಿನೊಳಂಗೋದ್ಭವನ ಶರೀರಲಾವಣ್ಯ ।
ರವಿಯ ಮಿಂಚುಂಬುಳುವಿನ ತೆಱನೆನಲಾ ಕುವರನ ರೂಪನೇನೆಂಬೆ ॥ ೨೧೧

ಘಟ್ಟಿ ರಾವುತರೊಂದೆರಡು ಲಕ್ಕ ಬಂದಡ್ಡಗಟ್ಟಲು ರಾಮಕುಮಾರ ।
ಮುಟ್ಟಿ ತಿವಿದು ತಿವಿದಡಗೆಡಹಲು ಬೆನ್ನಕೊಟ್ಟೋಡುವರು ಮುಱಿದವರು ॥ ೨೧೨

ಚಿತ್ರಕೂಟಾಧಿಪನವನಿಗೆ ಮೆಚ್ಚಿ ಚಿತ್ರಾಭರಣಗಳಿತ್ತು ।
ಸ್ತೋತ್ರವ ಮಾಡುವನಿವನನ್ನರೀ ಲೋಕತ್ರಯದೊಳಗಿಲ್ಲವೆಂದು ॥ ೨೧೩

ಪರವೆಣ್ಗಳೊಡಹುಟ್ಟಿದವರೆಂದು ನಡೆವನು ವರಶುಚಿಯವನು ಮತ್ತವಗೆ ।
ಮರಣ ಬಂದುದು ರಾಯನರಸಿಯಿಂದವನಿಗೆ ಪರಿಹರಿಸಿತ್ತು ಪುಣ್ಯದಿಂದ ॥ ೨೧೪

ಹೇಳದನೇಕೆ ಸಂಕ್ಷೇಪಿಸಿ ಪೋದಪೆ ಕೇಳಬೇಕೆನೆ ಮಂತ್ರಿಯದನು ।
ಹೇಳಿದನೊಂದು ನೆನಡೊಳರಸಿಗೆ ತನ್ನ ಬಾಲೆ ಮಾಡಿದ ಮಾಯೆಯನು ॥ ೨೧೫

ತೆರಳಿಬಂದವನಾಪ್ತಸಖರು ಸಹಿತ ಮಾಯಾಪುರಿಯ ಪೊಕ್ಕನು ತಾನದನು ।
ಹಿರಿಯರಿಂ ಕೇಳಿ ಕರೆಯ ಕಳುಪಿದೆನವ ಬರುತ್ತೈದನೆ ದಂಡಿನೊಡನೆ ॥ ೨೧೬

ಬಂದು ನೇಮಿಯದಂಡು ನಮ್ಮ ದುರ್ಗವ ಮುತ್ತಿದಂದಿನ ಮೂಱುದಿವಸಕೆ ।
ತಂದು ತೋಱುವೆ ನಾನವನನಿದಕೆ ರಾಯ ಸಂದೇಹ ಬೇಡ ಮನದೊಳು ॥ ೨೧೭

ಎಂದನೆ ಸಂತೋಷಪಟ್ಟಾರ್ಯನೋಲಗದಿಂದೇಳ್ದು ನೃಪತಿ ಬೇಗದೊಳು ।
ಬಂದು ಪೊಕ್ಕರಮನೆಯನು ಮಂತ್ರಿಯೊಡನಿಂತೆಂದು ನುಡಿದನು ನೋವಿನೊಳು ॥ ೨೧೮

ನಿಂದು ತಲೆಯನೊಲಿದಾಶ್ಚರ್ಯದೊಳೊಂದಿ ಮನದೊಳು ನೊಂದವಳ ।
ಸಂದುಸಂದನು ಕಡಿದಿಡಿಸುವುದನು ಬಗೆದಂದು ಕೇಳಿದನು ಮಂತ್ರಿಯನು ॥ ೨೧೯

ಮರಳಿ ಬಂದೆನಗೆ ಮತ್ತೇಕೆ ನೀನೀಕಾರ್ಯದಿರವ ಪೇಳದೆ ಕೊಂದೆ ಮಗನ ।
ಕರುಣವಿಲ್ಲದೆ ಪೊಯ್ತೆ ನಿನಗೆಂದವನ ಮುಂದೆ ಪೊರಳಿದನಾ ಪೊಡವೀಶ ॥ ೨೨೦

ಹೇಳಿದ ಮಾತ ಕೇಳದೆ ಪೂರ್ವಶತ್ರುವ ಕಾಲನೆಡೆಗೆ ತಗುಳ್ವಂತೆ ।
ಆಳೋಚಿಸಿದವನನು ಕೊಂದೆ ನೀನೆನ್ನನಾಳದಾಡುವುದನುವಾಯ್ತು ॥ ೨೨೧

ಅವನಿಂದವನಿಯನಾಳಿಸು ನನ್ನ ಕೊಲ್ಲೆಂದು ವಿವರಿಸಿ ನುಡಿದೆ ಕಾರ್ಯವನು ।
ಅವನ ಬಗೆಯನರಸಱಿವನೆಂದಾನಂಜಿಯವನ ಕೊಂದನು ತಪ್ಪೇನು ॥ ೨೨೨

ಆಱು ತಿಂಗಳ ಮೇಲೆ ನೇಮಿ ಬರಲು ಬುದ್ಧಿ ತೋಱಿ ನೀನೆನ್ನ ಸಭೆಯೊಳು ।
ದೂಱಿದೆ ರಾಯ ಕೇಳ್ತಪ್ಪದಾಯ್ತುರಸಿಂಗಾಱು ಬಾಯೆಂದೆಂಬ ಗಾದೆ ॥ ೨೨೩

ಈ ತೆಱದಿಂ ನೊಂದು ನುಡಿದ ಮಂತ್ರಿಯ ನೀತಿವಾತನರಸ ಕೇಳಿಯವನ ।
ಪ್ರೀತಿವಡಿಸಿದನುಚಿತವಚನಾಲಾಪಜಾತದಿಂದದನುಸುರುವೆನು ॥ ೨೨೪

ತಾತನಮಾತ್ಯ ನೃಪತಿಗಿದು ಲೋಕವಿಖ್ಯಾತ ಮಂತ್ರಿಗಳರಸುಗಳ ।
ಪ್ರೀತಿಖಾತಿಗಳನೆಣಿಪರೇಯೆಂದವನ ಭೂತಳಾಧಿಪ ತಿಳುಪಿದನು ॥ ೨೨೫

ಕಡೆಮೊದಲಿಲ್ಲದ ಪಡೆವೆರಸಾ ನೇಮಿ ಗಡಿಯನೆಲ್ಲವ ದಾಂಟಿ ಬಂದು ।
ತಡೆಯದೆ ಬಿಟ್ಟನು ಗಿರಿದುರ್ಗದೊತ್ತಿನೊಳೆಡೆವಿಡದೇನ ಪೇಳುವೆನು ॥ ೨೨೬

ಬೆಟ್ಟಬೆಟ್ಟದ ಮೇಲೆ ನಿಂದು ಪೌರರು ಕಣ್ಣಿಟ್ಟಾ ನೇಮಿಯ ದಂಡ !
ನಿಟ್ಟಿಸಿದರು ನಿಶ್ಚೈಸಿದರೆಡೆಯೊಳು ಕೆಟ್ಟತೀ ಕುಮ್ಮಟವೆಂದು ॥ ೨೨೭

ಮುತ್ತಿಗೆಗೊಳಗಾದ ಬಳಿಕ ದುರ್ಗದ ಸಿರಿಯೆತ್ತಣದದು ನಿಂದಪುದೆ ।
ಒತ್ತಿಗೆ ಸೇರಲೀಯದವನಳಿದನೆಂದು ಮುತ್ತಿತು ಭಯ ಪುರಜನಕೆ ॥ ೨೨೮

ಓಲಗಕೆಯ್ತಂದು ಕಂಪಿಲಧರಣೀಪಾಲ ಬರಿಸಿ ಮಂತ್ರಿಯನು ।
ಮೇಲೆ ಕೇಳಿದನಿದಕಾವುದೆಣಿಕೆಯೆಂದಾಲೋಲಮಾನಸನಾಗಿ ॥ ೨೨೯

ಬಹು ಪರಿಯಂತಲ್ಲದೆ ಬಂದ ಬಳಿಕ ಮತ್ತಹಹ ಮಾಡುವರೆ ಭೀತಿಯನು ।
ಗಹನ ಗಂಭೀರರಿಗಿದು ಗುಣವೇಯೆಂದು ಮಹಿಪನ ಜಱಿದನಾ ಮಂತ್ರಿ ॥ ೨೩೦

ಆರಭಟೆಯೊಳೆದ್ದು ಮಂತ್ರಿತಿಲಕನಣ್ಣ ಭೈರವನಳಿಯಮಲ್ಲರಸ ।
ವೀರಬಾದುರನೆಂಬವರಿಗೆ ಬಲವನಂದು ಸೇರಸಿದನು ಬಗೆಯಱಿದು ॥ ೨೩೧

ವೀರರಾಮನ ಮಂದಿ ಕುದುರೆಯೆಲ್ಲವ ತನ್ನ ಸೇರುವೆಯನು ಮಾಡಿಕೊಂಡು ।
ಭೂರಿಸನ್ಮಾನಗಳಿಂದವರನಾ ಧೀರ ಸತ್ಕರಿಸಿದನೊಸೆದು ॥ ೨೩೨

ಕಲಿರಾಮನೊಡನೆ ಮಡಿದ ವೀರಭಟರ ಸಂಕುಲದ ಕುದುರೆಗಳ ತರಿಸಿ ।
ಬಲಯುತರೆಂದು ಬಣ್ಣಿಸಿಯವ ಸಲಹುವ ಬಲುಪಾಡಿಗಳಿಗಿತ್ತವನು ॥ ೨೩೩

ಅವರ ಸಂಭೋಗ ಬಿರುದು ಕುಱುಪುಗಳನಂದವರಿಗಿತ್ತಾ ಬೈಚಪ್ಪ ।
ಕುವರನ ಕುದುರೆಯನಾ ವಣಿಗ್ವರ ತಂದ ಹವಣಿನೊಳಗೆ ತರಿಸಿದನು ॥ ೨೩೪

ಎಂದಿನಂದದಿ ದುಶ್ಶೀಲವನಾ ವಾಜಿ ತಂದುಕೊಂಡೆಂದಿನಂದದೊಳು ।
ಬಂದಿಗೀಡಾಗಿ ಬಾಣವ ಬಿಟ್ಟು ಬಡವಾಗಿ ಬಂದುದ ಕಂಡು ಕಂಪಿಲನು ॥ ೨೩೫

ಏತಕ್ಕೆ ತರಿಸಿದೆ ಬೈಚಪ್ಪ ನೀನಿದನಾತುರದಿಂದ ಕಾಳಗಕೆ ।
ಆತಗಲ್ಲದೆ ಬೆನ್ನ ಕೊಡದಿದಕೆಂದಿನ ರೀತಿಯೇ ಬಂದು ಸೇರಿದುದು ॥ ೨೩೬

ಕ್ಷಿತಿಪ ಕೇಳಿನ್ನಲ್ಲಿಗೆ ಬಹ ಪೊಸರಾವುತ ವಾಜಿಯೇಱಾಟದೊಳು ।
ಚತುರನೆಂದಱಿದು ತರಿಸಿದೆನೆಂದವನೊಂದು ಗತಿಯೊಳರಸಗೆ ಪೇಳಿದನು ॥ ೨೩೭

ಕುದುರೆಯೇಱಾಟದೊಳವ ನಳನಕುಲಾದ್ಯರಿಗೊರೆಮಿಗಿಲೆಂಬುದನು ।
ಗರುವರಿಂ ಕೇಳ್ದಲ್ಲಿಗಿದ ತರಿಸಿದೆನೆಂದು ಧರಣಿಪಗವನುಸುರಿದನು ॥ ೨೩೮

ಈ ಕುದುರೆಯನವನೇಱಿದಿರ್ದೊಡೆ ಮತ್ತೆ ನೂಕದವನ ಕೈಯೊಳಗೆ ।
ಈ ಕದನವ ಜಯಿಸುವದೆಂದವನದೊಂದು ಕಾಕುವಿಂದದ ಸೂಚಿಸಿದನು ॥ ೨೩೯

ರಾಮನಾಥನಿಗುಳ್ಳನಿತು ಗುಣವೀ ಬಹ ರಾಮಕುಮಾರಗಿಲ್ಲದಿರೆ ।
ಈ ಮಹಾಕದನವನೆಂತು ಜಯಿಸುವನೆಂದಾ ಮಂತ್ರಿ ನುಡಿದ ಜಾಣ್ಮೆಯಲಿ ॥ ೨೪೦

ಬಳಿಕೊಯ್ಯನೊಯ್ಯನೆ ಭಾಸ್ಕರನಪರಾಚಲದ ಮಱೆಗೆ ಪೋಗೆ ನೇಮಿ ।
ನಲವಿಂದ ಮಾಡಿಸಿದನು ಪಾಳೆಯವನು ಮೊಳಗೆ ನಾನಾವಾದ್ಯಗಳು ॥ ೨೪೧

ಎತ್ತಿದವಿರದೆ ಕೈದೀವಟಿಗೆಗಳು ವಿಯತ್ತಳವನು ವಿಲಯಾಗ್ನಿ ।
ಸುತ್ತಿದುದೆನೆ ಪಾಳೆಯವ ತಿರುಗಿದವೀ ಪತ್ತು ಸಾವಿರ ತೇಜಿಗಳ ॥ ೨೪೨

ಅತ್ತ ಕುಮ್ಮಟದುರ್ಗದಗಳಾಳ್ವರಿಕೋಟೆ ಕೊತ್ತಳ ಸಾರಣೆಗಳನು ।
ಸುತ್ತ ಬಳಸಿ ನೋಡಿ ಕಂಪಿಲ ಹರುಷಂಬೆತ್ತನು ಮನದೊಳಗೆಂದು ॥ ೨೪೩

ಬಾಗಿಲು ಬಾಗಿಲುಗಳನು ಮನ್ನೆಯರಿಗೆ ಸಾಗಿಸಿದನು ಬಗೆಯಱಿದು ।
ಬೀಗಗಳಿಗೆ ತನ್ನ ಸಜ್ಜನರನು ಮಂತ್ರಿಯಾಗಳಿಕ್ಕಿದನು ಬೇಗದಲಿ ॥ ೨೪೪

ಆಳುವೇರಿಯ ಕಾವಲಿಗೆ ತನ್ನ ಹಳೆಪೈಕದಾಳ ಬಲಿದು ತವಕದೊಳು ।
ಪಾಳೆಯ ಘಟ್ಟಣೆಯೊಳು ತಿರುಗುವ ಬಲ್ಲಾಳ ಸೇರುವೆಯ ಮಾಡಿದನು ॥ ೨೪೫

ಆಳುವೇರಿಯ ಮೇಲೆಣ್ಣೆಕೊಪ್ಪರಿಕೆಗಳೋಳಿನೆಸೆದವೆಡವಿಡದೆ ।
ಸಾಲಿಕ್ಕಿದವು ಪಂಜಿನ ಹೊಱೆಗಳು ಮಂತ್ರಿ ಹೇಳಲೆಯ್ತಂದು ಬೇಗದೊಳು ॥ ೨೪೬

ಡೋಳು ಚೆಂಬಕವಱೆ ಬೀರಣಱೆಂಚೆ ನಿಸ್ಸಾಳಬೊಂಬುಳಿ ಕೊಂಬು ಕೊಳಲು ।
ಕಾಳೆ ಕರಡೆ ತಂಬಟೆ ತೂಳುವಱೆ ಢಕ್ಕೆ ಮೇಳಾಪಿಸಿದವು ದುರ್ಗದೊಳು ॥ ೨೪೭

ಒತ್ತಿ ಊದುವ ಜಿನಗಾಳೆ ಬುಱುಗು ಚಿನ್ನ ತಿತ್ತಿರಿ ಶಂಖವಾಸಗಳ ।
ಮೊತ್ತದ ನಾದ ಕೇಳ್ವರ ಕಿವಿವಾಗಿಲ ಕಿತ್ತವದೇನ ಬಣ್ಣಿಪೆನು ॥ ೨೪೮

ಮುಗ್ಗಿ ಕವಿದು ಪಾಳೆಯನನಿರದೆ ಪೊಕ್ಕು ನುಗ್ಗೇಳೆ ಪೊಯ್ವ ಸುಭಟರ ।
ಅಗ್ಗಳಿಕೆಯನಱುದಱಿದು ಕಳುಪಿದನು ಕಗ್ಗೊಲೆಗಂದು ಬೈಚಪ್ಪ ॥ ೨೪೯

ಇಂತು ಪಾಳೆಯದೊಳಗಣ ಹೊಂತಕಾಱುಗಳಾಂತು ನಿಲಿಸೆ ಕಲಕಲವ ।
ಪಂತಪಾಡುಗಳೆ ನುಡಿವುತತ್ತಲವರೋರಂತೆ ದುರ್ಗಕೆ ಮರಳಿದರು ॥ ೨೫೦

ಹರೆದ ಬಲವ ಕೂಡಿಕೊಂಡು ಪಿಡಿದ ಗಜತುರಗಖಾನರ ತಲೆಗಳನು ।
ಭರದಿಂದ ತಂದೊಪ್ಪಿಸಿದರು ಕಂಪಿಲಭೂವರೆಗೆ ಬಿರುದಿನೆಕ್ಕಟಿಗರು ॥ ೨೫೧

ಗುಡಿಗುಡಾರಸಿಂಗಾಡಿವಿಲ್ಲುರಕಸ ಕಡಿದಾಬೆ ಖೇಡಯಗಳನು |
ಕಡುಗಲಿಗಳು ತಂದೊಪ್ಪಿಸಿದರು ತಮ್ಮೊಡೆಯ ಕಂಪಿಲಗೆ || ೨೫೨

ಇಱಿದ ಭಂಟರಿಗೆ ಭಂಗಾರದಟ್ಟೆಯನುಡುಗೊಱೆಗೊಟ್ಟು ವೀಳೆಯವೆರಸು |
ನೆಱೆ ಸನ್ಮಾನಿಸಿ ಕಳುಪಿದನಾ ನೆಲದೆಱೆಯ ಸಂತಸ ಕೈ ಮಿಗಿಲು || ೨೫೩

೧೪

ಧುರಧೀರ ರಾಮನಳಿದ ಕಂಪಿಲನನುವರವನೆಂತೀ ನೇಮಿಯೊಡನೆ ।
ವಿರಚಿಪನದ ನೋಳ್ಪೆನೆಂದು ಬಂದಂತೆ ಭಾಸ್ಕರ ಬಂದನುದಯಶಿಖರಿಗೆ ॥ ೧

ತಲ್ಲಣಿಸಲು ತಾರಾಲೋಕ ಪಾತಾಳ ಪಲ್ಲಟಿಸಲು ದೆಸೆಗಡೆಯ ।
ವಲ್ಲಭರಿಗೆಯೆ ನೊಳಗಿದವು ಪಾಳೆಯದಲ್ಲಿ ಪಲವು ವಾಕ್ಯಗಳು ॥ ೨

ಭೈರವದೇವ ಬಾದುರಖಾನ ಮೊದಲಾದ ಭೂರಮಣರ ಪೌಜುಗಳನು ।
ಸೇರಿಸಿದನು ಬಗೆಯಱಿದು ಬೈಚಪ್ಪನು ದಾರಿದಾರಿಗಳೆಡೆಗಳೊಳು ॥ ೩

ಬೆಟ್ಟ ಮೊರಡಿ ಗುಂಡುಗಲ್ಗಳ ಮಱೆಗಳೊಳಿಟ್ಟಣಿಸಿತು ಬಿಲ್ಲ ಮಂದಿ ।
ಮುಟ್ಟೆ ತಿವಿದ ತವಕದೊಳು ಮಱೆಯೊಳಡ್ಡಗಟ್ಟಿ ನಿಂದರು ಸಬಳಿಗರು ॥ ೪

ತತ್ತಱದಱೆವೆವು ತುರುಕರನೆನುತಾರ್ದು ಕುತ್ತುಱು ಮೆಳೆಮಱೆಗಳೊಳು ।
ತುತ್ತುಱು ಬಾಗಿ ನಿಂದರು ಬೆಟ್ಟಬೆಟ್ಟಗಳೊತ್ತಿನೊಳಗೆ ಕಾಲವರು ॥ ೫

ನಡೆದು ಬಂದಾ ನೇಮಿ ಕಂಡನು ಕಂಪಿಲಪೊಡವಿಪತಿಯ ಪೌಜುಗಳನು ।
ಕೆಡಹಿ ಕೋಂಟೆಯ ಧೂಳಿಗೋಂಟೆಯ ಕೊಳ್ಳೆನೆಂದೊಡನೆ ನುಡಿದನು ಖಾನರಿಗೆ ॥ ೬

ಕಡುಗಲಿರಾಮ ಮಡಿದನಿನ್ನೇತಕೆ ತಡವು ಪಡೆಯನೆಲ್ಲವನು ।
ಕಡಿದೊಟ್ಟಿ ಕುಮ್ಮಟವನು ಕೊಳ್ಳಿ ನೀವೆಂದು ನುಡಿದನಾ ನೇಮಿ ಖಾನರಿಗೆ ॥ ೭

ಕಡುರೋಷ ಕೈಮೀಱಿ ನೇಮಿಮಲ್ಲುಕ ತನ್ನ ಪಡೆಯನೆಲ್ಲವ ಕೂಡಿಕೊಂಡು ।
ಒಡನೇಱು ಮುಱಿಯಲಿಱಿದು ಕುದುರೆಗಳನು ಪಿಡಿದು ಕುಮ್ಮಟವ ಮುತ್ತಿದನು ॥ ೮

ಮುತ್ತಿದನಾ ದುರ್ಗವನು ಮೂವಳಸಾಗಿ ಕಿತ್ತಿಡುವಂತಾ ನೇಮೀ ।
ಹತ್ತಿರದಂದು ಕಾಲವರಾದುರ್ಗವನೆತ್ತುವಂತೇನ ಬಣ್ಣಿಪೆನು ॥ ೯

ಮುಗ್ಗಿದಾಳುಗಳ ಮುನ್ನಿಸದಂದು ಸುರತಾಳ ಲಗ್ಗೆ ಮಾಡಿತು ಪಟುಭಟರು ।
ಮುಗ್ಗಿ ಕವಿದು ಕೋಟೆದೆನೆಗಳೊಳಗೆ ತಮ್ಮಗ್ಗಳಿಕೆಯನು ಮೆಱೆದರು ॥ ೧೦

ನಿಚ್ಚಣಿಗೆಗಳನಾ ನೇಮಿ ಮನ್ನೆಯರಿಗೆ ಹಂಚಿಕೊಡಲು ವೀರಭಟರು ।
ಮುಚ್ಚರದಿಂ ಹತ್ತಿ ಕಡಿದಾಡಿ ನೋಳ್ಪರಿಗಚ್ಚರಿಯನು ಪುಟ್ಟಿಸಿದರು ॥ ೧೧

ಅಂಬಿನಂಬುಧಿಯ ತುಳುಕಿದರೋ ಮೇಘ ತಾನಂಬುವಳೆಯನು ಕಱೆದುದೊ ।
ಎಂಬಂತೆ ಪುರದೊಳು ಸಿಂಗಾಡಿಯುಂಬಿನಾಡಂಬರ ಮಸಗಿತೇನೆಂಬೆ ॥ ೧೨

ರಾಯನಾವೆಡೆಯೊಳಿದ್ದಪನೊ ಕುಮ್ಮಟವಿಂದುಹೋಯಿತೆಂದಲ್ಲಲ್ಲಿ ಜನರು ।
ಬಾಯ ಬಿಡುತಿರಲೊಯ್ಯನೆ ಬಂದನು ಕಂಪರಾಯನರಸು ಮೋಹರದೊಳು ॥ ೧೩

ಹರಿಯ ಬಿಟ್ಟನು ಮೈಗಾವಲ ಮಂದಿಯ ಧುರಧೀರ ಕಂಪನೃಪಾಲ ।
ಸರಳು ಬಿಲ್ಲಂದೆಯ್ದುವಂದದೊಳವರೆಯ್ದಿ ಅರಿಭಟರನು ಕೆಡಪಿದರು ॥ ೧೪

ಸುರಗಿ ಸಬಳ ಪಂದಿ ಪೊಟ್ಟೆಟ್ಟ ಗದೆ ತೋಲವರಗುಂಡು ಪೆಟಲುಗಳಿಂದ ।
ಸುರುತಾಳಲಗ್ಗೆಯನಿಳುಪಿದರಂದಾ ವರವೀರಭಟರು ಬೇಗದೊಳು ॥ ೧೫

ಉರಿದೋಱೆ ಜೇನಹಳ್ಳಿಯ ಬಿಟ್ಟಾ ನೊಳವಿರದೆ ತೆರಳುವ ತೆಱದೊಳು ।
ಸರಿದುದು ಸುರತಾಳಲಗ್ಗೆ ದುರ್ಗವ ಬಿಟ್ಟು ನರಪತಿ ನಲವೇಱಿದನು ॥ ೧೬

ತೆಗೆಯಿತು ಸುರತಾಳಲಗ್ಗೆ ಮೆಲ್ಲನೆ ಮೊಗದೆಗೆದನು ರವಿ ಪಡುಗಡೆಗೆ ।
ಜಗಳವ ಬಿಡಿಸಿ ಬೀಡಿಗೆ ನಡೆದೆನು ನೇಮಿ ನಗುತ ಖಾನರ ಮೋಹರದೊಳು ॥ ೧೭

ಓಲಗಶಾಲೆಗೆ ಬಂದು ಕಂಪಿಲನರಪಾಲ ಬರಿಸಿ ಮಂತ್ರಿಯನು ॥
ಕೇಳಿದ ನೀನೆನ್ನೊಡನೆ ಪೇಳಿದ ಬಲ್ಲಾಳು ಬಂದನೆ ಪೇಳೆಂದು ॥ ೧೮

ತಡವೇತಕಿನ್ನು ನೀನವನ ತಂದೆಮ್ಮನು ಕಡುವೇಗದಿಂ ಕಾಣಿಸೆನಲು ।
ನುಡಿದನಿಂತೆಂದಾ ಮಂತ್ರಿ ಕಂಪಿಲಭೂಪನೊಡನೆ ಕಟಾಕ್ಷೋಕ್ತಿಯಲಿ ॥ ೧೯

ಬಂದು ರಾಯನ ಪಾದವ ಕಾಣಬಾರೆನಲೆಂದನಾ ಕುವರನೆನ್ನೊಡನೆ ।
ಹಿಂದಕೆ ನೇಮಿಯನೋಡಿಸಿದಲ್ಲದೆ ಬಂದು ರಾಯನ ಕಾಣೆನೆಂದು ॥ ೨೦

ಇದಿರುಪವುಜನಕ್ಕಿ ನೇಮಿಯ ದಂಡನು ಸದೆದೋಡಿಸಿ ಕಂಪನೃಪನ ।
ಪದವ ಕಂಡಪೆನೀಗ ಕಾಣ್ಬೆನಲ್ಲೆಂದಾ ಕದನಲಂಪಟನುಸುರಿದನು ॥ ೨೧

ಆ ನುಡಿಗೇಳಿ ಕಂಪಿಲಭೂಮೀಶ್ವರನಾನಂದವಡೆದೆದೆಯೊಳಗೆ ।
ನಾನಾಪರಿಯ ವಸ್ತ್ರಾಭರಣಂಗಳನಾನದವನಿಗಟ್ಟಿದನು ॥ ೨೨

ಹರೆದುದೋಲಗ ಕಂಪಿಲ ಭೂಮೀಶ್ವರನರಮನೆಗೆಯ್ದಿದನಿತ್ತ ।
ಭರದಿಂದ ಬಂದಾ ಮಂತ್ರಿ ಮನೆಯ ಪೊಕ್ಕಿರದೆ ನೆನೆದನು ದೇವನನು ॥ ೨೩

ನೆನೆಯೆಲೊಡನೆ ದೇವನೆಯ್ತರಲಾ ಮಂತ್ರಿ ವಿನಯಾಲಾಪಗಳಿಂದ |
ವಿನುತ ಮಸ್ತಕನಾಗಿ ಕುವರರನೆಯ್ದಿಸೆಂದನುನಯದಿಂದ ಪೇಳಿದನು || ೨೪

ಭರದಿಂದ ದೇವ ರಾಮನೆಡೆಗಾದರದಿಂದ ಬಂದು ಪೇಳಿದನು |
ಸುರತಾಳದಂಡು ಬಹಳ ನೀನಿಲ್ಲದೆ ತರಹರಿಸದು ದುರ್ಗವೆಂದು || ೨೫

ಹೊಱಕೋಟೆಯು ತೆನೆಗಳ ಕೆಡಪಿದರವರಿರದೆ ಹತ್ತಿದರು ದುರ್ಗವನು |
ಮಱಿಮಾತೇನು ನೀನಿಲ್ಲದೆ ಪುರವಿನ್ನು ಸೆಱೆಯಾಗದಿರದಸುರರಿಗೆ || ೨೬

ಕಾಲಾಗ್ನಿರುದ್ರಕೋಪಾಟೋಪದಿಂ ಪಾತಾಳದಿಂದೇಳ್ವ ತೆಱದೊಳು |
ಏಳು ನೀನಿನ್ನಿರಲಿಲ್ಲ ಕುಮ್ಮಟವದು ಹಾಳಾಗದಿರಿದಿಂದ್ರನಾಣೆ || ೨೭

ಎನೆ ನಸುನಗುತ ಕುಮಾರನಾ ದೇವನನುನಯದಿಂ ಕೇಳಿದನು |
ಅನುವರದೊಳಗಳಿವೆನಗಾರಿಂದದನನುವದಿಸೆನ್ನೊಡನೆಂದು || ೨೮

ಕುರುರಾಯಜನನಿ ಭೀಮನನಿನ್ನವೇಲಣೊಂದುರು ಕೋಪೋದ್ರೇಕದಿಂದ |
ಮರಣವನೆಯ್ದಿ ನಾನಾಯೋನಿಮುಖದೊಳು ತಿರುಗಿ ಬಂದಳು ಮತ್ತೀಗ || ೨೯

ಮಾತಂಗಕುಲದೊಳು ಜನಿಸಿ ಪೆಸರಿನಿಂದ ಮಾತಂಗಿಯೆಂದು ಡಿಳ್ಳಿಯೊಳು |
ಖ್ಯಾತಿಪಡೆದು ಸುರತಾಳನ ಬಾಗಿಲೊಳಾ ತರಳಾಕ್ಷಿಯಿರ್ದಪಳು || ೩೦

ನೀಲದಪುತ್ಥಳಿಯಂತೆ ನೀರೇಜಂಧ ಕಾಲಮೇಘದ ಲಕ್ಷ್ಮಿಯಂತೆ |
ಆ ಲತಾಂಗಿ ಕಣ್ಗೊಳಿಸುತಿರ್ದಪಳೀಗ ಲೀಲೆ ಕೈಮಿಗೆ ಡಿಳ್ಳಿಯೊಳು || ೩೧

ಅವಳಿಂದ ರಣದೊಳಳಿದನೆಂದು ಲೋಕಕೆ ನೆವವಿಟ್ಟು ನಿನ್ನನೀಶ್ವರನು |
ಶಿವಲೋಕವೆಯ್ದಿಸುವನು ಮೇಲೆ ಮಾತಂಗಿ ತವಕದಿಂ ನಿನ್ನ ತಲೆಯನು || ೩೨

ಸುರತಾಳಗೆ ತೋಱಿದಪಳದು ಜಗದೀಶ್ವರನ ಕೃಪಾರಸದಿಂದ |
ವರಲಾವಣ್ಯರಸಾಬುವಿಂ ಪೊರೆದಂತೆ ಕರಮೆಸೆವುದು ಕಾಂತಿಯಿಂದ || ೩೩

ಎಳೆನೇಸರಂತೇಣಾಂಕಮಂಡಲದಂತೆ ನಳಿನದ ವೈಸಿರಿಯಂತೆ |
ಘಳಿಗೆ ಘಳಿಗೆ ಜಾವಜಾವಕಾ ತಲೆ ಥಳಥಳಿಪುದು ಮೊಗರಸದಿಂದ || ೩೪

ಸುರತಾಳಸುತೆಯಾ ತಲೆಯು ಕಾಣುತ ತನ್ನ ಹರಣವನೀಡಾಡುವಳು |
ಧರಣಿಯೊಳಗೆ ದೇವರೆಂದು ನಿನ್ನನು ಕೆಲನರರು ಕೊಂಡಾಡಿ ಪೂಜಿಪರು || ೩೫

ಎನೆ ಬಡವಗೆ ಕಡವರ ಕೈಸಾರ್ದಂತೆ ಮನದೊಳಾನಂದ ಕೈಮಿಗಿಲು ।
ವಿನಯಪೂರ್ವಕದಿಂದ ವಿಬುಧನಡಿಗಳಿಗೆ ವಿನತನಾದನು ವೀರರಾಮ ॥ ೩೬

ಉರಗಕುಮಾರ ಕುಟುಂಬಮಿತ್ರರುಸಹ ಧರೆಗೆ ಬರ್ಪಂತಾ ರಾಮ ।
ತರುಣೀಜನಪರಿಜನ ಪಿಂತೆ ಬರೆ ದೇವವೆರಸು ಬಂದನು ಮಂತ್ರಿಯೆಡೆಗೆ ॥ ೩೭

ಲೆಕ್ಕವಿಲ್ಲದ ವಸ್ತ್ರಾಭರಣಂಗಳನಿಕ್ಕಿ ಕಾಣಿಕೆಯನಾ ಮಂತ್ರಿ ।
ಉಕ್ಕೆ ಸಂತೋಷಾಂಬುನಿಧಿ ಮನದೊಳು ಪೈಯಿಕ್ಕಿದನಾ ಕುವರಗೆ ॥ ೩೮

ತೆಗೆದಪ್ಪಿಕೊಂಡು ಮಂತ್ರಿಯನಾ ರಾಯನ ಮಗ ಮಿಗೆ ಸತ್ಕರಿಸಿದನು ।
ಬಗೆಯಲಾ ರಾಯನಂತಪ್ಪ ಗುಣಿಗಳೀ ಜಗದೊಳಿಲ್ಲೇನ ಬಣ್ಣಿಪೆನು ॥ ೩೯

ಪಲವು ಪಗಲು ಕಂಡುದಿಲ್ಲ ರಾಮನ ಮುಖನಳಿನವ ನೋಡಬೇಕೆಂದು ।
ತಲೆದೋಱಿದನೋ ಎಂಬಂತುದಯಾದ್ರಿಯನೊಲಿದಡರಿದನಬ್ಜಸಖನು ॥ ೪೦

ತಂದು ತೋಱಿದರಾ ದಿವ್ಯವಾಜಿಯು ನಲವಿಂದ ರಾಮಗೆ ಸಹಣಿಗಳು ।
ಅಂದು ತನ್ನೊಡೆಯನೆಂದಱಿದುದು ರಾಮನನಿಂದು ನಿಟ್ಟಿಸಿ ಲೀಲೆಯಿಂದ ॥ ೪೧

ಕುದುರೆಯೊ ಕುವರನ ಪೂರ್ವದ ಪುಣ್ಯದೊಂದುದಯಮೊ ವಿಜಯಾಂಗನೆಯ ।
ಗದುಕನ ರೂಪೋ ಎಂದೆನೆ ನೋಳ್ಪರ ಕಣ್ಗೆ ಮುದವಿತ್ತುದಾ ದಿವ್ಯವಾಜಿ ॥ ೪೨

ಮಿಸುನಿಯ ಪಕ್ಕರೆ ಜೋಡು ಸವಗ ಹೌಳಿ ಮಿಸುಪ ಖಂಡೆಯ ಖೇಡೆಯಗಳ ।
ಒಸೆದಿತ್ತು ಮಂತ್ರಿಯೊಳ್ನುಡಿಯೆಂಬ ಸಾಣೆಯಿಂ ಮಸೆದನವರ ಮನದಲಗ ॥ ೪೩

ಒಳಗೆ ನಾನಾವಾದ್ಯಂಗಳಿರದೆ ನೆಲವೊಳಗಿತೆಂಬಂತೆ ಬೇಗದೊಳು ।
ದಳವನೆಲ್ಲವ ಕೂಡಿಕೊಂಡು ತೆರಳಿದನು ದಳಪತಿ ಕುವರನಾಜ್ಞೆಯೊಳು ॥ ೪೪

ಹಿಂದಕೆ ಸುರತಾಳದಂಡನೆಲ್ಲವನವ ಕೊಂದ ಮಹಾರಾವುತನು ।
ಬಂದು ಸೇರಿದನು ರಾಯಗೆ ಪೂರ್ವದ ಪುಣ್ಯದಿಂದೆಂದು ಮಂತ್ರಿ ನುಡಿದನು ॥ ೪೫

ಉತ್ತಮ ವಜ್ರದ ಹೌಳಿ ರನ್ನದ ಜೋಡು ಮುತ್ತಿನ ಸವಗ ಮೆಱೆಯಲು ।
ಕೆತ್ತಿದ ರತ್ನದ ರಾವುತನಂತೆ ಕಣ್ಗಿತ್ತನಾ ಕುವರ ಕೌತುಕವ ॥ ೪೬

ಕಾಟಣ್ಣ ಭಾವಸಂಗಮದೇವ ಮೊದಲಾದ ಮಾಟಿನ ರಾವುತರೊಡನೆ ।
ತೋಟಗೆ ನಡೆದನು ತೋಳ್ಪಲ ಕೈಮಿಗೆ ನೋಟಕರಿಟ್ಟೈಸುತಿರಲು ॥ ೪೭

ಬಲನ ಬವರಕೆ ಬಲಾರಾತಿ ದಿಕ್ಪತಿಗಳ ಕೂಡಿಕೊಂಡೆಯ್ದುವಂತೆ ।
ಕೆಳೆಯರ ಮೋಹರದೊಳು ನಡೆದನು ರಾಮು ಕೊಳಗುಳಕತಿಲೀಲೆಯೊಳು ॥ ೪೮

ರಾಮನ ನಿಲವು ರಾಮನ ಗಂಡಗಾಡಿಯೀರಾಮು ಕುಮಾರನೊಳಗಿದೆ ।
ರಾಮನಾಥಗೆ ತಾನೆಣೆಯಲ್ಲದಿವನಿಗೀ ಭೂಮಿಯ ರಾವುತೆರೆಣೆಯೇ ॥ ೪೯

ಎಂದು ನುಡಿವುತಿರೆ ಪುರಜನ ಕುವರನೆಯ್ತಂದು ಪೊಕ್ಕನು ನಿಜಬಲವ ।
ಅಂದು ಗೋಗ್ರಹಣದೊಳಗೆ ನರ ಮತ್ಸ್ಯನ ಸಂದ ಸೇನೆಯ ಪೊಗುವಂತೆ ॥ ೫೦

೧೫

ನೆಲ ನಡುಗಿತು ನೇತ್ರಾಂಬುವನಶ್ವಸಂಕುಲ ಸುರಿದುದು ಖಡ್ಗನಿವಹ ।
ಇಳೆಗೊಱಿತಯಿಂದುರ್ಕಿಬೀಳ್ದವಾ ನೇಮಿಯ ಬಲದೊಳುತ್ಪಾತ ಮಸಗಿತು ॥ ೧

ಅಳಿದುದಿಲ್ಲಾ ರಾಮ ಪುಸಿಯ ಸುದ್ದಿಯ ಪುಟ್ಟಿಸಿಳೆಯೊಳು ಬರಿಸಿಕೊಂಡೆಮ್ಮ ।
ಕೊಲಿಸಬೇಕೆಂದು ಮಾಡಿದುದಲ್ಲದಿರ್ದೊಡೀ ಬಲದೊಳುತ್ಪಾತವಾದಪುದೇ ॥ ೨

ತಂದೆ ಮಗನ ಕೊಲಿಸಿದನೆಂಬೀ ಸುದ್ದಿ ಬಂದುದಿಲ್ಲೆಮ್ಮಯ ಮನಕೆ ।
ಇಂದಿನಾಹವದೊಳಗಾ ರಾಮನೆಮ್ಮ ಕೈಯಿಂದ ಕಾಣಿಸಿಕೊಳ್ಳದಿರನು ॥ ೩

ಕನ್ನಡಿಗರು ಕಪಟಗಳವರೆಸಗುವ ಗನ್ನವದೆಮಗೆ ಕಾಣಿಸದು ।
ಸನ್ನದ್ಧನಾಗು ಸಮರಕೇಳಿಗೆ ಬಲುಮನ್ನೆಯರನು ಕೂಡಿಕೊಂಡು ॥ ೪

ಇದೆ ರಾಮನ ಕುದುರೆಯ ಹೇಷಾರವವಿದೆ ಪೊಸರನ್ನವಕ್ಕರಿಕೆ ।
ಇದೆ ಮುತ್ತಿನ ಜೋಡಹುದಿವ ರಾಮನಿಂದೊದವಿ ಸದೆಯದಿರನೆಮ್ಮ ॥ ೫

ಎಂದು ವಜೀರಮಲ್ಲುಕಖಾನರು ರಾಮನೆಂದು ನಿಶ್ಚೈಸಿ ಮನದೊಳು ।
ಮುಂದಕ್ಕಡಿಯನಿಡಲಮ್ಮದೆ ಬಲಸಹ ನಿಂದರಲ್ಲಲ್ಲಿ ಮಱಿತಯೊಳು ॥ ೬

ಕರೆದು ಕರೆದು ನೇಮಿಖಾನ ಖಾನರಿಗಾದರದಿಂದ ಕೊಟ್ಟುಡುಗೊಱಿತಯು ।
ಎರಡುಪಕ್ಕದಲಿ ನಿಲಿಸಿಕೊಂಡನು ರಾಮನುರವಣೆಗಂಜಿ ಮನದೊಳು ॥ ೭

ಗಜಘಟೆಯನು ಸಿಂಹದ ಶಿಶು ಭಜಕರವ್ರಜಿನವೃಂದವನೀಶ್ವರನು ।
ನಿಜಶಕ್ತಿಯ್ಯೆದುವಂತೆಯ್ದಿದೆವಂದಾ ಭುಜಬಲದಿಂದಾ ಬಲವ ॥ ೮

ಹೊಕ್ಕನು ಹೊರಳೆಯೊಡಯಿಸಿದನಾ ಪೌಜನೆಕ್ಕತುಳಿದ ರಾವುತರನು ।
ಒಕ್ಕಲಿಕ್ಕಿದನಾ ಬಲ ಚೆಲ್ಲಿತು ದಿಕ್ಕುದಿಕ್ಕಿಗಾ ರಾಮನುಱುಬೆಗೆ ॥ ೯

ಹೊಯ್ದು ಕೆಡಹಿದನು ಹೆಸರ ಹೇಳುತ ಮೇಲ್ವಾಯ್ದು ಮಹಾರಾವುತರನು ।
ಮೆಯ್ದೆಗೆದರ ಬಿಸುಟನು ರಾಮನಂತಪ್ಪ ಕೈದುಕಾಱನದಾರಿಳೆಯೊಳು ॥ ೧೦

ಕಂಡಕಡೆಗೆ ಕೆದಱಿತು ನೇಮಿಖಾನನ ದಂಡಾ ನೇಮಿಮಲ್ಲುಕನು ।
ಕಂಡದನಿರಪೆ ಮೆಯ್ಗಾವಲವರ ಕೂಡಿಕೊಂಡು ಸಾಗಿದನು ಬೆನ್ನಿತ್ತು ॥ ೧೧

ಹರಿವೆಸರಿಗೆ ಹವ್ವಳಿಸುವಾನೆಯು ಹಿಂಡು ತರಹರಿಪುದೆಯುದ ಕಂಡು ।
ಧುರಧೀರರಾಮನೆಂದೊಡೆ ಕೆಡುವಾ ಬಲ ಇರದವು ನೆಱೆ ನಿಂದಪ್ರವೇ ॥ ೧೨

ಬಡಿಕೊಂಡ ನೆಲ್ಲಿಯು ಕಾಯಂತಾ ಬಲ ಬಿಡದೆ ಚೆಲ್ಲಿತು ಕಂಡಕಡೆಗೆ ।
ತಡೆಯದೆ ಬೆಂಕೊಂಡುದಾ ಕಂಪರಾಯನ ಪಡೆಯಾ ತುರುಕಬಲವನು ॥ ೧೩

ತಳಿಯ ಮುಱಿದು ಕರಿಪತಿ ಕದಳೀವನದೊಳಗೆ ಪೊಗಲು ಕಳಭಗಳು ।
ಬಳಿಸಲುವಂತಾ ರಾಮನಿರದ ಬಲದೊಳಪೊಕ್ಕುದಾ ಪರಿವಾರ ॥ ೧೪

ತೀರ ಮುಱಿದುದಾ ನೇಮಿಯ ಬಲ ಕಂಪಭೂರಮಣನ ಪರಿವಾರ ।
ವಾರಣವಾಜಿವಾಹಕರನು ಪಿಡಿದುಕೊಂಡೋರಂತೆ ಮರಳಿತೊಗ್ಗಿನೊಳು ॥ ೧೫

ಕಂಡನಾ ರಾಮಕುವರನ ರಾವುತಿಕೆಯುದ್ದಂಡತೆಯ ಕಂಪನೃಪತಿ ।
ಕೊಂಡಾಡಿದನು ಭೋಯೆಂದರೊತ್ತಿನ ಭೂಮಂಡಲಾಧಿಪರು ಕೈಯೆತ್ತಿ ॥ ೧೬

ರಾಮನಿಂದೈದಾಱು ಮಡಿಯು ವಿಕ್ರಮವೀ ರಾಮಕುಮಾರನೊಳಗಿದೆ ।
ಈ ಮಹಿಯೊಳಗಿವಗೆಣೆಯಿಲ್ಲೆಂದಾ ಭೂಮಿಪನುರೆ ಮೆಚ್ಚಿದನು ॥ ೧೭

ಎಂದು ಕೊಂಡಾಡಿ ಬೈಚಪ್ಪ ನೀನಿವನನು ತಂದು ಕಾಣಿಸು ನಮ್ಮನೆನಲು ।
ಮಂದಹಾಸದಿಂದ ನುಡಿದಾ ರಾಯುಗಿಂತೆಂದಾ ಮಂತ್ರಿ ನಿಜವನು ॥ ೧೮

ಅಳಿದುದಿಲ್ಲವನೀಶ್ವರ ನಿನ್ನ ಮಗ ರಾಮ ಕೊಲಿಸೆಂದು ನೀನೆನ್ನೊಡನೆ ।
ಬಲಿದು ಪೇಳಲು ಕಾದೆನಿಂದ್ರಜಾಲದವಿದ್ಯಾಬಲದಿಂದ ರಾಯ ನಾನವನ ॥ ೧೯

ಎನೆ ಪಾರವಶ್ಯಾನಂದಾಶ್ಚರ್ಯಕೆ ಮನವನಿತ್ತಾ ಕಂಪಿಲನು ।
ಅನಿತಱೆಳಿಚ್ಚತ್ತು ನುಡಿದನು ಗದ್ಗದ ನಿನದದಿಂದೇನೆಂದು ॥ ೨೦

ಬಿಡು ರಾಯ ವಿಸ್ಮಯವನು ನಿನ್ನ ಮಗ ರಾಮ ಮಡಿದಿಲ್ಲವನ ತಂದೀಗ ।
ಕೆಡುಪುವೆ ನಿನ್ನಡಿದಾವರೆಗಳ ಮೇಲೆ ಪೊಡವಿಪ ನಂಬು ನೀನೆಂದ ॥ ೨೧

ಎನೆ ರೋಮಾಂಚನ ಮೆಯ್ಯೊಳು ಜುಮ್ಮುಜುಮ್ಮನೆ ನೆಗೆದುದು ನೇತ್ರಾಂಬು ।
ನನೆಯಿಸಿದುದು ಕದಪುಗಳನಾ ರಾಯನ ಮನಕಾನಂದ ಮುಸುಕಿತು ॥ ೨೨

ಬಂದು ನಿವಾಳಿಯನಿಟ್ಟು ರಾಮನ ಕಂಡಂದವನನು ಕೂಡಿಕೊಂಡು ।
ಬಂದನು ರಾಯನ ಪದವ ಕಾಣಿಸುವಾನಂದ ಕೈಮಿಗೆ ಚಾವಡಿಗೆ ॥ ೨೩

ಹಿಡಿಹೊನ್ನ ಕಾಣಿಕೆಯಿಕ್ಕಿಸಿ ಕಂಪಿಲ ಪೊಡವಿಪತಿಯ ಪಾದಗಳನು ।
ಸಡಗರ ಸಾಲಿಡೆ ಕಾಣಿಸಿದನು ಮಂತ್ರಿ ಕಡುಗಲಿ ರಾಮನಾಥನನು ॥ ೨೪

ಪೊಸದಾದತ್ತು ಪೊಡವಿ ಕಣ್ಗೆ ಮನುಜರು ಹಸನಾದರು ರಾಜ್ಯಪದವಿ ।
ಎಸಕವೆಯ್ದುದು ಕಂಪಿಲಗೆ ಕುಮಾರನ ಮುಸುಡ ನಿರೀಕ್ಷಿಸುತಾಗ ॥ ೨೫

ಹರಪದವಿಯ ಚಿಂತೆ ಮಱೆದುದು ಮನದಿಂದ ಹರಿಪದದೊಂದಭಿಲಾಷೆ ।
ಹರಿದುದು ಹರಿಹರದೇವಿಯ ಕುವರನ ಸಿರಿಮೊಗವನು ಕಾಣುತವಗೆ ॥ ೨೬

ಬಳಿಕಿಂದ್ರಪದವಿ ಕೈಸಾರ್ದಂತೆ ಮನದೊಳು ನಲಿವುತ ಮಗ ರಾಮುವೆರಸು ।
ತಳರ್ದನು ಹೊಸಮಲೆದುರ್ಗಕ್ಕೆ ಕಂಪಿಲ ತಳತಂತ್ರದೊಡನೆ ಲೀಲೆಯೊಳು ॥ ೨೭

ಚರನೊರ್ವನೆಯ್ತಂದು ರಾಮುನ ವಾರ್ತೆಯಂ ಹರಿಹರದೇವಿಗೊರೆಯಲು ।
ಪರವಶೆಯಾದಳು ಪರಿತೋಷವೊತ್ತಂಬರಿಸಲಂತಃಕರಣವನು ॥ ೨೮

ಪರಿಣಮಿಸಿದುದೋ ಪೆಣ್ಣಾಕಾರದಿಂದಾಗ ಪರಮಸಂತೋಷವೆಂಬಂತೆ ।
ಕರಮೆಸೆದಳು ಮಗನಳಿದಿಲ್ಲೆಂದೆಂಬ ಚರವಚನವ ಕೇಳುತವಳು ॥ ೨೯

ಅಳಿದುದಿಲ್ಲ ಗಡ ಕುವರನಿಂದ್ರಜಾಲದಿಂದುಳಿಸಿದ ಗಡ ಮಂತ್ರಿಯುವನ ।
ಬಲಯುತ ನೇಮಿಯ ಗೆಲಿದ ಗಡವನೆಂದು ಪೊಳಲೊಳು ಸುದ್ದಿ ಮೊಱೆದುದು ॥ ೩೦

ಗುಡಿತೋರಣಗಳೆದ್ದವು ವೀಧಿವೀಧಿಗಳೆಡೆಗಳೊಳಗೆ ಸಾಲಿಟ್ಟು ।
ಬಿಡದೆ ಕುಪಕವೆಸೆದವು ರಾಯಬೀದಿಯೊಳೊಡನಾ ಮಂತ್ರಿಯಾಜ್ಞೆಯೊಳು ॥ ೩೧

ತಳಿರತೋರಣದಿಂದ ತಳಿತ ಕುಸುಮದಿಂದ ತಳಿರ ಬಾಗಿಲ್ವಾಡದಿಂದ ।
ಚಳೆಯದಿಂ ಚೆಲ್ಲಿದ ಚಂದನರಸದಿಂದ ಪೊಳಲು ಕಣ್ಗೆಸೆದುದೇನೆಂಬೆ ॥ ೩೨

ಗರುಡನಗರಿಯೋ ಗಂಧರ್ವಪಟ್ಟಣವೋ ಕಿನ್ನರರಾಜಧಾನಿಯೋ ಸುರರ ।
ಪುರಿಯೋ ಎಂಬಂತೆಸೆದುದು ರಾಯಕುವರನ ಬರವಿನೊಳಾ ಗಿರಿದುರ್ಗ ॥ ೩೩

ಮಗವೆರಸಮರೇಂದ್ರನಮರಾವತಿಯನು ಪೊಗುವಂತಾ ಕಂಪಿಲನು ।
ನಗರಾಮು ಸಹಿತ ಪೊಕ್ಕನು ಪೊಳಲನು ಕೈಮಿಗೆ ಸಂತೋಷ ಮನದೊಳು ॥ ೩೪

ಪೊಲಬುದಪ್ಪಿರ್ದ ಸಿಂಹದ ಶಿಶು ಜನನಿಯ ಬಳಿಗೆ ಬರ್ಪಂತೆ ರಾಗದೊಳು ।
ನಲವಿಂದ ಬಂದು ಕಂಡನು ತಾಯ ತಳಿರಡಿದಳವನಾ ರಾಯಕುವರನು ॥ ೩೫

ಮುತ್ತಿನಾರತಿಗಳನೆತ್ತಿದಳವಳಂದು ಮುತ್ತಿನ ಸೇಸೆದಳಿದಳು ।
ಒತ್ತಿ ಬಿಗಿದು ತಳ್ಕೈಸಿಕೊಂಡಳು ತನ್ನ ಹೆತ್ತ ಮಗನನಾ ಜನನಿ ॥ ೩೬

ಮತ್ತೆ ಮಗನ ಬಸಿಱೊಳಪೊಗಿಸುವ ಬಗೆವೆತ್ತಮರ್ದಪ್ಪಿಕೊಂಡವನ ।
ಚಿತ್ತಮನಾನಂದಶರಧಿಯ ಸುಳಿಗೊಲಿದಿತ್ತಳಾ ಹರಿಹರದೇವಿ ॥ ೩೭

ಸೋಮರ್ಮುಡಿಯಂತೆ ಬೆನ್ನೊಳು ನೀರೇಱಿದ ಕಾಮರ್ಮುಗಿಲೆನೆ ಸೋದರಿಯರು ।
ಕೂರ್ಮೆಯ ಕಂಡರು ರಾಮನ ಪೆಣ್ಗಳು ತಾಮರ್ಮುಟ್ಟೆಸೊಳಗೈತಂದು ॥ ೩೮

ಪಲ್ಲಕ್ಕಿಗಳನಿಳಿದತ್ತೆಯತ್ತಿಗೆಯರ ಮೆಲ್ಲಡಿದಾವರೆಗಳಿಗೆ ।
ನಿಲ್ಲದೆ ಪೈಯಿಕ್ಕಿದರು ರಾಮನಾಥನ ವಲ್ಲಭೆಯರು ನಲವಿಂದಾ ॥ ೩೯

ನಲವಿಂದ ಹರಿಹರದೇವಿ ನೃಪತಿ ಮಂತ್ರಿತಿಲಕರೆಯ್ತಂದು ಬೇಗದೊಳು ।
ಲಲನೆಯರೊಡಗೂಡಿ ರಾಮನಾಥನ ನಿಜನಿಳಯವನಿರದೆ ತುಂಬಿದರು ॥ ೪೦

ಅಱಿದಳು ಕುವರನುಳಿವಿನ ವಾರ್ತೆಯ ರತ್ನಿಯುಱುವ ಕೆಳದಿ ಸಂಗಿಯಿಂದ ।
ತೊಱೆದಳಸುವಿನ ವಾರ್ತೆಯ ಪಿಂತಣಜನ್ಮದಱಿವು ಮೆಯ್ದೋಱಿತವಳಿಗೆ ॥ ೪೧

ಅಗಜೆಯ ಹರಿಬಕೆ ಬಂದ ನಾನಾಕಾರ್ಯ ಬಗೆ ಬಂದುದಿಲ್ಲೆನಗೆಂದು ।
ಮಿಗೆ ನಾಣ್ಚಿ ಸುರಲೋಕಕೆಯ್ದಬೇಕಾನೆಂದು ಬಗೆದಳೆಡೆಯೊಳಾ ಬಾಲೆ ॥ ೪೨

ಬಲಿದು ನವದ್ವಾರಂಗಳ ವಾಯುವ ಚಲಿಸಲೀಯದೆ ಮನದೊಳಗೆ ।
ನಿಲಿಸಿಯಂಬಿಕೆಯ ನೆನಹನವಳಸುವನು ಕಳುಪಿದಳಮರ ಲೋಕಕ್ಕೆ ॥ ೪೩

ಕೇಳಿ ತನ್ನಿನಿಯಳಳಿದ ವಾರ್ತೆಯ ನರಪಾಲನೇಳ್ತಂದು ಕಂಡವಳ ।
ಮೇಲೆ ಬೀಳ್ದನು ಮೂರ್ಚ್ಛೆಯೋದನೆಡೆಯ ಬಲುಶೂಲ ಥಟ್ಟುರ್ಚಿದಂದದಲಿ ॥ ೪೪

ಬಂದು ಬೈಚಪ್ಪನಲ್ಲಿಗೆ ರತ್ನಿಮರ್ತ್ಯಕ್ಕೆ ಬಂದುದನಿಂದ್ರಪೇಳ್ದಂತೆ ।
ಒಂದಿನಿಸುಳಿಯದೊರೆದು ನೃಪ ಚಿತ್ತಕಂದಿತ್ತನತಿಕೌತುಕವನು ॥ ೪೫

ಹರಿಣಿಯಜನಕಥನವನದಕವನುದಾಹರಿಸಿ ನೃಪತಿಯ ದುಷ್ಕೃತ್ಯವ ।
ಪರಿಹರಿಸಿದನಿಂತಪ್ಪ ಸುಮಂತ್ರಿಯುಳ್ಳರಸಿಗುಂಟೇ ಕಾರ್ಯಹಾನಿ ॥ ೪೬

ಬಳಿಕಗ್ನಿಯಿಂ ಧಗಧಗಿಸೆ ಬಾವನ್ನದ ಬಲುಗೊರಡುಗಳಿಂದವಳ ।
ಲಲಿತಾಂಗವ ದಹಿಸಿದನಾ ಕಂಪಿಲನಳಲು ಕೈಮಿಗೆ ಮನದೊಳಗೆ ॥ ೪೭

ಏತಕೆಸುವನೀಡಾಡಿಕೊಂಡಳು ಚಿಕ್ಕಮಾತೆ ತನ್ನಿಂದ ಲೋಕದೊಳು ।
ಖ್ಯಾತಿವಡೆದೆನೆಂದು ರಾಮ ನೊಂದನು ನಿಜಮಾತೆಯಳಿದ ತೆಱದಿಂದ ॥ ೪೮

ತಂದೆಯ ಸಂಸಾರಸುಖಕಂತರಾಯವೆಯ್ತಂದುದಾ ರಾಯನ ಮನಕೆ ।
ಬಂದುದು ಬಹಳ ವಿಷಾದವೆಂದಾ ರಾಮ ನೊಂದನೆದೆಯೊಳಿತ್ತಲತ್ತ ॥ ೪೯

ಅಱಿದಾ ತೆಱನನೆಲ್ಲವನೀಶ್ವರ ತನ್ನೆಱತಿಯಳ್ಗೆ ಪೇಳ್ದನಿಂತೆಂದು ।
ನೆಱೆ ಮೆಚ್ಚಿದೆನು ರಾಮನ ಶುಚಿತೆಗೆ ದೇವಿ ಮಱೆಮಾತಿಲ್ಲ ನಿನ್ನಾಣೆ ॥ ೫೦

ಸುರಲೋಕದೊಳೂರ್ವಶಿ ರಾಮನ ಕೀರ್ತಿತರುಣಿಯು ಪೊತ್ತಾಡಿಸುವ ।
ವರಧಾತ್ರಿಯಾದಳು ಸೂಳೆತನವ ಬಿಸುಟಿರದೆ ಮೆಚ್ಚಿದೆನು ರಾಮನಿಗೆ ॥ ೫೧

ಕೊಡು ನಿನ್ನ ಸಾಲೋಕ್ಯಪದವನವನಿಗಿನ್ನು ಜೇಡ ಭವ ನೀನೆಂದ ।
ನುಡಿಯ ಮನ್ನಿಸು ನಗೆ ಜೇಡೆಂದಾ ಪಂಪೆಯೊಡತಿ ನುಡಿದಳೀಶ್ವರಗೆ ॥ ೫೨

ಕೊಟ್ಟೆನು ಸಾಲೋಕ್ಯಪದವಿಯ ರಾಮಗೆ ಕೊಟ್ಟೆನು ಗಣಪದವಿಯನು ।
ಕೊಟ್ಟೆನು ನಿನ್ನಾಣೆಯೆಂದಾ ದುರಿತಘರಟ್ಟ ನುಡಿದ ಪಾರ್ವತಿಗೆ ॥ ೫೩

ಹರಿಕಾಱರು ಹರಿತಂದು ರಾಮುಗೆ ನೇಮಿ ಧುರದೊಳು ಮುಱಿದು ಬಂದುದನು ।
ಸುರತಾಳಗೆ ಪೇಳಿ ಕಳುಪಿದರಂತಃಪುರಕಬಲಾಜನದಿಂದ ॥ ೧

ಉಱುವ ಖಾನರು ಮಡಿದರು ನೇಮಿಮಲ್ಲುಕ ಮುಱಿದನು ವೀರರಾಮುನಿಗೆ ।
ಹಱಹಂಚಾಯ್ತೆಂದು ಬಲದೊರೆಗಳು ಸೆಱೆಯಾದರು ಹಿಂದುವರಿಗೆ ॥ ೨

ಲೆಕ್ಕವಿಲ್ಲದ ಮುಂದಿ ಕುದುರೆ ಬಿದ್ದಿತು ಮತ್ತೆ ಲೆಕ್ಕವಿಲ್ಲದ ಸೆಱೆಕೋಳು ।
ಸಿಕ್ಕಿತು ನಮ್ಮ ಬಲವನೆಲ್ಲವ ರಾಮುನೊಕ್ಕಲಿಕ್ಕಿದನು ರಣದೊಳು ॥ ೩

ಕೊಲ್ಲಾರ ಕೊಟ್ಟಗೆ ಬೊಕ್ಕಸ ಭಂಡಾರವೆಲ್ಲವವರಿಗೊಳಗಾಯ್ತು ।
ಕೊಲ್ಲದ ಕೊಲೆಯ ಕೊಂದನು ರಾಮ ರಣದೊಳಗಲ್ಲಿ ವಜ್ಜೀರಮಲ್ಲುಕರ ॥ ೪

ಎನಲಳಿವನೆದ್ದು ಬಂದೆಮ್ಮ ಸೇನಾವನಧಿಯ ಕಲಕಿ ಖಾನರನು ।
ಅನುವರದೊಳು ಕೊಂದ ಪರಿಯೆಂತುಟೆಂದಾ ದನುಜನವರ ಕೇಳಿದನು ॥ ೫

ಕೊಲಹೇಳೆ ಕಂಪಿಲದೇವನವನ ಮಂತ್ರಿ ನೆಲಮಾಳಿಗೆಯೊಳಡಗಿಸಿ ।
ಕೊಲಿಸಿದೆನೆಂದು ಹುಟ್ಟಿಸಿ ನಮ್ಮ ಬಲವನು ಕೊಲಿಸಿ ತಂದೆಯ ಕಾಣಿಸಿದನು ॥ ೬

ಸುರಮಂತ್ರಿ ಸರಿಯಲ್ಲದೆ ಲೋಕದ ಹೊಟ್ಟೆಹೊರಕಮಂತ್ರಿಗಳು ಬೈಚಪ್ಪಗೆ ।
ಸರಿಯೇ ಸಚಿವನಿಂತಪ್ಪನುಳ್ಳರಸಿನ ಸಿರಿಗೆ ಕಂಟಕವೆಂಬುದುಂಟೇ ॥ ೭

ಅವನಲ್ಲದಿನ್ನು ಭೂಮಿಯೊಳಿಲ್ಲ ಮಂತ್ರಿಗಳವನಲ್ಲದಿನ್ನು ಸಜ್ಜನರು ।
ಅವನಿಯೊಳಿಲ್ಲಪೆಂದಾ ದಾನವೇಶ್ವರನವನನಿರದೆ ಪೊಗಳಿದನು ॥ ೮

ಬಾಲಕನೋರ್ವನಿಂದೆಮ್ಮ ಬಲವ ತಲೆ ಬಾಲಗೆಡಿಸಿ ನೇಮಿಖಾನ ।
ಕಾಲವೇಗನ ಕಾಣಿಸಿದನೆರಡು ಬಾರಿ ಕಾಲನಿನ್ನೊಲ್ಲನಿವನನು ॥

ಉತ್ತರನೊಡನೋದಿದನೊ ಪೆಣ್ಮಕ್ಕಳ ಮೊತ್ತದೊಡನೆ ಸಾಧನೆಯ ।
ಒತ್ತಿಮಾಡಿದನೋ ಕಾಳಗವೆಂದೊಡೆ ಕೈದನೆತ್ತನೀ ನೇಮಿಮಲ್ಲುಕನು ॥ ೧೦

ತುರುಕನಲ್ಲೀ ನೇಮಿ ರಾಮುವೆಸರಿಗೆ ಸಂಗರವನೆಸಗಲಮ್ಮನಿವನು ।
ಪರಮವೈಷ್ಣವನೆಂದು ಸುರುತಾಳ ಕೋಪದಿಂದಿರದಾಡುವ ಸಮಯದೊಳು ॥ ೧೧

ಮೆಲ್ಲಮೆಲ್ಲನೆ ಪೋಗಿ ಖಾನರು ಸಹ ನೇಮಿಮಲ್ಲುಕ ಪೊಕ್ಕು ಡಿಳ್ಳಿಯನು ।
ತಲ್ಲಣಗೊಳುತೆದೆಯೊಳು ಸುರತಾಳ ಭೂವಲ್ಲಭನನು ಕಂಡನಂದು ॥ ೧೨

ನುಡಿಸಿದುದಿಲ್ಲ ನೋಡಿದುದಿಲ್ಲ ಸುರತಾಳಪೊಡವಿಪನಾ ನೇಮಿಯನು ।
ಬಿಡದೆ ಚಿಂತಿಸಿದನು ಮನದೊಳು ರಾಮನಪಿಡಿದೊಪ್ಪಿಸುವನೋರ್ವನನು ॥ ೧೩

ಕುಡಿಮೀಸೆ ಕುಣಿದಾಡೆ ಕಡೆಗಣ್ಣಳಿರದೆ ಕೆಂಗಿಡಿಯನುಗುಳೆ ತುಟಿ ಮಿಡುಕೆ ।
ತೊಡರೆ ಪುರ್ಬುಗಳು ಹೊಗೆಯೆ ಮೊಗಮೆಯ್ ನಡನಡುಗೆ ಕೋಪದೊಳಿರ್ದನಸುರ ॥

ನುಡಿಸಲಮ್ಮರು ಮಂತ್ರಿಗಳು ಖಾನರು ತುಟಿಮಿಡುಕಲಮ್ಮರು ಮಲ್ಲಕರು ।
ನುಡಿಯಲಮ್ಮರು ಸುರತಾಳನ ಕೋಪದ ಕಡುಹು ಕಣ್ಗೆಡಿಸಿತೆಲ್ಲರನು ॥ ೧೫

ಹಿಡಿದು ತಂದೊಪ್ಪಿಸುವೆನು ರಾಮನ ಕೊಡು ವೀಳೆಯವ ನೀನೆಂದು ।
ನುಡಿದಳಾ ಸಮಯದೊಳಲ್ಲಿ ಮಾತಂಗಿ ತನ್ನೊಡೆಯಗೆ ಮುಗಿದು ಕೈಗಳನು ॥ ೧೬

ಕುಮ್ಮಟವನು ಕೂಗಿಡಿಸಿ ರಾಮನಾಥನ ಹಮ್ಮ ಮುಱಿದು ಕಂಪಿಲನ ।
ಸುಮ್ಮಾನವ ಸೂಱೆಗೊಂಬೆನು ಬಿಡು ರಾಯ ದುಮ್ಮಾನವನೆಂದಳವಳು ॥ ೧೭

ಹೊಸಮಲೆಯನು ಹೊಕ್ಕಿಱಿದು ಕಂಪಿಲದೇವನಸುವ ಕೊಂಬೆನು ಪೋಗಿ ನಾನು ।
ಪುಸಿಮಾತೆನ್ನದಿರೆನ್ನ ಬಿನ್ನಪವನೆಂದುಸಿರ್ದಳು ಸುರತಾಳಗವಳು ॥ ೧೮

ದಳಪತಿಗಳ ಕೈಯಿಂದಾಗದ ಕಾರ್ಯವಳವೆ ಪೆಣ್ಗಳಿಗೆಂದು ರಾಯ ।
ತಿಳಿಯ ಬೇಡೆನ್ನ ಕಳುಪು ರಾಮನಾಥನ ತಳುವದೆ ತಂದೊಪ್ಪಿಸುವೆನು ॥ ೧೯

ಎಂದದನನುಮದಿಸುತ ಕಾರ್ಯವಿವಳ ಕೈಯಿದಹುದೆಂದು ನಿಶ್ಚೈಸಿ ।
ಅಂದಿತ್ತನುಚಿತಸಪ್ತಾಂಗವನವಳಿಗಾನಂದ ಕೈಮಿಗೆ ಸುರತಾಳ ॥ ೨೦

ತ್ರಿಜಗದ್ವಿಭೂಷಣವೆಂಬ ತನ್ನುರುಪಟ್ಟಗಜವಿಜಯಧ್ವನಿಗಳನು ।
ನಿಜಸೇನೆವೆರಸು ಕೊಟ್ಟನು ದಾನವಭೂಭುಜನತಿಸಂತೋಷದಿಂದ ॥ ೨೧

ಖಾನವಜ್ಜೀರಮಲ್ಲುಕರನಾವನಿತೆಯಧೀನವ ಮಾಡಿ ಜೇಗದೊಳು ।
ಭೂನುತಲಗ್ನದೊಳವಳ ಕಳುಪಿದನಾ ದಾನವಚಕ್ರೇಶ್ವರನು ॥ ೨೨

ಸುರತಾಳಂಗೆ ಸಲಾಮನೊಲಿದು ಮಾಡಿ ಶಿರದೊಳಾಂತವನಾಜ್ಞೆಯನು ।
ವರಶುಭಲಗ್ನದೊಳಗೆ ಪೊಱಮಟ್ಟಳಾ ತರಳಲೋಚನೆ ಡಿಳ್ಳಿಯನು ॥ ೨೩

ಕೊಟ್ಟಿಗೆ ಕೊಲ್ಲಾರದಬಂಡಿಗಳು ಸಾಲಿಟ್ಟುವು ಚೀನಾಂಬರದ ।
ಪೆಟ್ಟಿಗೆಗಳು ತೆರಳಿದವು ದಂಡಿನ ಸಮಕಟ್ಟನದೇನ ಬಣ್ಣಿಪೆನು ॥ ೨೪

ಪೆಟಲಕೋವಿಯ ಬಂಡಿ ಪೆಟಲ ಬಂಡಿ ಪೆಟಲಗುಂಡಿನ ಬಲುಬಂಡಿ ।
ಪೆಟಲಕೋವಿಯಬಂಡಿ ಪೆಟಲುಪ್ಪಿನಬಂಡಿ ಕಟಕದೊಳಿಯ್ದಿದವವಳ ॥ ೨೫

ಹುರಿದು ಭಂಗಿಯ ಬಂಡಿಯುರು ಸಿಂಗಿಯ ಬಂಡಿ ಪೊರೆದಿಟ್ಟವಿತ್ತಿನ ಬಂಡಿ ।
ಬಿರಿದುಮ್ಮತ್ತದ ಕಾಯ್ಗಳ ಬೀಜದ ಬಂಡಿ ತೆರಳಿದನಂಪೆಡವಿಡಪೆ ॥ ೨೬

ಸುರೆಯ ತಿತ್ತಿಯ ಬಂಡಿ ಸುರಿದ ಪೀನಿಯ ಬಂಡಿ ವರವತ್ಸನಾಭಿಯ ಬಂಡಿ ।
ಅರೆದುಕೂಡಿದ ಕದನದ ಬಂಡಿ ಸಾಲಿಟ್ಟು ತೆರಳಿದವವಳ ದಂಡಿನೊಳು ॥ ೨೭

ಕರಿಯೊಂದುಸಾವಿರ ರಥವಾಜಿ ತುರಗ ಸಾಸಿರ ಹತ್ತುಸಾವಿರ ಮಂದಿ ।
ಇರಲದನೊಂದುಪೌಜೆಂದು ಪೇಳ್ವರು ಬಲ್ಲ ಧರಣಿಪರದು ಹತ್ತಾಗೆ ॥ ೨೮

ಅದನೊಂದು ಮೋಹರನೆಂದು ಪೇಳ್ವರು ಕೋವಿದರದು ಹತ್ತಾಗಲದು ।
ಕದನಲಂಪಟರೊಂದೊಡ್ಡೆಂಬರಿಕ್ಕೆಲದೊದವಿನಿಂ ಹತ್ತೊಡ್ಡುವೆರಸು ॥ ೨೯

ನಡೆದಳು ನಲವಿಂದ ರಾಮನಾಥನ ಮೇಲೆ ಪಡೆಯ ಪದೋದ್ಧತಧೂಳಿ ।
ಪಡೆಯೆ ಪಗಲೊಳು ರಾತ್ರಿಯ-ಬಾಂಪೊಚಿಃಯ ಪೆರ್ಮಡುವ ಪೀರಲು ಮಾತಂಗಿ ॥ ೩೦

ಒಡೆಯಲಜಾಂಡ ಕೆಡೆಯೆ ಕುಲಗಿರಿಗಳು ಸೆಡೆಯೆ ದಿಶಾದಂತಿಗಳು ।
ಸಿಡಿಯೆ ತಾರೆಗಳು ಪೊಡೆವ ವಾದ್ಯರವದಿಂದ ನಡೆದಳು ನಲವಿನಿಂದವಳು ॥ ೩೧

ನಾನಾದೇಶದುಡಿಗೆತೊಡಿಗೆಗಳನಾ ಮಾನಿನಿ ನೋಡುತಳ್ತಿಯೊಳು ।
ಖಾನರೊಡನೆ ಮಾತನಾಡುತ ಚತುರಂಗಯಾನದ ಮೇಲೆಯ್ದಿದಳು ॥ ೩೨

ಅಲ್ಲಿಗಲ್ಲಿಗೆ ಕಪ್ಪಕಾಣಿಕೆಗಳ ಕೊಳುತಲ್ಲಿಗಲ್ಲಿಗೆ ದಂಡು ಬಿಡುತ ।
ನಿಲ್ಲದೆ ಬಂದು ಬಿಟ್ಟಳು ಪಾಳೆಯವನು ನೆಲ್ಲೂರ ಬಯಲೊಳಗವಳು ॥ ೩೩

ಪೊಡೆವ ನಾನಾ ವಾದ್ಯದಿಂದ ಮುಗಿಲ ಮಂಡೆಯೊಡೆಯೆ ಪರ್ವತಶಿಖರಗಳು ।
ನಡುಗೆ ನಲವಿಂದ ಬಂದು ಬಿಟ್ಟಳು ಬೀಡ ಕಡಬದ ಬಲು ಬಯಲೊಳಗೆ॥ ೩೪

ಅಲ್ಲಿಂದ ಮುಂದಕೆ ತೆರಳಿ ಬಂದಾ ಸಂಪುಲ್ಲಸರೋರುಹನೇತ್ರೆ ।
ನಿಲ್ಲದೆ ಬಂದು ಬಿಟ್ಟಳು ಪಾಳೆಯವನು ಕಲ್ಲಿಕೋಟೆಯ ಬಯಲೊಳಗೆ ೩೫

ಇಂದ್ರನೈಶ್ವರ್ಯವನಿರದೇಳಿಸುತಾ ಚಂದ್ರವದನೆ ಬಲವೆರಸು ।
ಸಾಂದ್ರಸಂತೋಷದಿಂ ಬಂದು ಬಿಟ್ಟಳು ಬೀಡ ಚಂದ್ರಗಿರಿಯ ಬಯಲೊಳಗೆ ॥ ೩೬

ಧಾರೆಯುಜ್ಜಯಿನಿಧರಾಸಿಂಹ ಮೊದಲಾದ ಭೂರಿನಗರಗಳ ಕಳೆದು ।
ಓರಂತೆ ನಡೆತಂದು ಪೊಕ್ಕಳು ಕರ್ಣಾಟಧಾರುಣಿಯನು ಮಾತಂಗಿ ॥ ೩೭

ಕಾಣಿಸಿಕೊಳುತ ಮನ್ನೆಯರ ಬಹಳ ಕಪ್ಪಕಾಣಿಕೆಯನು ಕೈಕೊಳುತ ।
ಮಾಣದೆ ಬಂದು ಬಿಟ್ಟಳು ಬಿದಿರೆಯೊಳಾ ಯೇಣಲೋಚನೆಯೆಯ್ತಂದು ॥ ೩೮

ಹೊನ್ನ ಮೋಹಳದ ಕಠಾರಿ ಕತ್ತುರಿಬೊಟ್ಟು ಚಿನ್ನದ ಕೈಯ್ಯಂಬು ಮೆಱಿಯೆ ।
ಕನ್ನಡಿಗರು ಬಂದು ಕಂಡರು ಬೆಳಗಿದ ಕನ್ನಡಿಯೆನಲಾಕೆಯನು ॥ ೩೯

ವಿನಯವಚನದಿಂದುಡುಗೊಱೆಯಿತ್ತಾ ವನಿತೆಯುವರನುಪಚರಿಸಿ ।
ಮನದೊಳಾನಂದಿಸಿದಳು ಕರ್ಣಾಟದ ಕೊನಬುತನದ ಕೋರೆಯನು ॥ ೪೦

ಚಪ್ಪನ್ನದೇಶದ ಶೃಂಗಾರವಿದೞ ಮುಂದೊಪ್ಪಲಱಿಯದೆಂದವಳು ।
ಒಪ್ಪಿದಳಾ ಕರ್ಣಾಟಶೃಂಗಾರದ ಸೊಪ್ಪಡಗಿದ ಸೊಂಪಿನಿರವ ॥ ೪೧

ಮಾತಂಗಿ ಬಂದು ಬಿದಿರೆಯೊಳು ಬಿಟ್ಟುದನಾತುರದಿಂ ಗಡಿಗಡಿಯ ।
ಭೂತಳಪತಿಗಳು ಪೇಳ್ದಟ್ಟಿದರು ಬಲುದೂತರನಾ ರಾಮನೆಡೆಗೆ ॥ ೪೨

ಆ ವಾರ್ತೆಯನಾ ಕಲಿರಾಮ ಕಂಪಿಲದೇವಗೆ ಪೇಳಿ ಕಳುಪಲು ।
ದೇವಮಂತ್ರಿಗೆ ಸರಿಯಹ ಬೈಚಪ್ಪಗಾ ಭೂವರನುಸುರಿದನದನು ॥ ೪೩

ಬಿಟ್ಟು ಕುಮ್ಮಟವನು ಹೊಸದುರ್ಗದೊಳು ಮಿಗೆ ಧಟ್ಟಿಸಿ ನಿಂದವಳೊಡನೆ ।
ನೆಟ್ಟನೆ ಕಾದುವುದಿದು ರಾಜಕಾರ್ಯದ ಕಟ್ಟಕಡೆಯ ಮಂತ್ರವಿದು ॥ ೪೪

ನೊಂದು ಕುಮ್ಮಟದೊಳು ತೆಗೆದ ಬಳಿಕ ಮತ್ತೆ ನಿಂದೀ ಹೊಸದುರ್ಗದೊಳಗೆ ।
ಮುಂದಿ ಕಾದದು ಕುಮ್ಮಟವನು ತೆಗೆಸಬೇಕೆಂದು ಪೇಳಿದನಾ ಮಂತ್ರಿ ॥ ೪೫

ಅಹುದಿದು ರಾಜಕಾರ್ಯವ ನಿರ್ವಹಿಸುವ ಮಹಿಪರ ಬಗೆ ರಾಮನನು ।
ತಹುದಕ್ಕೆ ನೀ ಪೋಗೆಂದು ಕಳುಪಿದನು ವಹಿಲದಿಂದರಸ ಮಂತ್ರಿಯನು ॥ ೪೬

ಬಂದು ಬೈಚಪ್ಪ ಕುಮ್ಮಟಕೆ ಕುಮಾರನನಂದು ಕಾಣಿಕೆಗೊಟ್ಟು ಕಂಡು ।
ಮುಂದಣ ಕಾರ್ಯವನೇಕಾಂತದೊಳಿಂತೆಂದು ಬಿನ್ನವಿಸಿದನವನು ॥ ೪೭

ಹತ್ತೊಡ್ಡು ಸಹ ಬರುತಿರ್ದಪಳಂತವಳೆತ್ತಿ ದುರ್ಗದ ಮೇಲೆ ।
ಹೊತ್ತು ಕಾದುವ ಬಗೆಯಂತಿಲ್ಲಯಿದು ಸುತ್ತ ಮುತ್ತಿಗೆಗೊಳಗಹದುರ್ಗ ॥ ೪೮

ಪಡೆಯನೆಲ್ಲವ ಕೂಡಿಕೊಂಡು ಚೆನ್ನಿಗರಾಮ ತಡೆಯದೇಳೀ ದುರ್ಗವನು ।
ಬಿಡು ಹೊಸದುರ್ಗ ಮಹಾದುರ್ಗವಲ್ಲಿಗೆ ನಡೆ ಜಯವಂಟೆಮಗಲ್ಲಿ ॥ ೪೯

ಈ ತೆಱದಿಂ ಪೇಳಿದ ಮಂತ್ರಿಯ ನೀತಿವಾತನಾಲಿಸಿ ನಸುನಗುತ ।
ಕಾತರಿಸದೆ ನುಡಿದನು ರಾಮ ನಿಜ ಶೌರ್ಯಾತಿರೇಕದ ನುಡಿಗಳನು ॥ ೫೦

ಕುಮ್ಮಟವಿದು ಹೊಸಮಲೆಯ ದುರ್ಗಕೆ ಬಲುಸೆಮ್ಮೆಗೆಯಿದು ಬಿಟ್ಟಬಳಿಕ ।
ನಮ್ಮನಿಲ್ಲಿರಲೀವಳೆಯುವಳಿದು ಕಾಲಧರ್ಮದ ನುಡಿ ಕಾರ್ಯವಲ್ಲ ॥ ೫೧

ಈ ದುರ್ಗ ಹೋದಬಳಿಕ ಹೊಸಮಲೆಯೊಳು ಕಾದಬಹುದೇ ಬೈಚಪ್ಪ ।
ಮಾದಿಗಿತ್ತಿಯನಿಲ್ಲಿ ಜಯಿಸದಿರ್ದೊಡೆ ಮುಂದೆ ಮೇದಿನಿ ನಮಗಹುದಿಲ್ಲ ॥ ೫೨

ಮುಗಿಲಕೆಳಗೆ ನಡೆವರಗಂಡನೆಂದುಱೆ ಪೊಗಳಿಸಿಕೊಳುತ ಬಿರುದನು ।
ತೆಗೆಯಬಹುದೆ ದುರ್ಗವನಿದ ಪೆಣ್ಗಳ್ಕಿ ನಗರೇ ನಮ್ಮನು ರಿಪುನೃಪರು ॥ ೫೩

ಕರೆಯಬೇಡೆನ್ನನಲ್ಲಿಗೆ ಮಂತ್ರಿ ನಾನಿಲ್ಲಿ ಧುರವನೆಸಗಿ ಮಾತಂಗಿಯನು ।
ತೆರಳಿಸಿ ಹಿಂದಕೆ ಬಂದಾನು ರಾಯನ ಚರಣಯುಗವ ಕಾಣ್ಬೆನೊಲಿದು ॥ ೫೪

ಬಿರುದ ನೆನೆಯ ಹೇಳು ಭೀತಿಯ ಬಿಡಹೇಳು ತುರುಕದಂಡಿಲ್ಲಿಗೆಯ್ದಿದೊಡೆ ।
ಧುರುವನೆಸಗಹೇಳು ನನ್ನಾಸೆಯ ಬಿಟ್ಟಿರಹೇಳು ಕಂಪನೃಪತಿಗೆ ॥ ೫೫

ಜಸವಳಿಜಸವೆಂಬಿವು ತನ್ನವಲ್ಲದೆ ವಸುಧೆ ವಾಹನ ವಸ್ತುಗಳು ।
ಬಿಸಜಾಕ್ಷಿಯರು ತನ್ನವರಲ್ಲ ಕೀರ್ತಿಯ ಮಸುಳಿಸಬೇಡೆಂದು ಪೇಳು ॥ ೫೬

ಜಸವೆಣ್ಣ ಕೈಗೂಡೆನ್ನಳಿಜಸವೆಣ್ಣ ಬಿಸುಡೆನ್ನು ನನ್ನ ಮೊಗವನು ।
ಒಸೆದು ನಿಟ್ಟಿಸಬೇಕೆಂದು ಮನದೊಳು ಚಿಂತಿಸಬೇಡವೆನ್ನೈಯ್ಯನೊಡನೆ ॥ ೫೭

ಕೆಡುವ ಒಡಲನು ನಚ್ಚದಿರೆನ್ನೀಶ್ವರನುಡಿಯ ಮಱೆಯದಿರೆಂದೆನ್ನು ।
ಮಡದಿಮಕ್ಕಳ ನೆನೆಯದಿರೆನ್ನು ರಣಕೆವೆಗೆಡದಿರೆಂದೆನ್ನೈಯ್ಯನೊಡನೆ ॥ ೫೮

ಧುರದೊಳೋಡಿಸಿ ಮಾತಂಗಿಯ ನಿನ್ನಂಘ್ರಿಸರಸಿಜವನು ನಿನ್ನ ಮಗನು ।
ಇದದೆ ಕಂಡಪೆನೆಂದು ಪೇಳಿದನೆಂದು ನೀನೊರೆ ಹರಿಯಮ್ಮಗಮಾತ್ಯ ॥ ೫೯

ಎಂದು ನುಡಿದು ಮಂತ್ರಿಯನಾ ಕುವರನಾನಂದದಿಂ ಬೀಳ್ಕೊಡಲವನು ।
ಬಂದು ಕುವರನಾಡಿದ ನುಡಿಗಳ ತಾಯಿತಂದೆಗಿರದೆ ಪೇಳಿದನು ॥ ೬೦

ಕೇಳಿ ಮಾತಾಪಿತೃಗಳು ನಿಜಸುತನಾಡಿದಾಳಾಪವ ಮನದೊಳಗೆ ।
ತಾಳಿ ದುಃಖವನುರು ಶೋಕಾಂಬುನಿಧಿಯೊಳಗಾಳಿದರೇನ ಪೇಳುವೆನು ॥ ೬೧

ಬಳಿಕ ಧೈರ್ಯಂ ಸರ್ವತ್ರಸಾಧನವೆಂಬ ವಿಲಸಿತವಾಕ್ಯಾರ್ಥವನು ।
ತಿಳಿದವನೀಶ್ವರನಲೆವ ವಿಷಾದವ ತೊಳೆದು ವಿವೇಕಜಲದೊಳು ॥ ೬೨

ತೊಲೆ ತಳಿವರ ನೂಲಹರಿಗೆ ಬದ್ಧರಬಂಡಿ ಬಲೆಹಗ್ಗ ಮರಳು ಕೈಕವಣೆ ।
ಹಲಗೆ ಸಬಳದಸಿ ಹಾವಿನಹೇಳಿಗೆ ಸಲೆ ಮೆಱೆದವು ದುರ್ಗದೊಳಗೆ ॥ ೬೩

ಇಂತೆಸವೀ ದುರ್ಗದೊಳಗರಿನೃಪಕಾಲಾಂತಕ ಕಂಪಿಲಾತ್ಮಜನು ।
ಮಂತಣವನು ಬಿಟ್ಟು ಮುಂದಿ ಕುದುರೆಗೂಡಿ ಸಂತಸದಿಂದರಲತ್ತ ॥ ೬೪

ಬಿದರೆಯೊಳು ಪರ್ಯುವನೆಂಟುದಿನ ಮಾಡಿ ಸದಳವ ತೆರಳಿಸಿ ಮುಂದೆ । [?]
ಕದನಲಂಪಟರೊಡನೆಯ್ತರೆ ಮಾತಂಗಿ ಮದಗಜವೇಱಿ ನಡೆದಳು ॥ ೬೫

ನೀಲಮೇಘದ ಲಕ್ಷ್ಮಿಯನು ಕಾಡಾನೆಯ ಮೇಲಣ ವನದೇವತೆಯನು ।
ಸೋಲಿಸುತವಳೆಯ್ದಿದಳು ಸೊಕ್ಕಿದ ಶುಂಡಾಲದ ಮೇಲೆ ಲೀಲೆಯೊಳು ॥ ೬೬

ರಾಯನ ಮೆಯ್ಗಾವಲ ಬಲುರಾವುತಪಾಯಿಕರೆಡಬಲದೊಳಗೆ ।
ಖೋಯೆನುತೆಯ್ತರೆ ನಡೆದಳವಳು ಕಂಪರಾಯನಮೇಲೆ ಖಾತಿಯಲಿ ॥ ೬೭

ಗಾಯಕಿಯರು ಕರ್ಣಗಳಿಗೆಯ್ದೆ ಕರ್ಣರಸಾಯನವೆನೆ ಗಾನವನು ।
ಒಯ್ಯಾರದಿಂ ಮಾಡುತಾನೆಯ ಮೇಲೆ ವಿಡಾಯದಿಂ ತೆರಳಿತೊಗ್ಗಿನೊಳು ॥ ೬೮

ಅಲ್ಲಿಂದ ತೆರಳಿ ಬಂದವಳೊಯ್ಯನೊಯ್ಯನೆ ತಲ್ಲಣಿಸುತ ಮನಪೊಳಗೆ ।
ಬಲ್ಲಿದ ರಾಮನಾಥನ ಕುಮ್ಮಟದ ಸೀಮೆಯಲ್ಲಿ ಬಿಟ್ಟಳು ಪಾಳೆಯವನು ॥ ೬೯

ಇಂತು ಪಾಳೆಯವ ಬಿಡಿಸಿ ಮಾತಂಗಿ ವಿಕ್ರಾಂತದಿಂದಿರಲಿತ್ತಲತ್ತ ।
ತಾಂ ತಡೆಯದೆ ಬಂದನು ರಾಮನಾಥ ಮುಯ್ಯಾಂತು ಕಾಳೆಗಕಿದಿರಾಗಿ ॥ ೭೦

ಬೆಟ್ಟ ಬೆಟ್ಟದ ಮಱೆಗಳೊಳಡಗಿಸಿ ಪೌಜ ಕಟ್ಟಾಳು ಕಾಟಣ್ಣನನು ।
ನೆಟ್ಟನೆ ಹರಿಯಬಿಟ್ಟನು ಬೇಗ ಮಾತಂಗಿ ಬಿಟ್ಟ ಪಾಳೆಯಕಾ ರಾಮನು ॥ ೭೧

ಎರಡುಸಾವಿರ ತೇಜಿ ಮೂವತ್ತುಸಾವಿರ ವರವೀರಭಟರೊಡಗೂಡಿ ।
ಉರವಣಿಯಿಂದ ಪೊಕ್ಕನು ಪಾಳೆಯವನು ಹೊಕ್ಕರು ಪಾಳೆಯ ಕೆದಱ ॥ ೭೨

ಇದಿರಾದ ಖಾನರನಿಱಿದು ಕೆಡಹಿದರು ಬೆದಱಿ ಬೆಂಗೊಟ್ಟೋಡುವರನು ।
ಒದವಿ ತಿವಿದು ನೂಕಿ ಹಿಡಿದರು ಕುದುರೆಯ ಕದನಭೂಮಿಯೊಳು ಕಲಿಗಳು ॥ ೭೩

ಪಡಗಿನ ಪರದನಂದದೊಳಾ ಕಾಟಣ್ಣ ಹಿಡಿಗುದುರೆಯ ಸಾವಿರವನು ।
ಬಿಡದೆ ಚಳವೆ ಮಾಡಿ ತಂದೊಪ್ಪಿಸಿದನಂದು ಕಡುಗಲಿರಾಮನಾಥನಿಗೆ ॥ ೭೪

ತುರುಗಬಹಿತ್ರಮನಡಱಿ ತುರುಕಬಲಶರಧಿಯ ಪೊಕ್ಕು ಬಡಗಣ ।
ವರವಾಜಿಗಳ ತಂದೊಪ್ಪಿಸಿ ಕಾಟಣ್ಣನುರುವಿಕ್ರಮಗೆ ರಾಮನಿಗೆ ॥ ೭೫

ಸಿಕ್ಕಿದ ಕುದುರೆಗಳೊಳಗೈನೂಱನಂದೆಕ್ಕಟಿಗರಿಗೆ ವೆಚ್ಚವನು ।
ಇಕ್ಕಿ ಮಿಕ್ಕೈನೂಱ ಕಳುಪಿದ ಹೊಸದುರ್ಗಕ್ಕೆ ತಂದೆಗೆ ರಾಮನಾಥ ॥ ೭೬

೧೭

ಪಾಳೆಯವನು ಕಾಟಣ್ಣ ಪೊಕ್ಕಿಱಿದುದ ಕೇಳಿ ಕಂಪಿಲ ಮಂತ್ರಿಯೊಡನೆ ।
ಪೇಳಿದ ನಮಗಿನ್ನು ಜಯವಾಗಲಱಿಯದೆಂದಾಳೋಚಿಸಿದ ಮನದೊಳಗೆ ॥ ೧

ಹತ್ತೊಡ್ಡುವೆರಸು ಬಂದಳು ಕೋಪದಿಂ ಮಾದಿಗಿತ್ತಿ ಕುಮ್ಮಟದುರ್ಗವನು ।
ಮುತ್ತಿಗೆಯನು ಮಾಡಿ ರಾಮನ ಸುರಪತಿಯೊತ್ತಿಗೆ ಕಳುಪದೆ ಬಿಡಳು ॥ ೨

ನೋಡಬೇಕವನ ಮೊಗವ ನೀನವನನು ಕೂಡಿಕೊಂಡಿಲ್ಲಿಗೆಬಂದು ।
ಕೂಡೆ ತೆರಳು ನೀನೆಂದು ಮಂತ್ರಿಗೆ ರಾಯನಾಡಿ ದುರ್ಗಕೆ ಕಳುಪಿದನು ॥ ೩

ಪೋಗಿ ದುರ್ಗವ ಪೊಕ್ಕು ಮಂತ್ರಿ ರಾಮನ ಕಂಡಾಗಳೊರೆದು ಬುದ್ಧಿಯನು ।
ಬೇಗದಿಂದೊಡಗೊಂಡು ಬಂದು ಕಾಣಿಸಿದನು ರಾಗದಿಂ ರಾಯನ ಮೊಗವ ॥ ೪

ಕಂಡು ಕೈಕಾಣಿಕೆಯಿಕ್ಕಿ ರಾಯನ ಪದಪುಂಡರೀಕವ ಮತ್ತವನು ।
ಕಂಡನೊಲಿದು ಹರಿಹರದೇವಿಯ ಮುಖಮಂಡಲವನು ಬೇಗದಿಂದ ॥ ೫

ಜನನಿಸೋದರಿಯರೊಡನೆ ರಾಮ ಸಹಭೋಜನವನೊಸೆದು ಮಾಡಿ ಬಳಿಕ ।
ಜನಕನಡಿಗಳಿಗೆಱಗಿ ದುರ್ಗಕೆ ಪೋಗಲನುನಯದಿಂ ಬಿನ್ನವಿಸಲು ॥ ೬

ಕೊಟ್ಟನು ವಾರುವಗಳನಾಭರಣವ ಕೊಟ್ಟನೆರಡು ಲಕ್ಕ ಪೊನ್ನ ।
ಕಟ್ಟಿಸಿ ಮಂದಿಗೆ ಸಂಬಳವನು ಬೀಳುಕೊಟ್ಟನು ಬಳಿಕ ಮಗನನು ॥ ೭

ತೆರಳಿಸಿಕೊಂಡು ಬೈಚಪ್ಪನಾ ರಾಮು ಪರಿವಾರಸಹಿತ ಬೇಗದೊಳು ।
ಮೊರೆಯೆ ನಾನಾವಾದ್ಯಂಗಳು ಪೊಕ್ಕನು ಗಿರಿದುರ್ಗವನಳ್ಕಱಿಂದ ॥ ೮

ಪೊಕ್ಕು ಭಂಗಾರದ ಪೆಟ್ಟಿಗೆಗಳ ಬೆಚ್ಚವಿಕ್ಕಿ ಸುಭಟಸಂತತಿಗೆ ।
ಉಕ್ಕುವ ವೀರರಸದೊಳಿರ್ದನವ ಕಾಳೆಗಕ್ಕನುವಾಗುತ್ತಲಿತ್ತ ॥ ೯

ಓಲಗಕೆಯ್ತಂದು ಮಾತಂಗಿ ಧರಣೀಪಾಲಕರೊಡನೆ ನುಡಿದಳು ।
ಪಾಳೆಯವನು ಹಿಂದುನರು ಪೋಸದೊಳು ಪೊಕ್ಕು ಕೋಳುಗೊಂಡರು ತಾವೆಂದು ॥ ೧೦

ಸಿಕ್ಕಿತು ಬಹಳ ಕುದುರೆಮಂದಿ ಸತ್ತರು ಲೆಕ್ಕವಿಲ್ಲದೆ ಮಲ್ಲುಕರು ।
ಪೊಕ್ಕರು ಯಮಪುರವನು ಹಿಂದುವ ರಾಮನೊಕ್ಕಲಿಕ್ಕಿದ ನಮ್ಮ ಬಲವ ॥ ೧೧

ಕೊಱತೆಯ ನೇಮಿಖಾನಗೆ ಕೊಟ್ಟ ಖಾನರು ನೆಱತೆಯನೆನಗಿತ್ತಪರೇ ।
ಜಱುದರೆಂದೊಡೆ ಗರ್ಭವಂದೆಗಳ್ ಕಲಿಗಳ ಹೊಱುಗೆಯ ಹೊತ್ತು ನೀಸುವರೇ ॥ ೧೨

ಪಾಡಿದರೆಂದೊಡೆ ಸತ್ತ ಪಾವೆಳ್ದೊಲೆದಾಡಿದುದುಂಟೇ ಲೋಕದೊಳು ।
ನಾಡೆ ನಾಣ್ಗೆಡಿಸಿ ಜಱಿದರೆಂದೊಡೆ ಕಡುಹೇಡಿ ಸುಭಟನಾದಪನೇ ॥ ೧೩

ಎಂದು ಜಱಿಯೆ ಖಾನರನಾ ಮಾತಂಗಿಗೆಂದರವರು ಬಾಗಿ ಶಿರವ ।
ಹಿಂದುವರೆಮ್ಮನು ಹೇಸದೊಳಗುಬಂದು ಕೊಂದರವರು ನಮಗೇಣೆಯೆ ॥ ೧೪

ಚಿತ್ತೈಸು ನಾಳೆ ಹಿಂದುವ ಬಲವೆಲ್ಲವತೊತ್ತಳಿದುಳಿದು ದುರ್ಗವನು ।
ಹತ್ತದಿರ್ದೊಡೆ ಮಾಡಿಸೆಮಗಾಜ್ಞೆಯನೆಂದುತ್ತರವನು ಕುಡಲವರು ॥ ೧೫

ಬಳಿಕ ಮುತ್ತಿನ ಗೂಡಾರದೊಳಗೆ ಕಣ್ಗೊಳಿಸುವ ಸೆಳೆಮಂಚದೊಳಗೆ ।
ತಳತಳಿಸುವ ಹಂಸತೂಳತಲ್ಪದೊಳಾ ನಳಿನಾಕ್ಷಿ ಮೆಯ್ಯನಿಕ್ಕಿದಳು ॥ ೧೬

ವಿಲಯದೊಳಗೆ ವಿಶ್ವದಾಟವಡೆಗೆ ಮಾಯಾಲಲನೆ ಮೆಯ್ಗರೆವ ಮಾಳ್ಕೆಯೊಳು ।
ಮುಳುಗಿದಳವಳಬ್ಬಸಖನ ಕಾಲಾಟದ ಬಲುಮೆಯಡಗಲಿರುಳೊಳಗೆ ॥ ೧೭

ಅಱುಯದೊಯ್ಯನೆ ಬೆಳಗಹ ಸಮಯದೊಳಿದ್ದು ನೆಱಿ ಜಾಣೆಯರೇಳ್ತೆಂದು ।
ಒಱಿಯಲಮೃತಗಾನರಸದೊಳು ಪಾಡಿಯೆಚ್ಚರಿಸಿದರವಳನಿಂತೆಂದು ॥ ೧೮

ಅರುಣೋದಯವೆಂಬ ನೆವದಿಂದ ನಿನ್ನಂಘ್ರಿಕರಪಲ್ಲವದ ಕೆಂಪ ಕಳ್ದು ।
ಗಿರಿದುರ್ಗವೇಱುದನರವಿಂದಸಖನದ ತರಿಸಬೇಕೇಳ್ ತರಳಾಕ್ಷಿ ॥ ೧೯

ಕರಚರಣದ ಕೆಂಪ ತರಣಿಯು ಕೈಯಿಂದ ತರಿಸದಿರ್ದೊಡೆ ರಾಮ ನಿನಗೆ ।
ಕರೆದು ಬಾದುರನ ಕೊಟ್ಟಪನೆ ಕಣ್ದೆಱಿದೇಳು ಸುರತಾಳನ ಜಯಲಕ್ಷ್ಮಿ ॥ ೨೦

ಎನೆ ಮಲಗಿರ್ದ ಮಹೋರಗಿ ಶಯ್ಯಾವನಿಯಿಂದ ಮೆಯ್ಮುಱುಪೇಳ್ವ ।
ಅನುವಿನಂತಿರೆ ಮಣಿಮಂಚದಿಂದೇಳ್ದಳಾ ಘನಕುಚೆ ಗಾಡಿ ಕೈಮಿಗಿಲು ॥ ೨೧

ಉದಯಕಾಲೋಚಿತವಿಧಿಯನೆಸಗಿ ಮೇಲೆ ಕದನಲಂಪಟರೊಡಗೂಡಿ ।
ಮದಗಜವೇಱು ನಡೆದಳು ಕಾಳೆಗಕವಳೊದಱಿ ನಾನಾ ವಾದ್ಯಗಳು ॥ ೨೨

ಬಂದೊಂದು ಬಲುಬಯಲೊಳಗಾ ಮಾತಂಗಿ ನಿಂದು ಬಲವನೆಲ್ಲವನು ।
ಅಂದವಿಟ್ಟಳು ಮೋಹರದಿಂದದನಿಂತೆಂದು ಬಣ್ಣಿಸಲೊರ್ವನಳವೇ ॥ ೨೩

ತಲೆಯೆತ್ತಲೀಯದೆಸುವ ಬಿಲ್ಲ ಮಂದಿಯು ಬಲಿದಳವರ ಹಿಂಗಡೆಯೊಳು ।
ತೊಲಗದೆ ನಿಂದಿಱಿದಾಡುವ ಸಬಳದ ಬಲುಗಡಿಯರನಿಕ್ಕಿದಳು ॥ ೨೪

ಅವರು ಮುಱಿದೊಡಾಂತು ನಿಲಿಸಿಕೊಂಬುದಕೆ ಮತ್ತವರಿಗೊತ್ತಾಗಿ ಹರಿಗೆಯು ।
ತವಕಿಗಳನು ತಱಿಬಿದಳು ತಡೆಯದಾಹವದೊಳವರ ಹಿಂಗಡೆಯೊಳು ॥ ೨೫

ಬಲಿದಳು ಬಲುರಾವುತರನು ಕರೆದು ತನ್ನೆಡಬಲದೊಳಗೆ ।
ಇರಿಸಿಕೊಂಡಳು ರಾಮನಾಥನ ಸಾಹಸದಿರವ ಕೇಳ್ದಾ ಮಾತಂಗಿ ॥ ೨೬

ಎಡಬಲದೊಳು ಮನ್ನೆಯರನವರ ಮುಂದೆ ಕಡುಗಲಿಖಾನಮಲ್ಲುಕರ
ಬಿಡದೆ ಬಲಿದಳಾ ಮಾತಂಗಿ ರಣಭೂಮಿಯೆಡೆಯೊಳು ತವಕ ಕೈಮಿಗಿಲು ॥ ೨೭

ಉಱಿಬಿ ಹೊಕ್ಕರೆ ರಾಮನಾಥನ ಪಿಡಿವುದಕುಱುವ ರಾವುತರ ಲಕ್ಷವನು ।
ತಱಿಬಿದಳೆಡಬಲದೊಳು ಮಾತಂಗಿಯ ನೆಱೆಗಲಿತನವನೇನೆಂಬೆ ॥ ೨೮

ಪೊಕ್ಕರೆ ಪೊಱಮಡಲೀಯದವನ ಮೇಲಿಕ್ಕಿ ತಿವಿದು ನಿಲಿಸುವಡೆ ।
ದಿಕ್ಕು ದಿಕ್ಕಿನೊಳು ನಿಲಸಿದಳು ಖಾನರ ತೆಕ್ಕೆತೆಕ್ಕೆಯ ಪೌಜುಗಳನು ॥ ೨೯

ತಾನಲ್ಲದೆ ಬಲುರಾವುತರಿಲ್ಲೆಂದು ಮಾನಗರ್ವದೊಳು ಬಂದೇಱೆ ।
ಆನದವನಿಗಡ್ಡಲಹುದಕ್ಕೆ ಭೋರಸಾನಿಗಳನು ನಿಲಿಸಿದಳು ॥ ೩೦

ಇಂತು ಮೋಹರವನಲ್ಲಲ್ಲಿಗೆ ಬಲಿದಾ ಕಾಂತೆ ರಾಮನ ಕರೆವುದಕೆ ।
ತಾಂ ತಡೆಯದೆ ಭಟ್ಟರನಟ್ಟಿದಳು ವಿಕ್ರಾಂತ ಕೈಮಿಗಿಲು ಬೇಗದೊಳು ॥ ೩೧

ಬಂದು ಭಟ್ಟರು ರಾಮನಾಥನ ಪೊಗಳಿ ಮೇಲೆಂಧರವರು ಚೆನ್ನರಾಮ ।
ಹಿಂದನೆಣಿಸದೆ ಬಾ ಮಾತಂಗಿ ಸಮರಕೆ ನಿಂದು ಕರೆಯಲಟ್ಟಿದಳು ॥ ೩೨

ಏಳಿಗೆಯ ಬಿಟ್ಟು ಬರಹೇಳಿದಳು ರಣಕೇಳಿಗೆ ನೀಸಿಂದುಳಿದೊಡೆ ।
ಹೇಳಲೇನಿನ್ನೆಂದಿಗುಮಿಲ್ಲ ನಿನಗೆ ಕರಾಳ ಕಾಲನ ಬಾಧೆ ರಾಮ ॥ ೩೩

ಮರಣಕಂಜದೊಡೇಳಲ್ಲದಿರ್ದೊಡೆ ಬಾದುರನನೊಪ್ಪಿಸವಳಡಿಯ ।
ಭರದಿಂದ ಕಂಡು ಬಹಳ ಭಾಗ್ಯವ ಕೊಂಡು ಸುರತಾಳನಳಿಯನಾಗೇಳು ॥ ೩೪

ಅಳಿಯಬೇಡಾಜಿರಂಗದೊಳಸುರಾಧಿಪಗಳಿಯನಾಗೇಳು ಕಂಪಿಲನ ।
ಕುಲವನಚೈತ್ರಕುಮಾರರಾಮುಗ ಎಂದುಲಿದುದು ವಂದಿಸಂದೋಹ ॥ ೩೫

ಅಲರಂಬನರಸಿಗ್ಸೈವಡಿಯ ರೂಪಿನ ಸುರತಾಳನ ಸುತೆ ನಿನ್ನ ಬಯಸಿ ।
ಇರಳು ಪಗಲು ನಿನ್ನ ಕಿವಿವೇಟದಿಂದೆಗರುತಿರ್ದಪಳೇಳು ಬೇಗ ॥ ೩೬

ಎನೆ ನಸುನಗುತುಡುಗೊಱೆಗೊಟ್ಟು ಮಾಗಧಜನವ ಕಳುಪಿ ಬೇಗೆದೊಳು ।
ಅನುವರಕಿದಿರಾಗಿ ನಡೆದನು ಸೇನಾವನಧಿಯೊಡನೆ ರಾಮನಾಥ ॥ ೩೭

ಕಳಶಜನೊಡ್ಡಿದ ಮೋಹರಕಾ ನರನಳುಕದೆ ನಡೆವ ತೆಱದೊಳು ।
ತಳುವದೆ ನಡೆದನಲ್ಲಾವುದೀನನ ಬಲಜಲಧಿಯ ತುಳ್ಕುವಳ್ತಿಯೊಳು ॥ ೩೮

ಬಂದು ಕಂಡನು ಮಾತಂಗಿಯ ಮಾರ್ಬಲದಂದವನಾ ರಾಮನಾಥ ।
ಸಂದೇಹವಿಲ್ಲದದಱ ಮೇಲೇಱಬೇಕೆಂದು ಬಗೆದನೆದೆಯೊಳಗೆ ॥ ೩೯

ದುರ್ಗದ ಕಾವಲಗಿಕ್ಕಿ ಮನ್ನೆಯರ ನಿಸರ್ಗವಿಕ್ರಮನಾ ಬಲವ ।
ದುರ್ಗೇಳಿ ಕೊಲ್ವೆನೆನುತ ಬಗೆದನು ಮೇಘಮಾರ್ಗದೊಳಮರರಿಟ್ಟೈಸಲು ॥ ೪೦

ಮೂಱುಸಾವಿರ ವಾಜಿ ಮೂವತ್ತುಸಾವಿರ ಕೇಱಃ ತೆಗೆದ ಮಂದಿವೆರಸು ।
ಮಾಱಾಂತನು ಮಾದಿಗಿತ್ತಿಯ ಪೌಜಿಗೆ ಚೀಱುವ ತೆಗೆದ ಕಹಳೆಯೊಗ್ಗಿನಲಿ ॥ ೪೧

ಪರಿಮಿತ ಪರಿವಾರ ತುರಗಸಹಿತ ರಾಮಧುರಧರಣಿಯೊಳು ಮಾಱಾಂತು ।
ಇರದೆ ನಿಂದನು ಸುರತಾಳನ ಸಕಲಮೋಹರಕಿದಿರಾಗಿ ಬೇಗದೊಳು ॥ ೪೨

ಕಂಡಳಾ ರಾಮನ ಶೌರ್ಯೋದ್ರೇಕದ ಗಂಡಗಾಡಿಯ ಗರ್ವವನು ।
ಕೊಂಡಾಡಿದಳು ಮೆಚ್ಚಿದಳು ಮನದೊಳಾ ಪುಂಡರೀಕಾಯತನೇತ್ರ ॥ ೪೩

ಗುಣಕೆ ಹುರುಡೆ ಸದಾಶಿವ ಬಲ್ಲನೀತನ ರಣದಭಿಮಾನದೇಳ್ಗೆಯನು ।
ಗಣನಾತೀತಸೇನಾಚಕ್ರವನಿದನೆಣಿಸದೊರ್ವನೆ ನಿಂದನಿವನು ॥ ೪೪

ಎಂದು ತಲೆಯನೊಲೆದೊಲೆದು ಮೂಗಿನ ಬೆರಲಿಂದ ಪೊಗಳಿ ಮಾತಂಗಿ ।
ನಿಂದು ಹರಿಯಬಿಟ್ಟಳು ಚೂಣಿಯ ರಣಾನಂದಭೇರೀರವ ಮೊಳಗೆ ॥ ೪೫

ಪೊಸರನ್ನದ ಪಕ್ಕರೆಯಿಂದ ಮೂಡುವ ಬಿಸುಗದಿರನ ಬಿಂಬವನು ।
ಮುಸುಳಿದ ದಿವ್ಯವಾಜಿಯ ಬೆಂಗೆವಾಯ್ದನಂದಸಹಾಯಶೂರನಾ ರಾಮ ॥ ೪೬

ಮೊಳಗೆ ಭೇರಿಗಳು ನಾನಾವಾದ್ಯಂಗಳ ಕಳಕಳರವ ಕೈಮೀಱೆ ।
ಕೊಳಗುಳವನು ಪೊಕ್ಕನಹಿತಸೇನಾಕರಿಕಲಭಕಂಠೀರವನೊಸೆದು ॥ ೪೭

ಉದಧಿಯನಿರದೆ ಮಂದರಗಿರಿ ಪೊಕ್ಕಱ ಕದಡುವಂದದೊಳರಿಬಲವ |
ಕದಲಿಸಿದನು ಕಂಡಕಡೆಗೋಡಿಸಿದನಾ ಕದನದೊಳಗೆ ಕಲಿರಾಮ || ೪೮

ಕುದುರೆಯ ಖುರಪುಟಘಾತದಿಂ ಕಾಲಾಳು ಬಿದಱ ಖಡ್ಗದ ಹೊಯಲಿನಿಂದ |
ಕದಲೆ ರಾವುತರು ಸುರತ್ರಾಣಬಲವನು ಸದೆದನು ಸೈವಱಿದವನು || ೪೯

ಕರಿಯಹಿಂಡನು ಕೇಸರಿ ಕದಳೀವನಾಂತರವ ಕಾಡಾನೆ ಪೊಕ್ಕಂತೆ |
ಧುರಧರಣಿಯೊಳು ಕೊಂದನು ಬರಿಕಯ್ದನು ಸುರತಾಳಬಲವನಾರಾಮ || ೫೦

ರಾಘವದೇವನೊಳಲ್ಲದೆ ರಾಮ ಶರೌಘದಿಂ ರಿಪುಗಳನೆಸುವ |
ಲಾಘವವಿಲ್ಲಾವನೊಳೆಂದಮರರು ಮೇಘದೊಳಗೆ ಪೊಗಳಿದರು || ೫೧

ಕಡುಗುವಾನೆಗಳ ಕೆಡಪಿದನು ಕಾಲಾಳ ಕಡಿದು ಹರಹಿದನಾಜಿಯೊಳು |
ಪರಿವ ನೆತ್ತರ ಪೊನಲೊಳು ಸುಭಟಾಳಿಯ ಶಿರಗಳು ತೇಕಾಂಡೆ ಮಡಿದ || ೫೨

ಕುರಿತುರಗಗಳ ಸಾಲೆಸೆಯೆ ಕೊಂದನು ರಾಮ ಧುರಧರಣಿಯೊಳರಿಬಲವ |
ಉರವಣಿಸಿದರು ಖೋರಾಸಾಣಿಗಳಾರ್ದು ತುರಕಬಚ್ಚೆಯರು ಕವಿದರು || ೫೩

ಕರಿಘಟೆಯನು ಕಲಕಿದ ಹಯದೊಡ್ಡನು ಹರಹಿದ ಕಾಲುಪಾಯಕರ |
ಹುರಿಯೊಡೆಯಿಸಿದನು ಸರಳ ಮಳೆಯ ಸುರಿದುರವಣಿಯಿಂದಾ ರಾಮ || ೫೪

ಧುರಧರಣಿಯೊಳೊಱಗಿತು ಲೆಕ್ಕವಿಲ್ಲದ ಕರಿ ಹಯ ಸುಭಟಸಂದೋಹ |
ಹರಿಯಬಿಟ್ಟಳು ಮತ್ತೆ ಮೂದಲಿಸುತ ದೊರೆ ದೊರೆಗಳನಾ ಮಾತಂಗಿ || ೫೫

ತರಣಿಯನೊದವಿ ನಾನಾರೂಪಿನ ಮೇಘಪರಿದು ಮುತ್ತುವ ತೆಱದಿಂದ |
ಹರಿಗೆಸಬಳ ಬಿಲ್ಲು ಕರಿತುರಗಗಳ ಮೋಹರ ಮುಸುಕಿತು ರಾಮನನು || ೫೬

ಸೇರಿದ ಸಬಳದ ಸಂದಣಿಯೊಳಗಾ ವೀರನೊಪ್ಪಿದನು ಕಣ್ಗಳಿಗೆ |
ಆರೆಗೆಟ್ಟಗೆಗಳ ನಡುವೆ ಸಿಲ್ಕಿದ ಮದವಾರಣದಂತೆ ರಣದೊಳು || ೫೭

ಮುಸುಕಿದ ಸಿಂಗಾಡಿಯಂಬುಗಳೊಳಗೆ ಕಣ್ಗೆಸೆದನು ಚಿತ್ರದಡವಿಯ |
ಹಸರದೊಳಗೆ ಹೊಕ್ಕು ಹೊಡಕರಿಸುವ ಸಿಂಗಶಿಶುವಿನಂತಾ ವೀರರಾಮ || ೫೮

ಥಳಥಳಿಸುವ ಭಲ್ಲೆಯಗಳ ನಡುವೆ ಕಣ್ಗೊಳಿಸಿದನಾಜಿರಂಗದೊಳು |
ಬಳಸಿದ ಬಳ್ಳಿಮಿಂಚಿನ ಮಧ್ಯದೊಳು ನಳನಳಿಸುವ ರವಿಬಿಂಬದಂತೆ || ೫೯

ಹೇಳಲಳವೆ ಮೇಲೆ ಕವಿದ ನಾನಾಖಡ್ಗಜಾಲದಿಂ ಮಾನವಮಿಯೊಳು ।
ಮೇಳಾಪಿಸಿದ ಶಿವಪೂಜೆಯನಾಂತ ವೇತಾಳನಂತೆಸೆದನಾ ರಾಮ ॥ ೬೦

ಮದಕರಿ ಮರೆಯ ಹಿಂಡಿಗೆ ಕೈಮಜಿಃವುದೆ ಕದನದೊಳಗೆ ಕಲಿರಾಮ ।
ಸದೆದನು ಹಿಂದುಮುಂದೆಡಬಲದೊಳು ಬಂದೊದವಿ ತಿವಿವ ರಾವುತರನು ॥ ೬೧

ಕಡೆಯ ಕಾಲದೊಳಂತಕನುರುದಂಡದಿಂ ಬಡಿದಂತೆ ಜೀವರಾಶಿಯನು ।
ಬಡಿದನು ಲೌಡಿಯಿಂ ಸುರತಾಳಬಲವನು ಕಡುಗಲಿ ರಾಮನಾಜಿಯೊಳು ॥ ೬೨

ಹರಿ ಕರಿಗಳ ಕೊಂದು ನರಿ ಮರೆಗಳ ಬಿಟ್ಟು ಹರಿದಾಡುವಂತಾ ರಾಮ ।
ಧುರದೊಳಸಂಖ್ಯಾತಗಜಹಯಗಳ ಕೊಂದು ಪರಿಹರಿಸಿದನು ಕಾಲವರ ॥ ೬೩

೧೮

ಕಂಡಳು ರಾಮನ ರಾವುತಿಕೆಯ ಬಲುಬಂಡಿಯ ಗಂಡಗಾಡಿಯನು |
ಕೊಂಡಾಡಿದಳು ಮೆಚ್ಚಿದಳು ಮನದೊಳಗಾ ಪುಂಡರೀಕಾಯತನೇತ್ರೆ || ೧

ಅವನೀಶ್ವರ ಸುರತಾಳನ ಬಲದೊಳಗಿವನನ್ನನೊರ್ವ ಸುಭಟನ |
ವಿವರಿಸಲಿಲ್ಲ ಮಹಾದೇವ ಶಿವಶಿವ ಶಿವ ಪೆತ್ತನಾಗಬೇಕಿವನ || ೨

ಬರೆದು ಮಾಗಧರು ತಂದಾ ಭಾವಚಿತ್ರದ ಪರಿಯನೇಳಿಸುತಿದೆಯಿವನ |
ಇರವಲ್ಲದೊಡೆ ಸುರತ್ರಾಳಕುವರಿ ಕಾಮಶರಕೆ ಮನವ ಮಾಱುವಳೆ || ೩

ಎಂದು ರಾಮನನಭಿವರ್ಣಿಸುವನಿತಱೊಳಂದಂಗಭವನಿನಿವಿಲ್ಗೆ |
ಸಂದಿಸಿ ಮಱುಂದುಂಬಿವೆದೆಯ ಕುಸುಮಶರದಿಂದೆಚ್ಚತ್ತನಾ ಮಾನಿನಿಯ || ೪

ಪ್ರೌಢೆಯಾದುದಱಿಂದವಳಂಗಜಾಸ್ತ್ರದಿಂ ಗೂಢಗೆಡದೆ ವಂದಿಗಳನು |
ಪ್ರೌಢಿಯಿಂ ಕರೆದು ಸಂಧಿಗೆ ಕಳುಪಿದಳಾರೂಢವಿಕ್ರಮರಾಮನೆಡೆಗೆ || ೫

ಬಂದ ವಂದಿಗಳು ಕೆಯ್ಯೆತ್ತಿ ಕೊಂಡಾಡೆ ಮೇಲೆಂದರವರು ರಾಯಕುವರ |
ಅಂದಿನ ಭಾರತಮಲ್ಲನಲ್ಲದೆ ನಿನಗಿಂದಿನವರು ಪಾಸಟಿಯೆ || ೬

ಕಾಲುಪಾಯಕರು ಮುಱಿದು ಹಯದೊಡ್ಡಿನ ಮೇಲೆ ಬಿದ್ದಿತು ಹಯದೊಡ್ಡು |
ತಾಳಲಾಱದೆ ಗಜಮೋಹರದೊಳು ಬಂದಾಳಿತಾ ಗಜಮೋಹರವು || ೭

ರಾಯ ಮೋಹರದೊಳು ಪೊಕ್ಕುದು ಕಂಪಿಲರಾಯಕುವರ ನಿನ್ನ ಗದೆಯು |
ಘಾಯಕಾನುವ ಭಟರುಂಟೇ ಕೇಳಾ ಕಂಜಾಯತೇಕ್ಷಣೆ ಮೆಚ್ಚಿದಳು || ೮

ಸಂದಿತು ಬಿರುದು ಬಂದಿತು ಕೀರ್ತಿ ರಿಪುಸೇನೆ ಕಂದಿತು ಖಾನರ ಮೋಱೆ |
ಕಂದಿತು ಕರ್ಣಾಟಪತಿ ಕಂಪರಾಯನ ನಂದನ ಸಂಧಾನಕೆಳಸು || ೯

ಖಾನರು ಕಂಗೆಟ್ಟರು ಮಲ್ಲುಕರು ಮದಹೀನರಾದರು ಡಿಳ್ಳೀಶ್ವರನ |
ದಾನಪಾತ್ರಗಳಾದರು ರಾವುತರು ಸಂಧಾನಕೆಳಸು ರಾಯಕುವರ || ೧೦

ಬಂದ ಕೀರ್ತಿಯ ಬಯಲಿಡೆ ಕೆಡಿಸದಿರಿನ್ನು ಬಂದು ಮಾತಂಗಿಯ ಕಂಡು |
ಸಂದ ಸುರತ್ರಾಣಸುತೆಯೊಳೊಲಿದು ಹಸೆನಿಂದು ಹರವು ಕೀರ್ತಿಯನು || ೧೧

ಶಿವಸಾಯುಜ್ಯವನೆಯ್ದುವರೀ ಲೋಕದವರಲ್ಲದೆ ದೇವತೆಗಳೆ ।
ವಿವರಿಸು ಕರ್ಣಾಟಾಂಧ್ರದ್ರವಿಡಭೂಧವನ ಕುಮಾರ ಚಿತ್ತದೊಳು ॥ ೧೨

ರಣಮುಖದೊಳಗಳಿದೊಡೆ ನಾಕಲೋಕದ ಗಣಿಕೆಯರಾದಪರೆಂದು ।
ಹಣದಾಸೆಯಿಂ ಮನುಜರ ಹರಣವ ಕೊಂಬ ಬಣಗರ ಮಾತ ಕೇಳದಿರು ॥ ೧೩

ಹಿಮಸೇತು ಮಧ್ಯದೊಳಗಣ ಭೂವಿಾಶ್ವರರಮಣಸುತ್ರಾಣಸುತೆಯು ।
ಸಮರತಿಗೆಳಸದೆ ಭೂತಪಿಶಾಚರ ರಮಣಿಯರನು ಬಯಸುವರೇ ॥ ೧೪

ವೀರಲಕ್ಷ್ಮಿಯ ತೊಲಗಿಸು ತೋಳಕೊಡು ನಮ್ಮ ಭೂರಮಣನ ಪ್ರಿಯಸುತೆಗೆ ।
ವೀರಶಿರೋಮಣಿ ಬಯಲಿಗೀ ದಿವ್ಯ ಶರೀರವ ಕೆಡಿಸಿಕೊಳ್ಳದಿರು ॥ ೧೫

ಎಂದು ನುಡಿದ ವಂದಿಗಳ ಯುಕ್ತಿಜಾಲದೊಳೊಂದಿದ ಸವಿನುಡಿಗಳನು ।
ಅಂದಾಲಿಸಿ ಮನದೊಳು ಮೆಚ್ಚುತವರೊಡನಿಂತೆಂದಾ ರಾಯಕುವರ ॥ ೧೬

ಸುರವಧುಗಳ ಬಯಸುವರಲ್ಲ ಸುರತಾಳಧರಣಿಪತಿಯ ಕುವರಿಯನು ।
ವರಿಸುವರಲ್ಲ ವಿಪ್ರರ ನಿಮ್ಮ ನುಡಿಗೇಳಿ ಚರಿತ ಬೇಱಾಗಿಹುದೆಮ್ಮ ॥ ೧೭

ಪರವಧುಗಳ ನೋಡಲಿಲ್ಲೀಶ್ವರನಲ್ಲದಿರವಿಲ್ಲ ಹೃದಯ ಮಧ್ಯದೊಳು ।
ಧುರಕೆ ಸರಿಯಲಿಲ್ಲಿದು ನಮ್ಮ ಸರಣಿಯೆಂದೊರೆದು ಮತ್ತಿಂತು ನುಡಿದನು ॥ ೧೮

ವೈದಿಕವನು ಧಿಕ್ಕರಿಸುತಿದೆ ನಿಮ್ಮನುವಾದವಿವಾದವೈದಿಕಮತದ ।
ವಾದಿಗಳಾಗಬೇಕಲ್ಲದೊಡೀ ಪ್ರೌಢವಾದ ಮಿಕ್ಕರಿಗೆ ಘಟಿಪುದೆ ॥ ೧೯

ಎಂದೆನಲಹುದಾರ್ಹತ ಮತದವರಾವು ವಂದಿಗಳ್ವಾದಿಗಳಲ್ಲ ।
ಸಂದ ಮಳೆಯಖೇಡದ ವಾದಿವಿದ್ಯಾನಂದಸ್ವಾಮಿಯ ಶಿಷ್ಯರಾವು ॥ ೨೦

ರಣದಾನಪಾತ್ರಗಳಿಲ್ಲೆಂದು ಮನದೊಳಗೆಣಿಸುತಿರ್ದೆನು ಬಂದರಿವಡು ।
ತ್ರಿಣಯನ ಕರುಣಾವಲೋಕನವೆನಗನುಗುಣವೆಂದು ನಲಿದನಾ ಕುವರ ॥ ೨೧

ಕೊಟ್ಟನು ಜೋಡು ಸವಗ ಪಕ್ಕರೆಗಳೆಡೆಗಟ್ಟಿರ್ದ ಜಾಲಿಗೆಗಳನು ।
ಕೊಟ್ಟನು ದಿವ್ಯವಾಜಿಯ ಕೊರಲೊಳಗಳವಟ್ಟಿರ್ದ ಉಳಿಸರಗಳನು ॥ ೨೨

ಕಡೆಯ ಪೆಂಡೆಯ ಕಾಲುಳಿಸರ ಫಣಿಕೈಯ್ಯಕಡಗ ಕಂಕಣ ಕಡಕುಗಳ ।
ಗಡಣವನೊಲಿದಿತ್ತವರ ಕಳುಪಿದನಾ ಕಡುಗಲಿ ರಣರಂಗದೊಳಗೆ ॥ ೨೩

ಬಂದವರಾ ರಾಮನಾಡಿದ ಮಾತನಾನಂದದಿಂ ಪೇಳಿ ಕೇಳ್ದವಳು ।
ಅಂದು ಗಜದ ಮೇಲೆ ನಿಂದು ಚಾಮರವನಾನಂದ ಕೈಮಿಗೆ ಬೀಸಿದಳು ॥ ೨೪

ಬೀಸಲೊಡನೆ ಬಿಜ್ಜಳದಿಂದ ಬೀಸಿದ ಮಾಸಿವ ತನಿಗೆಂಡದಂತೆ ।
ಆಸುರವಡೆದುದಾ ಬಲವಿತ್ತರಾಮನುದಾಸೀನದಿಂ ನೋಡುತಿರಲು ॥ ೨೫

ಚರರು ಮೂವತ್ತುಸಾವಿರ ಮೂಱುಸಾವಿರ ತುರಗವೆಮ್ಮೊಡನೆಯ್ದಿದುದು ।
ಪರಿಕಿಸು ಪರಿಮಿತವಾಯ್ತು ಕುವರ ಎಂದೊರೆದನು ಭಾವಸಂಗಮನು ॥ ೨೬

ಸಂಗರರಂಗವೆಂಬುದು ಭಾವನರ್ತನರಂಗವೆ ಜೀವತತಿಯನು ।
ಪಿಂಗಿಸಿ ದೇಹರಾಶಿಯ ಮಾಳ್ಪ ಯಮಖಳರಂಗವಲ್ಲದೆ ಬೇಱೇನು ॥ ೨೭

ಸಮರಾಂಗಣವೆಂಬುದು ಸಮನಂಟರ ಸಮುದಿತರಾಜಾಂಗಣವೆ ।
ಯಮನ ಕಾರಾಗೃಹದಂಗಣಮಲ್ಲದೆ ವಿಮಲವಿಕ್ರಮ ಭಾವ ಕೇಳಾ ॥ ೨೮

ಎಂದು ನುಡಿವುತಿರಲಿವರಿತ್ತಲತ್ತಲಾಯಿಂದುವದನೆ ನಿಜಬಲವ ।
ನಿಂದು ಹರಿಯಬಿಟ್ಟಳು ರಾಮನ ಮೇಲೆ ದುಂದುಭಿರವ ಮೊಳಗುತಿರೆ ॥ ೨೯

ಸಾವಿರ ಕುದುರೆ ಕಾಳಾಳು ಲೆಕ್ಕಿಸೆ ಹತ್ತು ಸಾವಿರವೆರಸಾ ಬಲಕೆ ।
ಆ ವೀರರಾಮ ಮುಯ್ಯಾಂತು ನಿಂದನು ಮೇಲೆ ದೇವತೆಗಳು ಮಱುಗಿದರು ॥ ೩೦

ಏನ ಹೇಳುವೆ ಸುರತಾಳನ ಬಲದೊಳು ನಾನಾದೇಶಾಧಿಪರು ।
ಖಾನಮಲ್ಲುಕರು ವಜ್ಜೀರರು ಖೋರಸಾನಿಗಳ್ಕನ್ನೋಜಿಗಳು ॥ ೩೧

ತುರುಕಬಜ್ಜೆಯರು ತುರುಕರಾವುತರು ಬಲುಬಿರುದಿನ ಮೆಯ್ಗಾವಲವರು ।
ಧುರಗಲಿಗಳು ದುರ್ಜಯರು ನೆರೆದಿದೆ ರಾಮಗಿರವಿನ್ನೆಂತೋ ಮರ್ತ್ಯದೊಳು ॥ ೩೨

ಸಿಂಗದ ಮಱಿಯೆಳೆನೆಯ ಮದದಾನೆಯ ಜಂಗುಳಿಯೊಡನೆ ಮಸಗಿದ ।
ಭಂಗಿಯಂತಿದೆ ಸುರತಾಳಬಲಕೆ ರಾಮಸಂಗರದೊಳು ನಿಂದಿರಲು ॥ ೩೩

ಎಂದು ಶಚಿದೇವಿಯೊಡನೆ ದಿವಿಜಪತಿ ನೊಂದು ನುಡಿವುತಿರಲತ್ತ ।
ಬಂದು ರಾಮನಮೇಲೆ ಹರಿಯಬಿಟ್ಟಳು ತನ್ನ ಮುಂದಿಕುದುರೆಯನಂದವಳು ॥ ೩೪

ಹರಿಯಬಿಡಲು ಮಸಗಿದ ಕಡಲಂತವರುರವಣೆಯಿಂದೆಯ್ತಂದು ।
ಸುರಿದರು ರಾಮನಮೇಲೆ ಸಿಂಗಾಡಿಯ ಸರಳಸರಿಯನಿರದಾರ್ದು ॥ ೩೫

ಪೊಕ್ಕೆಡೆಯನು ಪೊಱಮಟ್ಟೆಡೆಯನು ಮೇಲಿಕ್ಕಿ ತಿವಿದು ಚಿಗಿವುದನು ।
ಮುಕ್ಕಿಱುಂಪೊಡೆ ಮುಯ್ಯಾಂತು ನಿಲ್ವುದನೆವೆಯಿಕ್ಕದೆ ವನಿತೆ ನೋಡಿದಳು ॥ ೩೬

ಗುಣಕೆ ಹುರಡೆ ಸದಾಶಿವ ರಾಮನಂತಪ್ಪ ರಣದಾಕೆವಾಳರು ನಮ್ಮ ।
ಗಣನಾತೀತಬಲದೊಳಿಲ್ಲವೆಂದಾ ಗಣಿಕೆ ಮೆಚ್ಚಿದಳು ಮನದೊಳು ॥ ೩೭

ಸುಳಿಗಾಳಿಯಂತೆ ಸುಟ್ಟುರೆಯಂತೆ ಜಂಝಾನಿಲನಂತೆ ಬಿರುಗಾಳಿಯಿಂತೆ ।
ಸುಳಿದು ತಿರುಗಿ ಪರಿದಲೆದು ರಾಮನ ವಾಜಿ ಕೊಳುಗುಳದೊಳು ತೊಳಲುತಿಪೆ ॥ ೩೮

ಮೇಲಿಕ್ಕಿ ತಿವಿದು ರಾಮನ ಕಣ್ಗೆಡಿಸುವ ಮೇಲವರನು ಕಾಣೆನೆಂದು ।
ಆಲೋಲಮಾನಸೆಯಾಗಿ ಮಲಗಿದಳಂದಾ ಲಲಿತಾಂಗಿ ಮನದೊಳು ॥ ೩೯

ಪಡಗು ನಡೆಯೆ ಪಟವೆತ್ತಿ ಜಡಧಿಯು ನೀರೊಡೆದು ದಾರಿಯ ಕೊಡುವಂತೆ ।
ಕಡುಗಲಿ ರಾಮನ ಕುದುರೆಗಾ ಪಡೆ ಸೇಡೆಯೊಡನೆ ಕೊಟ್ಟದು ದಾರಿಯನು ॥ ೪೦

ಅಲ್ಲಿಂದ ಬಂದಡ್ಡಲಾದರ ವ್ಯೈಯೊಳು ಸಿಕ್ಕಿ ಭಲ್ಲೆಯನು ಭರದಿಂದ ।
ನಿಲ್ಲದೆ ನಡೆತಂದು ದುರ್ಗದ ಪುಲಿಮುಖದಲ್ಲಿ ಕಂಡನು ನಿಜಾಗ್ರಜನ ॥ ೪೧

ತಮ್ಮನ ಕಾಣುತ ಮನದುಮ್ಮಳವನು ಘಮ್ಮನೆ ಬಿಸುಟು ಕಾಟಣ್ಣ ।
ಉಮ್ಮಹದಿಂ ವಾಜಿಯಿಂದಿಳಿಸಿಕೊಂಡು ಸುಮ್ಮಾನವಡೆದನೆದೆಯೊಳು ॥ ೪೨

ಇಳಿಯಲೊಡನೆ ದೇವವಾಜಿ ದೇಹವ ಬಿಸುಟಿಳೆಯೊಳೆಯ್ದಿದುದಿಂದ್ರನೆಡೆಗೆ ।
ತಿಳಿದನದನು ಕಂಡು ದೇವ ತನ್ನೊಡನೆ ಭೂನಿಳಯದೊಳಂದೊರೆದುದನು ॥ ೪೩

ತುರಗಶರೀರವನರ್ಚಿಸಿ ನಾನಾಭರಣವೆರಸು ಭೂಗೃಹದೊಳು ।
ನಿರಿಸಿ ಬೇಗದೊಳೆಯ್ತಂದು ಪೊಕ್ಕನು ತನ್ನರಮನೆಯನು ರಾಯಕುವರ ॥ ೪೪

ಕಂಡವಗಿಲು ಬಾವನ್ನಕೊರಡುಗಳ ಕೆಂಡಗಳಿಂದಿಡಿದಿರ್ದ ।
ಕೊಂಡಗಳನು ರಾಜಾಂಗಣದೊಳು ಮುಂಕೊಂಡು ನಿಂದಿರ್ದ ಪೆಣ್ಗಳನು ॥ ೪೫

ಕೇಸುರಿಗೆವಱುವ ಕೆಂಡಗಳಿಂದ ವಿಲಾಸವಡೆದ ಕೊಂಡಗಳೊಳು ।
ಸೂಸುತ ಕರ್ಪುರಗಳನು ನಿಂದಿರ್ದ ಮಾಸತಿಯರ ಕಂಡನಲ್ಲಿ ॥ ೪೬

ತನ್ನಳಿವುಳಿವ ಕೇಳುತ ಕೆಳದಿಯರಿಂದ ಕನ್ನಡಿಗಳ ಕಂಡನೊಸೆದು ।
ಮನ್ನಿಸುತಿರುತಿರ್ಪ ನಿಜಸತಿಯರ ಮೊಗಗನ್ನಡಿಗಳ ಕಂಡನೊಸೆದು ॥ ೪೭

ವೀಣೆಕಿಂನ್ನರಿಗಳಿಂ ತನ್ನ ಪೆಸರ ಪದಶ್ರೇಣಿಯನೊಸೆದು ಬಾಜಿಸುವ ।
ರಾಣಿವಾಸಗಳನು ಕಂಡನು ಸುರುತ್ರಾಣಬಲಾಬ್ಧಿಬಾಡಬನು ॥ ೪೮

ಚಿಂತೆ ಸಂತೋಷಗಳೆರಡಕ್ಕೆ ಕುವರ ತನ್ನಂತರಂಗವ ಮಾಱುಗೊಟ್ಟು ।
ತಾಂ ತಡೆಯದೆ ಬಂದಲಂಕರಿಸಿದನು ಗಜಾಂತಕವಿಷ್ಟರಾಗ್ರವನು ॥ ೪೯

ಪನಿನೀರ ಕುಪ್ಪಿಗೆಗಳನೊಡೆದೊಡೆದಂಗನೆಯರುರೀಯಲು ತಮತಮಗೆ ।
ಮನವೊಲಿದಾನನಕರಚರಣಂಗಳನನುಗೊಳಿಸಿದನು ಬೇಗದಲಿ ॥ ೫೦

ಬಳಿಕ ದೇವಾಗಾರಕೆಯ್ದಿ ಲಿಂಗವ ಕಂಡು ತಳೆದಾನಂದಾಶ್ರುವನು ।
ಪುಳಕಿತಸರ್ವಾಂಗವಾಗಿ ಪೂಜಿಸಿ ಶಿವನಿಲಯವ ಪೊಱಮಟ್ಟು ಬಂದು ॥ ೫೧

ಅಂಗನೆಯರ ಮೊಗ ನೋಡಿ ನುಡಿದನು ತರಂಗಿತವೀರರಸದೊಳು ।
ಪಿಂಗದಿಂದೆನಗಾಜಿಯೊಳು ದೇವವೇಶ್ಯಾಭುಜಂಗನದರ್ಶನವೆಂದು ॥ ೫೨

ಇಂದೆನಗಿಂದುಶೇಖರಪದಯುಗಗಳರವಿಂದಾವಲೋಕನಲಾಭ ।
ಸಂದೇಹವಿಲ್ಲದಾದಪುದೆಂದು ನುಡಿದಾನಂದ ಕೈಮಿಗೆ ವೀರರಾಮ ॥ ೫೩

ನುಡಿಯಲಾ ಮಾತು ಹಿಂಚಿತು ಕುವರನವರನೊಡನೊಡನಮರ್ದಪ್ಪಿಕೊಂಡು ।
ಮಡದಿಯರಾನಂದ ಕೈಮಿಗೆ ಬೀಳ್ದರಂದಡಿಗಡಿಗಗ್ನಿಗೊಂಡದೊಳು ॥ ೫೪

ನಳನಳಿಸುವ ಕೆಂದಾವರೆಯಿಡದಿರ್ಪ ಕೊಳದೊಳು ಜಲಕೇಳಿಯೊಳು ।
ಎಳಸಿ ಬೀಳ್ದಂತೆ ಬೀಳ್ದರು ಲಲನೆಯರಾ ಕಳಕಳಿಪಗ್ನಿಕೊಂಡದೊಳು ॥ ೫೫

ಬೊಕ್ಕಸ ಭಂಡಾರದ ಮನೆಗಳನುರೆ ಪೊಕ್ಕು ಜಾಳಿಗೆ ವಸ್ತ್ರಗಳನು ।
ಲೆಕ್ಕವಿಲ್ಲದೆ ಹೊರಿಸಿದನು ಹರಿಯ ಶಾರ್ಙ್ಗಕ್ಕೆ ಕೈದುಡುಕಿ ನಡೆದನು ॥ ೫೬

ಬೆನ್ನಬತ್ತಳಿಕೆ ಕೈಪೊಡೆ ಕಿಗ್ಗಟ್ಟಿನ ರನ್ನದ ಬಂಕು ಕೈಯಂಬು ।
ಮನ್ನಿಸುತಿರೆ ನೋಳ್ಪರ ಕಣ್ಣ ಮೆಯ್ಯ ಬಾವನ್ನವೆಸೆಯೆ ತೆರಳಿದನು ॥ ೫೭

ಬಂದು ಕಾಟಣ್ಣ ಬಾದುರಖಾನನವರನು ನಿಂದು ಮಾತಾಡಿಸಿ ಬಳಿಕ ।
ತಂದು ಬೊಕ್ಕಸ ಭಂಡಾರವೆಲ್ಲವ ತನ್ನ ಮುಂದಿಗೆ ಕೈವೀಸಿದನು ॥ ೫೮

ಪರಿವಾರ ಕಂಡಕಡೆಗೆ ಬಿಱುತೋಡಿತು ತರಹರದಿಂ ವೀರರಾಮ ।
ದರಹಸಿತಾನನನಾಗಿ ನಿಂದಿರ್ದನು ಶರಭಶಾಬಕದಂತೆ ಮಲೆತು ॥ ೫೯

ಎಡಬಲದೊಳು ಕಾಟಣ್ಣ ಬಾದುರಖಾನ ನಡುವೆ ಸಂಗಮದೇವವೆರಸು ।
ಕಡುಗಲಿರಾಮ ನಿಂದಿರ್ದನು ಸಿಂಗಾಡಿ ದುಡುಕಿ ಸಿಂಗದ ಮಱಿಯಂತೆ ॥ ೬೦

ಸಿಂಗಾಡಿವಿಲ್ಲಲರ್ವಿಲ್ಲಂಬಗಳು ಪುಷ್ಪಗಳ ಸರಳನೇಳಿಸಲು ।
ಅಂಗಜನಂತೆಸೆದನು ರಾಮನಾ ರಣರಂಗಮಧ್ಯದೊಳು ನೋಳ್ಪರಿಗೆ ॥ ೬೧

ಹೊಡಿದ ಮುಂಡಿ ನೀಡಿದ ಕೈ ಕಿವಿಯನು ಕೊಡಿದ ತಿರು ರಿಪುಭಟರ ।
ನೋಡುವ ಕಣ್ಣೆಲಸಿರಲಂಬುಗಳು ಬಿಡದೋಡುತಿರ್ದುವು ಬಿಲ್ಲಿಂದ ॥ ೬೨

ಕಟ್ಟಿದಂತಿರೆ ತಿರು ಕಿವಿಯೊಳು ಶರಜಾಲಪುಟ್ಟಿದಂತಿರೆ ಬಿಲ್ಲೊಳಗೆ ।
ಬೆಟ್ಟದಂತಿರೆ ಬೆರಳ್ಬೆನ್ನೊಳು ಕಣೆಯಱಿಯಟ್ಟುತಿರ್ದುವು ಖಾನರನು ॥ ೬೩

ಬಿಡಲು ಮೆಯ್ದಡವಿ ಗಿಡಿಗ ಗಿಳಿವಿಂಡ ಕೆಡಹಿ ಕೊಡಹಿ ಕೊಲುವಂತೆ ।
ಕಡುಗಲಿ ರಾಮನೆಸಲು ಕೂರ್ಗಣೆಗಳು ಬಿಡದೆ ಕೊಂಡವು ರಿಪುಗಳನು ॥ ೬೪

ಉರ್ಚಿ ಹಾಸವ ಜಾಯಿಲಗಳು ಪುಲ್ಲೆಗಳನು ಕಚ್ಚಿಕೊಲ್ವಂತರಿಭಟರ ।
ಪೆರ್ಚಿದೊಡಲನುಗಿದುಗಿದಂಬುಗಳು ತೊಟ್ಟುರ್ಚಿ ಬಿದ್ದವು ರಾಮನೆಸಲು ॥ ೬೫

ಸುರಚಾಪ ಬಿಲ್ಲಾ ಬಿಲ್ಲಟಂಕೃತಿ ಮೊಳಗುರು ಶರಜಾಲ ಬೆಳ್ಸರಿಯ ।
ಇರವಾಗಲಾ ರಾಮ ಮಳೆಗಱಿವಿಂದ್ರನ ಪರಿಯಂತೆಸೆದನಾಜಿಯೊಳು ॥ ೬೬

ಪಿಳುಕಪಿಳುಕು ಕರ್ಚಿಕೊಂಡು ಪರಿವ ಸರಳೆಳಸಿದವಂತೆ ಬಲ್ಸರಳ
ಹೊಳಹಿನಂತಾ ರಣದೊಳು ರಾಮನ ಕೈಚಳಕವನೇನ ಬಣ್ಣಿಪೆನು ॥ ೬೭

ಬಲಿದು ಖತಿಯನಾ ಲಲನೆ ಸಿಂಗಾಡಿಯ ಬಿಲುಗಾಱರ ನೆರವಿಯನು ।
ಕಲಿಗಳ ತಲೆವಣಿ ರಾಮನ ಮೇಲೆ ಮೂದಲಿಸಿ ಹರಿಯಬಿಟ್ಟಳಂದು ॥ ೬೮

ಸಿಡಿಲ ಬಳಗವೋ ಶಿವನ ಪಣೆಗಣ್ಣ ಕೆಂಗಿಡಿಯ ಜಂಗುಳಿಯೋ ವಾಡಬನ ।
ಕುಡಿನಾಲಿಗೆಗಳ ಕೂಟವೋ ಎನಲೇಳ್ದವಂದೊಡನೆ ಸಿಂಗಾಡಿವಿಲ್ಲುಗಳ ॥ ೬೯

ಹಲಗೆ ಹಕ್ಕರಿಕೆ ಕೊಪ್ಪರಿಗೆ ಬದ್ಧರಬಂಡಿ ತಳಿವೆತ್ತ್ರವರಿಗೆ ನೆರೆಯೊಳು ।
ಬಿಲುಗಾಱರು ಕಯ್ಯ ಹರಣವೆರಸು ನಿಂದು ಕಲಿರಾಮನ ಕೆಣಕಿದರು ॥ ೭೦

ಜೋಡಿನ ಮೇಲೆ ಸೀಸಕದ ಮೇಲಂಬು ತುಳ್ಕಾಡಲು ಖಾನ ಮಲ್ಲುಕರು ।
ಕೂಡೆ ಕುಮಾರನನೆಚ್ಚು ಬೊಬ್ಬಿಱಿದರಾ ಗಾಡಿಕಾತಿಗೆ ನಲವೇಱೆ ॥ ೭೧

ಹಱಿದು ವಜ್ರಾಂಗಿಯ ಜೋಡು ಮೆಯ್ಯೊಳು ನೆತ್ತರೊಱತೆ ಮಸಗೆ ಮೆಯಿಮಱತದು ।
ನೆಱೆಗಲಿಯಿರ್ದನೊಂದಿನಿತು ಪೊಳ್ತನುರರು ಮಱುಗಲಂಬರತಳದೊಳಗೆ ॥ ೭೨

ಒಲಿದು ಕಣ್ಗಳಿಗೊತ್ತಿ ಪನಿನೀರನೊತ್ತಿನ ಲಲನೆಯರಿತ್ತು ಕಪ್ಪುರವ ।
ನೆಲೆಗೊಳಿಸಲು ಕರಣಂಗಳನವ ನೊಂದ ಹುಲಿಯಂತೆ ಹುರಿಯೇಱದನು ॥ ೭೩

ಆ ಸಮಯದೊಳು ಸಂಗಮದೇವ ಕಾಟಣ್ಣನಾಸನ್ನ ವೀರಬಾದುರನು ।
ಓಸರಿಸದೆ ಕಲಹದೊಳಳಿದಮರವಿಲಾಸಿನಿಯರ ಕೈವಿಡಿದರು ॥ ೭೪

ಕುವರನ ರಣಕೇಳಿಯ ಕಣ್ದಣಿವಿನಮವಲೋಕಿಸಿ ಬಳಿಕವರು ।
ಬವರದೊಳರಿಗಳೊಳಿಱದಾಡಿ ನಾಕದ ಯುವತಿಯರೊಳಗೊಪ್ಪಿದರು ॥ ೭೫

ವಳಿತವಾಹನವಸ್ತ್ರ ಪೆಯ್ದೊಡವಿತ್ತು ಮೆಯ್ಪಳಿಯೊಳು ಸಲಹಿದೊಡೆಯನ ।
ಬಳಿಯೊಳಳಿದವರಮರರ ಮೆಚ್ಚಿಸಿ ದಿವ್ಯಲಲನೆಯರೊಡವೆರಸಿದರು ॥ ೭೬

೧೯

ಮೇಲೆ ಮೇಲವಳು ಮುಳಿದು ತನ್ನ ಸೇನಾಜಾಲಕೆ ಕೈವೀಸಲಂದು ।
ಕೋಲಾಹಲ ಮಸಗಲು ವೀರರಾಮನ ಮೇಲೆ ಕವಿದುದು ಖಾತಿಯಲಿ ॥ ೧

ಎಚ್ಚನರಾತಿಭಟರನವರಸುಗಳನಚ್ಚರಿವೆಣ್ಗಳಿಗೊಲಿದು ।
ವೆಚ್ಚವಿಕ್ಕಿದನಾ ಬಲಜಲಧಿಯ ನೀರ್ಗಿಚ್ಚಿನಂತುರೆ ತವಿಸಿದನು ॥ ೨

ಕೊಂದರಿಗಳನವರಸುಗಳನಮರೀವೃಂದಕಾನಂದದಿಂ ಕಳುಪಿ ।
ಕುಂದಿದ ಬಲವ ಭೂತಂಗಳ ನೆರವಿಂದಂದು ಪೆರ್ಚಿಸಿ ತೋಱದನು ॥ ೩

ಮತ್ತವಳಾ ರಾಮನ ವೀರಾವೇಶವೃತ್ತಿಯ ಕಂಡು ತನ್ನವರ ।
ಒತ್ತಿ ನುಡಿವುತ ಸಕಲ ಬಲವೆರಸು ಕೈಯೆತ್ತಿ ಕಲಹಕೆ ನಡೆದಳು ॥ ೪

ವಳಿತವ ತೆಗೆದು ವಜ್ಜೀರಮುಲುಕಖಾನರಳವುಗೆಡಿಸಿ ರಾವುತರ ।
ಒಳಗೆ ಪಱಿಯೊಳು ಬರಯಿಸುವೆನೆನುತಾ ಕಳಕಂಠಿ ಕಲಹಕ್ಕೈದಿದಳು ॥ ೫

ಗಡ್ಡವ ಬೆಳೆಯಿಸಿಕೊಂಡು ಮಂಡೆಯೊಳೊಂದ ದೊಡ್ಡ ಸುತ್ತನು ಸುತ್ತಿಕೊಂಡು ।
ಗೊಡ್ಡಾವಿನಂತೆ ತಿರುಗುವ ರಾವುತರಡ್ಡಲಾದಪರೆ ರಾಮನಿಗೆ ॥ ೬

ಆನೆಯೆಂದೊಡೆ ಮೃಗಕುಲವಲ್ಲದೆ ಪಂಚಾನನನಂಜಿ ಜಾರುವುದೇ ।
ಖಾನರೆಂದೊಡೆ ಮಿಕ್ಕರಸುಗಳಲ್ಲದೆ ಕಂಪ ಭೂನಾಥನಣುಗನಳ್ಕುವನೇ ॥ ೭

ಎಂದು ಸೇನಾವನಧಿಯನುಬ್ಬೇಳಿಸುತಂದು ಮಾತಂಗಿ ಕುವರನ ।
ಬಂದು ಮೂವಳಸಾಗಿ ಮುತ್ತಿ ಕರಿಯಮೇಲೆ ನಿಂದು ಚಾಮರವ ಬೀಸಿದಳು ॥ ೮

ಶರಭಶಾಬಕವ ಕೇಸರಿವಿಂಡು ಕೆಣಕುವ ಪರಿಯಂತಾ ರಾಮನನು ।
ನೆರೆದು ಸುಭಟರು ಕೆಣಕಿದರಂಬರದೊಳು ಸುರರು ಸುರಿಯೆ ಕಣ್ಣನೀರ ॥ ೯

ಎಚ್ಚರಿಜಿಂವರುಜಿ ಕಡಿದರಿಟ್ಟರು ವೈಯ್ಯಮುಚ್ಚಿದರಸಿಜಾಲದಿಂದ ।
ಮಚ್ಚರಿಸಿದರು ಮಲೆತರು ಮೂದಲಿಸಿದರಚ್ಚಿಗಗೊಳಿಸಿದರವನ ॥ ೧೦

ನಿಂದುರಿವಗ್ನಿಜ್ವಾಲೆಯ ಪೊಯ್ದು ಶಲಭಾಳಿ ಬಂದು ಜೀವಿಪುದೇ ರಾಮನೊಳು ।
ಸಂದಿಜಿಂದಾಡಿ ಬಂದದನಾಡುವ ಭಟವೃಂದಮುಂಟೇ ಭೂಮಿಯೊಳು ॥ ೧೧

ಮುಜಿಂವುದು ಮುಂದಣ ಬಲ ಹಿಂದಣ ಸೇನೆ ತಜಿಂಸಂದು ತಗುಳ್ವುದೊಗ್ಗಿನಲಿ ।
ತಜಿಬುಬುಪರೆಡಬಲದವರು ಮೇಲವರು ಬಂದುರುಬುವರಾ ಕುವರನನು ॥ ೧೨

ಎಡಬಿಡದಂಗೋಪಾಂಗದೊಳಗೆ ಘಾಯವಿಡಿದುವು ಮೆಯ್ಗೆ ಬಳಲ್ಕೆ ।
ಅಡರ್ದುದು ಮೆಲ್ಲಮೆಲ್ಲನೆ ಕಾಲ್ಗಳು ತಡಬಡಿಸಿದವಲ್ಲಿ ಕುವರಗೆ ॥ ೧೩

ಕಾಯದೊಳಿಡಿದ ಪೂರಾಯಘಾಯುಗಳ ನಿಕಾಯವ ಕಂಡು ಮಾತಂಗ ।
ಖೋಯೆಂದು ಹರಿಯ ಬಿಟ್ಟಳು ನಿಜಸೇನಾನಾಯಕರಸು ನಲವಿಂದ ॥ ೧೪

ಕೊಂದಸಂಖ್ಯಾತಭಟರ ಮತ್ತೆ ಮೆಯ್ಯೊಳು ಸಂದಣಿಸಿದ ಘಾಯುಗಳಿಗೆ ।
ನೊಂದಳನಳಿವುತೊಯ್ಯನೆ ನಡೆತಂದು ನಿಂದು ಶಿಲೆಯ ನಂಬಿದನು ॥ ೧೫

ಹೆಚ್ಚಿದ ಹೇರಡವಿಯನೆಲ್ಲವ ಕಾಳ್ಗಿಚ್ಚು ಸುಟ್ಟೊಂದು ಬಲ್ಮರನ ।
ಕೆಚ್ಚನಾಶ್ರೈಸಿ ನಿಂದಂತೆ ನಿಂದನು ರಾಮನುಚ್ಚಶಿಲೆಯನೊಂದ ನೆಮ್ಮಿ ॥ ೧೬

ಹೂಡಿದ ಮಂಡಿ ಹಿಡಿದ ಬಿಲ್ಲು ತಿರುಸರಲ್ಗೂಡಿ ಕಿವಿಯೊಳಿರ್ಪ ಬಲದ ।
ಗಾಡಿವಡೆದ ಹಸ್ತವೆಸೆಯೆ ಕುವರ ಚಂದ್ರಚೂಡಚಿಂತೆಯೊಳಿರ್ದನಲ್ಲಿ ॥ ೧೭

ಕದಲಿದ ಕರಣಂಗಳನೊಬ್ಬುಳಿಯಿಕ್ಕಿ ಹೃದಯಾಂಬುಜಮಧ್ಯದೊಳಗೆ ।
ಮದನಾರಿಯ ಮನೆಗೊಳಿಸಿ ಸಮಾಧಿಯೊಳೊದವಿರ್ದನಾ ರಾಯಕುವರ ॥ ೧೮

ಆಧಿಯನುಳಿದಂತರಂಗದೊಳಗೆ ನಿರುಪಾಧಿಕಶಿವಭಕ್ತಿರಸವ ।
ವೇಧೆಗೊಳಿಸಿ ವೇದವೇದಾಂತವೇದ್ಯ ಸಮಾಧಿಯೊಳಿರ್ದನಾ ಕುವರ ॥ ೧೯

ಪೊಱಗೊಳಗೆಲ್ಲಿ ನೋಡಿದೊಡೀಶ್ವರನಲ್ಲದಱೆಕೆಯ ದೈವವಿಲ್ಲೆಂಬ ।
ಕಱಿಗೊಂಡಱಿವಿನ ಸಮಾಧಿಯೊಳಿರ್ದನಾ ನೆಱಿಗಲಿ ನೆನೆವುತ್ತಭವನ ॥ ೨೦

ಮಱಿದು ಬಹಿರ್ವ್ಯಾಪಾರಪ್ರಪಂಚವ ತೊಱಿದು ವೈಷಯಿಕಸುಖಗಳ ।
ನೆಱಿಗಲಿ ನೆನೆವುತ್ತವನು ಪರತತ್ತ್ವದ ನೆಱೆಗೆಯ ನೆಲೆಯನೆರ್ದೆಯೊಳು ॥ ೨೧

ಜ್ಞಾನಮುಖದೊಳೀಶ್ವರನಱೆದವನವಸಾನಕಾಲವ ಪುಷ್ಪಕವನು ।
ತಾನತಿಕೃಪೆಯಿಂದ ನಮ್ಮನು ನೆನೆದನು ಸಾನಂದ ಮಿಗೆ ಕಳುಪಿದನು ॥ ೨೨

ಪುರಹರನಟ್ಟಿದ ಪುಷ್ಪಕವೆಯ್ತಂದು ವರಶುಚಿ ರಾಮನ ಮೇಲೆ ।
ಕರಮೆಸೆದುದು ಕಿಂಕಣಿಗಳ ನಿನದವಾವರಿಸೆ ದಿಗಂತರಾಳವನು ॥ ೨೩

ಚಕಚಕಿಸುವ ನವರತ್ನದ ಲಹರಿಯಿಂ ಸಕಲ ದಿಗ್ಭಿತ್ತಿಭಾಗಗಳ ।
ನಿಕರವ ಚಿತ್ರಿಸುತಂಬರಲಕ್ಷ್ಮಿಯ ಸುಕರಸೌಧದವೊಲೆಸೆದುದು ॥ ೨೪

ಇದು ತುಚ್ಛಗಿರಿಯಿದಱೊಳು ನಿನಗೇನು ನಮ್ಮದರದೊಳಿರು ಬಾರೆಂದು ।
ಮುದದಿಂದ ಕರೆಯಲೆಯ್ತಂದಾ ತಾರಾದ್ರಿಯನದು ಪೋಲ್ತುದವನ ಮೇಲಂದು ॥ ೨೫

ಮಣಿಘಂಟಾ ಕಿಂಕಿಣಿಗಳ ಕಲಕಲರಣನದಿಂ ಪ್ರಮಥರುಚ್ಚರಿಪ ।
ಪ್ರಣವಪಂಚಾಕ್ಷರಿಯಿಂ ಶಬ್ದಬ್ರಹ್ಮದ ಕಣಿಯೆನಲದು ಕಣ್ಗೆಸೆದುದು ॥ ೨೬

ನೆತ್ತಿಯಿನೊಡೆದು ಕುವರನಾತ್ಮ ಪರಮಾತ್ಮನೊತ್ತಿಗೆಯ್ದಿತು ತವಕದೊಳು ।
ಹತ್ತಿತು ಪುಷ್ಪಕವನು ಹೂವಿನ ಮಳೆ ಹತ್ತಿತು ರಣಭೂಮಿಯೊಳು ॥ ೨೭

ಉರುಲಿಂಗದೊಳಗೈಕ್ಯವೆಯ್ದುವಂತಾ ರಾಮನುರುತರ ಪುಷ್ಪಕೋದರವ ।
ಭರದಿಂದ ಪೊಕ್ಕನು ದೇವದುಂದುಭಿ ಮೊರೆಯೆ ಮೇಲೆ ಸುರಿಯೆ ಪುಷ್ಪವೃಷ್ಟಿ ॥ ೨೮

ಸ್ಥೂಲಶರೀರಮನುಳಿದವನುದಯಾಂಶುಮಾಲಿಮರೀಚಿಯೊಬ್ಬುಳಿಗೆ ।
ಮೇಲಿನಿಸುವ ಸೂಕ್ಷ್ಮದೇಹದಿಂದೆಸೆದನು ಲೀಲೆ ಕೈಮಿಗೆ ಪುಷ್ಪಕದೊಳು ॥ ೨೯

ಒಱಿಯಿಂದ ಪೊಱಮಟ್ಟ ಸೂರ್ಯಹಾಸಾಸಿಯ ತೆಱದಂತಾ ವೀರರಾಮ ।
ಮೆಱಿದನಾ ಸ್ಥೂಲಶರೀರದಿಂ ಪೊಱಮಟ್ಟು ಮಿಱುಗುವ ಸೂಕ್ಷ್ಮಾಂಗದಿಂದ ॥ ೩೦

ನಂದಿಕೇಶ್ವರ ನವ್ಯಗಣನಾಥನ ಕರೆದೊಂದಿ ಕೆಲದೊಳು ಕುಳ್ಳಿರಿಸಿ ।
ಅಂದು ಕೊಂಡೊಯ್ದುದಾ ಪುಣ್ಯಪುಷ್ಪಕ ಮೇಘವೃಂದ ಮಧ್ಯದೊಳು ವೇಗಣ್ಗೆ ॥ ೩೧

ತರಣಿಮಂಡಲವನುಚ್ಚಳಿಸಿ ಗಂಗೆಯ ದಾಂಟಿ ವರತಾರಾಲೋಕವನು ।
ಪರಿದೇಱ ಪುಷ್ಪಕ ನಡೆಗೊಂಡುದಂಬರಶರಧಿಮಧ್ಯದ ನಾವೆಯಂತೆ ॥ ೩೨

ಕಲ್ಪಕಲ್ಪಗಳನುಚ್ಚಳಿಸಿ ಪುಷ್ಪಕ ಸಂಕಲ್ಪಸಿದ್ಧನ ಮಿಗೆ ತಳೆದು ।
ಬಲ್ಪಿನಿಂದೆಯ್ತಂದು ಪೊಕ್ಕುದಂದಚ್ಯುತಕಲ್ಪವಿಮಾನ ಭೂಮಿಯನು ॥ ೩೩

ಅಹಮಿಂದ್ರಲೋಕವ ಕಳೆದು ದೇವತೆಗಳ ಮಹಿಯನುತ್ತರಿಸಿ ವಿಮಾನ ।
ವಹಿಲದಿಂ ಬಂದು ಪೊಕ್ಕುದು ಶಿವಲೋಕವನಹಹ ರಾಮನ ಪುಣ್ಯಕೆಣೆಯೆ ॥ ೩೪

ಹೆಣ್ಣನೊಲ್ಲದೆ ಬಿಟ್ಟು ಹೊನ್ನನಲ್ಲದೆ ಬಿಟ್ಟು ಮಣ್ಣನೊಲ್ಲದೆ ಬಿಟ್ಟು ಶಿವನ ।
ಬಣ್ಣಿಸುವರಿಗಾಗದ ಲೋಕ ರಾಮನ ಕಣ್ಣಿಗೆ ಗೋಚರಿಸಿದುದು ॥ ೩೫

ತಱಗೆಲೆಗಳ ಮೆಲ್ದು ದೆಸೆಗಳ ಪೊದೆದೊಲ್ದು ತೊಱೆದು ದೇಹಾಭಿಮಾನವನು ।
ತಱಸಂದು ತಳರ್ವ ತಾಪಸರಿಗಾಗದ ಲೋಕ ತೆಱೆದೆಱಪಾಯ್ತು ಕುವರಗೆ ॥ ೩೬

ಬೆಳುದಿಂಗಳ ತೊಳೆದಿಂಗಡಲೊಳು ಕೈದಳ ಸೋಂಕದಜನೊಂದುಗೂಡಿ ।
ತಿಳಿದಿಂದ್ರನಾನೆಗೊಂಬಿಂದೊಪ್ಪವಿಟ್ಟಂತಿರೆಳಸಿತಾ ಕೈಲಾಸಾದ್ರಿ ॥ ೩೭

ಪಿಡಿದು ಕಡೆದು ಪಾಲ್ಗಡಲ ದೇವಾಸುರರೊಡನೆ ತೆಗೆದು ಬಯಲೊಳಗೆ ।
ಮಡಗಿದ ನವನೀತರಾಶಿಯಂತದು ಕಣ್ಗೆ ಕಡುರಮ್ಯಮಾಯ್ತು ಕುವರನು ॥ ೩೮

ಕಂಡನೊಲಿದು ಕೈಲಾಸವನಗಜೆಯಗಂಡನಿರ್ಪಾವಾಸವನು ।
ಮಂಡೆಗೆ ಕೈಯಿಕ್ಕಿ ಮಣಿದು ಮಹಿಗೆ ಬಿದ್ದು ದಂಡನುತಿಯನೆಸಗಿದನು ॥ ೩೯

ಜನನದ ಜಡತೆ ಜಾರಿತು ದಿವ್ಯಜ್ಞಾನವು ಜನಿಸಿತು ಜಾಹ್ನವೀಧರನ ।
ನೆನಹು ನೆಲಸಿತು ಮಹಾಲಾಭ ಕೈವೊಕ್ಕ ಮನುಜನಂತಿರೆ ಮಲಗಿದನು ॥ ೪೦

ಮೆಲ್ಲನೆಚ್ಚಱಿಸಿ ನಂದೀಶ್ವರನಾ ಭಕ್ತವಲ್ಲಭನನು ಮುಂದಿಕ್ಕಿ ।
ನಿಲ್ಲದೆ ಪೋಗಿ ಪೊಕ್ಕನು ಕೈಲಾಸವನುಲ್ಲಾಸ ಕೈಮಿಗಲಂದು ॥ ೪೧

ಬಂದನು ದೇವ ನಿನ್ನಯ ದಿವ್ಯ ಚಿತ್ರವ ಬಂದಿವಿಡಿದ ಭಕ್ತನೆಂದು ।
ನಂದಿಕೇಶ್ವರ ಬಿನ್ನವಿಸಲೀಶ್ವರನೆಯ್ತಂದನೋಲಗಕೆ ಲೀಲೆಯೊಳು ॥ ೪೨

ಕುಸುಮದೊಡನೆ ಕಂಪು ಬಿಸಜದೊಡನೆ ಲಕ್ಷ್ಮಿ ಪೊಸಮಣಿಯೊಳು ಕಾಂತಿ ತಳರ್ವ |
ಎಸಕದಂತೀಶ್ವರನೊಡನೆಯ್ದಿದಳಂದೊಸೆದಗರಾಜತನುಜೆಯು || ೪೩

ಅರೆನೆಱೆ ಬಾಂದೊಱೆ ಕೆಂಜೆಡೆ ಕಿಡಿಗಣ್ಣುರಗಕುಂಡಲ ಕೞೆಗೊಱಲು |
ಅರೆಮೆಯ್ಯೊಳೊಡನೆರೆದಂಗನೆ ಮೆಱೆಯಲೀಶ್ವರನೆಸೆದನು ಸಭೆಯೊಳಗೆ || ೪೪

ಕಂಡನು ಕಮಲಾಕ್ಷನಯನಪೂಜಿತಪಾದಪುಂಡರೀಕನನಗಸುತೆಯ |
ಗಂಡನನಲೇಂದುರವಿನೇತ್ರತ್ರಯಮಂಡಿತಮುಖನನಾ ರಾಮ || ೪೫

ನೋಡುತೀಶ್ವರದಿವ್ಯಮೂರ್ತಿಯ ಮೆಯ್ಯನೀಡಾಡಿ ಮಹಿಗೆ ಮನಸಂದು |
ನಾಡೆ ನಲವಿನಿಂದೆಳ್ದು ನಲಿದು ಕೊಂಡಾಡಿದನಿಂತು ಭವನನು || ೪೬

ಅರೆಮೆಯ್ಯೊಳೆರಡಿಲ್ಲದಬಲಾಮಣಿಯೊಡವೆರೆದೊಂದೇ ದೇಹವೆಂದೆನಿಸಿ |
ಸ್ಮರರಿಪುವೆನಿಸಿಕೊಂಬೀ ನಿನ್ನ ಮಹಿಮೆ ಗೋಚರವೆ ನಿಗಮಶಾಸ್ತ್ರಗಳಿಗೆ || ೪೭

ಪಂಚಭೂತಾತ್ಮಾರ್ಕಚಂದ್ರರೆಂದೆಂಬಂಗಸಂಚಯದಿಂ ಲೋಕಗಳನು |
ಸಂಚಿನಿಂ ಪಾಲಿಪಿರವು ನಿನಗಲ್ಲದೆ ಪಂಚವದನ ಪೆಱರ್ಗುಂಟೆ || ೪೮

ಕೈವಲ್ಯದೊಳ್ಕೈಲಾಸದೊಳ್ಜಂಗಮಸ್ಥಾವರದೊಳ್ನೆಲೆಗೊಂಡು |
ಆವರಿಸಿರ್ಪ ಮಹಾಲೀಲೆ ನಿನಗಲ್ಲದಾವರೊಳುಂಟು ದೇವರೊಳು || ೪೯

ಇಲ್ಲದ ಭೂತಪಂಚಕಗಳ ನಿರ್ಮಿಸಿ ನಿಲ್ಲದೆ ಭುವನಂಗಳನು |
ಸಲ್ಲೀಲೆಯಿಂ ತೋಱುಸುವವಿರವಿದು ನಿನಗಲ್ಲದುಂಟೇ ಮಿಕ್ಕವರಿಗೆ || ೫೦

ಎಂದು ಕೊಂಡಾಡಿದ ಕುವರನನೀಶನಾನಂದ ಕೈಮಿಗೆ ಮೆಯ್ದುಡವಿ |
ಅಂದು ಕುಳ್ಳಿರಿಸಿಕೊಂಡನು ನಿಜಪಾದಾರವಿಂದದೊತ್ತಿನೊಳು ಕೈವಿಡಿದು || ೫೧

ಆ ಸಮಯದೊಳೆಸೆದಿಂದ್ರಜಾಲದೊಳಂದಾ ಸುಕುಮಾರನ ನಿಳಯ |
ವಾಸದೊಳಿರಿಸಿಕೊಂಡಿರ್ದಿಂದ್ರನಂತೇವಾಸಿ ಬಂದನು ಸಭೆಯೆಡೆಗೆ || ೫೨

ಬಂದು ಭೂಮಿಗೆ ಮೆಯ್ಯಿಕ್ಕಿ ಬೀಳ್ದವನೇಳ್ದು ನಿಂದು ನೊಸಲಿಗಂಜುಳಿಯ |
ಒಂದಿಸಿ ಭೀತಿಯಿಂ ಬಿನ್ನವಿಸಿದನಿಂತೆಂದಿಂದು ಚೂಡಾಮಣಿಗೆ || ೫೩

ಚಿತ್ತೈಸು ದೇವಶಿಖಾಮಣಿ ನಿಮ್ಮಡಿಯೊತ್ತಿಗೆ ಬರಲೀ ಕುವರ |
ಅತ್ತ ವಜ್ಜೀರಮಲ್ಲುಕಖಾನರು ನೋವುತ್ತ ಮನದೊಳು ಬೇಗದೊಳು || ೫೪

ಬಂದಾ ರಾಮನನವ್ಕೃತದಿವ್ಯದೇಹವನಂದೀಕ್ಷಿಸಿ ಕಣ್ಣೀರಿಂದ |
ಹಿಂದುಮುಂದಿಂದಿಲ್ಲ ನಿನ್ನ ಸರಿಯ ವೀರರೆಂದು ಪೊಗಳಿ ಮಱುಗಿದರು || ೫೫

ಸುರತಾಳರಾಯನ ರಾಣಿವಾಸದೊಳು ನಿನ್ನ ಸರಿಗಯ್ಯ ರಾವುತರುಂಟೆ |
ಸರಿದುಗಿರಿದರು ನಿನಗೆ ಧುರದೊಳಗೆಂದು ನೆರೆದು ಖಾನರು ಪೊಗಳಿದರು || ೫೬

ಒಲೆದರೋಡಿದರೋಸರಿಸಿದರೊಯ್ಯನೆ ತೊಲಗಿದರೆಡಬಲಗಳಿಗೆ |
ಕಲಹದೊಳಗೆ ನಿನ್ನ ವಿಕ್ರಮಾಗ್ನಿಯ ಜ್ವಾಲೆಯಲೆಯೆ ಮಹಾರಾವುತರು || ೫೭

ಗಂಧಗಳಲಿ ಮೃಗಮದಯಕ್ಷಕರ್ದಮದಿಂದಲಂಕರಿಸಿ ದೇಹವನು |
ಸಂದ ವಜ್ಜೀರಮಲ್ಲುಕಖಾನರು ಮನನೊಂದು ಮಱುಗಿ ಮಱಳಿದರು || ೫೮

ಬಳಿಕ ರಾಮನ ಪಂದಲೆಯ ಚೀನಾಂಬರದೊಳಡಗಿಸಿ ಮಾತಂಗಿ |
ಕಳುಪಿದಳಂಚೆಯ ಮೇಲಂದು ರಾಯನ ಬಳಿಗೆ ಡಿಳ್ಳಿಯ ಪಟ್ಟಣಕೆ || ೫೯

ಮುನ್ನೂಱಱುವತ್ತು ಸಾಂಬ್ರಾಣಿಗಳ ಸಂತಾನದಂಚೆಯ ಮೇಲೆ ಬಂದು |
ತಾನತಿವೇಗದಿಂ ಪೊಕ್ಕುದಂದಾ ತಲೆ ದಾನವನಾಸ್ಥಾನವನು || ೬೦

ಕಂದದೆ ಕಳೆಯಿಳಿಯದೆ ಕಾಂತಿಯಿಂ ಮೆಯಿಗುಂದದೆ ಹೊತ್ತು ಹೊತ್ತಿಂಗೆ |
ಅಂದವೇಱುವ ತಲೆಯನು ಕಂಡು ಸುರತಾಳ ನೊಂದನಂತಃಕರಣದೊಳು || ೬೧

ಬಂದಳಲ್ಲಿಗೆ ಸಾರ್ವಭೌಮಸುರತ್ರಾಣನಂದದೆ ಆ ದಿವ್ಯಶಿರವ |
ನಿಂದುನೋಡಿದಳೇಳೆಂಟವಸ್ಥೆಗಳೆಯ್ತಂದು ಪೊರ್ದಿದವಾಕೆಯನು || ೬೨

ಬಳಿಕ ದಶಾವಸ್ಥೆಯಡರಲಸುವನವಳುಳಿದು ಜನ್ಮಾಂತರವೆಯ್ದೆ |
ಅಳಲಿದನಳವಳಿದನು ಶೋಕಜಲನಿಧಿಯೊಳಗೆ ಮುಳುಗಿದನಸುರನು || ೬೩

ಕೆರೆಯಲಟ್ಟಿದೊಡೆ ಬಾರದೆ ನಲ್ಲನಿಲ್ಲಿಗೆ ಶಿರವನಟ್ಟಿದನಿನ್ನು ನಾನು |
ಇರಲನುಚಿತವೆಂದು ಪೋಪಂತೆ ಪೋದುದು ಹರಣವು ಹರಿಣಲೋಚನೆಯ || ೬೪

ಬಳಿಕ ಯವನಪಂಡಿತರು ಬಂದು ರಾಯನ ತಿಳಿಪಿ ನಿಜಾಗಮೋಕ್ತಿಯೊಳು |
ಅಳಲ ನಿಲಿಸಿ ಕುವರಿಯ ಗೋರಿಗೊಳಿಸಿ ಬಂದೆಳಸಿ ನೋಡಿದರು ತಲೆಯನು || ೬೫

ಉಳಿವುದಲ್ಲಿದು ಕಳೆಯಿಳಿವುದಲ್ಲಿದು ಮಣ್ಮಳಿಗೊಂಬುದಲ್ಲಿದಱಿಂದ |
ಪೊಳಲು ಕೆಡುವುದೆಂದು ಪಂಡಿತರೊರೆದರಂದಿಳೆಯಾಣ್ಮಗಸುರಾಧಿಪಗೆ || ೬೬

ಹೊತ್ತು ಹೊತ್ತಿಗೆ ಪುಟವಿಕ್ಕಿದ ಚಿನ್ನದಂತೊತ್ತರಿಸುತಿದೆ ಚೆಲ್ವಿದಕೆ ।
ಇತ್ತಲಿಹುದು ಮತವಲ್ಲೆಂದು ರಾಯನು ಅತ್ತಲೆ ಕಳುಹೆ ಕುಮ್ಮಟಕೆ ॥ ೬೭

ತಿರುಗಿದುದಾ ತಲೆಯನು ಕುಮ್ಮಟದೊಳಗಿರಿಸಲಾ ತಲೆ ಲಿಂಗಾಕೃತಿಯ ।
ಧರಿಸಿ ಮೆಱೆದುದೆಂದಿಂದ್ರಾನುಚರನೀಶ್ವರಗೆ ಪೇಳಿದನು ರಾಗದೊಳು ॥ ೬೮

ಆ ವಾರ್ತೆಯನೊಲಿದಾಲಿಸಿ ದೇವರದೇವ ದೇವಾಸುರಾರ್ಚಿತನು ।
ಓವದೊಲಿದು ಕೊಂಡಾಡಿದನವನವನ ಗುಣಾವಳಿಯನು ಸಭೆಯೊಳಗೆ ॥ ೬೯

ಯಾಗಾದಿಕರ್ಮಗಳೆಲ್ಲ ಸುರಸ್ತ್ರೀಭೋಗಕವರೆ ಕೂರ್ತು ಬಂದು ।
ರಾಗದಿಂ ಮೇಲಿಕ್ಕಲೊಲ್ಲದಾ ರಾಮಗೆ ಯೋಗಿಗಳೆಣೆಯೇ ಭಾವಿಸಲು ॥ ೭೦

ಎರಡು ಜನ್ಮದೊಳು ಬಂದೂರ್ವಶಿ ಮೇಲಿಕ್ಕೆ ಪರಿಹರಿಸಿದನೊಲ್ಲದವಳ ।
ಸುರನರೋರಗರೊಳಿಂತಪ್ಪ ಶುಚಿಗಳಿಲ್ಲೆಂದೊರೆದನೀಶ್ವರ ಸಭೆಯೊಳಗೆ ॥ ೭೧

ಧರೆ ಬೆಸಲಾದಂತೆ ಶರಧಿ ಮೇಱೆಯ ಮಿಱಿ ಧರಣಿಗೆ ಬಂದುದೆಂಬಂತೆ ।
ನೆರೆದ ಮಹಾಬಲದೊಡನೊರ್ವನಿಱಿದಾಡಿ ಹರಣವಳಿದ ವೀರರುಂಟೇ ॥ ೭೨

ಎಳವರೆಯವನಾಂತು ರಾಯಪದವಿಯನು ತಳೆದು ಜನಕಜನನಿಯರು ।
ಎಳಸಿ ತಂದಿತ್ತ ಪೆಣ್ಗಳನಲ್ಲದೊಲ್ಲೆನೆಂಬಳವು ರಾಮನಿಗಲ್ಲದುಂಟೆ ॥ ೭೩

ನುಡಿವ ಚಂದಿರನಂತೆ ನಡೆವೆಳೆಲತೆಯಂತೆ ಬಿಡದೆ ಮೋಹಿಪ ಮೊಗಮೆಯ್ಯ ।
ಕಡುಗಾಡಿಕಾರ್ತಿ ಕಾಮಿಸಲೊಲ್ಲದಿವನಿಗೆ ಪಡಿಯೆ ಪದ್ಮಜ ಸೃಷ್ಟಿಯೊಳಗೆ ೭೪

ಎಂದು ಕೊಂಡಾಡಿ ರಾಮಗೆ ರಾಜಶೇಖರನಂದಿತ್ತು ಗಣಪದವಿಯನು ।
ಸಂದ ಮಹಾಪ್ರಮಥರ ಪಂಕ್ತಿಯೊಳಗೊಲಿದೊಂದಿಸಿದನು ಕುವರನನು ॥ ೭೫

ಶರಣಶರಧಿಶರದಿಂದು ಶರಣಸರಸಿರುಹತರುಣಿ ಶಶಿಮೌಳಿ ।
ಗಿರಿರಾಜಸುತೆವೆರಸಂದು ಕೈಲಾಸಾದ್ರಿಯರಮನೆಯೊಳಗೊಪ್ಪಿದನು ॥ ೭೬

ಶಬ್ದಕೋಶ

ಅ

ಅಂಗಭವ–ಮನ್ಮಥ ೯–೩೩
ಅಂಡಲೆ–ಹಿಂಸಿಸು ೯–೩೯
ಅಂಡಿಸು–ಸಮಾಪಿಸು ೧೩–೧೭
ಅಂತಕ–ಯಮ ೧೭–೬೧
ಅಂತಕಪುರಿ–ಯಮನಪಟ್ಟಣ ೪–೧೪
ಅಂತವುರ–ಅಂತಃಪುರ ೧೧–೨೬
ಅಂತರ–ದೂರ ೪–೧೪
ಅಂತರಾಯ–ವಿಘ್ನ ೧೫–೪೯
ಅಂಬರ–ಆಕಾಶ ೨–೨೦
ಅಂಬರ–ಬಟ್ಟೆ ೮–೮೬
ಅಂಬರಚರಿ–ಆಕಾಶದಲ್ಲಿ
ಸಂಚರಿಸುವವಳು ೯–೧೫
ಅಂಬರಮಣಿ–ಸೂರ್ಯ ೧೩–೬೭
ಅಂಬುದರಾವ–ಗುಡಗು ೧೧–೧೨೫
ಅಂಬುಮಳೆ–ಬಾಣದಮಳೆ ೧೪–೧೨
ಅಕ್ಕರು–ಪ್ರೀತಿ ೧೩–೧೩೧
ಅಗಜಾಪತಿ-ಪಾರ್ವತೀಪತಿ,
ಈಶ್ವರ ೪–೧೭
ಅಗಳ್–ಕಂದಕ ೧೩-೨೪೩
ಅಚ್ಚ–ಶುದ್ಧ ೩–೧೫
ಅಟ್ಟಳಿ-ಸೋಹುಮೃಗ ೯-೪೧

ಅಟವಿ–ಕಾಡು ೨–೨೦
ಅಡರು–ಹತ್ತು ೫–೫೦
೧೦–೧೪
೧೪–೪೦
ಅಡವಿ-ಕಾಡು ೬-೩೧
ಅಡಿಯಾಗು–ಅಧೀನವಾಗು ೪–೩೧
ಅಣ್ಮು–ಪ್ರಯತ್ನಿಸು ೧೩–೧೭
ಅಣೆ–ಮುಂಭಾಗ ೫–೧೮
ಅಣುಗ–ಮಗ ೬–೭೨
ಅಣ್ಪು–ಲೇಪನ ೯–೪೧
ಅಭಿರಾಮತೆ–ಸೌಂದರ್ಯ
(ಆಕರ್ಷಕತೆ) ೨–೪
ಅದ್ರಿ–ಪರ್ವತ ೩–೧೩
ಅಧರ–ತುಟಿ ೯–೭೧
ಅಧೋರುಕ–ಚಡ್ಡಿ ೧೧-೭೨
ಅನಲ–ಜೆಂಕಿ ೧೩–೧೨೭
ಅನಿಮಿಷಾಂಗನೆ–ದೇವಸ್ತ್ರೀ ೧೩–೫೩
ಅನೀಕ–ಗುಂಪು ೨–೧೧
,, ,, ಸೈನ್ಯ ೫–೩೭
ಅನು–ಸ್ವಸ್ಥ ೧೦–೬
,, –ರೀತಿ, ಕ್ರಮ ೧೭–೨೧
,, –ಸುಂದರಿ ೭–೨೨
,, –ಸ್ವಭಾವ ೧೩–೫೬

ಅನುಗೆಡು–ಪ್ರಮತ್ತಪ್ಪು ೯–೮೪
ಅನುನಯ–ಪ್ರೀತಿ, ಸಲಿಗೆ ೧–೧೦
–ಸಮಾಧಾನ ೮–೩೮
–ಯೋಗ್ಯ ೮–೫
ಅನುರಾಗ–ಪ್ರೀತಿ ೩–೧
ಅನುವದಿಸು–ಹೇಳು ಮತ್ತೆ ಹೇಳು ೧೨–೨೭
ಅನುವರ–ಯುದ್ಧ ೧೪–೧
೧೭–೩೭
ಆನ್ನೆವರ–ಅಲ್ಲಿಯವರೆಗೆ ೩–೩೨
ಅಪರಾಚಲ–ಪಶ್ಚಿಮಪರ್ವತ, ಅಸ್ತಪರ್ವತ ೧೩–೨೪೧
ಅಪಲಾಪಿಸು–ವ್ಯತ್ಯಾಸವಾಗಿ ಹೇಳು ೧೩–೧೬೫
ಅಬ್ಜಸಂಭವ–ಕಮಲದಲ್ಲಿ ಹುಟ್ಟಿದವನು–ಬ್ರಹ್ಮ ೧–೩
ಅಬ್ಧಿ–ಸಮುದ್ರ ೩–೨೫
ಅಭಂಗ–ಪೂರ್ಣ ೬–೩
ಅಭಿರಾಮ–ಆಕರ್ಷಕ, ಸಂತೋಷವನ್ನು ಉಂಟುಮಾಡುವವನು ೩–೨೧
ಅಮರ್ದು–ಗಾಢವಾಗಿ ಸೇರಿಸು ೧೫–೩೭
ಅಮ್ಮದು–ಸಾಧ್ಯವಾಗಲಾರದು, ಶಕ್ತವಾಗಲಾರದು ೩–೩೩
ಅಮರಾಂಗನೆ–ದೇವಸ್ತ್ರೀ ೬–೪೧
ಅರಲ್–ಪುಷ್ಪ ೪–೧೯
ಅರಲಂಬು–ಪುಷ್ಪಬಾಣ ೩–೬೩
ಅರಿಷಡ್ವರ್ಗ–ಆರು ಶತ್ರುಗಳ ಸಮೂಹ (ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯ) ೨–೨೮
ಅರುಣಜಲ–ರಕ್ತ ೮–೨೩
ಅಲರಂಬು–ಪುಷ್ಪಬಾಣ ೭–೧೩
ಅಲಸು–ಆಯಾಸಪಡು ೧೩–೧೮೮
ಅಲಘು–ಸಣ್ಣದಲ್ಲದ್ದು, ದಪ್ಪವಾದುದು ೯–೫೪
ಅಸಿಯಳು–ತೆಳುವಾಗಿರುವವಳು ೯–೯೩
ಅಸು–ಪ್ರಾಣ ೮–೩೬
ಅಹಿತಾನೀಕ–ಶತ್ರುಸೈನ್ಯ ೧೧–೩೬
ಅಳಲು–ದುಃಖಪಡು ೧೩–೧೫೭
,, –ದುಃಖ ೧೫–೪೭
ಅಳವಡು–ಸರಿಯಾಗಿ ಸೇರು, ಒಪ್ಪು–ಕೂಡಿಕೊಳ್ಳು ೧೮–೨೨
ಅಳವಳಿ–ಶಕ್ತಿಗುಂದು ೯–೮೦
ಅಳವು–ಸಾಧ್ಯ ೪–೯
–ಪರಾಕ್ರಮ ೪–೫೨
–ರೀತಿ, ಕ್ರಮ, ಪ್ರಮಾಣ ೧೩–೨೦೪
ಅಳ್ಕಱು–ಪ್ರೀತಿ ೧೭–೮
ಅಳಿಜಸ–ಅಪಯಶಸ್ಸು ೧೬–೫೬
ಅಳ್ಳಿಕಾಱ–ಅಳಿಕಾರ–ಸ್ನೇಹಿತ ೧೧–೫೬
ಅಳ್ತಿ–ಪ್ರೀತಿ ೪–೪೩
ಅಳುಕು–ಭಯ ೪–೯೫
–ಹೆದರು ೧೨–೧೭

ಅವಗಡಿಸು–ಮೇಲೆಬೀಳು, ತಡೆ ೬–೬೯
,, –ಸೋಲಿಸು, ಪ್ರತಿಭಟಿಸು ೮–೯೩
ಅವತಂಸ––ಆಭರಣ ೧೧–೭
ಅವಸರ–ಅವಕಾಶ, ಸಮಯ ೩–೨೬
ಅವಲೋಕಿಸು–ನೋಡು ೩–೨೯
ಅವಿರಳ–ಎಡೆಬಿಡದ, ಒಂದೇ ಸಮನಾದ ೧೩–೭೦
ಅಱತುದು–ಬತ್ತಿಹೋಯಿತು ೯–೩೩
ಅಱಿಕೆ–ಪ್ರಸಿದ್ಧ
ಅಱಿಕೆವಿಸರ್–ಪ್ರಸಿದ್ಧನಾಮಧೇಯ ೮–೧೭
ಅಱಿಪು–ತಿಳಿಸು ೩–೧೫
ಅಱಿವು–ಜ್ಞಾನ, ಬುದ್ಧಿ ೯–೩೩
ಅಱಿಯಟ್ಟು–ಹಿಂಬಾಲಿಸು ೧೮–೬೪
ಅಶ್ವ–ಕುದುರೆ ೪–೯
ಅಶ್ರು–ಕಣ್ಣೀರು ೪–೫೨
೧೭–೩೮
ಅಳುಪು–ಆಸೆಪಡು ೧೧–೧೭

ಆ

ಆಕರುಷಣ–ಸೆಳಯುವಿಕೆ, ಬರಮಾಡಿಕೊಳ್ಳು ೧೩–೮೦
ಆಕ್ರಾಂತ–ಆವರಿಸಿಕೊಂಡಿರುವ ೯–೯೯
ಆಕೆ–ಎದುಗು, ಅಂಕೆ, ಅನ್–ತಾಳುವಿಕೆ ೧೩–೮೦
ಆಕೆವಾಳ–ಶೂರ ೧೮–೩೭
ಆಕೆವಾಳತನ–ಪರಾಕ್ರಮ ೫–೧೮
ಆಖಂಡಲ–ಇಂದ್ರ ೧೦–೨೮
ಆಗರ–ಆವಾಸಸ್ಥಾನ (ಮನೆ) ೨–೩೩
ಆಗಸವಟ್ಟೆ–ಆಕಾಶಮಾರ್ಗ ೧೩–೪೮
ಆಚ್ಛಾದಿತ–ಮುಚ್ಚಲ್ಪಟ್ಟ ೧೩–೨೦೪
ಆಜಿ–ಯುದ್ಧ ೪–೧೪
೧೮–೫೨
ಆಟಿಸು–ಆಶೆಪಡು ೪–೪
ಆಡುಂಬೊಲ–ಆಡುವಸ್ಥಳ (ಕ್ರೀಡಾಂಗಣ) ೨–೩
ಆಣತಿ–ಆಜ್ಞಪ್ತಿ, ಆಜ್ಞೆ, ಅಪ್ಪಣೆ ೯–೧
ಆತ್ಮಜ–ಮಗ ೯–೨
ಅನ್–ಧರಿಸು ೬–೨
–ಪ್ರತಿಭಟಿಸು ಧರಿಸು ೧೭–೩೦
ಆನನ–ಮುಖ ೧೩–೭೩
ಆನಂದಾಶ್ರು–ಸುಖದಿಂದುಂಟಾಗುವ ಕಣ್ಣೀರು ೮–೦೦೧
ಭಾಗ ೧೩–೨೪೫
ಆನು–ಧರಿಸು ೪–೪೬
ಆಮೋದ–ವಾಸನೆ ೭–೧೧
–ಸಂತೋಷ ೧೧–೪
ಆರ್–ಕೂಗಿಕೋ, ಶಬ್ದಮಾಡು ೫–೧೨
ಆರುಭಟಿ–ಆರ್ಭಟ ೬–೫
ಆರಯ್–ವಿಚಾರಮಾಡು ೬–೫೫
ಆರವ–ಶಬ್ದ ೧೧–೫೯
ಆರೆಗಟ್ಟೆಗೆ–ಒತ್ತಾಗಿ ನೆಟ್ಟಿರುವ ಹಾರೆಕೋಲು (ಕಡಕಲು ?) ೧೭–೫೭

ಆರೋಹಣ–ಹತ್ತುವುದು ೧–೩
ಆಲಯ–ಮನೆ ೪–೪೮
ಆಲಿ–ಕಣ್ಣು ೯–೧೭
ಆಲೋಲ–ಚಂಚಲ ೧೮–೩೯
ಆವರ್ತ–ಸುಳಿ ೨–೯
ಆವಿಲ–ಕದಡಿದ ೧–೬
ಆಶಾಪತಿ–ದಿಕ್ಪತಿ ೫–೫೬
ಆಶಾಭಿತ್ತಿ–ದಿಕ್ಕುಗಳ ಗೋಡೆ ೫–೫೦
ಆಸ್ಯಾಂಬುಜ–ಮುಖಕಮಲ ೧–೧
ಆಹವ–ಯುದ್ಧ ೬–೮
ಆಳಿ–ಸಖಿ ೧೧–೧೨೯
ಆಳು–ಮುಳುಗು ೩–೮
ಆಳ್– ” ೧೧–೪೫
೧೩–೯೦
ಆಳುವೇರಿ–ಕೋಟೆಯ ಒಂದು ಭಾಗ

ಇ

ಇಂಗಡಲ್–ಕ್ಷೀರಸಮುದ್ರ
(ಇನಿದಾದ + ಕಡಲು) ೮–೬
ಇಂಗೋಲ್ವಿಲ್ಲ–ಕಬ್ಬಿನ ಬಿಲ್ಲುಳ್ಳ
ವನು, ಮನ್ಮಥ ೨–೩
ಇಂಚರ–ಇಂಪಾದ ಸ್ವರ (ಇನಿದು +
ಸರ ೩–೫
ಇಂದ್ರಗೋಪ–ಮಿಂಚುಹುಳು ೮–೭೮
ಇಂದಿರೆ–ಲಕ್ಷ್ಮಿ ೬–೩
ಇಂದೀವರ–ಕಮಲ ೨೧–೩೩
ಇಂದು–ಚಂದ್ರ ೩–೪

ಇಕ್ಕಡಿ–ಎರಡುಭಾಗ ೪–೫೬
” ಎರಡು ತುಂಡು ೬–೫೫
ಇಟ್ಟಡೆ–ಸಂಕಟ, ವಿಘ್ನ ೧೩–೧೦೯
ಇಟ್ಟಣಿಸು–ಗುಂಪುಗೂಡು ೧೪–೪
ಇಟ್ಟಿಸು–ನೋಡು ೭–೨೨
೧೭–೪೦
ಇಡಿಕಿಱು–ಒತ್ತಾಗಿ ತುಂಬಿರು ೨–೧೫
ಇಂತುಟು–ಇಷ್ಟು ೬–೨೫
ಇನ–ಸೂರ್ಯ ೩–೯
ಇನವಂಶ–ಸೂರ್ಯವಂಶ ೬–೮
ಇನಿತು–ಇಷ್ಟು
ಇನಿರಸ-ಇನಿದಾದ-ಸಂತೋಷಕರವಾದ
–ರಸ ೧೩–೯೩
ಇರವು–ಸ್ಥಿತಿ ೪–೪
ಇಱಿ–ಕತ್ತರಿಸು ೫–೧೦
,, ,, ೬–೯
ಇರ್ವಲ–ಎರಡುಬಲ ೬–೨೨
ಇರ್ಛಾಸಿರ–ಎರಡುಸಾವಿರ ೮–೭೦
ಇಸು–ಹೊಡಿ.
(ಎಚ್ಚೊಡೆ–ಹೊಡೆದರೆ) ೪–೫೫
ಇಳಿಕೆಯ್–ಹಾಸ್ಯಮಾಡು,
ಹೀನವಾಗಿ ನುಡಿ ೧೦–೧೮
ಇಳೆ–ಭೂಮಿ ೮–೪೧
ಇಳೆಯಾಣ್ಮ–ಭೂಮಿಯೊಡೆಯ ೧೩–೨೦

ಈ

ಈಂಟು–ಕುಡಿ ೧–೧೩
ಈಡಾಗು–ಅಧೀನವಾಗು ೯–೬೧

ಈಡು-ಹೊಂದಿಕೆ, ಅಧೀನ ೪-೨೯
ಈಡು-ಎಸೆತ, ಹೊಡೆತ

ಉ

ಉಕ್ಕೈವ-ಮೋಸ ೧೦-೧೦೨
ಉಗ್ರಧಾಮು-ಸೂರ್ಯ ೧೧-೪
ಉಗ್ರಾಸಿ-ಭಯಂಕರವಾದ ಕತ್ತಿ ೬-೬೦
ಉಚ್ಚಳಿಸು-ಮೇಲಕ್ಕೆ ಹಾರು ೫-೨೭
,, ,, ೮-೨೪
ಉರ್ಚು-ಸಡಿಲಬಿಡು, ಹಿಡಿದೆಳೆ ೧೦-೧೮
ಉಡ್ಡೆ-ನಡು ೧೨-೧೦
ಉಡೆನೂಲು-ಉಡೆದಾರ ೩-೨೩
ಉಣ್ಮು-ಹೆಚ್ಚು ೧೩-೧೦೨
ಉದ್ದಂಡತೆ-ಮೇಲ್ಮೆ ೫-೪೬
ಉದ್ದಂಡತನ-ಪರಾಕ್ರಮ ೬-೪೯
ಉದಧಿವೇಷ್ಟಿತ-ಸಮುದ್ರದಿಂದ ಸುತ್ತಲ್ಪಟ್ಟ ೩-೪೯
ಉದ್ಧರಣ-ಮೇಲಕ್ಕೆತ್ತುವಿಕೆ ೧೩-೨
ಉದ್ಭಾವಿಸು-ವಿವರಿಸು ೮-೧೩
ಉನ್ನಯಿಸು-ಮೇಲಕ್ಕೆತ್ತು (ಬರೆಯಿಸು ?) ೭-೧೩
ಉಪಟಳ-ಹಿಂಸೆ ೧೨-೨೭
ಉಪದ್ರವಿಸು-ಹಿಂಸೆಮಾಡು ೧೩-೧೨
ಉಬ್ಬಣ-ಒಂದು ಆಯುಧ ೬-೭೨
,, ,, ೯-೨೨
ಉಬ್ಬಸ-ಉದ್ವೇಗ ೧೩-೬೭
ಉಮ್ಮಹ-ಉತ್ಸಾಹ ೮-೬೮
ಉರಗ-ಹಾವು ೪೧-೧೭
ಉರಗಿ-ಹೆಣ್ಣು ಹಾವು ೧೨-೧೦
ಉರವಣೆ-ವೇಗ, ರಭಸ ೧೫-೭
ಉರು-ಶ್ರೇಷ್ಠವಾದ ೬-೧
ಉರುತರ- ,, ೨-೨೦
ಉರುಳಿ-ಸಮೂಹ ೪-೬
ಉಱು-ಇಡು, ಹೊಂದಿಕೊಳ್ಳು ೧೭-೨೮
,, – ೧೫-೪೧
ಉಱುಬೆ-ವೇಗ, ತೀಕ್ಷ್ಣತೆ, ರಭಸ ೫-೫೩
೬-೨೦
೧೫-೯
ಉಲಿ-ಕೂಗು ೫-೪೦
ಉಲುಕು-ಅಲುಗು ೧೨-೧೮
ಉಲುಪು-ಕೂಗು, ಶಬ್ದ ೩-೫
ಉಲುಹು-ಶಬ್ದ ೧೧-೮೭
ಉರ್ವರೆ-ಭೂಮಿ ೩-೧೮
ಉಸುರು-ಹೇಳು ೧-೭

ಊ

ಊಳಿಗ-ಸೇವಕ ೬-೩೪

ಎ

ಎಂತುಟು-ಎಷ್ಟು ೭-೨೫
ಎಕ್ಕಟಿಗ-ಪರಾಕ್ರಮಶಾಲಿ ೧೩-೧೯೭
ಎಕ್ಕಟಿಗರು-ಉನ್ನತಾಧಿಕಾರಿಗಳು ೨-೩೦
,, ಪರಾಕ್ರಮಿಗಳು ೫-೧೧

ಎಕ್ಕತುಳಿ–ಪರಾಕ್ರಮ ೨–೩೨
ಎಗ್ಗ–ದಡ್ಡ, ಮೂಢ, ಅಜ್ಞಾನಿ ೨–೮
ಎಗರು–ಉತ್ಸಾಹಗೊಳ್ಳು, ಚಿಂತಿಸು ೧೭–೩೭
ಎಡವಿಡದೆ–ಒಂದೇ ಸಮನಾಗಿ ೯–೪
ಎಣಿಕೆ-ಯೋಚನೆ ೧೩–೨೯
ಎಣೆ–ಸಮಾನ ೩–೨
ಧ್ವಂಸ ಮಾಡು ೧೫–೯
ಎದೆದಲ್ಲಣ-ಹೃದಯಕ್ಕೆ ಭಯ ವನ್ನುಂಟುಮಾಡುವವನು ೨–೩೪
ಎಯ್ತಂದು–ಬಂದು ೬–೧೦
ಎಯ್ದು–ಪಡೆ, ಹೊಂದು ೩–೧೧
ಎರೆ–ಯಾಚನೆಮಾಡು ೨–೪೭
,, –ಆಟದಲ್ಲಿ ಭಾಗವಹಿ ಸುವವರು (?) ೧೧–೭೬
ಎಱೆಯ–ಪತಿ, ಒಡೆಯ ೨–೨೭
೧೩–೧೧೫
ಎಱೆಯಳ್–ಒಡಿತಿ, ಹೆಂಡಿತಿ ೧೫–೫೦
ಎಲರ್–ಗಾಳಿ ೨–೧೫
ಎವೆವಡಿ–ರೆಪ್ಪೆಯೆಂಬ ಬಾಗಿಲು ೬–೩೮
ಎಸಕ–ಸ್ವಾರಸ್ಯ, ಸೌಂದರ್ಯ ೧–೧೫
,, –ಕಾರ್ಯ ೮–೧೦೩
ಎಳನೇಸರ್–ಬಾಲಸೂರ್ಯ
ಎಳಸು-ಆಸೆಪಡು ೩–೩
೭–೪೭

ಏ

ಏಡಿಸು–ಹಾಸ್ಯಮಾಡು ೮–೫೪
ಏಣ–ಜಿಂಕೆ ೧೦–೫
ಏಣಾಂಕಮಂಡಲ–ಚಂದ್ರಮಂಡಲ ೧೪–೩೪
ಏಳಿಸು–ಅಪಹಾಸ್ಯ ಮಾಡು ೨–೫
ಏಳಿಸು–ಅಪಹಾಸ್ಯಮಾಡು ೧೬–೩೬
,, ಹಾಸ್ಯಮಾಡು

ಐ

ಐದರೆ–ಇದ್ದಾರೆ ೪–೧೨
ಐವಡಿ–ಅಯ್ದರಷ್ಟು ೧೭–೩೬

ಒ

ಒಂದಿಸು–ಸೇರಿಸು ೮–೩೫
ಒಕ್ಕಲಿಕ್ಕು–ಸೂರೆಮಾಡು ೬–೯
–ನಾಶಮಾಡು ೮–೪೪
೪–೫೦
ಒಕ್ಕಲು–ಸಂಸಾರ ೮–೩೭
ಒಗ್ಗು–ಗುಂಪು, ಸಮೂಹ ೫–೧೬
೬–೯
೧೧–೨೦
ಒಗೆ–ಹುಟ್ಟು, ಉಂಟಾಗು ೩–೧೬
೫–೫೨
ಒಡಬಡಿಕೆ–ಒಪ್ಪಂದ ೮–೩
ಒತ್ತಂಬರಿಸು–ಉಕ್ಕು, ಬಲಾತ್ಕಾರ ದಿಂದ ಹೇಳು ೧೫–೨೮
ಒತ್ತರಿಸು–ತಗಲು ೬–೨೬
ಒತ್ತು–ಸಮೀಪ ೪–೨
ಒಪ್ಪವಿಡು–ಕಾಂತಿಯುಕ್ತವಾಗಿ ಮಾಡು ೭–೧೪

ಒಯ್ಯನೆ–ನಿಧಾನವಾಗಿ ೩–೧೯
೪–೫೦
ಒಯ್ಯಾರ–ಸಲಿಗೆ, ಸರಾಗ ೭–೩೩
ಒರೆ–ಹೇಳು, ಬಿನ್ನವಿಸು ೪–೫೪
೯–೨೫
೮–೩
ಒಱತೆ–ಸ್ರವಿಸು. ಜಿನುಗು ೯–೩೫
ಒಱತೆ–ಜಿನುಗುವಿಕೆ ೧೮–೭೨
ಒಲುಮೆ–ಪ್ರೀತಿ ೬–೬
ಒಸಗೆ–ಶುಭ ೩–೭
ಒಸರು–ಜಿನುಗು, ಸ್ರವಿಸು ೯–೯೫
ಒಸೆದು–ಪ್ರೀತಿಸಿ –೩೭
ಒಳರಾಣುವೆ–ಒಳಗಿನ ಸೈನ್ಯ,
ಅಂಗರಕ್ಷಕ ೯–೯

ಓ

ಓ–ಪ್ರೀತಿಸು ೩–೧೦
ಓಜೆ–ಗುರುತ್ವ, ಮೇಲ್ವಿಚಾರಣೆ ೬–೪
,, –ಕ್ರಮ ೨–೪೩
ಓತ–ಪ್ರೀತಿಸಿದ ೧೨–೧೮
ಓತು–ಪ್ರೀತಿಸಿ ೧೧–೧೩೭
ಓರಂತೆ–ಒಂದೇಸಮನಾಗಿ ೧೧–೪೯
ಓಸರಿಸದೆ–ವಕ್ರವಾಗದೆ ೪–೫೫

ಕ

ಕಂಗಲು–? ೬–೫೩
ಕಂಜ–ಕಮಲ ೧೩–೧೧೦
ಕಂಜಾಕರ–ಸರೋವರ ೨–೧೦
ಕಂಠಿಕೆ–ಕತ್ತಿನಹಾರ ೬–೧
ಕಂಡ–ಶ್ರೀಖಂಡ, ಶ್ರೀಗಂಧ ೧೮–೪೫
೨–೧೮
ಕಂಡರಿಸು–ಕೊರೆ, ಕೆತ್ತು, ಕಲ್ಲಿನಲ್ಲಿ
ಬಿಡಿಸು ೯–೩೫
ಕಂತು–ಮನ್ಮಥ ೭–೧೬
ಕಂತುಕಕೇಳಿ–ಚಂಡಿನಾಟ ೧೧–೩೪
ಕಂತುಸನ್ನಿಭ–ಕಾಮನಿಗೆ ಸಮಾನ
ನಾದವ ನು೧೧–೧೨೪
ಕಂದ–ಕತ್ತು (ಸ್ಕಂದ ಸಂ) ೪–೪೭
ಕಂದರ್ಪ–ಮನ್ಮಥ ೬–೪
ಕಂಬಿ–ಅಡ್ಡೆ. (ಎರಡು ಕಡೆಯಲು)
ಭಾರವನ್ನು ಹೊಂದಿರುವಕೋಲು) ೪–೩೭
ಕರ್ಕಟಕ–ಏಡಿ, ನಳ್ಳಿ ೨–೯
ಕಟ್ವಾಸುರ–ಬಹಳ ಕ್ರೂರ ೬–೧೪
ಕಡವರ–ಚಿನ್ನ ೧೧–೮೮
೧೪–೩೬
ಕಡ್ವಾಳ–? ೬–೭೧
ಕಡಿದಾಹ–ಕತ್ತರಿಸುವ ಒಂದು
ಆಯುಧ ೧೩–೨೫೨
ಕಡುಪು–ಕ್ರೌರ್ಯ ೨–೩೧
,,–ಕೋಪ, ತೀವ್ರತೆ ೬–೫೪
ಕಡುಹು–ಉಷ್ಣ, ವೇಗ ೧೬–೧೫
ಕರ್ಣಿಕೆ–ಕಮಲದಕೋಶ ೨–೧೭
ಕೊಂಕು ೧೩–೨೩೯
ಕಣೆ–ಬಾಣ ೯–೫೮

ಕಣ್ಬೇಟ-ಕಣ್ಣಿಗೆ ತೃಪ್ತಿ ೧೧-೧೧೯
ಕದನ-ಯುದ್ಧ ೬-೧೮
ಕದಪು-ಕೆನ್ನೆ ೧೫-೨೨
ಕದಲ್-ಚಿಂತೆ, ಕಲುಕುವಿಕೆ,
ಕದಲಿದ ಮನಸ್ಸು ೬-೨೪
ಕದಲು-ಚಲಿಸು, ಹೊರಟು
ಹೋಗು ೧೧-೧೦೯
ಕದಳಿಕಾನನ-ಬಾಳೆಯತೋಟ ೨-೧೯
೧೩-೩೬
ಕದಿರ್-ಕಿರಣ ೧೧-೨
ಕನ್ನಕಂಡಿ-ಇಕ್ಕಟ್ಟಾದ ಸಂದಿ ೮-೮೨
ಕನ್ನವಿಲ್-ಕಪ್ಪುನವಿಲು ೧೨-೩
ಕನ್ನೋಜಿ-ಕನೂಜು ಎಂಬ
ದೇಶದವನು ೧೮-೩೧
ಕಪಾಯಿ-ಕೈಚೀಲ ೮-೧೮
ಕರ್ಬೊನ್ನು-ಕಬ್ಬಿಣ
(ಕರಿಯಲೋಹ) ೯-೪೫
ಕಮಠ-ಆಮೆ ೨-೯
ಕಮಲಾಕಾಂತ-ವಿಷ್ಣು, ಲಕ್ಷ್ಮೀಪತಿ೭-೧
ಕಮ್ಮಗಣೆಯ-ಮನ್ಮಥ ೧೩-೧೩೫
ಕಮ್ಮರಿ-ಕಣಿವೆ ೬-೭೧
ಕರಡೆ-ಒಂದು ವಾದ್ಯ ೧೩-೨೪೭
ಕರಭ-ಒಂಟೆ ೮-೭೦
ಕರಾಳ-ಕ್ರೂರ, ಭಯಂಕರ ೧೭-೩೩
ಕರುಮಾಡ-ನೆಲೆಮನೆ, ಉಪ್ಪರಿಗೆ ೨-೩
ಕರುವಿಡು-ಲೇಪ್ಯ ಕರ್ಮಮಾಡು,
ಕೆತ್ತನೆಯಕೆಲಸಮಾಡು, ಕೊರೆ ೭-೧೪

ಕರೆಗಣ್ಮು-ಎಲ್ಲೆಯವರೆಗೆ ತುಂಬು ೧೧-೬೨
ಕಲಭ-ಆನೆಯಮರಿ ೧೦-೨೬
ಕಲ್ಪತರು-ಕಲ್ಪವೃಕ್ಷ ೭-೨
ಕಳಶಜ-ದ್ರೋಣ ೧೭-೩೮
ಕಾಂತಾರ-ಕಾಡು ೨೩-೬೭
ಕಾಂತಾರದಂತಿ-ಕಾಡಾನೆ ೮-೯೦
ಕಾಕು-ವಕ್ರವಾದ ಮಾತು
ಕಾಡೆ-? ೧೨-೩
ಕಾತರತೆ-ಭಯ, ಚಿಂತೆ ೮-೧೧೦
ಕಾದಲ್-ಪ್ರೇಮ ೧೧-೨೯
ಕಾದಂಬಿನಿ-ಮೇಘಮಾಲೆ ೯-೧೫
ಕಾನನ-ಕಾಡು ೫-೩೬
ಕಾಪು-ರಕ್ಷಣೆ ೧೩-೨೦೨
ಕಾಪುರುಷ-ನೀಚ, ಅಯೋಗ್ಯ ೧೩-೬೨
ಕಾಮಿನಿ-ಸ್ತ್ರೀ, ಹೆಂಗಸು ೯-೧೪
ಕಾಯ-ಶರೀರ ೧೨-೩೧
ಕಾರಯಿಸು-? ೮-೫೯
ಕಾರಿಡು-ಕಪ್ಪಾಗು (?) ೯-೧೫
ಕಾಲ-ಯಮ ೧೭-೩೩
ಕಾಲುರಿಚ-ಗ್ರಾಮ್ಯ ೧೧-೩೪
ಕಾಸೆ-ಕಾಚ, ನಡುಪಟ್ಟಿ ೯-೧೨
ಕಾಹುರ-ಕಾಳ್ಪುರ ೫-೪೧
ಕಾಳಿಂದಿ-ಯಮುನಾನದಿ ೧೦-೨೫
ಕಿಂಕಣಿ-ಗಂಟೆ ೧೯-೨೩
ಕಿಡಿಕಿಡಿಯೋಗು-ಬಹುಕೋಪ
ವನ್ನು ತಾಳು ೬-೧೩
ಕಿವಿವೇಟ-ಕೇಳಿದಕೊಡಲೆ ಉಂಟಾ

ಗುವ ಪ್ರೀತಿ, ಕೇಳಬೇಕೆಂಬ ಆಶೆ, ಕಿವಿಗೆ ತೃಪ್ತಿ ೧೭-೩೬ ೧೧-೧೧೯

ಕ್ಷಿತಿ-ಭೂಮಿ ೪-೧

ಕ್ಷಿತಿಪ-ಭೂಮಿಯನ್ನು ಪಾಲಿಸುವವನು. ರಾಜ ೧೩-೨೩೭

ಕಿತ್ತಕೆದಾರ-ಒಂದುಒಡವೆ(?)೯-೧೩

ಕಿತ್ತಲಗು-ಒರೆಕಳೆದಕತ್ತಿ ೯-೧೨

ಕೀಲಿಸು-ಭದ್ರವಾಗಿ ನಾಟು ೯-೫೮

ಕುಂಟಣಿ-ಕಾಮತಂತ್ರದಲ್ಲಿ ಸಹಾಯ ಮಾಡುವವಳು೯-೭೧

ಕುಂತಳ-ಮುಂಗುರುಳು ೩-೪೪

ಕುಂದಕುಟ್ಮಲ-ಮೊಲ್ಲೆಯ ಮೊಗ್ಗು ೬-೨೯

ಕುಂಭಿನಿ-ಭೂಮಿ ೭-೩

ಕುಜ-ಮರ ೨-೧೫

ಕುಜನ-ಕೆಟ್ಟಮನುಷ್ಯ ೩-೩೦

ಕುತ್ತುಱು-ಕುರುಚಿಲು ೧೪-೫

ಕುಪಕ-ಕೂಪಕ-ಚರ್ಮದ ಪಾತ್ರೆ (?) ೧೫-೩೧

ಕುಲಟೆ-ಜಾರೆ, ಹಾದರಗಿತ್ತಿ ೧೩-೧೨೯

ಕುಲಾಗತ-ಕುಲದಿಂದಬಂದಿದ್ದು (ವಂಶಪಾರಂಪರ್ಯ) ೭-೩೭

ಕುವಲಯ-ಕನ್ನೈದಿಲೆ ೬-೨೮

ಕುಸುಮಕೋದಂಡ-ಹೂವಿನ ಬಿಲ್ಲನ್ನುಳ್ಳವನು (ಕಾಮ) ೭-೧೩.

ಕುಸುಮಶರ-ಪುಷ್ಪಬಾಣ ೨-೨೪

ಕುಸುಮಾಂಜಲಿ-ಹೂವನ್ನು ಚೆಲ್ಲುವುದು ೯-೧೭

ಕುಸುಮೋಪಹಾರ-ಹೂವನ್ನು ಚೆಲ್ಲುವುದು ೮-೧೦೩

ಕುಸುರಿದಱು-ಸಣ್ಣನಾಗಿ ಕತ್ತರಿಸು ೬-೫೭

ಕೂರ್-ಪ್ರೀತಿಸು ೧೧-೮೭

ಕೂರ್ಪರ್-ಪ್ರೀತಿಪಾತ್ರರು ೧೩-೧೬೧

ಕೆಂಗಿಡಿ-ಕೆಂಪಾದ ಕಿಡಿ ೧೬-೧೪

ಕೆಲ-ಪಕ್ಕ ೩-೪೨

ಕೆಲಬಲ-ಅಕ್ಕಪಕ್ಕ ೩-೩೦

ಕೆಳೆಯ-ಸ್ನೇಹಿತ ೧೧-೨೧

ಕೇಕಿ-ನವಿಲು ೩-೧೦

ಕೇಸರಿ-ಸಿಂಹ ೧೧-೧೨೫

ಕೈತುಡುಕು-ಕೈಹಾಕು, ಪ್ರವೇಶಿಸು ೨-೧೫

ಕೈದುಕಾಱ-ವೀರ, ಆಯುಧ ಪ್ರವೀಣ ೧೫-೧೦

ಕೈಪೊಡೆ-ಕೈಚೀಲ ೧೮-೫೭

ಕೈಮಿಗು-ಹೆಚ್ಚಾಗು ೫-೫೧ ೮-೧೧೦

ಕೈಮಿಗೆ-ಹೆಚ್ಚಾಗುತ್ತಿರಲು ೩-೪೬

ಕೈಯಾಱು-ಕೈನೀಡಿ ೮-೬೦

ಕೊಂಡೆಯರ್-ಚಾಡಿಹೇಳುವವರು ೧೧-೩೯

ಕೊಕ್ಕರಿಸು-ಅಸಹ್ಯಪಡು-ವಿಮುಖನಾಗು ೧೨-೧೯

ಕೊಡೆವೇಳೆ–ಕೊಡೆವೇಡೆ–ಛತ್ರಿ
ಗಳ ಸುತ್ತು ೮–೯೩
ಕೊನಬುತನ–ವಯ್ಯಾರ ೧೬–೪೦
ಕೊಯಿಲೆ–(?) ೫–೨೨
ಕೊಱೆ–ಬಟ್ಟೆ ೪–೩೭
ಕೊಲ್ಲಾರ–? ೧೬–೪
ಕೊಲ್ಲಾರಬಂಡಿ–? ೧೬–೨೪
ಕೊಳಗುಳ–ಯುದ್ಧ ೧೪–೪೮
ಕೋಡಿವರಿ–ಎಲ್ಲೆಯನ್ನೂ ಮೀರಿ
ಹರಿಯುವುದು ೮–೦೦೦
ಕೋರಿ–ಕುಮಾರಿ ೧೬–೪೦
ಕೋವಿದ–ಪಂಡಿತ, ವಿದ್ವಾಂಸ ೧–೬
೩–೪೮
ಕೋಳುಹೋಗು–ನಾಶವಾಗು
ಸೋಲು ೫–೧೦
ಕೋಳುಗೊಡು–ಅಧೀನವಾಗು
ಆಹುತಿಯಾಗು ೮–೬೯
ಕೋಳುಗೊಳ್–ಸೂಱೆಮಾಡು ೯–೪೭
೧೭–೧೦
ಕೌರಿಡು–ಸೀದುಹೋಗು (?) ೧೨–೨೯

ಖ

ಖಂಡೆಯ–ಕತ್ತಿ ೬–೪೯
ಖಗ–ಪಕ್ಷಿ ೧೩–೧೯೪
ಖಡ್ಗ–ಕತ್ತಿ ೪–೧೭
ಖಡೆಯ–ಒಂದು ಆಭರಣ ೯–೧೩
ಖಾತಿ–ಕೋಪ ೧೩–೨೨೫
ಖುರ–ಗೊರಸು ೪–೨೭
೧೭–೪೮
ಖೋಡಿ–ಭಯ ೪–೨
ಖೋರಾಸಾಣಿ–ಒಂದು ದೇಶ, ೧೮–೩೧
ಕುರಾಸಾನ್ ಎಂಬ ನಾಡಿನವ ೧೭–೩೫
ಖೇಡಯ–ಗುರಾಣಿ, ಖೇಟಕ ೧೪–೮೩

ಗ

ಗಂಡಗಾಡಿ–ಶರೀರ ಸೌಂದರ್ಯ ೩–೨೮
ಗಜಕರಣಿ–? ೧೩–೪೨
ಗಜಾಂತಕ–ಸಿಂಹ ೮–೯೦
ಗಜಾಂತಕ ವಿಷ್ಟರ–ಸಿಂಹಾಸನ ೧೮–೪೯
ಗಣಕರು–ಲೆಕ್ಕಮಾಡುವವರು ೫–೩೪
ಗಣಿಕೆ–ಬೆಲೆವೆಣ್ಣು, ವೇಶ್ಯೆ ೧೮–೧೩
ಗದಕು–ಕೃತಕ (?), ಮಾಯೆ,
ವೇಷ ೧೪–೪೨
ಗುದುಗುಸ–? ೧೧–೩೨
ಗನ್ನ–ಮೋಸ ೧೩–೧೨೭
೧೫–೪
ಗನ್ನಗದಕು–ಮೋಸ ೧೩–೧೪
ಗರಟ್ಟೆ–ಬೀಸುವಕಲ್ಲು ೧೧–೪೫
ಗಱಿಗಟ್ಟು–ಬಲಿಷ್ಟವಾಗು, ಉತ್ಸಾಹ
ಗೊಳ್ಳು ೯–೩೩
ಗಹನ–ಹೆಚ್ಚಿನದು ೬–೨೯
ಗಾಂಡೀವಿ–ಅರ್ಜುನ ೬–೨೮
ಗಾಡಿ–ಸೌಂದರ್ಯ, ಠೀವಿ ೨–೪
(ಗಾಡಿವೆತ್ತು–ಸೌಂದರ್ಯವನ್ನು ಹೊಂದಿ)
ಗಾಡಿಕಾತಿ–ಸುಂದರ ಸ್ತ್ರೀ

ಗಾಣರು–ಸಂಗೀತಗಾರರು ೧೧–೧೭
ಗಾರುಡಿಗ–ಮಂತ್ರವಾದಿ ೪–೪೬
ಗಾವಳಿ–ಸಮೂಹ ೫–೪೨
ಗಾವಿಲ–ದಡ್ಡ, ಬುದ್ಧಿಯಿಲ್ಲದವಲ–೫೧
ಗಾಹುಗದುಕು–ಮೋಸ, ವಂಚನೆ ೧೧–೩೯
ಗುಗ್ಗುರಿಗಲ್–ಒಂದು ತೆರದಾದ ಕಲ್ಲು ೨–೧೪, ೮–೧೦೯
ಗುಡಿ–ಧ್ವಜ ೩–೧೦
ಗುಡಿಗಟ್ಟು–ನೆಟ್ಟಗೆ ನಿಲ್ಲು, ಒಟ್ಟುಗೂಡು ೮–೧೦
ಗುಡಿಗುಡಾರ–ಧ್ವಜಮತ್ತು ಪಾಳೆಯ ೧೩–೨೫೨
ಗುಱಿಗನುಗೆಯ್–ಗುರಿಗೆಸಿದ್ಧಪಡಿಸಿಕೊ ೮–೧೪
ಗೂಢಗೆಡು–ರಹಸ್ಯವನ್ನು ಪ್ರಕಾಶಪಡಿಸು ೧೮–೫
ಗೂಳಿಯು–ಸಮೂಹ ೫–೨೫
ಗೆಱು–ಭ್ರಾಂತಿಹೊಂದು ೯–೩೮
ಗೊಡ್ಡಾವು-ಕರುಹಾಕದಿರುವಹಸು ೧೯–೬
ಗೊಲೆಗೊತ್ತು–ತುದಿಗೇರಿಸು, ಕೊಪ್ಪಿಗೆ ಕಟ್ಟು ೮–೧೪
ಗೋಗ್ರಹಣ-ಹಸುವನ್ನು ಹಿಡಿಯುವುದು ೫–೪೪
ಗೋತ್ರಾರಿ–ಇಂದ್ರ ೬–೬೮
ಗೋರಿಗೊಳಿಸಿ–ಸೇರಿಸಿ (ಮಣ್ಣು ಮಾಡಿ) ೧೯–೬೫
ಗೋವಸಹಣಿ–ಗೋವೆಯ ಅಶ್ವ ಶಿಕ್ಷಕರು ೪–೨೩

ಘ

ಘಟ್ಟಣೆ–ಗಟ್ಟಿಸಿದ ಸ್ಥಲ, ಬೀದಿ ೧೩–೨೪೭
ಘನಸಾರ–ಪಚ್ಚಕರ್ಪೂರ ೩–೧೭
ಘಲ್ಲಿಸು–ಸೋಕು, ಮುಟ್ಟು (?) ೫–೧೯
ಘಳಿಲನೆ–ವೇಗದಿಂದ ೫–೩೨

ಚ

ಚಂಡ-ಶೂರ, ಗಟ್ಟಿಗ ೯–೨೩
ಚಂಡಿ–ಹಟವಾದಿ ೧೩–೩೮
ಚಂದ್ರಚೂಡ–ಈಶ್ವರ ೧೯–೧೭
ಚಪ್ಪರಿಸು-ತಟ್ಟು ೪–೪೭
ಚಪ್ಪನ್ನ–ಐವತ್ತಾರು ೧೬–೪೧
ಚಳಯ–ಚೆಲ್ಲುವುದು ೩–೧೭, ೧೫–೩೩
ಚಾರುತೆ–ಸೌಂದರ್ಯ ೪–೧
ಚಿತ್ತ–ಮನಸ್ಸು ೪–೧೭
ಚಿತ್ತೇಶ್ವರಿ–ಮನದೊಡತಿ (ಹೆಂಡತಿ) ೮-೧೨
ಚಿನಗಾಳೆ–ಚಿಕ್ಕ ಕಹಳೆ (?) ೧೩–೨೪೮
ಚೀತ್ಕಾರ–ರಥದ ಗಾಲಿಯ ಶಬ್ದ ೩–೫
ಚೀನವಸ–ಚೀನಾದೇಶದ ಕುಸುರಿ ಕಾರ್ಯ ೮–೭
ಚೂಣಿ–ಮುಂಭಾಗ ೧೭–೪೫
,, ಸೈನ್ಯದ ಮುಂಭಾಗ ೧೭–೪೫
ಚೂರ್ಣೀಕೃತ–ಪುಡಿಮಾಡಲ್ಪಟ್ಟ, ೨–೨೧

,, ಧೂಳಾಗಿಮಾಡಲ್ಪಟ್ಟ ೧೩–೧೭೬
ಜೆಂಬಕವಟಿ–ಒಂದು ವಾದ್ಯ ೧೧–೨೪೭
ಜೆಲ್ಲವಾಡು–ಸರಸವಾಡು ೭–೨

ಜ

ಜಂಗುಳಿ–ಸಮೂಹ ೧೩–೨೪
೧೮-೯೯
ಜಂಭಾರಾತಿ-ಇಂದ್ರ ೭–೩
ಜಟಾಜೂಟ-ಜಡೆಯಗಂಟು ೧–೨
ಜನಪದ–ರಾಜ್ಯ ೨–೫
ಜವ–ವೇಗ ೬–೮
ಜವನಗರಿ–ಯಮಪುರಿ ೬–೨೯
ಜವ್ವನಿಗ–ಯುವಕ ೯–೯೨
ಜಸ–ಯಶಸ್ಸು ೩–೭
ಜಾಯಿಲ–ನಾಯಿ ೫–೧
ಜಾರಜ–ವ್ಯಭಿಚಾರದಿಂದ ಹುಟ್ಟಿದವನು ೧೧–೧೩೩
ಜಾಲ–ಸಮೂಹ ೯–೧೭
೯–೧೧
ಜಾವ-ಯಾಮ, ದಿನದ ೧/೮ಭಾಗ ೭-೩೦
ಜಾಹ್ನವೀಧರ–ಗಂಗಾಧರ (ಈಶ್ವರ) ೧೯–೪೦
ಜಾಳಿಗೆ–ಜಾಲಕ, ಬಲೆ (?) ೧೮–೨೨
ಜೊನ್ನ–(ಜ್ಯೋತ್ಸ್ನಾ. ಸಂ) ಬೆಳುದಿಂಗಳು ೨–೨೩
ಜೋಕೆ–ಅಧೀನ ೪–೨೭
,, –ಎಚ್ಚರಿಕೆ ೫–೩೭
ಜೋಕೆಗೆಡಿಸಿ–ಸೋಲಿಸಿ ೬–೩೩

ಝ

ಝಲ್ಲಿ–ಕುಚ್ಚು ೩–೩೮
೧–೮

ಟ

ಟಾಕು–? ೮–೯
ಟಂಕೆಯ–ಟಂಕವೆಂಬ ನಾಣ್ಯ ೪–೨೫
ಟೆಕ್ಕೆಯ–ಧ್ವಜ, ಬಾವುಟ ೬–೬೭

ಠ

ಠಾಣೆಯ–ಸೈನ್ಯಸ್ಥಾನ ೨–೩೪
,, ಸೈನ್ಯದ ಬೀಡು ೭–೧೦
ಠೌಳಿಕಾಟಿ–ಮೋಸಗಾರ (ಇಲ್ಲಿ ಬುದ್ಧಿವಂತ ಆಟಗಾರ) ೧೧–೮೫
,, ಪರಾಕ್ರಮಶಾಲಿ ೧೩–೨೫

ತ

ತಂಬಿ–ದೊಂಬಿ, ಗುಂಪು ೮–೨೯
ತಕ್ಕವ–ಯೋಗ್ಯ, ಸರಿಸಮ ೭–೧೯
ತಕ್ಕುದು–ಯೋಗ್ಯವಾದುದು ೭–೪೧
ತಕ್ಕೆ–ಸೇರುವಿಕೆ ೯–೯೫
ತಗುಳ್–ಬೆನ್ನಟ್ಟು, ಮೇಲೆಬೀಳು ೧೩–೨೨೧
ತಟ್ಟುಚುರ್ಚು–ನೇರವಾಗಿ ಬಾಣ ಪ್ರಯೋಗಮಾಡು ೮–೧೫
,, –ನೇರವಾಗಿ ಪ್ರವೇಶಿಸು ೯–೮೮

ತಡವೇಂಟೆ-ಒಂದು ಜಾತಿಯ ಬೇಟೆ ೧೦-೨೧
ತಡಹಾಯಿ-ನೇರವಾಗಿ ಹೊಡೆ ೮-೩೩
ತಡಹಾಯಿ-ನೇರವಾಗಿ ಹೊಡೆ ೮-೩೩
ತಣ್ಣರಗ-ತಂಪಾದಕೈಗಿಂಡಿ ೧೩-೭೩
ತನು-ಶರೀರ ೭-೨೨
ತನುಜಾವಲೋಕನ-ಮಗನನ್ನು ನೋಡುವುದು ೧೧-೧೨೧
ತನುವಿಡಿ-ಶರೀರವನ್ನು ಧರಿಸು, ಪ್ರತ್ಯಕ್ಷವಾಗು ೬-೨
ತರಂಗೆ-ಅಲೆ ೧-೨
ತರಂಗಿತ-ಕಲಕಲ್ಪಟ್ಟ ೧೮-೫೨
ತರಕಸ-ಒಂದು ಜಾತಿಯಕತ್ತಿ ೮-೮
೧೩-೧೫೧
ತರಣಿ-ಸೂರ್ಯ ೩-೨೨
೧೯-೭೪
ತರುವಂಗಿ-ಒಂದು ಪ್ರಾಣಿ ೨-೧೨
ತರಹರಿಸು-ಶಾಂತಿಯಿಂದಿರು, ೬೪
ಸಮರ್ಥನಾಗು ೭-೩೧
೧೦-೧೧
,, ಎದುರಿಸು, ಸಮಾಧಾನಪಡಿಸು ೧೩-೧೮೬
ತರಳ-ಚಂಚಲವಾದ ೩-೪೩
ತಲೆವಣಿ-(ಶಿರೋರತ್ನ) ಶ್ರೇಷ್ಠ ೧೩-೨೮
ತವಕ-ವೇಗ, ಆತುರ ೪-೭
,, -ಜಾಗ್ರತೆ ೪-೫೯
೬-೧೨

ತವಕಿಗ-ಆತುರವುಳ್ಳವನು ೧೭-೨೫
ತವಿಸು-ನಾಶಪಡಿಸು ೧೯-೨
ತವೆ-ಹೆಚ್ಚಾಗಿ ೩-೨೯
ತಳ್ಳಂಕ-ತಲ್ಲಣ, ಭೀತಿ ೨-೩೩
,, -ಕಳವಳ ೯-೫೮
ತಳ್ಳಂಕಗೊಳ್-ಹೆದರು, ಚಿಂತಾಕ್ರಾಂತನಾಗು ೮-೧೫
ತಳತಂತ್ರ-ಸೈನ್ಯ ೧೫-೨೭
ತಳಪದ-ಒಂದು ಆಯುಧ (?) ೮-೭೪
ತಳರ್-ಸಂಚಾರಮಾಡು ೨-೧೬
"-ನೂಕು, ನಡೆ ೩-೧೧
ತಳಸಂಕಲೆ-ಆನೆಯ ಕಾಲಿನ ಸರಪಳಿ ೬-೬೭
ತಳಿ-ಚೆಲ್ಲು, ಸೂಸು ೭-೧೮
"-ಬೇಲಿ, ಸುತ್ತುವರಿದ ಸ್ಥಳ ೧೦-೧೫
೧೫-೧೪
ತಳಿಗೆ-ತಟ್ಟೆ ೧೧-೨
ತಳಿರು-ಚಿಗುರು ೧೫-೩೫
ತಳಿವರ-? ೧೬-೬೩
ತಳುವು-ಸಾವಕಾಶಮಾಡು ೪-೫೮
೮-೫೪
ತಳೆ-ಹೊಂದು, ಪಡೆ ೬-೧
ತಳ್ಕೈಸು-ತಬ್ಬಿಕೊಳ್ಳು ೧೫-೩೬
ತಾಗುದಾಣ-ತಗಲುವ ಸ್ಥಳ ೨-೧೬
ತಾಣ-(ಸ್ಥಾನ-ಸಂ) ಸ್ಥಳ ೬-೨೪
ತಾಮರಸ-ಕಮಲ ೯-೬೯

ತಾಮುರ್ಟ್ಟು-ಪ್ರೀತಿಯಿಂದ ಒಣಗು ೧೫-೩೮
ತಾರಾಗಣ-ನಕ್ಷತ್ರ ಸಮೂಹ ೭-೭
ತಾರೆ-ನಕ್ಷತ್ರ ೫-೨೯
ತಿತ್ತ್ರಿ-ಚೀಲ ೧೬-೨೭
ತಿತ್ತ್ರಿರಿ-ಒಂದು ವಾದ್ಯ ೧೩-೨೪೮
ತಿರು-ಬಿಲ್ಲಿನ ಹಗ್ಗ ೮-೧೬
೧೮-೬೨
೧೯-೨೭
ತೀವ್ರಕಿರಣ-ಸೂರ್ಯ ೧೧-೨೭
ತೀವು-ತುಂಬು ೨-೭
ತುಂಗ-ಎತ್ತರವಾದ ೧-೨
ತುರಕಬಚ್ಚೆ-? ೧೭-೫೩
ತುಱುಗಲ್-ಸಮೂಹ ೨-೧೪
ತುಱುಗಾಯಿ-ದನಕಾಯುವವ ೧೧-೩೩
ತುಱುಗು-ತುಂಬಿಕೊಳ್ಳು ೯-೩೫
-ಗುಂಪಾಗಿ ಸೇರು ೧೩-೧೯೫
ತುಱುಗೆವೆ-ತುಂಬುಕೂದಲಿನಿಂದ ಕೂಡಿದ ರೆಪ್ಪೆ ೯-೩೮
ತುಳ್ಕಿ-ಕದಡಿ, ಚೆಲ್ಲಿ ೮-೯೨
ತೂಪಿಱು-ಮುದ್ದಾಡು ೧೧-೨೭
ತೂಳುವಱಿ-ಒಂದು ಬಗೆಯ ತಮಟೆ ೧೩-೨೪೭
ತೆಕ್ಕು-ಬಲಗುಂದು ೮-೯೨
ತೆಱಪು-ಅವಕಾಶ ೮-೭೭
-" ಅವಕಾಶ, ಸ್ಥಳ ೧೧-೫೧
ತೆರಹುಗುಡು-ಅವಕಾಶಕೊಡು ೮-೯೪
ತೆಱು-ಕೊಡು ೬-೧೨
ತೇಜಿ-ಕುದುರೆ ೮-೮೭
ತೊಡಂಬೆ-ಹೂವಿನಕೋಶ ೬-೬೬
ತೊಡರು-ಆಭರಣ ೬-೬೬
ತೊಡವು-ಆಭರಣ ೩-೨
ತೊತ್ತಳತುಳಿ-ಅಜ್ಜು ಗುಜ್ಜಾಗಿ ಮಾಡು ೫-೪೩
ತೊತ್ತಳದುಳಿ-ಅಜ್ಜಿಗುಜ್ಜಿ ಯಾಗುವ ಹಾಗೆ ತುಳಿ ೧೭-೧೫
ತೊಲವರಗುಂಡು-(?) ೧೪-೧೫
ತೊಲೆ-ತೂಕಮಾಡು (ತುಲಾ-ಸಂ)
ತೋಟಿ-ಪ್ರತಿಯುದ್ಧ, ಎದಿರು ಗಾಳೆಗ ೧೪-೪೭

ಥ

ಥಟ್ಟು-ಸಮೂಹ ೬-೯೭

ದ

ದಂಡನುತಿ-ದೀರ್ಘದಂಡ ಪ್ರಣಾಮ ೧೯-೩೯
ದಟ್ಟೈಸಿ-ಉದಾಸೀನಮಾಡಿ ೭-೪೩
ದಡದಡಿಸು-ನಡುಗು ೧೧-೧೨೭
ದಳವಾಡ-?
ದಾಬೆ-? ೮-೮
ದಾನವ-ರಾಕ್ಷಸ ೪-೧೩
ದಿಂಡುಗೆಡೆ-ದಿಂಡುಕತ್ತರಿಸಿದರೆ ಬೀಳುವ ಹಾಗೆ ಬೀಳುವುದು ೬-೪೯

ದಿನನಾಯಕ–ಸೂರ್ಯ ೧-೧
ದಿನನಾಯಕನಂದನ–ಸೂರ್ಯಪುತ್ರ
(ಕರ್ಣ–) ೯-೫೭
ದಿವಾಣೆ–ಸಭೆ, ಆಸ್ಥಾನ(?) ೫-೩೧
ದುಂದುಭಿ-ವಾದ್ಯ ೫-೧೯
ದುಕೂಲ–ರೇಷ್ಮೆ ೧೧-೭೨
ದುಗುಡ–ದುಃಖ ೫-೫೨
೧೧-೩೨
ದುರ್ಗಸಂವರಣೆ-ಕೋಟೆಯೊಳ
ಗಿನ ಸಿದ್ಧತೆ ೧೩-೧೮೮
ದುಗುಲ–ದುಕೂಲ, (ಬಟ್ಟೆ)
(ರೇಷ್ಮೆ) ೧೩-೧೧೭
ದುರಿತಘರಟ್ಟ–(ಪಾಪಕ್ಕೆ ಬೀಸುವ
ಕಲ್ಲಿನ ಹಾಗಿರುವವನು) ಪಾಪ
ನಾಶಕ, ಈಶ್ವರ ೧೫-೫೩
ದುಱುದುಂಬಿತನ–ಬಲಾತ್ಕಾರ
ದಿಂದ ಮೇಲು ಬೀಳುವಿಕೆ ೧೩-೧೬೦
ದೂದವಿ–ದೂತಿ ೯-೮೪
ದೂರಿಸು-ಚಿಂತಿಸು ೧೦-೪
ದೆಸೆಗೊತ್ತರಿಸು–ಮೂಲೆಗೆತಳ್ಳು ೭-೫
ದೆಸೆವಲಿ-ದಿಗ್ಬಲಿ ೭-೫೭
ದೇವಾಗರ–ದೇವರಮನೆ ೧೧-೫
ದೇಸಿವಡೆ–ಅಲಂಕೃತವಾಗು ೯-೧೨
ಧರ್ಮಗಾಳೆ–ಧರ್ಮಕಹಳೆ,
ಧಾಳಿ–ಮುತ್ತಿಗೆ ೭-೫೦
ಯುದ್ಧನಿಲ್ಲಿಸಲು ಸೂಚನೆ
ಕೊಡುವ ಕೊಂಬು ೫-೨೫
ಧವಳಿತ-ಬಿಳುಪಾಗಿಮಾಡಲ್ಪಟ್ಟ ೧-೨
ಧಾತ್ರಿ-ದಾದಿ, ಸೇವಕಿ ೧೫-೫೧
ಧುರ–ಯುದ್ಧ ೪-೧೬
ಧುರಧರಣಿ–ಯುದ್ಧಭೂಮಿ ೧೭-೪೨
ಧುರಧರೆ–ಯುದ್ಧ ,, ೬-೭
ಧೂಳಿಗುಂಟೆ–ಧೂಳಾಗಿ
ಮಾಡಲ್ಪಟ್ಟ ಕೋಟೆ ೧೪-೬

ನ

ನಂಬು-ಒರಗು (ಆಶ್ರಯಿಸು) ೧೯-೧೫
ನನೆಕೊನೆಯೋಗು–ಅರಳು–
ಸಂತೋಷಪಡು) ೨-೮
ನನೆಗಣೆ–ಪುಷ್ಪಬಾಣ ೭-೧೨
ನನ್ನನಿನ್ನಿ–ಕಕ್ಕಾಬಿಕ್ಕಿ, ಕಳವಳ
ದಿಂದ ಕೂಡಿರುವಿಕೆ ೧೦-೧
ನನ್ನಿ–ಸತ್ಯ ೭-೨೯
ನರ–ಅರ್ಜುನ ೪-೧೭
೭-೨೯
ನರನಾಥ–ರಾಜ ೪-೧೭
ನಲವು–ಸಂತೋಷ ೭-೪೮
ನಲವೇಱು-ಸಂತೋಷದಿಂದುಬ್ಬು ೩-೩೭
೬-೩೪
ನಲ್ವೆಂಡಿರು–ಪ್ರೀತಿಪಾತ್ರರಾದ
ಹೆಂಡತಿಯರು ೧೨-೨೪
ನವನೀತ–ಬೆಣ್ಣೆ ೯೧-೩೮
ನವಿರೇಳು–ರೋಮಾಂಚವಾಗು ೧೧-೬೨

ನಳಿನ–ಕಮಲ ೮–೪೮
ನಳಿನಮಿತ್ರ–ಸೂರ್ಯ ೬–೩೨
ನಾಕ–ಸ್ವರ್ಗ ೨–೫
ನಾಕಾಧಿನಾಯಕ–ಸ್ವರ್ಗಪತಿ
–ಇಂದ್ರ ೧೩–೮೫
ನಾನು–ನೆನೆದುಹೋಗು
ಒದ್ದೆಯಾಗು, ತೊಯ್
ನಾರಿ–ಸ್ತ್ರೀ, ಹೆಂಗಸು ೯–೧೬
ನಾಸಾಗ್ರ–ಮೂಗಿನತುದಿ ೧೩–೭೬
ಸಿಗಳ–ಸಂಕೋಲೆ ೧–೧೧
ನಿಚ್ಚಣಿಗೆ–ಏಣಿ ೯–೪
ನಿರ್ಜರ–ದೇವತೆ ೧೩–೭೪
ನಿಟ್ಟಿಸು–ನೋಡು, ೪–೪೫
,, –ಕುರಿತುನೋಡು ೬–೪೪
ನಿಡಿ–ದೀರ್ಘವಾದ ೬–೭೧
ನಿರ್ಣೀತ–ನಿಷ್ಕರ್ಷೆಮಾಡಿರುವ ೨–೨೧
ನಿದಾನ–ರೋಗಕಾರಣ ೧೦–೮
ನಿನಾದ–ಶಬ್ದ ೫–೫
ನಿಭ–ಸಮಾನ ೧೩–೨೨
ನಿರವಿಸು–ವಿವರವಾಗಿ ತಿಳಿಯ
ಪಡಿಸು ೫–೧೭
ನಿರೂಪಿಸು–ಹೇಳು ೪–೩೪
ನಿವಹ–ಸಮೂಹ ೯–೭
ನಿವಾಳಿ–ಆರತಿ ಇಳಿತೆಗೆಯುವುದು ೧೫–೨೩
ನಿಶ್ರೇಣಿ–ಏಣಿ ೧–೩
ನಿಸರ್ಗ–ಸ್ವಭಾವತಃ ೧೭–೪೦
ನಿಸ್ಸಾಳ–ಭೇರಿ ೧೩–೨೪೭

ನಿಸ್ಸೀಮತೆ–ಎಲ್ಲೆಯಿಲ್ಲದಿರುವಿಕೆ ೫–೪೮
ನೀರ್ಗಿಚ್ಚು–ಬಡಬಾನಲ
(ಸಮುದ್ರದೊಳಗಿರುವ ಬೆಂಕಿ) ೧೯–೨
ನೀರಜ–ರಜೋಗುಣವಿಲ್ಲದುದು ೩–೧೫
ನೀರದನಿನದ–ಗುಡುಗು ೭–೧೩
ನುಡಿನೇಟ–ಮಾತನ್ನು ಕೇಳು
ವುದರಿಂದ ಆಗುವ ಪ್ರೀತಿ ೧೧–೧೯
೧೬–೬೩
ನೆಗವು–ಮೇಲಕ್ಕೆತ್ತು ೧೩–೧೧೬
ನೆಗಳಿದ–ಮಾಡಿದ ೧೩–೬೭
ನೆತ್ತರ್–ರಕ್ತ ೧೮–೭೨
ನೆಮ್ಮು–ಒರಗು, ಆಶ್ರಯಿಸು ೧೯–೧೬
ನೆರವಿ–ಗುಂಪು ೨–೩೭
ನೆಱೆ–ಸಹಾಯ ೧೭–೧೨
ನೆಱಂಗೆ–ಪರಿಷ್ಕಾರ ೧೯–೨೧
ನೆಱೆ–ವಿಶೇಷವಾಗಿ ೪–೩
ನೆಱೆಗಲಿ–ಪೂರ್ಣವೀರ ೮–೪೯
ನೆಱೆವರೆಯ–ತುಂಬುಪ್ರಾಯ ೧೧–೨೩
ನೆಲೆ–ಸ್ವಭಾವಸ್ಥಿತಿ ೧–೨೦
ನೇತ್ರ–ಬೆತ್ತ ೧೩–೧೯೭
ನೇತ್ರಾಂಬು–ಕಣ್ಣೀರು ೧೫–೧
ನೊಸಲು–ಮುಖ, ಹಣೆ ೯–೧
ನೋಂಪಿ–ವ್ರತ ೫–೪೭
೧೧–೭೪

ಪ

ಪಂಚಘಂಟಿ–ಆನೆಯ ಆಭರಣ
ವಿಶೇಷ ೬–೬

ಪಂಚಧಾರೆ–ಕುದುರೆಯ ಐದು ತೆರನಾದ ಓಟ ೪–೮
ಪಂಚಾನನ–ಸಿಂಹ ೫–೫೬
೭–೮
ಪಂತಪಾಡು–ಪ್ರತಿಜ್ಞೆ ೧೩–೨೫೦
ಪಂತದ ಹೊರಿಗೆ–ಪರಾಕ್ರಮದ ಕಾರ್ಯ ೧೩–೧೭೮
ಪಂದಲಿ– (ರಕ್ತದಿಂದ ತೊಯ್ದ) ಹಸಿಯತಲೆ ೧೯–೫೯
ಪಂದಿ-ಹಂದಿ (?) ೧೪–೧೫
ಪಕ್ಕರೆ–ಜೀನು ೧೪–೪೩
ಪಟ್ಟೆ–ವಸ್ತ್ರ, ಉಡುವು ೧–೫೧
ಪಡುಕಣ-ಪಡುಕಣು-ಪಶ್ಚಿಮಭಾಗ-೮-೮೭
ಪಡಗು–ಹಡಗು ೧೪೪-೬
ಪಡಿಬಿಡಾರ-ಪ್ರತಿಬೀಡಾರ
ಪಡಿರೂಪು-ಪ್ರತಿರೂಪು
ಪತಾಕಾಗ್ರ–ಬಾವುಟದ ತುದಿ ೪೪–೧೧೬
ಪದಗೊಳಿಸು–ಹದಮಾಡು ೬–೪೬
ಪರಕೆ–ಹರಕೆ, ಆಶೀರ್ವಾದ ೧೧–೫೦
ಪರಕಲಿಸು–ಚದರು ೯–೬೪
ಪರಾಗ–ಅದಿರು, ಧೂಳು ೪–೬
ಪರದ–ವ್ಯಾಪಾರಿ ೧೬–೭೪
ಪರವೆಣ್–ಬೇರೆ ಹೆಂಗಸು, ಅನ್ಯಸ್ತ್ರೀ ೪–೪೨
೧೧–೮
ಪರಿಣಯ–ವಿವಾಹ, ಮದುವೆ ೨–೧೮
೩–೩೯
೫–೩೭

ಪರಿತೋಷ–ಸಂತೋಷ, ಹರ್ಷ ೧೫–೨೭
ಪರಿವೃಢ–ಶ್ರೇಷ್ಠ ೧೩–೩೦
ಪರೆ–ಚೆದರು ೨–೬
ಪ್ರಬೋಧ–ಎಚ್ಚರಿಕೆ ೩–೫
ಪ್ರಸ್ಥಾನಭೇರಿ–ಪ್ರಯಾಣವನ್ನು ಸೂಚಿಸುವ ನಗಾರಿ ೧೩–೧೨೧
ಪಱಿಗೋಲು–ಹರಿಗೋಲು ೧೦–೨೩
ಪಲ್ಲಟಿಸು–ವ್ಯತ್ಯಾಸವಾಗು ೧೦–೬
ಪಲ್ಲವ–ಚಿಗುರು ೯–೭೧
ಪಲ್ಲಿ–ಹಳ್ಳಿ ೫–೫
ಪವಡಿಸು–ಮಲಗು ೧೧–೧
ಪವುಜು–ಸೈನ್ಯ ೧೪–೨೧
ಪಳಂಚು–ಪ್ರತಿಭಟಿಸು (ತಗುಲು) ೧೧–೧೩೧
ಪಳುಕು–ಸ್ಫಟಿಕ ೩–೨
ಪಳಿಯಱಿ–ಬಾಗಿಲು ಕಾಯುವವನು ೧೧–೯೩
ಪಾಠೀನ–ಮೀನು ೨–೯
ಪಾಡುವೇಳು–ಬುದ್ಧಿ ಹೇಳು, ಮಾರ್ಗ ತೋರು ೧೧–೪೪
ಪಾಣ್ಬೆ–ವ್ಯಭಿಚಾರಿ, ಜಾರಸ್ತ್ರೀ ೮–೬
೧೨–೨೨
ಪಾತಕತೊಂಡ-ಪಾಪಿಗಳಲ್ಲಿ ಪ್ರಧಾನ ೧೨–೩೪
ಪಾದಪ–ವೃಕ್ಷ, ಮರ ೭–೧೭
ಪಾರವಶ್ಯ–ಇತರರ ಅಧೀನದಲ್ಲಿರುವಿಕೆ ೧೫–೨೦

ಪಾರುವಿಳ್ಳೆಯ–ನೋಡಿದ ಕೂಡಲೆ ಕೊಡುವ ವೀಳೆಯ ೮–೨೭
ಪಾಱತ–ಬಂಡೆ ೪–೫೬
ಪಾವುಡ–ಕಪ್ಪ, ಕಾಣಿಕೆ ೪–೩೮
೮–೬
ಪಾಸಟಿ–ಸಮಾನ ೪–೫೨
೫–೪೭
೬–೩೧
೧೫–೨೧
ಪಾಳಿ–ಕ್ರಮ, ಸಂಪ್ರದಾಯ ೯–೩೪
ಪಿಂಗದೆ–ಕಡಿಮೆಯಾಗದೆ, ನ್ಯೂನತೆಯಿಲ್ಲದೆ ೬–೩
ಪಿಳುಕು–ಬಾಣ ೧೮–೬೨
ಪೀನಿ–? ೧೬–೨೭
ಪುಂಗವ–ಶ್ರೇಷ್ಠ ೧೩–೭೦
ಪುಂಜ–ಸಮೂಹ ೭–೧೪
ಪುಂಡರೀಕ–ಕಮಲ ೧೧–೮೫
ಪುತ್ರಳಿ–ಗೊಂಬೆ ೯–೪೧
ಪುರಂದರ–ಇಂದ್ರ ೧೩–೩೬
ಪುಳಕ–ರೋಮಾಂಚ ೩–೮
೮–೧೦೦
ಪುಳಿನ–ಮರಳು ೧೧–೧
ಪೂಗಮತಿ–ಬುದ್ಧಿವಂತ (?) ೨–೩೮
ಪೂಣ್–ಪ್ರತಿಜ್ಞೆಮಾಡು ೧೧–೪೮
ಪೂರಾಯ–ಹೆಚ್ಚಾದ
ಪೂರಾಯಗಾಯ–ದೊಡ್ಡಪೆಟ್ಟು ೧೯–೧೪
ಪೂವಲಿ–ರಂಗವಲ್ಲಿ ೩–೧೭

ಪೆಂಡೆಯ–ಬಿರುದಿನ ಬಳೆ ೯–೧೩
ಪೆರ್ಚಿಗೆ–ಹೆಚ್ಚಿಗೆ ೬–೧೭
ಪೆಟಲಕೋವಿ–ಪೆಟಲಿನ ಬಂದೂಕ ೧೬–೨೫
ಪೆಟಲಗುಂಡು–ಬಂದೂಕ ೧೧–೮೬
ಪೆಟಲು–? ೧೪–೧೫
ಪೆಡಕಟ್ಟು–ಹಿಂಗಟ್ಟು ೫–೨೪
ಪೆಣ್ಬರಿಜು–ಸ್ತ್ರೀವೇಷ ೧೨–೨೮
ಪೆರ್ಬಟ್ಟೆ–ದೊಡ್ಡದಾರಿ ೨–೩೬
ಪೈರಣೆಸುತ್ತು–? ೮–೧೮
ಪೊಂಬೆಟ್ಟು–ಸುರಗಿರಿ, ಮೇರು, ಚಿನ್ನದ ಬೆಟ್ಟ ೯–೭೬
ಪೊಗರು–ಕಾಂತಿ ೧೦–೬
ಪೊಗೆಯದೆ–ಹೊಗೆಯಾಡದೆ ೩–೧೬
ಪೊಟ್ಟಟ್ಟೆ–ತಿವಿಯುವ ಈಟಿ (?) ೧೪–೧೫
ಪೊಡವಿಪ–ರಾಜ, ದೊರೆ, ೧೫–೨೧
ಭೂಪತಿ ೬–೩೧
ಪೊತ್ತಿಗೆ–ಸಮೀಪಕ್ಕೆ ೪–೨೫
ಪೊರ್ದು–ಸೇರು ೪–೫
ಪೊನಲ್–ಪ್ರವಾಹ ೧೧–೪೫
ಪೊರೆ–ಲೇಪಿಸು, ಬಳಿ ೧೪–೩೩
ಪೊಱಪೊಣ್ಮು–ಹೊರಹೊಮ್ಮು ೧೦–೩
ಪೊಱಮಡಿಸು–ಹೊರಡಿಸು ೧೩–೧೮
ಪೊಱಮಡು–ಹೊರಡು ೬–೮
೧೦–೧
ಪೊಲಬು–ದಾರಿ ೧೫–೩೫
ಪೊಸೆದ–ಹೊಸೆದುಹಾಕಿದ ೧೦–೪
ಪೊಳಲು–ಪಟ್ಟಣ ೫–೨೩

ಪ್ರೋಳು-ಹೋಳು, ಭಾಗ ೪-೨೧
ಪೌಜು-ಸೈನ್ಯ ೫-೧೭
ಪೌಳಿ-ಪ್ರಾಕಾರದಗೋಡೆ ೧೧-೫೧

ಫ

ಫೇನ-ನೊರೆ ೨-೯

ಬ

ಬಂಕುವಂಕಿ-ಒಂದು ಒಡವೆ ೧೧-೭೧
ಬಂದಿಯಿಕ್ಕು-ಸೆರೆಹಿಡಿ ೯-೯೮
ಬಗೆ-ಮನಸ್ಸು, ಯೋಚನೆ ೧೨-೭
ಬಜ್ಜರ-ವಜ್ರಾಯುಧ ೯-೨೯
ಬಟ್ಟೆ-ದಾರಿ (ವರ್ತ್ಮ, ಸಂ) ೧೩-೨೧
ಬಡಿಕೊಂಡ-ಪೆಟ್ಟುಬಿದ್ದ ೧೫-೧೩
ಬಣಗು-ಅಶಕ್ತ-ಹೇಡಿ ೬-೫೦
ಬದ್ಧರಬಂಡಿ-? ೧೬-೭೩
ಬನ್ನ-ಭಗ್ನ-ಅವಮಾನ,ಚಿಂತೆ ೧೨-೭
ಬರಿಕ್ಕೆ-ಸೊಂಡಿಲು ೬-೭೧
ಬಱತವು-ಒಣಗಿದುವು ೧೩-೧೯೨
ಬಂಡು-ಗುಂಪು ೧೨-೧೩
ಬಱಿಕೆಯ್-ನಾಶಮಾಡು ೭-೭೩
ಬಱುನುಡಿ-ಒಣಮಾತು, ೧೧-೧೩೬
ಬಲಾರಾತಿ-ಇಂದ್ರ ೪-೧೮
ಬಲಿ-ಸುತ್ತುಗಟ್ಟು,ದೃಢಪಡಿಸು ೧೭-೨೪
ಬಲ್ಲಿದ-ಪರಾಕ್ರಮಿ ೫-೧೯
ಬಲುಪಂಥ-ದೊಡ್ಡ ಪ್ರತಿಜ್ಞೆ ೬-೫೦
ಬವರ-ಯುದ್ಧ ೩-೩೨
೪-೩೫
ಬಹಿತ್ರ-ಹಡಗು, ದೋಣಿ ೧೬-೭
ಬಹುವಾಡ-ಬಹು + ಬಾಡ,
ಅನೇಕ ಹಳ್ಳಿಗಳು ೮-೨೬
ಬಳಗ-ಸಮೂಹ ೫-೧೬
ಬಳಿನೀರ್-ಪ್ರತಿಜ್ಞೆ ಮಾಡುವಾಗ
ಕುಡಿಯುವ ನೀರು ? ೧೦-೮
ಬಾನ್-ಆಕಾಶ ೫-೨೮
೭-೭
ಬಾಂದೊಱೆ-ಬಾನ್ತೊಱೆ
ಆಕಾಶನದಿ, (ದೇವಗಂಗೆ) ೧೦-೨೬
೧೯-೪೪
ಬಾವನ್ನ-ಶ್ರೀಗಂಧ ೧೧-೭೧
ಬಾಹುಪೂರ-ಬಾವುಲಿ, ಕೈಬಳೆ ೧೩-೧೪೪
ಬಾಳ್-ಕತ್ತಿ ೪-೩೩
೫-೪
ಬಿಂಕ-ಠೀವಿ, ಗರ್ವ ೭-೧೧
ಬಿಂಕಕಾರ್ತಿ-ಜಂಭಗಾತಿ ೯-೯೨
ಬಿಗುಹು-ಬಿಗಿ, ಸ್ಥಿರತೆ ೫-೫೨
ಬಿಜ್ಜಳ-ಬೀಸಣಿಗೆ ೧೮-೨೫
ಬಿತ್ತರ-ವಿಸ್ತಾರ ೩-೧೮
ಬಿತ್ತರಿಸು-ವಿಸ್ತಾರಮಾಡು ೫-೧೭
ಬಿರ್ದು-ಆತಿಥ್ಯ ೬-೩೨
ಬಿನ್ನವತ್ತಳೆ-ವಿಜ್ಞಾಪನಪತ್ರಿಕೆ ೮-೭೬
ಬಿನ್ನೈಸು-ವಿಜ್ಞಾಪನೆಮಾಡು ೪-೩೦
ಬಿಱುತು-ಹೆದಱು ೬-೩೩
ಬೀದಿವರಿ-ಸ್ವತಂತ್ರವಾಗಿ ಹರಿ ೯-೩೮
ಬೀರಣಱಿಂಚೆ-ಒಂದು ವಾದ್ಯ ೧೩-೧೨೭

ಬೀಸರವೋಗು–ಕೊನೆಯಾಗು,
ಮುಗಿದು ಹೋಗು ೩–೩೫
ಬುಧಜನ-ವಿದ್ವಾಂಸರು ೩–೧೨
ಬೂಡಾಯಿತ–ಒಂದು ರೀತಿಯ
ಕವಚ–? ೮–೭೪
ಬೂತಾಟ–ಹುಚ್ಚತನ ೮–೬೦
ಬೆಂಕೊಳ್–ಹಿಂತಿರುಗಿ ಓಡು ೧೫–೧೦
ಬೆಂಗೆವಾಯ್–ಬೆನ್ನಿಗೆ ಹಾರು ೯–೫೧
ಬೆಂಚೆ–ಜಲಾಶಯ ೧೩–೧೯೩
ಬೆಚ್ಚಳು-ಸೇರಿಸಿದಳು(ಬೆ ಸು-ಧಾ) ೯-೬೧
ಬೆಟ್ಟು–ಬೆಟ್ಟ ೫–೨೦
ಬೆಟ್ಟು–ನಾಟು, ಚುಚ್ಚು ೧೮–೬೩
ಬೆಱಗುವಡು–ಆಶ್ಚರ್ಯವನ್ನು
ಹೊಂದು ೯–೩೫
ಬೆಸಗೊಳ್–ಪ್ರಶ್ನೆಮಾಡು ೩–೩೯
ಬೆಸನ್–ಕಾರ್ಯ, ಇಷ್ಟಾರ್ಥ ೯–೮೯
ಬೆಸಲ್–ಪ್ರಸವ ೧೧–೫೬
ಬೆಸಲಾಗು-ಪ್ರಸವಿಸು ೫-೩೮
ಬೇಟ-ಪ್ರೇಮ, ಪ್ರೀತಿ ೭-೩೪
೯–೩೪
ಬೇಟವರುಳು-ಪ್ರೇಮದ ಹುಚ್ಚು ೯–೯೨
ಬೇಹು-ಗೂಢಚಾರ ೮–೭೧
ಬೊಂಬುಳಿ–ಒಂದು ವಾದ್ಯ ೧೩–೨೪೭
ಬೋನ–ಅನ್ನ ೯–೮
ಬೋಳುಕರು–ಸೇವಕರು (?) ೧೧–೭೦
ಬೋಳೆಯಂಬು–ಹೂವಿನೆಲೆಯ
ಆಕಾರದ ಮೊನೆಯುಳ್ಳ ಬಾಣ ೮-೪೪

ಭ

ಭಂಗಿ–ರೀತಿ ೧೮–೩೩
ಭಟ್ಟರು–ಹೊಗಳುಭಟರು,
ಸ್ತುತಿಪಾಠಕರು ೭–೧೭
ಭವಬದ್ಧಮೋಹ–ಜನ್ಮಾಂತರ
ಸಂಬಂಧದ ಪ್ರೀತಿ ೭–೨೨
ಭಾಗೀರಥೀಧರ–ಗಂಗೆಯನ್ನು
ತಲೆಯಲ್ಲಿ ಧರಿಸಿರುವವನು (ಈಶ್ವರ) ೧–೧
ಭಾಗೀರಥಿ–ಗಂಗೆ ೧೦–೩೪
ಭಾನು–ಸೂರ್ಯ ೩–೪
ಭಾನುಸನ್ನಿಭ–ಸೂರ್ಯನಿಗೆ ಸಮಾನ ೭–೬
ಭಾಳನೇತ್ರ–ಹಣೆಗಣ್ಣ, (ಈಶ್ವರ) ೧–೧
ಭೀತ–ಹೆದರಿದವನು ೮–೬೦
ಭುಜಕೀರ್ತಿ–ತೋಳಬಳೆ ೧೮–೪೪
ಭೂತಹಿತ–ಪ್ರಾಣಿಗಳಲ್ಲಿ ದಯೆ
ಯುಳ್ಳವನು ೧೩–೧
ಭೂತಳ–ಭೂಮಂಡಲ ೩–೪೯
ಭೂರಿ–ದೊಡ್ಡದಾದ ೯–೦
ಭೂಲಲನೆ–ಭೂದೇವಿ ೫–೫೫
ಭೂಷಣ–ಒಡವೆ ೩–೧೨
ಭೃಂಗ–ದುಂಬಿ ೩–೪೪
ಭೇರಿ–ನಗಾರಿ ೫–೧೧
ಭೋಗಿಭೂಷಣ–ಸರ್ಪಾಭರಣ
(ಈಶ್ವರ) ೧–೧
೧೭.೩೦

ಮ

ಮಂತ್ರಣ–ಮಂತ್ರಾಲೋಚನೆ ೧೬–೬೪

ಮಂದರು–ದಡ್ಡರು, ಬುದ್ಧಿಯಿಲ್ಲದವರು ೩–೩೬
ಮಗ್ಗು–ಶಕ್ತಿಗುಂದು ೮–೪೫
ಮಡದಿ–ಹೆಂಡತಿ ೮–೫೯
ಮಣ್ಮಳಿ–ರೂಪಳಿದಸಾವು ೧೯–೬೬
ಮಣಿ–ಬಗ್ಗು, ನಮಸ್ಕಾರಮಾಡು ೪–೪೭
ಮರ್ತ್ಯ–ಭೂಮಿ ೪–೧೧
ಮತಿಶಾಲಿ–ಬುದ್ಧಿವಂತ ೮–೬
ಮದಾಲಸಯಾನೆ–ಮಂದಗತಿಯುಳ್ಳವಳು ೯–೧೧
ಮನಂಗೊಳ್–ಆಕರ್ಷಕವಾಗಿರು ೧–೧೨
ಮನೋಜ–ಮನ್ಮಥ ೩–೭
ಮರಳು–ಹಿಂತಿರುಗು ೯–೧೮
ಮರಾಳ–ಹಂಸ ೯–೧೧
ಮರೀಚಿ–ಕಿರಣ ೧೯–೨೯
ಮರೀಚಿಕೆ–ಬಿಸಿಲುಗುದುರೆ ೧೧–೧೨
ಮರೆ–ಜಿಂಕೆ ೧೨–೨
ಮಲಯಜದಣ್ಪು–ಶ್ರೀಗಂಧದ ಲೇಪನ ೩–೨
ಮಲಿನತೆ–ಕಲ್ಮಷ, ಕೊಳೆ ೩–೧೬
ಮಸಗು–ಹೆಚ್ಚಾಗು ೧೫–೧
ಮಸ್ತಕ–ತಲೆ ೬–೭೦
೯–೬೩
ಮಸುಳಿಸು–ಮಾಸಲಾಗಿಮಾಡು ೧೬–೫೬
ಮಸುಳು–ಮಂಕುಮಾಡು, ಮುತ್ತು, ಕವಿ ೫–೨೧
ಮಹಿಷಿ–ರಾಣಿ ೧೦–೧೨
ಮಹೋರಗಿ–ದೊಡ್ಡ ಹೆಣ್ಣುಹಾವು ೧೭–೨೧
ಮಾಗಾಯಿ–ಮಾವಿನಕಾಯಿ ೩–೨೩
ಮಾತಂಗ–ಆನೆ ೧–೨
೬–೨೪
”– ಚಂಡಾಳ, ಮಾದಿಗ ೧೪–೩೦
ಮಾನಿತ–ಗೌರವಿಸಲ್ಪಟ್ಟ, ಪ್ರಸಿದ್ಧವಾದ ೨–೫೮
ಮಾಳ್ಕೆ–ಮಾದರಿ ೨–೨೩
ಮಾಸಾಳು–ಶೂರ (?) ೯–೧೨
ಮಾಸತಿ–ಮಹಾಸತಿ ೧೩–೧೪೫
ಮಾಱುವಡು–ಬದಲಾವಣೆಯಾಗು ೯–೩
ಮಾರ–ಮನ್ಮಥ ೯–೧೬
ಮಾರ್ಮಲೆ–ಪ್ರತಿಭಟಿಸು ೬–೩೭
ಮಾಮಸಗು–ಹೆಚ್ಚಾಗಿರೇಗು ೫–೨೧
ಮಿಗಗೊಲೆಯು–ಬೇಡ (?) ೧೦–೨
ಮಿಗು–ಮೀರು, ಅತಿಕ್ರಮಿಸು ೭–೬
ಮಿಣಿ–ಹಗ್ಗ ೬೭೮–೧೧
ಮಿಸುನಿ–ಚಿನ್ನ ೧೪–೪
ಮೀಟು–ಉತ್ತಮ, ಸೌಂದರ್ಯ, ಅತಿಶಯ ೯–೨೧
” –ಶ್ರೇಷ್ಠ ೧೪–೪೭೩
ಮೀಸರ–ಸುಪ್ರಸಿದ್ಧ, ಆಯ್ದಿಟ್ಟವರು ೧೩–೩೩
ಮೀಸರು–ಪರಾಕ್ರಮಶಾಲಿಗಳು ೩–೩೫
ಮುಂಡಾಡು–ಮುದ್ದಾಡು ೧೦–೬
ಮುಕ್ಕುಱು–ಮೇಲೆ ಆವರಿಸು, ತುಂಬು ೧೧–೩೮

ಮುಕ್ಕಳಿಸು–ಹೊರಗೆ ಚೆಲ್ಲು ೯–೨೬
ಮುಗಿಲು–ಆಕಾಶ, ಮೋಡ ೩–೩೬
೫–೧
ಮುಗುಳ್–ಮೊಗ್ಗು, ಮುಚ್ಚು
ಮುಗ್ಗು-ಪ್ರತಿಭಟಿಸು ೧೧–೮೨
ಮುಸುಮೊಲ–ಮುಸು + ಮೊಲ, ಕೋತಿ ಮತ್ತು ಮೊಲ ೧೨–೨
ಮುದಾಶ್ರು–ಸಂತೋಷದ ಕಣ್ಣೀರು ೬–೪೬
ಮುದ್ರಿಕೆ–ಮುದ್ರೆಯುಂಗುರ ೧೩–೧೨
ಮುನ್ನೀರ್–ಸಮುದ್ರ ೭–೯
ಮುರರಿಪು–ವಿಷ್ಣು (ಮುರಾಸುರನ ಶತ್ರು) ೪–೧೭
ಮುರುಡಿ– ? ೧೩–೧೪೫
ಮುಱಿ–ಭಂಗಿಸು ೪–೧೪
ಮುಸುಡು–ಮುಖ ೧೫–೨೫
ಮೂವಳಸು–ಮೂರುಬಳಸು ೫–೧೨
ಮೃಗ–ಜಿಂಕೆ ೯–೩೫
ಮೃಗಮದ–ಕಸ್ತೂರಿ ೭–೧೧
ಮೃಗಾಂಕ–ಚಂದ್ರ ೭–೧೧
ಮೃಗಾಕ್ಷಿ–ಜಿಂಕೆಯಂತೆ ಕಣ್ಣುಳ್ಳವಳು ೭–೧೧
ಮೆಯ್ಗರೆ–ಮೆಯ್ಯುಬ್ಬು, ಉತ್ಸಾಹ ಭರಿತವಾಗು (?) ೬-೪೫
ಮೆಯ್ಪೆರ್ಚು–ಉತ್ಸಾಹಗೊಳ್ಳು ೧೦–೧೮
ಮೆಯ್ಯಿಕ್ಕು-ನಮಸ್ಕಾರಮಾಡು ೬–೧೦
೮–೪೮
ಮೇಳಾಪಿಸು-ಸಿದ್ಧಪಡಿಸು ೧೭–೬೦
ಮೊಗಸಾಲೆ–ಅರಮನೆಯ ಮುಂಭಾಗ ೧೨–೩೩
ಮೊಗ್ಗರ-ಸಮೂಹ, ಗುಂಪು ೮–೪೫
ಮೊಗ್ಗು-ಗುಂಪು, ಮುಂಭಾಗ ೮-೪೫
ಮೊರಡಿ-ಬಂಡೆ ೨–೧೪
೧೩–೧೯೩
ಮೋಹರ-ಗುಂಪು ೪–೮೯
ಮೋಹಳ-ಗುಂಪು ೧೬-೩೯

ಯ

ಯಕ್ಷಕರ್ದಮ–ಸುಗಂಧದ್ರವ್ಯ ೧೧–೧೧

ರ

ರಣನ–ಶಬ್ದ ೧೯–೨೯
ರಥಾಂಗ-ಚಕ್ರವಾಕ ೩-೫
ರನ್ನದೊಡಿಗೆ–ರತ್ನಾಭರಣ ೮–೮೬
ರಾಗ-ಪ್ರೀತಿ ೧೦-೧೯
ರಾಜಿ–ಸಮೂಹ ೨-೭
ರಾಜಿಸು-ಪ್ರಕಾಶಿಸು ೪-೮
ರಾಣುವೆ–ಸೈನ್ಯ ೧೯-೫೬
ರಾಯಸ-ರಾಜಸಪತ್ರ ೫–೨
೭-೩೦
ರಾವುತಪಾಯಕ-ಕುದುರೆಸವಾರ(?) ೫-೫೬

ರಾವುತಪಾಯಿಕೆ-ಕುದುರೆ ಸವಾರತನ (?) ೫-೪೫
ರಾವುತಿಕೆ-ಸವಾರತನ ೫-೪೬
,, -ಸವಾರನ ಗುಣ ೬.೪೯
ರುಚಿ-ಕಾಂತಿ ೭-೭೩

ಲ

ಲಂಡಪುಂಡರು-ಅಯೋಗ್ಯರು ೧೭-೧೩
ಲಂಪಟ-ಆಸಕ್ತಿ ೨೧-೭೭
ಲಂಬಣ-ಮುತ್ತಿನ ಕುಚ್ಚು ೯-೫
ಲಗ್ಗೆವರೆ-ಒಂದು ವಿಧವಾದ ತಮಟೆ (ವಾದ್ಯ) ೧೧-೫೨
ಲಹರಿ-ಕಾಂತಿ ೯-೭೫
ಲುಳಿ-ರುಳಿಯಂತಿರುವ ಒಂದು ತೆರನಾದ ಆಭರಣ ೧೮-೭೭
ಲೋಹವಕ್ಕರಿಕೆ-ಲೋಹದಿಂದ ಮಾಡಿದ ಕುದುರೆಯ ಪಕ್ಷರಕ್ಷೆ (ಮೇಜೋಡು) ೮-೮
ಲೌಡಿ-ಲಗುಡ, ದೊಣ್ಣೆ, ಗದೆ ೮-೯೫
೧೨-೬೭

ವ

ವಂಗಡ-ಸಮೂಹ ೩-೬
೬-೩೧
ವಂದಿಗಳು-ಹೊಗಳುಭಟರು ೨-೭೦
ವಕ್ರವಚನ—ಅಡ್ಡಮಾತು, ಕೊಂಕುನುಡಿ ೧೧-೧೭೫
ವಜ್ರಿ-ಇಂದ್ರ ೨-೨೦
ವಣಿಗ್ವರ-ವ್ಯಾಪಾರಿಗಳಲ್ಲಿ ಶ್ರೇಷ್ಠನಾದವನು ೪-೭೩
ವತ್ಸನಾಭಿ-ಮುತ್ತನ್ನು ಮಾಡುವ ಮೂಲಿಕೆ ? ೧೬-೭
ವದನಾರವಿಂದ-ಮುಖಕಮಲ ೪-೫೦
ವನಜ-ಕಮಲ ೧-೪
ವನಜವದನೆ-ಕಮಲಮುಖಿ ೯-೮೯
ವನಧಿ-ಸಮುದ್ರ ೧೨-೩೨
ವನಿತಾನಿವಹ-ಸ್ತ್ರೀಸಮೂಹ ೧೩-೫೪
ವಸುಧಾಧೀಶ-ಭೂಮಿಯೊಡೆಯ (ರಾಜ) ೭-೭೪
ವಸುಧೆ-ಭೂಮಿ (ಚಿನ್ನ ದಂಡಿಯಾಗಿರುವ ಸ್ಥಳ) ೫-೭೧
ವಹಣಿ-ವಿಡಾಯು, ಪರಾಕ್ರಮ ೮-೩೫
ವಹಿಲ-ಜಾಗ್ರತೆ, ವೇಗ ೨-೩೮
ವಳಿತ-ಅಧಿಕಾರ, ಗುಂಪು, ವಳಯ ೮-೬೩
೧೯-೫
ವಾಕ್ಪತಿ-ಬ್ರಹ್ಮ ೭-೭೨
ವಾಘೆ-ಕುದುರೆಯ ಲಗಾಮು ೫-೭೭
ವಾಜಿ-ಕುದುರೆ ೪-೨
ವಾರಣ-ಆನೆ ೧೦-೧
ವಾರಣದಾನವ-ಗಜಾಸುರ ೧-೫
ವಾರಣವದನ-ಆನೆಯಮುಖದವನು (ವಿಘ್ನೇಶ್ವರ) ೧-೫
ವಾರುವ-ಕುದುರೆ ೮-೧೬
ವಿಕಲ್ಪ-ಸಂದೇಹ, ಸಂಶಯ ೧೩-೮

ವಿಡಾಯ-ಉತ್ಸಾಹ ೧೩-೧೯೮

ವಿತರಣಗುಣ-ದಾನಶೀಲತೆ ೪-೧

ವಿತರಣಗುಣ-ಸೀಳುವಿಕೆ ೧೧-೫೨

ವಿಪಂಚಿ-ವೀಣೆ ೨-೧೪

ವಿಯತ್ತಳ-ಆಕಾಶ ಪ್ರದೇಶ ೧೪-೨೪೨

ವಿಲಯ-ಪ್ರಳಯಕಾಲ ೧೭-೧೭

ವಿಲಸಿತ-ಪ್ರಕಾಶವಾದ ೭-೧೩

ವಿಸರ-ಸಮೂಹ ೪-೧೯

ವೃಜಿನ-ದುಷ್ಟ, ಪಾಪಿ ೮೫-೧

ವೇಣಿ-ಜಡೆ ೧-೩

ವೇಢೆಗೊಳಿಸು-ಪೂರ್ಣವಾಗು, ತುಂಬು ೧೯-೧೯

ವೈಷಯಿಕ-ವಿಷಯ ಸಂಬಂಧವಾದ, ಇಂದ್ರಿಯ ಸಂಬಂಧವಾದ ೧೯-೨೧

ವೈಹಾಳಿ-ಕುದುರೆಯ ಸವಾರಿ ೧೦-೨೧

ವಂಶ-ಕೊಳಲು ೧೩-೨೪೯

ಶ

ಶಕ್ತಿ-ಶಕ್ತ್ಯಾಯುಧ ೬-೪೨

ಶರಜಾಲ-ಬಾಣಸಮೂಹ ೪-೩೩

ಶರಧಿ-ಸಮುದ್ರ ೬-೨೭

ಶರಭ-ದೀಪದ ಹುಳು ೧೯-೧೧

ಶಶಿಗಲ್-ಚಂದ್ರಕಾಂತಶಿಲೆ ೯-೪೫

ಶಾರ್ಙ್ಗ-ಬಿಲ್ಲು ೮-೯

ಶಾರ್ಙ್ಗಿ-ವಿಷ್ಣು ೪-೧೭

ಶಾಬಕ-ಮರಿ ೧-೯

ಶಾರ್ವರಿ-ರಾತ್ರಿ ೩-೧೪

ಶಿರದೊಲಹು-ತಲೆದೂಗುವಿಕೆ ೮-೨೯

ಶಿಶಿರ ಶೀತ, ತಂಪು ೯-೭೨

ಶುಂಡಾಲ-ಆನೆ ೧೬-೬೬

ಶೋಣ ಕೆಂಪು ೩-೧೧೦

ಸ

ಸಂಗತಿವಡೆ-ಕ್ರಮಬದ್ಧವಾಗು ೬-೨೪

ಸಂಚು-ಉಪಾಯ, ಎಚ್ಚರಿಕೆ ೧೯-೪೮

ಸಂತವಿಡು-ಸಮಾಧಾನಮಾಡು ೭-೪೯

ಸಂತಾನ-ಮಗು ೩-೧೩

ಸಂದ-ಪ್ರಸಿದ್ಧವಾದ ೧-೭
೪-೧೨
೬-೧೭

ಸಂದಣಿ-ಸಮೂಹ, ಗುಂಪು ೫-೧೮
೮-೩೨
೧೩-೧೯೫

ಸಂದೋಹ-ಸಮೂಹ ೧೧-೧೪

ಸಂಬಳ-ಜೀವನ, ಬುತ್ತಿ ೭-೨
೧೭-೭

ಸದೆ-ಹೊಡೆ ೧೫-೫೯

ಸಪ್ತಾಂಗ-ರಾಜ, ಅಮಾತ್ಯ, ಸುಹೃತ್ ಕೋಶ, ರಾಷ್ಟ್ರ, ದುರ್ಗ, ಬಲ೧೬-೨೦

ಸಪ್ತೋಪಾಯ-ಏಳು ಉಪಾಯಗಳು ಸಾಮ, ಧಾನ, ಬೇದ ದಂಡ, ಉಪೇಕ್ಷೆ, ಇಂದ್ರ, ಕಾಲ ೨-೨೧

ಸಬಳ-ಕತ್ತಿ ೧೪-೧೫

ಸಬಳ+ದಸಿ-ಮೊಳೆ, ಹಾರೆ ೧೬-೬೩

ಸಮರಭೇರಿ-ಯುದ್ಧದ ನಗಾರಿ ೬-೧೫
ಸ್ಮರವಹ್ನಿ-ಕಾಮಾಗ್ನಿ ೧೦-೩
ಸರಗೆ-ಒಂದು ಹಕ್ಕಿ ೧೨-೫
ಸರಣಿ-ಕ್ರಮ ೧೮-೧೮
ಸರಲ್-ಬಾಣ ೧೯-೧೭
ಸರಿ-ಮಳೆ ೧೮-೩೫
ಸವಗ-ಕವಚ ೮-೮
೧೪-೪೪
ಸವಿತಟ್ಟು-ಸುಖವುಂಟಾಗು ೭-೨೬
ಸಹಣಿ-ಕುದುರೆಯ ಸವಾರ ೪-೨೫
೧೪-೪೧
ಸಾಂದ್ರ-ಒತ್ತಾದ, ಹೆಚ್ಚಾದ, ದಟ್ಟವಾದ ೧೯-೩೬
ಸಾಂಬ್ರಾಣಿ-ಒಂದು ಜಾತಿಯ ಕುದುರೆ (?) ೧೯-೬೦
ಸಾಗು-ಮುಂದಕ್ಕೆ ನಡೆ ೧೫-೧೧
ಸಾತ್ವಿಕಾವಳಿ-ಸಾತ್ವಿಕಾದಿ ಭಾವಗಳು ೧೧-೧೨೧
ಸಾದು-ಸುಗಂಧದ್ರವ್ಯ ೩-೧೭
ಸಾಮ-ದಯೆ ೬-೨೦
ಸಾಮಜವೈರಿ-ಸಿಂಹ ೬-೧೩
ಸಾರಣೆ-ಸಾರಿಸುವುದು ೩-೧೭
ಸಿಂಗರಲೆವೆ ? ೮-೮
ಸಿಂಗಾಡಿಬಿಲ್ಲು ? ೪-೫೫
೮-೮
೧೩-೨೫೨
ಸಿಂಗಿ-ಒಂದುಬಗೆಯ

ವಿಷದ್ರವ್ಯ (?) ೧೬-೨೬
ಸಿತತಲ್ಪ-ಬಿಳಿಯಹಾಸಿಗೆ ೧೧-೧
ಸೀಸಕ-(ಶೀರ್ಷಕ-ಸಂ) ತಲೆಯಟೋಪಿ ೮-೮
ಸುಗಿ-ಹೆದರು ೧೩-೩೨
ಸುದತಿ-ಸ್ತ್ರೀ, ಹೆಂಗಸು ೧೦-೧೨
ಸುಯ್-ಉಸಿರು ೯-೩೮
ಸುಯ್ಯೆಲರು-ಉಸುರಿನ ಗಾಳಿ ೫-೨೭
ಸುರಕರಿ-ಐರಾವತ ೧೨-೧
ಸುರಿಗೆ-ಸಣ್ಣಕತ್ತಿ ೧೯-೧೭೧
ಸುರಗುರು-ಬೃಹಸ್ಪತಿ ೬-೨೫
ಸುರತಾಳ-ಸುಲ್ತಾನ ೨-೩೩
ಸುರಪತಿನಂದನ-ಅರ್ಜುನ ೫-೩೫
ಸುರುಚಿರ-ಮನೋಹರವಾದ ೩-೪೨
ಸುರೆ-ಮದ್ಯ, ಹೆಂಡ ೧೩-೧೩೭
ಸುಲಿಪಲ್ಲು-ಶುಭ್ರವಾದ ಹಲ್ಲು ೩-೬
ಸೂಕಳ-ತುಂಟು ೪-೨೭
ಸೂಠಿ-ವೇಗ ೮-೯೭
ಸೂರ್ಯಹಾಸಿ-ಆ ಹೆಸರಿನ ಒಂದು ಕತ್ತಿ ೧೯-೩೦
ಸೂಸು-ಚೆಲ್ಲು, ಹರಿಸು ೩-೩೫
,, -ಚೆಲ್ಲು ಕೆದಱು ೯-೯೨
ಸೂಳುಮಾತು-ಸರದಿಯಮಾತು ೯-೨೭
ಸೆಕ್ಕು-ಸಿಕ್ಕಿಸು ೧೮-೪೧
ಸೆಜ್ಜೆ-(ಶಯ್ಯ-ಸಂ) ಹಾಸಿಗೆ ೩-೩
ಸೆಡೆ-ಹೆದರು ೬-೭೫

ಸೆಲ್ಲೆಹ-ಶಂಖ, ಶಲ್ಯ ? (ಒಂದು ಆಯುಧ ವಿಶೇಷ) ೬-೮೭
ಸೇದೆ–ಶ್ರಮ ೧೮-೪೦
ಸೇಸೆ-ಮಂತ್ರಾಕ್ಷತೆ ೧೫-೩೬
ಸ್ವೈವರಿ-ನೇರಾಗಿ ಓಡು ೧೨-೪೯
ಸ್ವೈಪು-ಪುಣ್ಯ ೩-೭೪
ಸೊಪ್ಪು–ದೌರ್ಬಲ್ಯ ೧೮-೪೧
ಸೊಲ್ಲು–ಹೇಳು ೮–೧೫
ಸೋಮು–ಚಂದ್ರ ೨-೨೯
ಸೌಧ–ಉಪ್ಪರಿಗೆ (ಸುಣ್ಣದ ಸಂಬಂಧವುಳ್ಳದ್ದು) -೧೫

ಹ

ಹಂಗ-ಒಂದು ಶಕುನದ ಹಕ್ಕಿ ೧೭-೩
ಹಂದೆ–ಪಂದೆ, ಹೇಡಿ, ೧೩-೧೩೩
ಹಕ್ಕರಿಕೆ-ಪಕ್ಷರಕ್ಷೆ (ಕುದುರೆಯ ಕವಚ) ೮–೪೪
ಹಮ್ಮು–ಅಹಮ್, ಹೆಮ್ಮೆ, ೮-೬೮
ಅಹಂಕಾರ ೧೨-೧೨
ಹರಡೆ–ಒಂದು ಶಕುನದ ಹಕ್ಕಿ ೧೭-೩
ಹರಣ-ಪ್ರಾಣ ೮–೧೧೦
ಹರವು–ಹರಡು
ಹರಹು-ಹರಡು ೧೩–೬೧
ಹರಿ-ಸಿಂಹ ೮-೪೯
ಹರಿಕಾಜಿ-ಆಳು, ದೂತ ೧೯-೧
ಹರಿಗೆ-ಗುರಾಣಿ ೮-೨೪
೧೨-೭೫
ಹರಿಣಾಯತಾಕ್ಷಿ-ಜಿಂಕೆಯಂತೆ ವಿಸ್ತಾರವಾದ ಕಣ್ಣುಳ್ಳವಳು ೯-೭೫
ಹರಿಪೀಠ-ಸಿಂಹಾಸನ ೪-೬೯
ಹರಿಬದಾಹವ-ಪ್ರತೀಕಾರದ ಯುದ್ಧ ೬-೨೪
ಹರೆಯ-ಪ್ರಾಯ ೩-೩೯
ಹಱಿಹಂಚು-ಹರಿದುಚೂರು ಮಾಡು ೬-೨೬
ಹವಣಿಸು-ಅಳತೆಮಾಡು ೩-೭೯
೫-೪೮
ಹಸನು–ಅನುಕೂಲ ೮-೩೨
ಹಸುಬ-ಶಕುನದಹಕ್ಕಿ ೧೦-೩
ಹಸರ-ಪ್ರಸರ (ಗುಂಪು) ೧೨–೫೮
ಹಾವಿನ ಹೇಳಿಗೆ–ಹಾವಿನ ಪೆಟ್ಟಿಗೆ ೧೬–೬೩
ಹಾವುಗೆ–ಪಾದುಕೆ ೧೧-೫
ಹಾಸ-ಪಾಶ (ಬಲೆ) ೧೦-೧೮
ಹುಯಲ್-ಕೂಗಿಕೊಳ್ಳುವಿಕೆ ೮-೮೮
ಹುರುಕಾರ್ತಿ-? ೯-೮೯
ಹುರುಡು-ಮೇಲಾಟ-ಸ್ಪರ್ಧೆ ೮-೪೩
ಹೆಕ್ಕಳಿಸು-ಹೆದರು ೮-೪೩
ಹೆಚ್ಚಳ-ಆಧಿಕ್ಯ ೧೩-೭೯
ಹೆದ್ದೊರೆ-ದೊಡ್ಡನದಿ (ಕೃಷ್ಣಾ) ೮-೪೬
ಹೇಡಿಮುನ್ನೆಯ-ಸತ್ವರಹಿತನಾದ ರಾಜ ೬-೧೭
ಹೇಷಾರವ-ಕೆನೆಯುವ ಶಬ್ದ ೪-೪೬
ಹೊಂತಕಾಱ- ಶೂರ, ಜಟ್ಟಿ,(?) ೧೧-೨

ಹೊಗರು-ಕಾಂತಿ	೫-೫೨	ಹೊರಳಿ–ಗುಂಪು	೧೫–೯
-ಬುದ್ಧಿವಂತ, ಚತುರ (?)	೯.೪೫	ಹೊಣಗೆ-ಹೊಣೆಗಾರಿಕೆ	೧೩-೧೩
ಹೊಡಕರಿಸು-ಕಾಣಿಸಿಕೊ,		,, -ಜವಾಬ್ದಾರಿ	೮–೬೪
ಮೇಲೆ ಬೀಳು, ಬೆರಸು	೧೦–೧೭		೧೭–೧೨
ಹೊಡಕರಿಸು-ತಲೆದೋರು	೧೭–೫೮	ಹೊರೆ-ಸಮೀಪ, ಪಕ್ಕ	೧೩-೮೭
ಹೊತ್ತ್ರಡಗಿಸು-ಕೊಲ್ಲು	೧೨–೧	ಹೋರು–ಯುದ್ಧ ಮಾಡು,	
		ಜಗಳವಾಡು	೫–೨

ವಿಜಯ ಸಂಜೆ ಕಾಲೇಜು ಗ್ರಂಥಾಲಯ

ಆರ್.ವಿ. ರಸ್ತೆ, ಬಸವನಗುಡಿ, ಬೆಂಗಳೂರು - 560 004.

This book should be returned on or before the date last stamped. An overdue charge of 2 Rupees will be levied for each day, if the book is kept beyond that date.

Card No.	Due Date	Sign of issued Authority

Call No.:

Author : ಅನಂತರಂಗಾಚಾರ್. N

Title ಕುಮಾರರಾಮ ಸಾಂಗತ್ಯ ಸಂಗ್ರಹ

Signature	Borrowing Date
S. [illegible]	24/8/2002

Vija

Accn.

5302

ಸಾಹಿತ್ಯ ಭಾರತೀ (೨೦ ಪ್ರಮುಖ ಭಾಷೆಗಳ ಸಾಹಿತ್ಯ ಚರಿತ್ರೆ) ಪುಟ ೯೬೯+lxiii- ಬೆಲೆ ರೂ. ೪೫-೦೦; ಪ್ರಸಾರಾಂಗ ಮೈಸೂರು ವಿಶ್ವ ವಿದ್ಯಾನಿಲಯ

ಈ ಬೃಹತ್ಕೃತಿಯು ಭಾರತದ ಪ್ರಮುಖ ಭಾಷೆಗಳ ಸಾಹಿತ್ಯ ಚರಿತ್ರೆಯನ್ನು ಏಕತ್ರ ಪ್ರತಿಬಿಂಬಿಸುವ ಏಕೈಕ ರಚನೆ. ಇದರಲ್ಲಿ ಪ್ರಸಿದ್ಧ ಭಾರತೀಯ ಸಾಹಿತ್ಯಗಳ ಮೂಲ, ಬೆಳವಣಿಗೆ, ಕವಿಕಾವ್ಯ ಪರಿಚಯ ವೈಶಿಷ್ಟ್ಯ ಇತ್ಯಾದಿ ವಿಷಯಗಳನ್ನು ಸುಂದರವಾಗಿ ನಿರೂಪಿಸಲಾಗಿದೆ. ಶಾಸ್ತ್ರ, ವ್ಯಾಕರಣ, ನಿಘಂಟು, ತತ್ವದರ್ಶನ, ಶಿಲ್ಪ ಸಂಗೀತ, ಮೊದಲಾದುವನ್ನು ಕುರಿತು ಸಂದರ್ಭೋಚಿತವಾಗಿ ವಿವರಿಸಲಾಗಿದೆ. ಅಲ್ಲಲ್ಲಿ ಆಧುನಿಕ ಸಾಹಿತ್ಯ ವಿವರಣೆಯಲ್ಲಿ ಅದರ ವಿವಿಧ ರೂಪಗಳಾದ ಕವಿತೆ, ಕತೆ, ಕಾದಂಬರಿ, ನಾಟಕ, ಪ್ರಬಂಧ, ವಿಮರ್ಶೆ ಇವನ್ನೂ ಹೇಳಿದೆ. ಮಹಿಳೆಯರ ಪಾತ್ರ, ಶಿಶುಸಾಹಿತ್ಯಗಳನ್ನು ಮರೆತಿಲ್ಲ. ಸಾಹಿತಿಗಳ ಚಿತ್ರಗಳು, ಅನುಬಂಧಗಳು, ಅಕಾ[illegible]ದಿ ಗ್ರಂಥಸೂಚಿಗಳು ಈ ಗ್ರಂಥದ ಮಹತ್ವವನ್ನೂ ಉಪಯುಕ್ತತೆಯನ್ನೂ ಮತ್ತಷ್ಟು ಹೆಚ್ಚಿಸಿರುತ್ತವೆ.

ಪೀಠಿಕೆಯಲ್ಲಿ ಭಾರತೀಯ ಭಾಷಾವರ್ಗ, ಲಿಪಿಗಳ ಬೆಳವಣಿಗೆ, ಆಧುನಿಕ ಸಾಹಿತ್ಯದ ಹಕ್ಕಿನೋಟ, ಭಾಷಾಸಾಹಿತ್ಯಗಳ ಪರಸ್ಪರ ಪ್ರಭಾವ, ಇಂದಿನ ಸಾಮಾನ್ಯಸ್ವರೂಪ, ಸಮಕಾಲೀನ ಪರಿಸ್ಥಿತಿ, ವಿಶ್ವವಿದ್ಯಾನಿಲಯಗಳ ಕೊಡಿಗೆ, ಮೊದಲಾದುವು ಸ್ಥೂಲವಾಗಿ ನಿರೂಪಿತವಾಗಿವೆ.

ಭಾರತೀಯ ಸಾಹಿತ್ಯಗಳ ವಿವಿಧ ಬಣ್ಣನೆಗಳನ್ನು ಕಾಣಿಸುವ ಪಟಲ (spectrum)ದಂತಿರುವ ಈ ಮಹಾಕೃತಿಯಲ್ಲಿ ಗ್ರಂ. [illegible]ೀ ಅನಂತರಂಗಾಚಾರ್ಯರ ಆಳವಾದ ಅಭ್ಯಾಸ, ಬಹುಶ್ರುತತ್ವ, ವಿನ್ಯಾಸಕುಶಲತೆಗಳು ಹೊರಹೊಮ್ಮಿವೆ. ಈ ದಿಸೆಯಲ್ಲಿ ಅವರು ವಹಿಸಿದ ಅಸಾಧಾರಣ ಶ್ರಮಸಾರ್ಥಕ್ಯ. ಇದೊಂದು ಅಮೂಲ್ಯವಾದ ಸಾಹಿತ್ಯ [illegible]ೋಶ.

ಎಂ. ಮರಿಯಪ್ಪ ಭಟ್ಟ

ಪ್ರಾಧ್ಯಾಪಕರು, ಮದ್ರಾಸ್ ವಿಶ್ವವಿದ್ಯಾನಿಲಯ